
ಶ್ರೀರಸ್ತು.

ಶ್ರೀಗುರು ದಕ್ಷಿಣಾಮೂರ್ತಯೇನಮಃ

ವೀರಶೈವಾಚಾರಕೌಸ್ತುಭಃ.

ಪ್ರಥಮಪ್ರಕರಣಂ

ಶ್ರೀಮಜ್ಜಂಗಮರೂಪಿಣೇಽಖಿಲಜಗತ್ಸಂರಕ್ಷಣೋದ್ಯೋಗಿನೆ ಶ್ರೀ
ಕಾಂತ ವಚೋವಿಲಾಸರಚನಾಸಂವೇದ್ಯಚಿನ್ಮೂರ್ತಯೆ । ಶ್ರೀವೀರ
ನಿಷ್ಠಭಕ್ತಹೃದಯಾಂಭೋಜಾತಸನ್ಮಂಟಪೇ ಸಂಲಕ್ಷ್ಯಾಯನಮೋ
ಽಸ್ತು ಸತತಂ ಲಿಂಗಾಯ ಚಿಜ್ಜ್ಯೋತಿಷೆ ॥೧॥ ಮೂರ್ತಿ

ಶ್ರೀ

ಆಚಾರಪ್ರಕಾಶಿಕೆ

ಕಂ॥ ಶ್ರೀಚಂದ್ರಮೌಳಿ ಕಲ್ಯಾ।
ಣಾಚಲಗೃಹನಾತ್ಮಭಕ್ತಕಾಮಿತಫಲದಂ।
ಭೂಚಕ್ರದೆ ಸಿದ್ಧಾಂತೋ।
ಕ್ತಾಚರಣಮನಿತ್ತುಪೊರೆಗೆನಿಜಮತಜನಮಂ ;

ಮಂಗಳಾಚರಣವು

ಶ್ರೀಮನ್ನಿಖಿಲ ಜಗತ್ಸಂರಕ್ಷಣ ವ್ಯಾಪಾರವುಳ್ಳದ್ದಾಗಿಯೂ, ಶ್ರೀಮಾಧವ ವಿಲಾಸರಚನೆಯಿಂದತಿದುರ್ಲಭವಾದಜ್ಞಾನಮೂರ್ತಿಯಾಗಿಯೂ ಶ್ರೀ ವೀರವ್ರತನಿಷ್ಠರಾದ ಭಕ್ತರ ಹೃದಯಕಮಲವೆಂಬ ಸದ್ರೂಪವಾದ ಮಂಟಪದ ಲ್ಲಿಗಳೂ ಕಾಣತಕ್ಕದ್ದಾಗಿಯೂ. ಜ್ಞಾನಪ್ರಕಾಶರೂಪವಾಗಿಯೂ ಇರು ವ ಲಿಂಗಕ್ಕೋಸ್ಕರ ಮತ್ತೆ ಮತ್ತೆ ನಮಸ್ಕಾರವಾಗಲಿ ಅಂದರೆ (ವೀರಶೈವ ಭಕ್ತರ ಹೃದಯಕಮಲದಲ್ಲಿ ಜಂಗಮಲಿಂಗ ಶಿವಲಿಂಗ ಗುರು ರೂಪವಾಗಿ ಕಾಣಿಸಿಕೊಳ್ಳುವ ಸಚ್ಚಿದಾನಂದಸ್ವರೂಪವಾದ ಶಿವತತ್ವಕ್ಕೆ ॥೧॥
ನಮಸ್ಕಾರವೆಂದು) ತಾತ್ಪರ್ಯವು.

ರ್ಯಸ್ಯ ವಿಶುದ್ಧಸತ್ತ್ವವಿಮಲಾ ಕುಂದೇಂದು ಹೀರೋಪಮಾ ವಾಮಾಂ
ಗೀಕೃತಯೋಪಿ ದಾನತಜಗಚ್ಛ್ರೇಯೋನಿಧಾನೋತ್ಸುಕಾ । ಜ್ಞೇ
ಯಾ ಪುಣ್ಯವಿಶೇಷವೈಭವವತಾಂ ಚೇತಃಪ್ರಸಾದೋಚ್ಚಯೈ ರ್ಧಾ
ತ್ರೀ ಜನ್ಮಜರಾವಿಮೋಚನ ಮುಮಾಕಾಂತ ಸ್ಸ ಮೇ ಭಾಸತಾಂ ॥೧॥
ಯಾ ಮಾಯಾ ಪ್ರಕೃತಿ ಸ್ತ್ರಿಭಿರ್ನಿಜಗುಣೈ ರ್ದೀರ್ಘವೃತ್ತ್ಯವ್ಯಮಿಶ್ರೈ
ರ್ನಿರ್ಘ ಶ್ಚೈತನ್ಯಪ್ರತಿಬಿಂಬಡಂಬರವಶಾ ದ್ವಿಶ್ವಾತ್ಮನಾ ದೃಶ್ಯತ । ಅ
ಸ್ಮಾಕಂ ವಿತರೀತರೀತು ಸಕಲಾಂ ಸಂಪತ್ತಿ ಮವ್ಯಾಹತಾ ಮುನ್ಮೀಲ
ತ್ಕರುಣಾತರಂಗಿತದೃಶಾ ಲೀಲಾಂಚಿತಾ ಸಾಶಿವಾ ॥೨॥ ತನ್ಯಾತ್ತಾ ಮತಿ
ವೇಲಭಕ್ತಿಕಲನಾಸ್ವಾಧೀನಗಂಗಾಧರಸ್ಫಾರಾಪಾರಾಕೃಪಾಸಮುದ್ರಲಹ
ರೀಕಲ್ಲೋಲಮಾಲಾಪ್ಲುತಾ । ಸಾಕ್ಷಾ ದೀಶಮುಖೋದ್ಗತಾಗಮಮ
ತಪ್ರಖ್ಯಾಪನಾದೇಶಿಕಾ ವಸ್ಮಾಕಂ ಸ್ಥಿರಭಕ್ತಿಭಾಗ್ಯಕಣಿಕಾಂ ನಂದೀ

ಯಾವ ಪರಶಿವನ ಶರೀರವು, ಶುದ್ಧತತ್ತ್ವಾಂತರ್ವರ್ತಿಯೂ ಸತ್ವಗುಣಪ್ರಧಾನವೂ ನಿರ್ಮಲವೂ ಎನಿಸಿ ಮೊಲ್ಲೆಯ ಪುಷ್ಪ ಚಂದ್ರ ವಜ್ರ ಇವುಗಳಿಗೆ ಸಮಾನವಾಗಿರುವುದೋ, ಮತ್ತು ಪರಶಿವನ ವಾಮಭಾಗದಲ್ಲಿ ಅಂಗೀಕರಿಸಿದ ಸ್ತ್ರೀಯಾಗಿರುವುದೊ, ಮತ್ತು ನಮಸ್ಕಾರ ಮಾಡಿದ ಜನರಿಗೆ ಮಂಗಳಗಳನ್ನು ಮಾಡುವುದರಲ್ಲಿ ಕುತೂಹಲವುಳ್ಳುದ್ದಾಗಿರುವುದೋ, ಮತ್ತು ಪುರಾಕೃತ ವಿಶೇಷ ಪುಣ್ಯವೈಭವವುಳ್ಳವರುಗಳ ಅತಿಶಯವಾದ ನಿರ್ಮಲಹೃದಯಂಗಳಿಂದ ತಿಳಿಯಲು ಯೋಗ್ಯವಾದುದೋ ? ಮತ್ತು ಹುಟ್ಟುವಿಕೆ ಮುಪ್ಪು ಇವುಗಳ ನಾಶವನ್ನು ಮಾಡತಕ್ಕದೋ, ಅಂತಹ ಉಮಾಕಾಂತನು ನನಗೆ ಪ್ರಕಾಶಿಸುವವನಾಗಲಿ. ॥೧॥

ಒಂದಕ್ಕೊಂದು ಬೆರೆಯದಿರುವ ತನ್ನ ಸ್ವಕೀಯವಾದ ಮೂರು ಗುಣಗಳಿಂದ ಕೂಡಿ ಪ್ರಕಾಶಿಸುವ ಪ್ರಕೃತಿಸ್ವರೂಪವಾದ ಯಾವ ಮಾಯೆಯಲ್ಲಿ ಪರಶಿವನ ಚೈತನ್ಯವು ಪ್ರತಿಫಲಿಸಿದ್ದರಿಂದ ಪ್ರತಿಫಲಿಸಿದ ಆಪ್ರತಿಬಿಂಬವೇ ಜಗದ್ರೂಪವಾಗಿ ಕಾಣುವುದೋ, ಲೀಲಾ ವೈಭವದಿಂದ ಕೂಡಿ ಮಂಗಳಕರವಾಗಿರುವ ಆಶಕ್ತಿಯು ವಿಶೇಷ ಕರುಣಾಪೂರಿತವಾದ ದೃಷ್ಟಿಯಿಂದ ನೋಡಿ ನಮಗೆ ಯಾವಾಗಲೂ ನಾಶವಾಗದೇ ಇರುವ ಸಂಪತ್ತನ್ನು ಅತ್ಯಂತವಾಗಿ ಮಾಡಲಿ. ಈ ಅರ್ಥವು ಶಿವತತ್ವಸುಧಾನಿಧಿಯಲ್ಲಿ––“ಚಿನ್ಮಯಾಚಿತ್ಪ್ರಭಾಕಾಂತಾ ಸಂಕಲ್ಪರಹಿತಾಶುಭಾ । ಸಂವಿದಃ ಪ್ರತಿಬಿಂಬಾಸಾ ಶಂಕರಸ್ಯಾನಪಾಯಿನೀ. ॥೩॥ ಯಾಶಿವೆಪ್ರತಿಬಿಂಬಾಖ್ಯಾಸಚ್ಚಿದಾನಂದರೂಪಿಣೀ । ಅನ ಸ್ವಭಾವಮಾಪನ್ನಾ ಸಾಶಕ್ತಿಶ್ಚಿನ್ಮಯೀಮತಾ ಎಂಬದೆ ॥೪॥

ಅತಿಶಯವಾದ ಭಕ್ತಿಯನ್ನು ಮಾಡುವುದರಿಂದ ಸ್ವಾಧೀನನಾದ ಪರಶಿವನ ಕೃ

ಶಭೃಂಗೀಶ್ವರೌ ॥೪॥ ಶಂಭೋ ರುನ್ಮಿಷದತ್ಯಮರ್ಷಪಿಶುನಸ್ಫಾರಸ್ಫು ರದ್ರಾಜಸೋದ್ರೇಕಾಕಾರಭಯಂಕರೋನ್ನತತನು ರ್ವೀರಶ್ರಿಯಾಂ ಪ್ರಾಸಭೂಃ । ಧೃಷ್ಯದ್ದುರ್ಜನಸಂಘತರ್ಜನವಿಧೌ ಧೀಗಾರವೇಣೈವ ಯೋ ನಿರ್ವೋಢಾ ಮಮ ವೀರಭದ್ರಗಣರಾಡ್ವಿಘ್ನಾನ್ವಿನಿಘ್ನಂತು ಸಃ ॥೫॥ ದತ್ತ್ವಾ ಮುತ್ತಮಬುದ್ಧಿಕೌಶಲಬಲಂ ವೇಲಾತಿಗಾವ್ನಾಯಭೂವಿಶ್ರಾಂತಾಖಿಲಶೈವತತ್ವಸರಣಿಂ ಸತ್ಕಾಮಿಕಾದ್ಯಾಗಮೈಃ । ವ್ಯಕ್ತಾಂ ಪಂಚಮುಖೋದ್ಗತೈ ಸ್ತನುಕೃತಾಂ ದೇವ್ಯಾಚ ಯಸ್ಸಣ್ಮುಖ ಶ್ಶಿಷ್ಯಾನ್ಬೋಧಯತಿ ಸ್ಫುಟಂ ತನುಕರೋ ತ್ವ್ಯಕ್ತಾರ್ಥಪಾಥ್ಯಾಯಚ ॥೬॥ ಚಿತ್ತೇ ಭಿತ್ತೌ ಸಮಸ್ತಾನಹರಹರಮಲಾ ನ್ಚಿಂತಯೇ ಚ್ಚಿತ್ರರೂಪಾನ್ಛಸ್ಫತ್ಕೈಲಾಸಶೃಂಗೇ ಭವನವರಣದ್ವಂದ್ವಸೇವೋರ್ದ್ವಂದ್ವವರ್ಜಂ। ಸೇನಾಮೇವಾತ್ಮಭಾವಾತಿಶಯಿತಮನಸಾ ಕುರ್ವತ ಸ್ಸಾರ್ವಕಾಲಂ ಸ

ಪಾಸಮುದ್ರದ ತೆರೆಗಳ ಪರಂಪರೆಗಳಲ್ಲಿ ಮುಳುಗಿದವರಾಗಿಯೂ, ವೀರಶೈವಮತ ಸ್ಥಾಪನಾಚಾರ್ಯರಾಗಿಯೂ, ಇರುವ ನಂದೀಶ್ವರ ಭೃಂಗೀಶ್ವರರುಗಳು, ನಮಗೆ ಶಾಶ್ವತವಾದ ಭಕ್ತಿ ವೈಭವವನ್ನುಂಟುಮಾಡಲಿ. ॥೪॥

ಯಾವ ವೀರಭದ್ರ ಗಣೇಶ್ವರನು, ಪರಶಿವನ ವಿಶೇಷ ಕೋಪೋದ್ರೇಕವನ್ನು ಸೂಚಿಸುವುದರಿಂದ ಪ್ರಕಾಶಮಾನವಾಗಿಯೂ ಶುದ್ಧ ರಾಜಸಗುಣಸ್ವರೂಪವಾಗಿಯೂ ಭಯಂಕರವಾಗಿಯೂ ಉನ್ನತವಾಗಿಯೂ ಇರುವ ಶರೀರವುಳ್ಳಾತನೋ, ಮತ್ತು ವೀರಲಕ್ಷ್ಮಿಗೆ ಆವಾಸಭೂಮಿಯಾಗಿರುವನೋ, ಮತ್ತು ಗಂಭೀರಧ್ವನಿ ಮಾತ್ರದಿಂದಲೇ ಕೊಬ್ಬಿದ ದುರ್ಜನರ ಸಮೂಹವನ್ನು ಚೆದರಿಸುವ ವಿಷಯದಲ್ಲಿ ಸಮರ್ಥನೋ? ಅಂತಹ ವೀರಭದ್ರ ಗಣೇಶ್ವರನು ನನ್ನ ಸಮಸ್ತ ವಿಘ್ನಗಳನ್ನು ನಾಶಮಾಡಲಿ. ॥೫॥

ಯಾವ ಷಣ್ಮುಖನು, ಪರಶಿವ ಪಂಚಮುಖೋತ್ಪನ್ನಗಳಾದ ಕಾಮಿಕಾದಿ ವಾತುಲಾಂತವಾದಿಪ್ಪತ್ತೆಂಟು ಆಗಮಗಳಿಂದ ಪ್ರಕಾಶಗೊಳಿಸಲ್ಪಟ್ಟದ್ದಾಗಿಯೂ, ಪಾರ್ವತಿಯಿಂದ ವಿಸ್ತಾರವಾಗಿ ಹೇಳಲ್ಪಟ್ಟದ್ದಾಗಿಯೂ, ಒಳ್ಳೆಯ ಬುದ್ಧಿಯನ್ನೂ ಚಾತುರ್ಯ ಸಾಮರ್ಥ್ಯವನ್ನೂ ಕೊಡತಕ್ಕದ್ದಾಗಿಯೂ ಇರುವ, ಸೀಮಾತೀತವಾದ ವೇದಂಗಳೆಂಬ ಭೂಮಿಯಲ್ಲಿ ಬೆಳೆದ ಸಕಲ ಪ್ರಾಣಿಗಳಿಗೂ ಮಂಗಳಕರವಾದ ಶಿವತತ್ವ ಮಾರ್ಗವನ್ನು ಶಿಷ್ಯರಿಗೆ ಚೆನ್ನಾಗಿ ಬೋಧಿಸಿದನೋ? ಮತ್ತು ತಾನು ಹೇಳಿದ ಅರ್ಥವು ದೃಢವಾಗಿ ಶಿಷ್ಯರಿಗೆ ತಿಳಿಯುವುದಕ್ಕೋಸ್ಕರ ಮತ್ತೆ ಮತ್ತೆ ವಿಸ್ತಾರವಾಗಿ ಹೇಳಿದನೋ? ಅಂತಹ ಷಣ್ಮುಖನು ನಮ್ಮನ್ನು ಕಾಪಾಡಲಿ. ॥೬॥

ಪ್ರತಿನಿತ್ಯದಲ್ಲಿಯೂ ನನ್ನ ಚಿತ್ತವೆಂಬ ಗೋಡೆಯಲ್ಲಿ ಚಿತ್ರರೂಪಾಗಿ ನೆಲಸಿ

ರ್ಘ್ಯಾಭೀಷ್ಟಾರ್ಥದಾನಾ ತ್ಪ್ರವಣಮತವಿಧ ಸ್ತಾನ್ಗಣೇಶಾ ನನಂ ತ್ರಾನ್ ||೭|| ಭೂಮೌ ಬಿಜ್ಜಳಶಾಂಬರೀಂ ಮತಿತರಾ ಮಾತ್ಮಪ್ರಭಾವೇನ ನ್ಯೈ ಯಃ ಕೂಲಂಕಷಣಂ ನ್ಯವಾರಯದಥ ಸ್ವೀತಾನುಕಂಪಾನಿಧಿಃ । ತಂ ಭೂಯೋಽಖಿಲವೀರಶೈವಮತಭೂಮಂದಾರಭೂವಿರಾರುಹಂ ವಂದೇಹಂ ಬಸವೇಶ್ವರಂ ಯಮವತಾಂ ಸದ್ಬ್ರಹ್ಮವಿದ್ಯಾಗುರುಂ ||೮|| ಚೇತಸ್ಸ್ಯಾಕಲಯಾಮಿ ತಂಪ್ರಭುವರಂ ಶೈವಾಧ್ವನೀನಶ್ರಮಸ್ತೋಮೋನ್ಮೂಲನನಿವ್ಯಚಿತ್ಸುಖಸುಧಾಧಾರಾಪ್ರಪಾಯತ್ತನುಂ । ಮುಕ್ತ್ಯಧ್ವಪ್ರತಿಕೂಲದುರ್ಮತತಮಸ್ತೋಮಾಪಹಾವಿರ್ಭವದ್ದ್ರಾಕ್ಚಂದ್ರಮಸಂ ಯದಲ್ಲಮಸದಖ್ಯಾತಂ ಗುರೂಣಾಂ ಗುರುಂ ||೯|| ಯೋ ಭೂಮಾ

ರುವವರಾಗಿಯೂ, ಮಲರಹಿತರಾಗಿಯೂ, ಶ್ರೀಮತ್ಕೈಲಾಸಶಿಖರದಲ್ಲಿ ಯಾವಾಗಲೂ ಪರಶಿವಪಾದಧ್ಯಾನದಲ್ಲಿಯೇ ಬೆರೆದು ಅತ್ಯಂತ ನಿಜಭಾವಯುಕ್ತವಾದ ಮನಸ್ಸಿನಿಂದ ಪರಶಿವಸೇವೆಯನ್ನು ಮಾಡತಕ್ಕವರಾಗಿಯೂ, ಯಾರುಯಾರು ಏನೇನು ಇಷ್ಟಾರ್ಥಗಳನ್ನು ಬಯಸಿಕೊಂಡು ಬಂದು ಶರಣಾಗತರಾಗುವರೋ? ಅವರವರಭಿಪ್ರಾಯವನ್ನರಿತು ಆ ಸರ್ವರ ಇಷ್ಟಾರ್ಥಗಳನ್ನು ಪೂರ್ತಿಗೊಳಿಸುವವರಾಗಿಯೂ, ನಾಶವಿಲ್ಲದವರಾಗಿಯೂ ಇರುವ ಆ ಸಮಸ್ತ ಪ್ರಮಥಗಣಂಗಳನ್ನು ನಾನು ಸ್ಮರಿಸುವೆನು. [೭]

ಯಾವನು, ಭೂಲೋಕದಲ್ಲಿ ಬಿಜ್ಜಳನು ಮಾಡಿದ ಇಂದ್ರಜಾಲಮಹೇಂದ್ರಜಾಲವೇ ಮೊದಲಾದ ಮಾಯಾ ವಿದ್ಯೆಗಳೆಲ್ಲವನದ್ನು ತನ್ನ ಮಹಿಮಾಪ್ರಭಾವದಿಂದಲೇ ನಿರ್ಮೂಲಮಾಡಿದನೋ, ಅನಂತರ ಶಿವಲಾಂಛನಧಾರಕರಾದ ಎಲ್ಲಾ ಪ್ರಾಣಿಗಳಲ್ಲಿಯೂ ಅತ್ಯಂತ ಕೃಪೆಯನ್ನು ತೋರಿಸಿದನೋ, ವೀರಶೈವ ಮತಾವಲಂಬಿಗಳಾದ ಸರ್ವರಿಗೂ ಭೂಕಲ್ಪವೃಕ್ಷವಾಗಿದ್ದನೋ, ಯೋಗಾಭ್ಯಾಸಿಗಳೆಲ್ಲರಿಗೂ ಶಿವಜೀವೈಕ್ಯವನ್ನು ಬೋಧಿಸುವ ವಿದ್ಯೆಯನ್ನುಪದೇಶಿಸುವದಕ್ಕೆ ಗುರುವಾದನೋ, ಅಂತಹ ಬಸವೇಶ್ವರನನ್ನೂ ನಾನು ನಮಸ್ಕರಿಸುತ್ತೇನೆ. [೮]

ಯಾವನು, ಭೂಲೋಕದಲ್ಲಿ ವೀರಶೈವಧರ್ಮಮಾರ್ಗವನ್ನು ಹೊಂದಿ ಬಳಲುತ್ತಿದ್ದ ಪ್ರಾಣಿಗಳ ಶ್ರಮವನ್ನು ಹೋಗಲಾಡಿಸುವುದಕ್ಕೋಸ್ಕರ ತನ್ನ ಶರೀರವನ್ನೇ ದಿವ್ಯಶರೀರವಾಗಿಯೂ ಜ್ಞಾನಪ್ರದವಾಗಿಯೂ ಸುಖಕರವಾಗಿಯೂ ಅಮೃತಧಾರೆಯನ್ನೆರೆಯತಕ್ಕದಾಗಿಯೂ ಇರುವ ಅರವಟ್ಟಿಗೆಯನ್ನಾಗಿ ಮಾಡಿದನೋ ಮತ್ತೂ ಮೋಕ್ಷಮಾರ್ಗಕ್ಕೆ ಪ್ರತಿಕೂಲಗಳಾದದುರ್ಮತಗಳೆಂಬ ಗಾಢಾಂಧಕಾರಕ್ಕೆ ಪೂರ್ಣಚಂದ್ರನಾದನೋ, ಮತ್ತು ಅಲ್ಲಮನೆಂಬ ಹೆಸರಿನಿಂದ ಪ್ರಖ್ಯಾತನಾಗಿ ಜಗದ್ಗುರುವಾದನೋ, ಅಂತಹ ಪ್ರಭುಸ್ವಾಮಿಯನ್ನು ನನ್ನ ಮನಸ್ಸಿನಲ್ಲಿ ಯಾವಾಗಲೂ ಧ್ಯಾನಿಸುತ್ತೇನೆ. [೯]

ವನತೀರ್ಯ ಚೆನ್ನಬಸವ ಶ್ಶೈವಾಧ್ವದೀಕ್ಷಾಗುರು ರ್ಧರ್ಮಾಕಾರವೃಷಾ
ಧಿನಾಥಸುಯಶಶ್ಖ್ಯಾತ್ಯಾತಿಭೂವ್ಯಾಕೃತಿಃ । ಲೀಲಾಮಾನುಷಭಾವತಃ
ಕಲಿಬಲೋತ್ಸೇಕಾಪಹಾರೋತ್ಸುಕಃ ಕಾರ್ಯಾಕಾರ್ಯವಿವೇಕ ಮಾಶು ದಿ
ಶತಾಂ ಬ್ರಹ್ಮಾಮೃತಾಧಾರಕಃ ||೧೦|| ವಿಖ್ಯಾತಾನ್ಪ್ರಣುಮಃ ಪರಾ
ರ್ಥಮಹಿಮಸ್ತೋಮೈ ರನೇಕಕ್ರಮೈ ರ್ವಿಚ್ಛಿನ್ನಾಖಿಲಮುಕ್ತಿಸಾಧನ
ಕಲಾತತ್ತ್ವಪ್ರತಿಷ್ಠಾಪನೈಃ । ತತ್ತದ್ದುರ್ಮತನಿರ್ಮಿತಾತಿಶಯಿತಭ್ರ
ಷ್ಟಾ ನದೃಷ್ಟಾರ್ಥಧೀವೈಶದ್ಯೈಸ್ಸಕೃತಾರ್ಥಿತಾ ನ್ಸಕಲಯತ ಸ್ತಾನ್ಮಂಚ
ಣಾಸೀ ನ್ಗಣಾನ್ ||೧೧|| ಸ್ವಾಧೀನಾ ಸ್ಸರ್ವವಿದ್ಯಾಸ್ತದಪಿ ನಿಜಪದಾಧೀ
ನಮೂಲಾಪ್ಯವಿದ್ಯಾ ಶಾಂತಸ್ಸರ್ವೇಷಣಾಸು ಪ್ರಥಿತಶಿವಪದಾನ್ವೇಷ
ಣಾರ್ಥೇಷ್ವಶಾಂತಃ । ಚಿತ್ತಾಯತ್ತಾತ್ಮಸಿದ್ಧಿಃ ಪರಿಚಿತನಿಜಚಿದ್ದ

ಯಾವನು, ಭೂಲೋಕದಲ್ಲಿ ಅವತರಿಸಿ ವೀರಶೈವ ದೀಕ್ಷಾಗುರುವಾಗಿ, ವೀರಶೈವಧರ್ಮವನ್ನು ಬೋಧಿಸುವ ವಿಷಯದಲ್ಲಿ ಧರ್ಮಸ್ವರೂಪನಾದ ಬಸವೇಶ್ವರನಿಗಿಂತಲೂ ಮಹಾ ಸಮರ್ಥನೆಂಬ ಕೀರ್ತಿಯನ್ನು ಸಂಪಾದಿಸಿ, ಕಲಿಯುಗದ ಪ್ರಭಾವವನ್ನು ನಾಶಮಾಡುವುದಕ್ಕೋಸ್ಕರ ಮನುಷ್ಯರೂಪಿಂದವತರಿಸಿದ ಶಿವನೆನಿಸಿ, ಲಿಂಗಾಂಗಸಾಮರಸ್ಯಾಮೃತಕ್ಕೆ ಮೂಲಸ್ಥಾನನೆನಿಸಿ, ಶೋಭಿಸಿದನೋ ಆ ಚೆನ್ನಬಸವೇಶ್ವರನು ನಮಗೆ ಕೃತ್ಯಾಕೃತ್ಯವಿವೇಕವನ್ನು ಜಾಗ್ರತೆಯಾಗಿ ಕೊಡಲಿ. ||೧೦||

ಪರೋಪಕಾರ ಮಾಡುವುದಕ್ಕಾಗಿಯೇ ನಾನಾ ವಿಧಗಳಾದ ಅನೇಕ ಮಹಿಮೆಗಳನ್ನು ಮಾಡುವುದರಿಂದಲೂ, ವಿಚ್ಛಿತ್ತಿಯೊಂದಿದ ಅಂದರೆ (ಸಂಪ್ರದಾಯ ತಪ್ಪಿಹೋದ) ಮುಕ್ತಿಸಾಧನವಾಗಿರುವ ವಿದ್ಯೆಗಳ ರಹಸ್ಯವನ್ನು ಸ್ಥಾಪನೆ ಮಾಡುವುದರಿಂದ ಪ್ರಖ್ಯಾತರಾಗಿಯೂ, ಆಯಾ ದುಷ್ಟಮತಗಳಿಂದ ಪ್ರಚಾರಮಾಡಲ್ಪಟ್ಟ ಅತಿಶಯವಾದ ದುರಾಚಾರಗಳನ್ನು ತಪ್ಪಿಸಿದವರಾಗಿಯೂ, ಮನಸ್ಸನ್ನು ನಿರ್ಮಲವಾಗಿ ಮಾಡಿ ಮೋಕ್ಷೇಚ್ಛೆಯನ್ನುಂಟುಮಾಡುವುದರಿಂದಸರ್ವರನ್ನೂ ಕೃತಾರ್ಥರನ್ನಾಗಿ ಮಾಡಿದವರಾಗಿಯೂ ಇರುವ ಮಂಚಣಪಂಡಿತರೇ ಮೊದಲಾದ ಪ್ರಮಥಗಣಂಗಳನ್ನು ನಾನು ನಮಸ್ಕರಿಸುತ್ತೇನೆ. ||೧೧||

ಸಕಲ ವಿದ್ಯೆಗಳನ್ನೂ ಸ್ವಾಧೀನಗಳನ್ನಾಗಿ ಮಾಡಿಕೊಂಡಿರುವುದಲ್ಲದೆ ಮೂಲಭೂತವಾಗಿಯೂ ಆದಿಯಾಗಿಯೂ ಇರುವ ಮಾಯೆಯನ್ನು ತನ್ನ ಸ್ವಾಧೀನಪಡಿಕೊಂಡಿರುವಾತನಾಗಿಯೂ, ಅರ್ಥೇಷಣ ಪುತ್ರೇಷಣ ದಾರೇಷಣಗಳೆಂಬ ಈಷಣತ್ರಯಂಗಳಲ್ಲಿ ತೃಪ್ತಚಿತ್ತನಾದಾಗ್ಯೂ ಸರ್ವದೇವ ಪ್ರಕೃಷ್ಟನಾದ ಪರಶಿವನ ಪದಾನ್ವೇಷಣ ಮಾಡುವುದರಲ್ಲಿ ಮಾತ್ರ ಅತೃಪ್ತ ಬುದ್ಧಿಯುಳ್ಳಾತನಾಗಿಯೂ, ಆಣಿ

ಷ್ಟಪ್ರಪಂಚೇಷ್ಟಸಿದ್ಧಿಃ ಪಾದಸ್ಪಂದ್ಯಸ್ಯ ದಾಸ್ಯಾ ದ್ಗುರುಬಸವಯತಿ ಶ್ಶ್ರೇಯಸೇಭೂಯಸೇ ಸ್ಯಾತ್ ॥೧೨॥ ಅಸ್ತಿ ಶ್ರೀನಗರೀ ದಯಾಂಬುಲಹರೀ ಸರ್ವೋತ್ತರೋದ್ವೈಖರೀ ಸತ್ಯಾಬ್ಜಭ್ರಮರೀ ಸಖೇಲನನರೀನೃತ್ಯದ್ರಮಾಚಾತುರೀ । ವೇದೋದ್ಘೋಷಝರ್ಝರೀ ವಿಶೇಷಮುಖರೀಭೂತಾತ್ಮಸಂಪತ್ಕರೀ ಭವ್ಯಾ ವೇಣುಪುರೀ ನಿರೀತಿರಧರೀಭೂತದ್ಯುಸಾರಂಪರೀ ॥೧೩॥ ಆಸ್ತೇಽಯಂ ಕರದೀಕೃತಾರಿ ಕೆಳೀಭೂಪೋಽನುಕಂಪಾನೀಜಾನಿ ಶ್ರೀಬಸವಕ್ಷಿತೀಂದ್ರವಿಭವಪ್ರೇಮಾನುರೂಪೋದ್ಭವಃ । ಶೌರ್ಯೌದಾರ್ಯಬಲಸ್ವಭಾವಸುಕಲಃ ಸ್ಥೈರ್ಯೇ ಹೈಮಾಚಲಃ ಶ್ರೇಯೋವಾರಿಧಿಸೋಮಶೇಖರಮಹೀಪಾಲ ಸ್ಸ್ವಾಯಂನಿರ್ಮಲಃ ॥೧೪॥ ನಿರ್ವಾಣಾಭಿಧಯಾ ದಯಾಮಾತಯಯಾ ಲೀಲಾ

ಮಾದ್ಯಷ್ಟಸಿದ್ಧಿಗಳನ್ನು ಹೊಂದಿದವನಾಗಿಯೂ, ತನ್ನ ಪಾದಸೇವೆಯನ್ನು ಮಾಡಿದ ಪ್ರಾಣಿಗಳಿಗೆ ಜ್ಞಾನಪರಿಚಯವನ್ನೂ ಸಕಲ ಭೋಗಗಳನ್ನೂ ಕೊಡುವಾತನಾಗಿಯೂ ಇರುವ ಗುರುಬಸವ ಶಿವಯೋಗಿಯು ನಮಗೆ ವಿಶೇಷವಾದ ಶ್ರೇಯೋಭಿವೃದ್ಧಿಯನ್ನು ಕೊಡುವವನಾಗಲಿ. ॥೧೨॥

ಕರುಣಾರಸದ ಪರಂಪರೆಯುಳ್ಳದಾಗಿಯೂ, ಸಮಸ್ತ ನಗರಗಳಿಗಿಂತಲೂ ಸಲ್ಲಕ್ಷಣವಾಗಿಯೂ, ಅತಿ ಚತುರತೆಯುಳ್ಳದಾಗಿಯೂ, ಸತ್ಯವೆಂಬ ಕಮಲಕ್ಕೆ ಹೆಣ್ದುಂಬಿಯಾಗಿಯೂ, ಚಾತುರ್ಯದೊಡನೆ ಕೂಡಿ ವಿನೋದದಿಂದ ನರ್ತಿಸುವ ಲಕ್ಷ್ಮೀದೇವಿಯ ವಿಲಾಸವುಳ್ಳದ್ದಾಗಿಯೂ, ವೇದಪಾಠ ಪರಾಯಣರಾದವರಿಗೆ ಸಂಪತ್ತನ್ನು ಕೊಡುವುದಾಗಿಯೂ, ಪೂಜ್ಯವಾಗಿಯೂ, ಯಾವಬಾಧೆಯೂ ಇಲ್ಲದ್ದಾಗಿಯೂ, ತನ್ನ ವೈಭವದಿಂದ ತಿರಸ್ಕರಿಸಲ್ಪಟ್ಟ ಸ್ವರ್ಗದ ವೈಭವವುಳ್ಳದಾಗಿಯೂ, ಸಕಲ ಸಂಪತ್ತಿಗೂ ಆಶ್ರಯವಾಗಿಯೂ ಇರುವ ಬಿದರೂರೆಂಬ ಪಟ್ಟಣವು ಇದೆ. ॥೧೩॥

ಆ ಪಟ್ಟಣದಲ್ಲಿ, ಕಪ್ಪ ಕೊಡುವ ಹಾಗೆ ಮಾಡಿಕೊಂಡ ಶತ್ರುವುಳ್ಳವನಾಗಿಯೂ, ಕೆಳದಿ ಸಂಸ್ಥಾನವನ್ನಾಳತಕ್ಕವನಾಗಿಯೂ, ಕರುಣಾಸಮುದ್ರನಾಗಿಯೂ ಶ್ರೀಬಸವ ಮಹೀಪಾಲನ ವಿಭವಕ್ಕೂ ಪ್ರೇಮಕ್ಕೂ ಅನುಗುಣವಾಗಿ ಹುಟ್ಟಿರುವವನಾಗಿಯೂ, ಶೌರ್ಯ ಔದಾರ್ಯ ಬಲ ಸ್ವಭಾವ ಇವುಗಳಿಂದೊಪ್ಪುವನಾಗಿಯೂ, ಧೈರ್ಯದಲ್ಲಿ ಹಿಮವತ್ಪರ್ವತಕ್ಕೆ ಸದೃಶನಾಗಿಯೂ, ಸಮಸ್ತ ಮಂಗಳಗಳಿಗೂ ಸಮುದ್ರಪ್ರಾಯನಾಗಿಯೂ, ಶಿವಾನುಭವವಿಚಾರದಿಂದ ನಿರ್ಮಲಹೃದಯನಾಗಿಯೂ ಇರುವ ಪ್ರಸಿದ್ಧನಾದ ಸೋಮಶೇಖರ ಮಹೀಪಾಲನು ರಾಜ್ಯಭಾರವನ್ನು ಮಾಡಿಕೊಂಡಿದ್ದಾನೆ. ॥೧೪॥

ಧರ್ಮಸ್ವರೂಪನೂ ವೀರಶೈವಾಗ್ರಣಿಯೂ ಆದ ವೃಷಾಧೀಶ್ವರನೂ ಕರುಣಾ

ವಪು ರ್ಮಾನುಷಂ ಲೋಕಾನುಗ್ರಹಣಾಯ ನಿಗ್ರಹಕೃತೇ ಧರ್ಮದ್ವಿಷಾ ಮುದ್ವಹನ್ । ಸಾಚಿವ್ಯಂ ಕಲಯ ನ್ನಮುಷ್ಯಧರಣೀನೇತು ರ್ವೃಷಾಧೀಶ್ವರ ಸ್ಸರ್ವೇಷಾಂ ಜಗತಾಂ ಮುದಂ ವಿತನುತೇ ಶ್ರೀವೀರಶೈವಾಗ್ರಣೀಃ ॥೧೫॥ ನಿಸ್ಸೀಮಾತುಲವಿಕ್ರಮಃ ಕವಿಜನಾಭೀಷ್ಟಾರ್ಥದಾನಕ್ರಮ ಸ್ತತ್ತ್ವಾರ್ಥಸ್ವನತಿಕ್ರಮಃ ಕೃತಫಲೀಭೂತಾಖಿಲೋಪಕ್ರಮಃ। ವ್ಯಸ್ತಾರಾತಿಪರಾಕ್ರಮ ಸ್ಸ್ವಚರಿತಕ್ಷುಭ್ಯತ್ಕಲಿಪ್ರಕ್ರಮಃ ಸತ್ಯೈಕಾನುಸಂಕ್ರಮ ಸ್ಸಚಿವರಾ ಣ್ನಿರ್ವಾಣಮಂತ್ರಿಕ್ರಮಃ ॥೧೬॥ ಧೈರ್ಯೌದಾರ್ಯಯಶಸ್ಸುಶೌರ್ಯವಿಭವಾಗಾಂಭೀರ್ಯ ಮಾಧುರ್ಯತಾಮುಖ್ಯಾಸ್ತೇ ವಿವಿಧಾಗುಣಾಃ ಪ್ರತಿಕಲಂ ಭೂಯೋಽಭಿಭಾವಿಂಗತಾಃ । ಸಾಂಬಾಧೀನಪರಸ್ಪರಾಪರಗುಣಾ ಸ್ತಸ್ಮಿ ನ್ನಮಾಂತಾಸ್ಸ್ವಯಂ ಮೂರ್ತೀಭೂಯ ವಿಭಾಂತಿ ಲೋಕತಪಸಾ ಲಿಂಗಪ್ಪಧೀರಾಖ್ಯಯಾ ॥೧೭॥ ಪ್ರಖ್ಯಾ

ಪೂರ್ಣನಾಮದಿಂದ ಪುನಃ ಲೋಕಾನುಗ್ರಹವನ್ನು ಮಾಡುವುದಕ್ಕೋಸ್ಕರವೂ, ಧರ್ಮಕಂಟಕರನ್ನು ನಿಗ್ರಹಿಸುವುದಕ್ಕೋಸ್ಕರವೂ, ಮನುಷ್ಯಶರೀರವನ್ನು ಧರಿಸುವವನಾಗಿ ನಿರ್ವಾಣಾರ್ಯನೆಂಬ ಹೆಸರನ್ನು ಹೊಂದಿ ಈ ಸೋಮಶೇಖರ ಮಹೀಪಾಲನಿಗೆ ಮಂತ್ರಿಯಾಗಿ ಸಮಸ್ತ ಲೋಕಗಳಿಗೂ ಸಂತೋಷವನ್ನುಂಟುಮಾಡುತ್ತಾನೆ॥ ೧೫॥

ಆನಿರ್ವಾಣಮಂತ್ರಿಯು; ಅಸದೃಶವಾದ ಪರಾಕ್ರಮವುಳ್ಳಾತನೂ, ಶಿವಕವಿಗಳಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವದರಲ್ಲಿ ಸಮರ್ಥನೂ, ಶಿವತತ್ತ್ವಾರ್ಥವಿಚಾರ ಸಂಪನ್ನನೂ, ಫಲೋನ್ಮುಖಗಳಾದ ಕಾರ್ಯಗಳನ್ನೇ ಮಾಡತಕ್ಕವನೂ, ಶತ್ರುಗಳ ಪರಾಕ್ರಮವನ್ನು ನಿರ್ಮೂಲಮಾಡಿದವನೂ, ತನ್ನ ನಡೆನುಡಿಗಳಿಂದಲೇ ಕಲಿಬಲವನ್ನು ಮುರಿದವನೂ, ಸತ್ಯಪರಾಯಣನೂ, ಮಂತ್ರಿಶ್ರೇಷ್ಠನೂ ಎನಿಸಿಕೊಂಡು ಶೋಭಾಯಮಾನನಾಗಿದ್ದನು. ।೧೬।

ಮತ್ತೂ ಪರಶಿವನ; ಧೈರ್ಯ ಔದಾರ್ಯ ಕೀರ್ತಿ ಶೌರ್ಯ ವಿಭವ ಗಾಂಭೀರ್ಯ ಮಾಧುರ್ಯವೇ; ಮೊದಲಾದ ನಾನಾಪ್ರಕಾರಗಳಾದ ಆ ಗುಣಗಣ ಶ್ರೇಷ್ಠಗಳಾದ ಸಂಧಿವಿಗ್ರಹಾದಿಗುಣಗಳೂ ಕೂಡ ಅನ್ಯೋನ್ಯಗಳಾಗಿ ಶಿವನ ಅಧೀನಗಳಾದಾಗ್ಯೂ ಪ್ರತಿಕ್ಷಣದಲ್ಲಿಯೂ ಮತ್ತೂ ಮತ್ತು ಹೆಚ್ಚುವವುಗಳಾಗಿ ಆ ಶಿವನಲ್ಲಿ ಅಡಕವಾಗದೆ ಲೋಕವು ಮಾಡಿದ ತಪಃಪ್ರಭಾವದಿಂದ ತಾವೇ ಮೂರ್ತೀಭವಿಸಿ (ಶರೀರವಾಗಿ) ಲಿಂಗಪ್ಪಮಂತ್ರಿಯೆಂಬ ಹೆಸರಿನಿಂದ ಪ್ರಕಾಶಿಸುತ್ತಿರುವವು ಎಂಬಂತೆ ಲಿಂಗಪ್ಪಮಂತ್ರಿಯು ಶೋಭಿಸಿದ್ದನು ಅಂದರೆ ಲಿಂಗಪ್ಪಮಂತ್ರಿಯಲ್ಲಿ ಮೇಲೆ ಹೇಳಿರುವ ಗುಣಗಳೆಲ್ಲಾ ಅದ್ದುವೆಂದು ತಾತ್ಪರ್ಯವು. ॥೧೭॥

ಅನಂತರ ಪ್ರಖ್ಯಾತನೂ ಶಿವಾಚಾರನಿಷ್ಠನೂ ಆದ ಭದ್ರಪ್ಪನು ಮಂತ್ರಿ

ತೋ ಭದ್ರನಾಮಾ ಪ್ರಭುವರತಿಲಕೋಽಭೂಚ್ಛೈವಾಚಾರನಿಷ್ಠಃ ಸ್ತಸ್ಯೈವಾಸೌ ತನೂಜಃ ಪರಮಗುಣಪರೋಽಭೂತ್ಸುಧೀರ್ನಾಗಪಾಖ್ಯಃ । ತದ್ಗರ್ಭಾಬ್ಧೇಃ ಸಮುದ್ಯತ್ಸುರಮಣಿರಿವ ಲಿಂಗಪ್ಪಮಂತ್ರೀ ಮಹಾತ್ಮಾ ಸದ್ಧರ್ಮಸ್ತೋಮಭೂಮಿರ್ವರಸುಗುಣಮಣಿಃ ಪ್ರೇಮಭೂಮಿರ್ಬಲೀಯಾನ್ ॥೧೪॥ ಕಂದರ್ಪಾಯತಸುಂದರಃ ಕರಲಸದ್ದಾನಶ್ರಿಯಾ ಬಂಧುರಃ ಕಾಂತಶ್ರೀಮದಸಿಂಧುರಃ ಕಲಿತಸನ್ಮುಕ್ತಾವಳೀಕಂಧರಃ । ಕಲ್ಪಾಂತ್ಯೋಗ್ರಧುರಂಧರಃ ಕಪಟಿಷು ಸ್ನೇಹೇ ದಯಾಮಂಧರೋ ಲಿಂಗಪ್ಪಪ್ರಭು ಸಿಂಧುರಾಗಮವಿದಾಂ ಕಾರ್ತ್ಸ್ನ್ಯೇನ ಗಂಗಾಧರಃ ॥೧೫॥ ಬಾಣಸ್ತೇ ಕೃಪಣಃ ಕರೇಣ ವಿತರತ್ಯಲ್ಪಂ ದ್ವಿಷಾಂ ಜೀವನಂ ಮಿತ್ರಂ ನೈವ ನಿರೀಕ್ಷತೇ ವ್ರಜತಿ ಸತ್ಕೋಶಾಲಯೇ ಗೋಪನಂ । ನಿಕ್ಷಿಪ್ಯದ್ವಿಷತಾಂ

ಯಾದನು, ಅನಂತರ ಆ ಭದ್ರಪ್ಪಪ್ರಭುವಿಗೆ ಸದ್ಗುಣಸಂಪನ್ನನೂ ಸದ್ಬುದ್ಧಿಶಾಲಿಯೂ ಆದ ನಾಗಪ್ಪನೆಂಬವನು ಪುತ್ರನಾದನು. ಅನಂತರ ಆ ನಾಗಪ್ಪನಲ್ಲಿ ಮಹಾತ್ಮನೂ, ಸದ್ಧರ್ಮಸಂತತಿಗೆ ಆಶ್ರಯನೂ, ಸದ್ಗುಣಗಳೆಂಬ ರತ್ನಗಳುಳ್ಳವನೂ, ಪ್ರೇಮಕ್ಕೆ ನೆಲೆವನೆಯೂ, ಮಹಾ ಪರಾಕ್ರಮಶಾಲಿಯೂ, ಆದ ಲಿಂಗಪ್ಪಮಂತ್ರಿಯು ಸಮುದ್ರದಲ್ಲಿ ಚಿಂತಾರತ್ನವು ಜನಿಸುವಂತೆ ಆ ನಾಗಪ್ಪನಲ್ಲಿ ಜನಿಸಿದನು. ॥೧೪॥

ಆದರೆ ಆ ಲಿಂಗಪ್ಪಮಂತ್ರಿಯು, ಮನ್ಮಥನಂತೆ ಸುಂದರನು (ಒಳ್ಳೆಯ ರೂಪವಂತನು), ತನ್ನ ಕೈಯಲ್ಲೇ ದ್ರವ್ಯವನ್ನು ವಿಶೇಷವಾಗಿ ದಾನಮಾಡುವುದರಿಂದ ಬಂಧುರನು (ಪ್ರಸಿದ್ಧನು), ಲಕ್ಷಣದಿಂದಲೂ ಪಟ್ಟಾಧಿಕಾರದಿಂದಲೂ ಮದೋದಕದಿಂದಲೂ ಒಪ್ಪುವ ಸಿಂಧುರನು (ಆನೆಯುಳ್ಳಾತನು), ಶೋಭಾಯಮಾನವಾದ ಮುತ್ತಿನ ಮಾಲಿಕೆಯಿಂದ ಕೂಡಿದ ಕಂಧರನು (ಕಂಠವುಳ್ಳವನು), ಪ್ರಳಯಕಾಲದ ರುದ್ರನ ಧುರ ಧರನು (ಭಾರವಾಹಕನು), ಕಪಟಗಳ ಸ್ನೇಹದಲ್ಲಿ ದಯಾಮಂಧರನು (ಪ್ರೀತಿಯಿಲ್ಲದಾತನು), ಸಕಲಾಗಮಗಳನ್ನು ಬಲ್ಲವರೊಳಗೆ ಬಲ್ಲಿದನಾದುದರಿಂದ ಗಂಗಾಧರನು (ಶಿವನು) ಎನಿಸಿ ಮೆರೆದಿದ್ದನು. ॥೧೫॥

ಆಗ ಸಮಸ್ತ ಕವಿಗಮಕಿವಾಗ್ಮಿಗಳು, ಲಿಂಗಪ್ಪಮಂತ್ರಿಯನ್ನು ನೋಡಿ ಎಲೈ ಲಿಂಗಪ್ಪಮಂತ್ರಿಯೇ ! ನಿನ್ನ ಬಾಣವು--ಕೃಪಣವು (ಲೋಭಿಯು), ಮತ್ತು ಶತ್ರುಗಳು ಕಪ್ಪವನ್ನು ಕೊಟ್ಟರೆ ಅವರುಗಳಿಗೆ ಸ್ವಲ್ಪ ಜೀವನವನ್ನು (ನೀರನ್ನು) ಕೊಡುತ್ತದೆ ಇಲ್ಲದಿದ್ದರೆ ಏನನ್ನೂ ಕೊಡುವದಿಲ್ಲ, ಮತ್ತು ಮಿತ್ರನನ್ನು (ಸೂರ್ಯನನ್ನು (ಸ್ನೇಹಿತನನ್ನು) ನೋಡುವುದೇ ಇಲ್ಲ, ಮತ್ತು ಯಾವಾಗಲೂ ಕೋಶಾಲಯದ

ತೃಣಾನಿ ವದನೇ ಮುಖ್ಯಾ ತದೀಯಾಂ ಶ್ರಿಯಂ ನೇತುಮುದ್ಯುದ್ಧಮುಪ
ಸ್ಥಿತಂ ಯದಿ ತದಾ ಶತ್ರೂನಸೌ ಮಾಗ್ಲಿಷ್ಯತಿ || ೨೦ || ಲಿಂಗಪ್ಪಪ್ರಭು
ಧೀರಭಾವುಕಕರನ್ಯಸ್ತಾಸಿಧಾರಾ ಕುತ ಸ್ಸನ್ನದ್ಧಾಖಿಲದಂತಿವಾಜಿರಥಸ
ತ್ವಾಪದಾತಿವಿದ್ವೇಷಿಣಾಂ| ಭೇರೀಧ್ವಾನನಿನಾದಸಂಭ್ರಮಭರಂ ದೃಷ್ಟ್ವಾಽ
ಪಿ ಶತ್ರೂನ್ಮುಖನ್ಯಸ್ತಂಬಾಲತೃಣಂ ನಿರೀಕ್ಷ್ಯ ಸಭಯಂ ಯುದ್ಧಾ
ನ್ನಿವೃತ್ತಾ ಭವೇತ್ || ೨೧ || ದಾನಂ ಶತ್ರುಮಿತ್ರಯೋ ರ್ವಿತನುತೇ
ಕಾರ್ತ್ಯಂಕ್ರಮಾ ತ್ಸಂಪದಂ ತದ್ಧಾರಾ ದಹತಿ ಕ್ವಚಿತ್ತು ಹೃದಯಂತೋ
ಷಾಮೃತೈ ಸ್ಸಿಂಚತಿ | ಚಿತ್ರಂ ತತ್ರ ನಿಮಜ್ಜನ್ಯೈ ರ್ವ್ರಜತಿ ತದ್ದ

ಲ್ಲಿಯೂ, ಒರೆಯಲ್ಲಿಯೂ, ಬೊಕ್ಕಸದಲ್ಲಿಯೂ) ಗೋಪ್ಯವಾಗಿರುತ್ತೆ: ಮತ್ತು ಶತ್ರುಗಳೂ ಬಾಯಲ್ಲಿ ಹುಲ್ಲನ್ನು ಕಚ್ಚಿದ್ದಾಗ್ಯೂ ತಾನು ಹೊರಗೆ ಬಾರದೆ ಅಪಾರ ಸಂಪತ್ತೆಲ್ಲವನ್ನು ಅನುಸರಿಸುತ್ತದೆ, ಒಂದು ವೇಳೆ ಏನಾದರೂ ಯುದ್ಧಕ್ಕೆ ಪ್ರಾರಂಭವಾದರೆ ಆಕಾಲದಲ್ಲಿ ಮಾತ್ರ ಶತ್ರುಗಳನ್ನು ಆಲಿಂಗಿಸುತ್ತದೆ. ಎಂದು ಹೊಗಳುತ್ತಿದ್ದರು ಅಂದರೆ ಲಿಂಗಪ್ಪ ಮಂತ್ರಿಯು ಮಹಾ ಪರಾಕ್ರಮಶಾಲಿಯೆಂದಭಿಪ್ರಾಯವು. ಈ ಅರ್ಥದಲ್ಲಿ-: ದೃಢತರನಿಬದ್ಧಮುಷ್ಟೇಃ ಕೋಶನಿಷಣ್ಣಸ್ಯ ಸಹಜಮಲಿನಸ್ಯ | ಕೃಪಣಸ್ಯ ಕೃಪಾಣಸ್ಯ ಚ ಕೇವಲಮಾಕಾರತೋ ಭೇದಃ,, || ೨೦ |

ಮತ್ತು ವಂದಿಗಳು;- ಎಲೈ ಲಿಂಗಪ್ಪಪ್ರಭುವೇ ? ವಿದ್ವಾಂಸರುಗಳಿಗೆ ಹೇಮವನ್ನುಂಟುಮಾಡುವ ಧೀರನ ನಿನ್ನ ಹಸ್ತದಲ್ಲಿ ಧರಿಸಲ್ಪಟ್ಟ ಖಡ್ಗಧಾರೆಯು (ಕತ್ತಿಯು), ಶತ್ರುಗಳು ಹಸ್ತಿ ಅಶ್ವರಥ ಪದಾತಿಗಳೊಡನೆ ಕೂಡಿ ಯುದ್ಧಕ್ಕೆ ಸನ್ನದ್ಧರಾಗಿ ಬಂದು ಭೇರೀನಿನಾದವನ್ನು ಮಾಡಲು ಆಗ ಅತಿಶಯ ಸಂಭ್ರಮದೊಡನೆ ಕೂಡಿದ ಆ ಭೇರೀನಿನಾದವನ್ನು ನೋಡಿ ಮೊದಲು ಯುದ್ಧಕ್ಕೆ ಸನ್ನದ್ಧವಾಯಿತು, ಅನಂತರ ಭಯಸ್ತರಾದ ಆ ಶತ್ರುಗಳು ಬಾಯಲ್ಲಿ ಹುಲ್ಲನ್ನು ಕಚ್ಚಲು ಅದನ್ನು ನೋಡಿ ಆ ಶತ್ರುಗಳೊಡನೆ ಯುದ್ಧಮಾಡದೆ ಏನು ಕಾರಣ ಹಿಂತಿರುಗಿತು. ಎಂದು ಸ್ತುತಿಸುತ್ತಿದ್ದರು ಅಂದರೆ ಆ ಲಿಂಗಪ್ಪಮಂತ್ರಿಯು ಧರ್ಮ ಯುದ್ಧ ಮಾಡುತ್ತಿದ್ದನೆಂದು ತಾತ್ಪರ್ಯವು ||೨೧||

ಮತ್ತು ಆ ಲಿಂಗಪ್ಪಮಂತ್ರಿಯ ಖಡ್ಗಧಾರೆಯು ಶತ್ರುಗಳಲ್ಲಿಯೂ ಮಿತ್ರರುಗಳಲ್ಲಿಯೂ ಕೂಡ ಕ್ರಮವಾಗಿ ದಾನಪ್ರದಾನವನ್ನು ಕಾರ್ಯಪ್ರವರ್ತನೆಯನ್ನು ಸಂಪತ್ತಿನ ಪ್ರಾಪ್ತಿಯನ್ನು ಮಾಡುತ್ತದೆ, ಮತ್ತು ಒಂದು ವೇಳೆ ಶತ್ರುಗಳ ಹೃದಯವನ್ನು ಸುಡುತ್ತದೆ. ಮತ್ತು ಒಂದು ವೇಳೆ ಮಿತ್ರರ ಹೃದಯವನ್ನು ಸಂತೋಷಾಮೃ

ಸ್ಯುಸ್ತು ದಿವ್ಯಂಸುಖಂ ಪ್ರಾಯೇಣೈವ ಸತಾಂ ಪ್ರವೃತ್ತಿಸ್ಸಮತಾ ಶತ್ರೌ ಚ ಮಿತ್ರೇ ಸಮಾ ॥ ೨೨ ॥ ಅಸೂತ ಸುಕುಮಾರಮಾರಸದೃಶಾಕಾರೌ ಕುಮಾರೋಪಮೌ ಧೀರೋದಾತ್ತಗುಣಾಕರೌ ಸುಚರಿತ್ರೌ ದೃಪ್ತೌ ಕುಮಾರೌ ಗುರೌ । ಸಮ್ರೌ ರಾಜನಿ ಜಂಗಮೇಪಿ ಚರಿತೇ ಸ್ವೀಯೇಷು ಸದ್ರಕ್ಷಕೌ ವಕ್ರೈಃ ತೂದ್ಧತಿಶಾಲಿಬಾಲಿಶಜನೇಷ್ವಾತ್ತಾರ್ಜವಾನಾರ್ಜವೌ ॥ ೨೩ ॥ ಜ್ಯಾಯಾನ್ನಿರ್ವಾಣನಾಮಾ ಗುರುಬಸವ ಇತಿ ಖ್ಯಾತಿಶಾಲೀ ಕನೀಯಾನಸ್ಯಾಕ್ಕಮಾಖ್ಯಾ ಪ್ರಸಿದ್ಧಾ ನಿತ್ತಗುಣಭಗಿನೀ ಭಾಗಧೇಯಾವಿವೇತೌ । ತಾತಾತೀತಾತಿವೀರ್ಯೋರ್ಜಿತಸಕಲಕಲಾಶೀಲಲೀಲಾವಿಲೋಲೌ ನಿರ್ವ್ಯಾಜೇಥಾನೀಕಗಾಥಾವನಿಪತಿ

ತದಿಂದ ನೆನೆಯುತ್ತದೆ. ಮತ್ತೂ, ಪೂರ್ವಶತ್ರುವು ಈ ಖಡ್ಗಧಾರೆಯಿಂದ ಪೆಟ್ಟಿನಿಂದ ಮರಣವನ್ನೈದುತ್ತಿದ್ದನೋ? ಆ ಶತ್ರುವೂ ವೀರಸ್ವರ್ಗದ ಸೌಖ್ಯವನ್ನು ಹೊಂದುತ್ತಿದ್ದನು ಇದೊಂದು ಮಾತ್ರ ಆಶ್ಚರ್ಯವು, ಆದರೆ ಲೋಕದಲ್ಲಿ ಸತ್ಪುರುಷರುಗಳ ವ್ಯಾಪಾರವು ಶತ್ರುವಿನಲ್ಲಿಯೂ ಮಿತ್ರನಲ್ಲಿಯೂ ಕೂಡ ಒಂದೇ ಸಮವಾಗಿರುವುದಲ್ಲವೆ? ॥೨೨॥

ಇಂತೊಪ್ಪುವಲಿಂಗಪ್ಪ ಮಂತ್ರಿಗೆ:-- ಮನ್ಮಥನಿಗೆ ಸದೃಶವಾದ ಆಕಾರವುಳ್ಳವರಾಗಿಯೂ, ಷಣ್ಮುಖನಿಗೆ ಸಮಾನರಾಗಿಯೂ, ಧೈರ್ಯ ಔದಾರ್ಯವೇ ಮೊದಲಾದ ಗುಣಗಳಿಗೆ ಆಸ್ಪದರಾಗಿಯೂ, ಸಚ್ಚರಿತ್ರೆಯುಳ್ಳವರಾಗಿಯೂ, ಗುರು ರಾಜ ಜಂಗಮ ತಂದೆ ಇವರುಗಳಲ್ಲಿ ನಮ್ರರಾಗಿಯೂ ಸಾಧುಗಳನ್ನು ಪಾಲಿಸುವವರಾಗಿಯೂ; ಸ್ವಜನರಲ್ಲಿಯೂ ಪರಜನರಲ್ಲಿಯೂ ಋಜುಭಾವವನ್ನು ಹೊಂದಿರುವವರಾಗಿಯೂ ಕೊಬ್ಬಿಮೆರೆಯುವ ಕೆಟ್ಟಜನರಲ್ಲಿ ಮಾತ್ರ ವಕ್ರಭಾವವನ್ನು ಹೊಂದಿರುವವರಾಗಿಯೂ, ಇರುವ ಅಪ್ರಸಿದ್ಧರಾದ ಇಬ್ಬರು ಮಕ್ಕಳು ಇದ್ದರು. ॥೨೩॥

ಇವರಲ್ಲಿ ಜ್ಯೇಷ್ಠಪುತ್ರನಿಗೆ (ನಿರ್ವಾಣ) ನೆಂಬನಾಮವೂ? ಕನಿಷ್ಠನಿಗೆ (ಗುರುಬಸವ) ನೆಂಬನಾಮವೂ ಪ್ರಖ್ಯಾತವಾಗಿತ್ತು.. ಮತ್ತು ಆಲಿಂಗಪ್ಪನಾಯಕನಿಗೆ ವಿಶೇಷಸದ್ಗುಣ ಸಂಪನ್ನೆಯಾದ (ಅಕ್ಕಮ್ಮ) ನೆಂಬ ಹೆಸರುಳ್ಳ ಅಕ್ಕನು ಪ್ರಸಿದ್ಧಳಾಗಿದ್ದಳು, ಮತ್ತು ಐಶ್ವರ್ಯಾಭಿಮಾನದೇವತೆಗಳ ಸಂಬಂಧಿಗಳೋ? ಎಂಬಂತೆ ಶೋಭಿಸುವ ಆ ಇಬ್ಬರು ಕುಮಾರರು, ತಂದೆಗಿಂತಲೂ ವಿಶೇಷ ಪರಾಕ್ರಮಶಾಲಿಗಳಾಗಿ, ಸಕಲ ವಿದ್ಯೆಗಳಲ್ಲಿಯೂ ನಿಪುಣರೆನಿಸಿ ಶೃಂಗಾರಾದಿ ನವರಸಗಳನ್ನು ಬಲ್ಲವರಾಗಿ ಸಮರ್ಥರಾದ ಸಮಸ್ತರಾಜರ ಹೃದಯದಲ್ಲಿರುವ ಅಂತರಂಗಾಲೋಚನೆಯನ್ನು

ಸ್ತ್ಯಾಯಾಲೀಢಕೀರ್ತ್ಯೈಕಗಾಥಾ ॥ ೨೪॥ ರಾಜ್ಞಾಶ್ಚಾಜ್ಞಾನುಸಾರಾ
ದತ್ತಿಲವಿಕೃತೋ ಬಾಜೀರಾಯಾದ್ಯನೇಕಕ್ಷೋಣೀಪಾಲೋತ್ತಮಾಂ
ಗಾಢಚಂಡ ಶಿಲಚ್ಚಣಾ ಭೀಷ್ಟ ಶೌವೋಯಕೀರ್ತಿಃ । ಭೂನೋದ್ಧಾವಾ
ಭಿರಾಮೋನ್ಮಥಿತಸಕಲಭೂಪಾಲಸಾಮ್ರಾಜ್ಯಸಾಕ್ಷಾಚ್ಛಿಕ್ಷಾದೀಕ್ಷಾವಿನೋ
ದೈರ್ಜಗತಿ ವಿದಯತ ಧೀರಲಿಂಗಪ್ಪನೇತಾ ॥ ೨೫ ॥ ಶಿವ್ರೋಜಿಕಾಜ
ಜಿಪ್ರಥಿತನಾಮನೀಯ ವಿನೀಯ ಪಾತ್ಶಾಹ್ಯನವಾಜೀಜನ ದ್ಯಶಿ ।ಪ್ರ
ಚಂಡಪರೋರ್ದಂಡಕರಂಡಪಿಂಡನ್ಯೈ ರಪಂಡಯ ತ್ಖಂಡಿತಭೂಪಮಂಡಲಂ
॥ ೨೬ ॥ ನಿಜಾಮನಾಮ್ನಃ ಪ್ರಥಿತೋಪಿಲಾಸಃ ಪರಾಭವೋ ಯಸ್ಯ

ತೀವ್ರ ತನಕ್ಕೆ ಪ್ರತಿನಾಗಿ ತಕ್ಕಪ್ರತಿಕಾರ್ಯಗಳನ್ನು ಮಾಡುವುದರಲ್ಲಿ ಸಮರ್ಥನಾಗಿ ಮಾತ್ರೋತ್ತಿಸಿದ್ದರು. ॥ ೨೪ ॥

ಅನಂತರದಲ್ಲಿ ಬಲಶಾಲಿಯೂ ತ್ಯಾಗಂಗಳುಳ್ಳವನಾಗಿಯೂ ಇರುವ ಕೂ ಶನಾದ ಲಿಂಗಪ್ಪಮಂತ್ರಿಯು; ತನ್ನ ರಾಜನಾದ ಸೋಮಶೇಖರಮಹೀಪಾಲನ ಆಜ್ಞಾನುಸಾರವಾಗಿದ್ದು ಜಗತ್ತಿನಲ್ಲಿ ಪ್ರಧಾನ ಬಾಜೀರಾಯನೇ ಮೊದಲಾದ ಅನೇಕ ರಾಜರ ಶಿರಸ್ಸಿಗೆ ಆಭರಣವಾಗಿಯೂ ತಲೆತೂಗುವಂತೆ ಮಾಡುವುದರಲ್ಲಿ ಸಮರ್ಥವಾಗಿಯೂ ಸತ್ಪುರುಷರನ್ನು ಇಷ್ಟವಾಗಿಯೂ ಉಲ್ಲಾಸಪಡಿಸತಕ್ಕದ್ದಾಗಿಯೂ ಇರುವ ಕೀರ್ತಿಯು ಳ್ಳವನಾಗಿ, ಬಲಿಷ್ಠವಾದ ತನ್ನಿಂದ ಮನೋಹರನೂ ಸಮಸ್ತರಾಜರನ್ನು ಜೈಸಿ ಚಕ್ರವರ್ತಿಯಾತನ ದೆಹಲಿಪಾದಶಾಹನ ಮುಂದುಗಡೆಯಲ್ಲಿಯೂ ಕೂಡ ದುಷ್ಟರಾದವರನ್ನು ನಾನು ಖಂಡಿತವಾಗಿ ಶಿಕ್ಷಿಸುತ್ತೇನೆಂಬ ಸಂಕಲ್ಪವುಳ್ಳ ವಿನೋದದಿಂದ ಪ್ರಕಾಶಿಸುತ್ತಾನೆ. ॥ ೨೫ ॥

ಮತ್ತು ಆ ಲಿಂಗಪ್ಪಮಂತ್ರಿಯು;-ಶಿವ್ರೋಜಿ ಕಾಜಿಯೆಂಬ ಮಹಾರಾಷ್ಟ್ರರಾಜರ ಪ್ರಖ್ಯಾತಿಯನ್ನು ಕೇಳಿ ಅನಂತರ ಚಕ್ರವರ್ತಿಯಾದ ಪಾದಶಾಹನನ್ನು ಅನುಸರಿಸಿ ಅವನಲ್ಲಿ ವಿನಯವನ್ನು ತೋರಿಸಿ ಸ್ನೇಹವನ್ನು ಮಾಡಿಕೊಂಡು ಆಗಲೂ ತನ್ನ ಬಾಹು ಪರಾಕ್ರಮವನ್ನು ತೋರಿಸಿ ಸಣ್ಣ ಸಣ್ಣ ಪಾಳೆಯಗಾರರನ್ನು ಜೈಸಿ ಕೀರ್ತಿಯನ್ನುಂಟುಮಾಡಿಕೊಂಡನು. ॥ ೨೬ ॥

ಮತ್ತು ಪೂರ್ವದಲ್ಲಿ ಹೈದರಾಬಾದ್‌ದೇಶದ ನೈಜಾಮನಿಂದ ಈ ಸೋಮಶೇಖರಮಹೀಪಾಲನ ಸಂತತಿಗೆ ತಿರಸ್ಕಾರವುಂಟಾಗಿತ್ತು. ಈಗಲಾದರೋ? ಆ ನೈಜಾಮನ ವಂಶಸ್ಥನಾದ ಅಸಾವಜಿಯೆಂಬವನು ಈ ಲಿಂಗಪ್ಪಮಂತ್ರಿಗೆ ಅತಿಪ್ರೇಮಪೂರ್ವಕವಾದ ಮರ್ಯಾದೆಯನ್ನು ಮಾಡುತ್ತಾನೆ ನಿಶ್ಚಯವು. ॥ ೨೭ ॥

ಮತ್ತು ಮಹೇಶ್ವರಪೂಜೆಯಲ್ಲಿಯೂ ಭಕ್ತಿಯಲ್ಲಿಯೂ ನಿಷ್ಠನಾದ ಲಿಂಗಪ್ಪಮಂ

ಮಹೋತ್ಸವಸಂತತೇಃ । ಅಸ್ಯಾನಜೇಷ್ಟಪ್ರೇಮಭರೇಣ ನೂನಂ ಲಿಂಗಪ್ಪಮಂ-
ತ್ರೀ ಪ್ರದದಾತಿ ದಾನಂ ॥ ೨೭ ॥ ನಕ್ತಂದಿವಂ ವಂದನನಂದಿತಾವನೀ
ಮಹೇಶ್ವರಾರಾಧನಭಕ್ತಿನೈಷ್ಠಿಕಃ । ತೇಷಾಂ ಸಮೀಪೇ ನಿವಸನ್ ಚ
ದಾಕ್ಷಿಣ್ಯಯಾ ವ್ಯಾಖ್ಯಾತಿ ಸಮ್ಯಗ್ವಿಜ್ಞಃ ಷಟ್ಸ್ಥಲಾನ್ಯಪಿ ॥ ೨೮ ॥
ಪರಸ್ಪರಸ್ಯ ಚರಮೂರ್ತಿಸಂಘೇ ಮನೋನುರೂಪಂ ವಸನಾದಿಪಾ
ನ್ನೈಃ । ನಿಜೇಷ್ಟಲಿಂಗಾರ್ಚನಯಾನುವೇಲಂ ಸ್ವವೀರಶೈವಂ ಮತಮ
ನ್ವತಿಷ್ಠತ್ ॥ ೨೯ ॥ ಕ್ಷೇತ್ರಂ ಮಹತ್ಕಾಪಿಲಸಿದ್ಧಮಸ್ತಿ ವಾಸೋ
ಮುಮುಕ್ಷೋರ್ನಿಲಯೋ ಬುಭುಕ್ಷೋಃ । ಅತೀವ ಕಾಶೀಪ್ರಥಿತಪ್ರ
ಕಾಶಃ ಕೈಲಾಸಸಂಕಾಶವಿನೋದಶಾಲೀ ॥ ೩೦ ॥ ವಿಲಸತಿ ವಿವಿಧಶ್ರೀ
ಶೈವತತ್ವಾರ್ಥನಿಷ್ಠೈಃ ಗುರುಭಿರಪಿ ಸಮೇತಂ ತದ್ವಿಬುಧೈರೇವ

ತ್ರಿಯು ಚತುರೋಪಾಯಂಗಳಿಂದ ಸರ್ವರನ್ನು ಸ್ವಾಧೀನಮಾಡಿಕೊಂಡಿದ್ದನು. ಆಗ ರಾತ್ರಿಯಲ್ಲಿಯು ಹಗಲಿನಲ್ಲಿಯೂ ಆಶ್ರಿತರಾಜರೂ ನಮಸ್ಕಾರ ಮಾಡುವದರಿಂದ ಭೂಮಿಯು ಸಂತುಷ್ಟವಾಗಿತ್ತು. ಆಗಲಿಂಗಪ್ಪಮಂತ್ರಿಯು ಸೋಮಶೇಖರಮಹೀಪಾಲನೇ ಮೊದಲಾದ ತನ್ನ ಆರಾಜರುಗಳ ಸಮೀಪದಲ್ಲಿ ಅವರ ಅಜ್ಞಾನುಸಾರವಾಗಿದ್ದುಕೊಂಡು ತನ್ನ ಮತಶಾಸ್ತ್ರವಾದ ಷಟ್ಸ್ಥಲಸಿದ್ಧಾಂತವನ್ನು ಚನ್ನಾಗಿ ವಿವರಿಸಿ ಹೇಳುತ್ತಿದ್ದನು; ॥ ೨೮ ॥

ಮತ್ತು ವೀರಶೈವಮತಾವಲಂಬಿಯಾದ ಲಿಂಗಪ್ಪಮಂತ್ರಿಯು;-- ತಾನು ವಿಧಿವತ್ತಾಗಿ ಇಷ್ಟಲಿಂಗಾರ್ಚನೆಯನ್ನು ಮಾಡಿಕೊಂಡು ಬಂದಭಕ್ತಮಾಹೇಶ್ವರರಿಗೆ ತೃಪ್ತಿಪಡಿಸುವುದಲ್ಲದೆ ಅನೇಕಸಹಸ್ರ ಚರಮೂರ್ತಿಗಳು ತಮಗೆಬಯಕೆಯಾದ ಪದಾರ್ಥಗಳನ್ನು ಯಾಚಿಸಲು ಅವರವರಿಷ್ಟದಂತೆ ಅವರು ಬೇಡಿದ ವಸ್ತ್ರವೇ ಮೊದಲಾದ ಪದಾರ್ಥಗಳನ್ನು ಪ್ರತಿಕ್ಷಣದಲ್ಲಿಯೂ ಕೊಟ್ಟು ಅವರನ್ನು ಸಂತುಷ್ಟರನ್ನಾಗಿ ಮಾಡಿಮೆರೆದಿದ್ದನು. ॥ ೨೯ ॥

ಅಗ ಆಬಿದರೂರು ಪಟ್ಟಣಕ್ಕೆ ಸಮೀಪದಲ್ಲಿ;--ಮೋಕ್ಷಾಪೇಕ್ಷಕರಿಗೆ ವಾಸವಾಗಿಯೂ, ಭೋಗಾಪೇಕ್ಷಕನಿಗೆ ಮಂದಿರವಾಗಿಯೂ, ಕಾಶಿಯಪ್ರಭಾವವನ್ನು ಮೀರಿರುವದಾಗಿಯೂ, ವಿಶೇಷ ಪ್ರಕಾಶವುಳ್ಳದ್ದಾಗಿಯೂ, ಕೈಲಾಸದ ವಿನೋದಕೆ ಸದೃಶವಾದ ವಿನೋದದಿಂದೊಪ್ಪುವದಾಗಿಯೂ, ಮಹತ್ವತೆಯುಂಟಾದದ್ದಾಗಿಯೂ ಇರುವ ಕಾಪಿಲಸಿದ್ಧ ರಾಮಕವೆಂಬೊಂದು ಸುಕ್ಷೇತ್ರವು ಇತ್ತು. ॥ ೩೦ ॥

ಆ ಕ್ಷೇತ್ರದಲ್ಲಿ;--ಸಾಲೋಕ್ಯಸಾಮೀಪ್ಯಸಾರೂಪ್ಯಸಾಯುಜ್ಯ ಸಕಲಸಾಮ್ರಾ

ಸನ್ತ್ಯತ್ರ । ಗುರುಪುರಮಿತಿ ನಾಮ್ನಾ ಸ್ವಾರ್ಥಸಿದ್ಧೇ ಸಭಾಸ್ವದ್ಗೃಹಾನನಕ ಮನೋಜ್ಞಂ ಭಾತ್ಯಸಂಖ್ಯೈ ಗೃಹಶ್ರೈಶ್ಚ ॥ ೩೧ ॥ ಬಹಿರಿವ ಕಠಿನಾ ಸ್ತೇ ಪಾರ್ಶ್ವಯೋಃ ಕೇತುಸಂಘಾತ ವಿಶದಮಧುರಭಾವಾ ನಾವಿವೇಕೇನ ವೇದ್ಯಾಃ । ಗುರುವಣಿ ಇಹಾತ್ಯಸ್ತನ್ವತ ದಂತಭಂಗಾ ಪುರಷವಪನಶೀಲೋ ಯೋಽಶ್ನುತೇ ಚಾರ್ಯ್ಯವೃತ್ತಿಂ ॥ ೩೨ ॥ ಜಲನಿಧಿರತಿವೇಲಂ ಕೀರ್ತಿಚಂದ್ರೋದಯೇನ ಸ್ಫುಟಗುರುಪುರಮೇನಂ ಧೀರನಿರ್ವಾಣನೇತುಃ । ನಮತಿ ಬಹುಳಭಕ್ತ್ಯಾ ಘೋಷಯನ್ನಾತ್ಮಮಂತ್ರೈಃ ಪರಿಚಿತನಿಜಜಾಯಾಮನ್ನಡೀರ್ದರ್ಶಿತಾಢ್ಯಾ ॥ ೩೩ ॥ ಲಸದತನು

ಜ್ಯ ಸಕಲ ನಿಷ್ಕಲಸಾಯುಜ್ಯ ನಿಷ್ಕಲಸಾಯುಜ್ಯಗಳೆಂಬ ಮೋಕ್ಷಸಂಪತ್ತನ್ನು ಕೊಡುವ ಪರಶಿವತತ್ವಾರ್ಥದಲ್ಲಿ ನಿಷ್ಠರಾಗಿಯೂ, ಸಮಸ್ತ ವಿದ್ಯೆಗಳಲ್ಲಿಯು ಪಂಡಿತರಾಗಿಯೂ ಇರುವ ಗುರುಜನರಿಂದ ಕೂಡಿ ಕೊಂಡಿರುವುದರಿಂದಲೇ ಗುರುಪುರವೆಂಬೊಂದು ಪಟ್ಟಣವು ಸಾರ್ಥಕನಾಮವನ್ನು ಧರಿಸಿ ಮೆರೆದಿತ್ತು. ಆ ಗುರುಪುರದಲ್ಲಿ ನೂತನಗಳೂ ಮನೋಹರಗಳೂ ಆದ ಒಂಭತ್ತು ಮನೆಗಳು ಮತ್ತು ಗಣನಾತೀತಗಳಾದ ಬಾಧುರಗೃಹಗಳೂ ಕೂಡ (ಛಳ್ಳಿಯಮನೆ) ಶೋಭಿಸಿದ್ದುವು- ॥ ೩೧ ॥

ಮತ್ತು ಈ ಗರುಪುರದಲ್ಲಿರುವ ಆ ಪ್ರಸಿದ್ಧರಾದ ಗುರುಗಳು;-- ಹೊರಗೆ ನೋಡಿದವರಿಗೆ ಮಾತ್ರ ಕಠಿಣಭಾವವುಳ್ಳವರಂತ ಕಾಣುವರಲ್ಲದೆ ವಿಚಾರಮಾಡಲಾಗಿ ಆ ಗುರುಗಳೆಲ್ಲರೂ ನಿರ್ಮಲಭಾವರೂ ಮಧುರಸ್ವಭಾವರೇ ಆಗಿಮೆರೆದಿದ್ದರು ಮತ್ತು ಈ ಗುರುಗಳು ವಿವೇಕಿಗಳಿಂದ ತಿಳಿಯಲು ಯೋಗ್ಯರಲ್ಲದೆ ಅವಿವೇಕಿಗಳಿಂದ ತಿಳಿಯಲು ಅಸಾಧ್ಯರಾಗಿದ್ದರು' ಮತ್ತು ಈಗುರುಗಳು ಹೊರಗೆ ಹೊರಟಕಾಲದಲ್ಲೆಲ್ಲಾ ಉಭಯ ಪಾರ್ಶ್ವಂಗಳಲ್ಲಿಯೂ ಕಾವಿಯ ಧ್ವಜಪಟಗಳು ಶೋಭಿಸಿದ್ದುವು, ಮತ್ತು ಈಗುರುಗಳು;--ಪುರುಷತ್ವವನ್ನು ಧರಿಸಿರುವ ಯಾವನು ಪುರುಷ ವೃತ್ತಿಯಾದ ಪತಿಧರ್ಮವನ್ನು ಆಚರಿಸಿದರೆ ಸರಿ-ಅದಲ್ಲದೆ ಪಶುಧರ್ಮವನ್ನೇನಾದರೂ ಯಾವನಾದರು ಆಚರಿಸಿದಲ್ಲಿ ಅವನಹಲ್ಲನ್ನೇ ಮುರಿಯುತ್ತಿದ್ದರು. ॥ ೩೨ ॥

ಇಂತೊಪ್ಪುವಗುರುಗಳಿಂದ ಶೋಭಿಸುವ ಈಗುರುಪುರವನ್ನು ಸಮುದ್ರವು ತನ್ನಲ್ಲಿರುವ ಘೋಷ (ಶಬ್ದ) ವೆಂಬಮಂತ್ರಂಗಳನ್ನು ಉಚ್ಚರಿಸಿ ಬಹು ಭಕ್ತಿಯಿಂದ ನಮಸ್ಕರಿಸುತ್ತಿದ್ದನು; ಹೀಗಿರಲು ಆಕಾಲದಲ್ಲಿ ಲಿಂಗದ್ವಮಂತ್ರಿಗೆ ಜ್ಯೇಷ್ಠಪುತ್ರನಾದನಿರ್ವಾಣಮಂತ್ರಿಯುಕೀರ್ತಿಯೆಂಬಚಂದ್ರನುದಯಿಸಲುಎಲ್ಲೆಯನ್ನುಮೀರಿವುಕ್ಕಿ ಹರಿದಿದ್ದಿರಲು ಆಗ ಸಮುದ್ರನಿಗೆ ಪರಿಚಿತರುಗಳೂ ಸ್ವಾಂತಪತ್ನಿಯರೂ ಆದ ನದಿಗಳು ದಾರಿಯನ್ನು ತೋರಿಸುತ್ತಿದ್ದರು.' (ಅಂದರೆ ನಿರ್ವಾಣ ಮಂತ್ರಿಯು ವಿಶೇಷವಾದ ಕೀರ್ತಿಯನ್ನು ಸಂಪಾದಿಸಿದ್ದನೆಂದು ತಾತ್ಪರ್ಯವು). ॥ ೩೩ ॥

ತರಂಗಶ್ರೇಣಿತೋಪ್ಯೈಸ್ಸ್ವಹಸ್ತೈಸ್ಸ್ವಚ್ಛಾಮಲಪೃಥುಲಫೇನಸ್ಫೀತಮುಕ್ತಾಫಲೌಘೈಃ । ಅಹರಹರುರುಭಕ್ತ್ಯಾ ಭ್ಯರ್ಚತಿ ಕ್ಷೇತ್ರವರ್ಯಂ ಮನುಪಠನವಿನಿದ್ರಃ ಪಶ್ಚಿಮಾಶಾಸಮುದ್ರಃ ॥ ೩೪ ॥ ಅನ್ಯೋನ್ಯವೈಷಮ್ಯಭರೇಣ ನದ್ಧಾ ವಸಂತಮುಖ್ಯಾ ಋತವಷ್ಷಡೇತೇ । ತ್ಯಜಂತಿ ವೈರಂ ಶಪಥೇನ ತಸ್ಮಿನ್ಪುರೇ ಗುರೋಸ್ಸಂತು ಮಿಥೋ ಮಿಳಂತಿ ॥ ೩೫ ॥ ನವಗುರುಪುರವಾಸೀ ಜನ್ಮಸಾಫಲ್ಯಮೇತಿ ವ್ರಜತಿ ಕಪಿಲಸಿದ್ಧೇಶ್ರೀಪದೇನೈಕಭಾವಂ । ಫಲಮುಚಿತಮಶೇಷಂ ಜನ್ಮನೈವೈತಿ ತಸ್ಮಿನ್ನಿಶದಮುಪಚಿನೋನಂ ತದ್ಗುರೋಸ್ತತ್ಪಾದಮೇತಿ ॥ ೩೬ ॥ ಅಗಣಿತಸುಕೃ

ಇಂತಹ ಪಶ್ಚಿಮದಿಕ್ಕಿನಲ್ಲಿರುವ ಸಮುದ್ರವು;-ಪ್ರಕಾಶವುಳ್ಳವುಗಳೂ ಸ್ಥೂಲಗಳಾಗಿಯೂ ಇರುವ ತೆರೆಗಳೆಂಬ ತನ್ನ ಹಸ್ತಗಳಿಂದಲೂ, ನಿರ್ಮಲವಾಗಿಯೂ ದಪ್ಪವಾಗಿಯೂ ಇರುವ ನೊರೆಗಳಲ್ಲಿ ಪ್ರಕಾಶವುಳ್ಳವುಗಳಾದ ಮುಕ್ತಾಫಲಗಳ (ಮುತ್ತುಗಳ) ಸಮೂಹಗಳಿಂದಲೂ, ಪ್ರತಿನಿತ್ಯದಲ್ಲಿಯೂ ಘೋಷ (ಶಬ್ದ) ವೆಂಬ ಮಂತ್ರಗಳನ್ನು ಪಠಿಸುವುದರಲ್ಲಿ ಜಾಗರೂಕನಾಗಿ ಬಹು ಭಕ್ತಿಯಿಂದ ಕಪಿಲಸಿದ್ಧನ ಮಹಾಕ್ಷೇತ್ರವನ್ನು ಪೂಜಿಸುತ್ತಾನೆ. ॥ ೩೪ ॥

ಮತ್ತು ಆ ಕ್ಷೇತ್ರದಲ್ಲಿರುವ ಗುರುಪುರದಲ್ಲಿ;-ಪರಸ್ಪರ ವೈಷಮ್ಯದಿಂದ ಕೂಡಿಕೊಂಡಿರುವ (ಒಂದಕ್ಕೊಂದು ಸ್ನೇಹಭಾವವಿಲ್ಲದಿರುವ) ವಸಂತ ಋತುವೇ ಮೊದಲಾದ ಆರು ಋತುಗಳೂ ಕೂಡ ತಮ್ಮ ತಮ್ಮ ದೀರ್ಘದ್ವೇಷವನ್ನು ಬಿಟ್ಟು ನಾವು ಇನ್ನೊಂದಿಗೂ ಒಬ್ಬರಿಗೊಬ್ಬರು ದ್ವೇಷವನ್ನು ಮಾಡಬಾರದೆಂದು ಶಪಥವನ್ನು ಮಾಡಿಕೊಂಡು ಒಂದಕ್ಕೊಂದು ಅನ್ಯೋನ್ಯ ಭಾವದಿಂದ ಕೂಡಿ ವಾಸಮಾಡಿಕೊಂಡಿರುವವು (ಅಂದರೆ ಶತ್ರು ಭಾವದಿಂದ ಕೂಡಿದ್ದ ವಸಂತವೇ ಮೊದಲಾದ ಷಡೃತುಗಳು ಈ ಗುರುಪುರದ ಮಹಿಮಾ ಪ್ರಭಾವದಿಂದ ಮಿತ್ರಭಾವವನ್ನೇ ಹೊಂದಿ ನೆರೆದಿದ್ದವೆಂದು ತಾತ್ಪರ್ಯವು). ॥ ೩೫ ॥

ಯಾವನು ಈ ಗುರುಪುರದಲ್ಲಿ ವಾಸಮಾಡುತ್ತಾನೋ ? ಅವನ ಜನ್ಮವು ಸಾಫಲ್ಯವನ್ನು ಹೊಂದುತ್ತದೆ. ಯಾವನು ಕಪಿಲಸಿದ್ಧಸ್ವಾಮಿಯ ಶ್ರೀಪಾದ ಧ್ಯಾನವ ಮಾಡುತ್ತಾನೋ? ಅವನ ಮನಸ್ಸು ಚಾಂಚಲ್ಯವನ್ನು ಬಿಟ್ಟು ಏಕೀಭಾವವನ್ನು ಹೊಂದುತ್ತದೆ. ಯಾವನು ಈ ಕ್ಷೇತ್ರದಲ್ಲಿ ಸಮಸ್ತ ಫಲವನ್ನು ಪಡೆಯುತ್ತಾನೋ ? ಅವನಿಗೆ ಪುನರ್ಜನ್ಮವಿಲ್ಲ. ಯಾವನು ಏಕೀಭಾವದಿಂದ ಆ ಕಪಿಲಸಿದ್ಧಸ್ವಾಮಿಯನ್ನು ಸೇವಿಸುತ್ತಾನೋ ? ಅವನು ನಿರ್ಮಲವಾಗಿಯೂ ಅತಿಶತ್ಯವಾಗಿಯೂ ಇರುವ ಆ ಕಪಿಲಸಿದ್ಧಸ್ವಾಮಿಯ ಪಾದವನ್ನೇ ಹೊಂದುತ್ತಾನೆ. ॥ ೩೬ ॥

ಸಾಂಖ್ಯೈಶ್ಚ ಪ್ರಾಪ್ಯತೇ ಯಂ ಜನಾನಾಂ ಜನನಮರಣದುಃಖಚ್ಛೇದಕಂ ಕ್ಷೇತ್ರಮೇತತ್ । ಅಭಿಲಷಿತಫಲಾನಾಂ ಕಾಮಧೇನುಃ ಕವೀನಾಂ ಕಲಿಮಲತಮಸಶ್ಶೋನ್ಮೂಲನೇ ಕೋಟಿಭಾನುಃ ॥ ೩೩ ॥ ಲಸತಿ ಕಪಿಲಸಿದ್ಧಸ್ವಾಮಿರೂಪೇಣ ಶಂಭುಸ್ಸಕಲಭುವನಭಾಸ್ವದ್ಭಾಗಧೇಯೈರನಂತೈಃ । ಕಲಯತಿ ವೃಷನಾಥಸ್ತಸ್ಯ ನಿರ್ವಾಣಮಂತ್ರೀ ಪ್ರತಿದಿನಮತಿಸಂಖ್ಯಾನುತ್ಸವಾನುತ್ಸುಕೋಽಸೌ ॥ ೩೪ ॥ ಮಾಘಮಾಸಿ ಚರಿತೇ ಮಹೋತ್ಸವೇ ಶೈವಸಂಘಮಿಳಿತೇ ಶಿವಯೋಗೇ । ಸ್ವಸ್ವಕ್ಲೃಪ್ತಫಲಸಿದ್ಧಯೇ ಜನಾಃ ದೇಶದೇಶವಸತೇಃ ಸಮಯಾತಾಃ ॥ ೩೫ ॥ ನಿರ್ವಾಣಮಂತ್ರೀ ಸಹಗಾಂಗಸಂಘೈರನುಜ್ಞಯಾ ಜ್ಞಾಪಿತವಾನ್

ಮತ್ತು ಈ ಕ್ಷೇತ್ರವು ವಿಶೇಷವಾದ ಪುಣ್ಯವನ್ನು ಸಂಪಾದಿಸುವ ಪ್ರಾಣಿಗಳು ಹೊಂದಲ್ಪಡುವುದಕ್ಕೆ ಯೋಗ್ಯವಲ್ಲದೆ ಸಾಂಖ್ಯರಿಂದ ಹೊಂದಲ್ಪಡತಕ್ಕದ್ದಲ್ಲ. ಮತ್ತು ಈ ಕ್ಷೇತ್ರವನ್ನು ಹೊಂದಿದ ಜನಗಳಿಗೆ ಜನನ ಮರಣ ದುಃಖ ಇವುಗಳು ನಾಶವಾಗುತ್ತವೆ. ಮತ್ತು ಈ ಕ್ಷೇತ್ರವು ಶಿವಕವಿಗಳು ಅಪೇಕ್ಷಿಸಿದ ಫಲಗಳನ್ನು ಕೊಡುವುದಕ್ಕೆ ಕಾಮಧೇನುವಾಗಿರುವುದು. ಮತ್ತು ಕಲಿಯುಗದ ಕಶ್ಮಲವೆಂಬ ಕತ್ತಲೆಯನ್ನು ನಿರ್ಮೂಲಮಾಡುವುದಕ್ಕೆ ಕೋಟಿಸೂರ್ಯನಾಗಿರುವುದು. ॥ ೩೩ ॥

ಮತ್ತು ಆ ಕ್ಷೇತ್ರದಲ್ಲಿ ಪರಶಿವಮೂರ್ತಿಯು ಸಮಸ್ತಪ್ರಾಣಿಗಳೂ ಪೂರ್ವಜನ್ಮದಲ್ಲಿ ಮಾಡಿದ ಅನೇಕಪುಣ್ಯಪ್ರಭಾವಗಳಿಂದ ಕಪಿಲಸಿದ್ಧಸ್ವಾಮಿಯೆಂಬ ಹೆಸರನ್ನು ಹೊಂದಿ ನೆಲೆಸಿದ್ದಾನೆ. ಅಂತಹ ಆ ಕಪಿಲಸಿದ್ಧಸ್ವಾಮಿಗೆ ವೃಷನಾಥಸ್ವರೂಪನಾದ ಈ ನಿರ್ವಾಣಮಂತ್ರಿಯು ಅತ್ಯುತ್ಸುಕದೊಡನೆಕೂಡಿ ಪ್ರತಿನಿತ್ಯದಲ್ಲಿಯೂ ಅನೇಕೋತ್ಸವಗಳನ್ನು ಭಕ್ತಿಯಿಂದ ಮಾಡುತ್ತಾನೆ. ॥ ೩೪ ॥

ಹೀಗಿರಲು ಆಗ ಅನೇಕಶಿವಭಕ್ತ ಸಮೂಹಕೂಡಿ ಅತಿಮಹೋತ್ಸವವನ್ನು ಮಾಡತಕ್ಕ ಮಾಘಮಾಸ ಮಹಾಶಿವಯೋಗಕಾಲವು (ಶಿವರಾತ್ರಿಯು) ಒದಗಲು ಆಕಾಲದಲ್ಲಿ ಆ ಮಹೋತ್ಸವಕ್ಕೆ ತಮ್ಮತಮ್ಮ ಪ್ರಾರ್ಥನೆಯಂತೆ ಫಲಸಿದ್ಧಿಯನ್ನುಂಟುಮಾಡಿದ ಕಪಿಲಸಿದ್ಧಸ್ವಾಮಿಯನ್ನು ಭಕ್ತಿಯಿಂದ ಸೇವಿಸಿ ಹರಕೆಯನ್ನು ತೀರಿಸುವದಕ್ಕೋಸ್ಕರ ಭಕ್ತಜನರು ಎಲ್ಲಾ ದೇಶಗಳಿಂದಲೂ ಬಂದು ಸೇರಿದರು ॥ ೩೫

ಅನಂತರ ನಿರ್ವಾಣಮಂತ್ರಿಯು ಆ ಶಿವಯೋಗ ಮಹೋತ್ಸವಕಾರ್ಯವನ್ನು ತನ್ನ ರಾಜನಾದ ಸೋಮಶೇಖರಮಹೀಪಾಲನಿಗೆ ವಿಜ್ಞಾಪಿಸಿ ಆ ರಾಜನ ಅಪ್ಪಣೆಯಂತೆ ತಂದೆಯಾದ ಲಿಂಗಪ್ಪಮಂತ್ರಿಯನ್ನೂ ಪುರಜನಗಳನ್ನೂ ಶ್ವೇತಾತಪತ್ರವ

ಶ್ಸ್ವರಾಜ್ಞಃ । ಶ್ವೇತಾತಪತ್ರಂ ಚತುರಂಗಸೈನ್ಯಂ ಲಿಂಗಪ್ಪನೇತಾ
ಸಹ ಸತ್ಪ್ರಯಾತುಂ ॥ ೪೦ ॥ ಕಪಿಲಸಿದ್ಧಮುನಿಂ ಪ್ರತಿಪದ್ಯ ತೇ
ಮನಸಿ ಭಕ್ತಿಭರೇಣ ನಮಸ್ಕೃತಿಂ । ಮುಖರಿತಾಖಿಲತಾಂತ್ರಿಕವೈದಿ
ಕ ಸ್ತುತಿಮುಖೇನ ಸಖೇಲ ಮಕುರ್ವತ ॥ ೪೧ ॥ ತದನು ತಸ್ಯಸುತ
ಸ್ಯ ಮಹೋತ್ಸವೇ ಪದಸರೋಜಸರೋಜ ಸಮರ್ಚನೆ । ನಕಲಿತಃ
ಕಲಿತಪ್ರತಿಬಂಧಕ ಸ್ತ್ವನುಭೃತಾಂ ನಿಭೃತಾಂತರಭಕ್ತಿಭಿಃ ॥ ೪೨ ॥
ಅಯುತಕ್ಷೀರಫಲಾಪ್ಯಭಿಷೇಚನೆ ಹರಶಿರಸ್ಥಿತಪೂರ್ವವಿಯನ್ನದೀ । ದಧಿ
ಧಿತಿ ಕ್ಷೀರಪದಂ ಪ್ರತಿಪದ್ಯ ತಂ ಸ್ವಸುರತಾಂ ವಿದಯೇಶಿತು ರರ್ಥತಿ

ಮೊದಲಾದ ಬಿರುದುಗಳನ್ನೂ ಚತುರಂಗಸೈನ್ಯವನ್ನೂ ಕೂಡಿಕೊಂಡು ಮಹೋ
ತ್ಸವವನ್ನು ಪೂರ್ತಿಮಾಡುವದಕ್ಕೋಸ್ಕರ ಆ ಕಪಿಲಸಿದ್ಧ ಕ್ಷೇತ್ರವನ್ನು ಹೊಂದಿ
ದನು, । ೪೦ ।

ಆಗ ಆಕ್ಷೇತ್ರವನ್ನುಹೊಂದಿದ ನಿರ್ವಾಣಮಂತ್ರಿಯೇ ಮೊದಲಾದವರೆಲ್ಲರೂ
ಬಹುಭಕ್ತಿಯಿಂದ ಆಕಪಿಲಸಿದ್ಧಸ್ವಾಮಿಯನ್ನು ನಮಸ್ಕರಿಸಿ ಅತ್ಯುತ್ಸಾಹದೊಡನೆ
ಕೂಡಿ ವೇದಾಗಮೋಕ್ತ ಸ್ತೋತ್ರಗಳಿಂದ ಆ ಸ್ವಾಮಿಯನ್ನು ಸ್ತೋತ್ರಮಾಡಿ
ದರು. । ೪೧ ।

ಅನಂತರ ಲಿಂಗಪ್ಪಮಂತ್ರಿಯ ಪುತ್ರನಾದ ನಿರ್ವಾಣಮಂತ್ರಿಯು ಪದ್ಧತಿ
ಯಪ್ರಕಾರ ಶಿವರಾತ್ರಿಯ ಮಹೋತ್ಸವವನ್ನು ಮಾಡಿಸಿ ವಿಶೇಷವಾಗಿ ಆಕಪಿಲ
ಸಿದ್ಧಸ್ವಾಮಿಗೆ ಕಮಲಾರ್ಚನೆಯನ್ನು ಮಾಡಿಸಿದನು. ಆವಿಶೇಷಕಮಲಾರ್ಚನೆಯ
ಪೂಜಾವೈಭವವನ್ನು ನೋಡುವುದಕ್ಕಾಗಿಯೇ ಅನೇಕದೇಶಗಳಿಂದ ಭಕ್ತರುಗಳು
ಬಂದಿದ್ದರು. ಆಗ ಅಲ್ಲಿಗೆ ನೆರೆದಿದ್ದ ಸದ್ಭಕ್ತರುಗಳ ಭಕ್ತಿಯ ಅತಿಶಯವನ್ನುನೋ
ಡಿ ಯಾವ ಅಧಿಕಾರಿಗಳಿಂದಲೂ ರಾಜಾಜ್ಞೆಯಂತೆ ಪ್ರತಿವರ್ಷವೂ ಆಕ್ಷೇತ್ರದಲ್ಲುಂ
ಟಾಗುತ್ತಿದ್ದ ರಾಜಸಂಬಂಧ ಶಿಕ್ಷಾ ಪ್ರತಿಬಂಧಕವೇನೂ ಉಂಟಾಗಲಿಲ್ಲ. ॥ ೪೨ ॥

ಮತ್ತು ಆಶಿವರಾತ್ರಿಯ ಶಿವಯೋಗದ ಮಹಾ ಪುಣ್ಯದಿನದಲ್ಲಿ ನಿರ್ವಾಣಮಂತ್ರಿ
ಯು ಅನೇಕ ಸಾವಿರ ಎಳನೀರುಗಳಿಂದ ಆಕಪಿಲ ಸಿದ್ಧಸ್ವಾಮಿಗೆ ಅಭಿಷೇಕಮಾಡಿ
ಸಲು ಆಕಾಲದಲ್ಲಿ ಆಕಪಿಲ ಸಿದ್ಧಸ್ವಾಮಿಯ ಶಿರಸ್ಸಿನಲ್ಲಿ ಪೂರ್ವದಲ್ಲಿದ್ದ ದೇವಗಂಗಾ
ನದಿಯು ತಾನೂ ಕೂಡ ಎಳನೀರಾಗಿ ಆಹಾ! ನಾನು ಎಳನೀರೆ ಆಗಿ ಹೋದೆನ
ಲ್ಲಾ! ನನ್ನ ದೇವತ್ವವು ಈ ಎಳನೀರಿನ ಸಂಪರ್ಕದಿಂದ ಹೊಗಲಾಡಿಸಲ್ಪಟ್ಟಿತ
ಲ್ಲಾ; ಎಂದು ಜಾಗ್ರತೆಯಾಗಿ ಗಾಬರಿಯನ್ನು ಹೊಂದಿ ಆಕಪಿಲ ಸಿದ್ಧಸ್ವಾಮಿಯದ
ಯೆಯಿಂದ ತನ್ನ ದೇವತ್ವವನ್ನು ಕೊಡೆಂದು ಪ್ರಾರ್ಥಿಸುವಂಥಾದ್ದಾಯಿತು. ॥ ೪೩ ॥

ಪ್ರಾಕಲಿತಃ ಪ್ರತಿವಾಸರಮುತ್ಸವಃ ಪ್ರತಿಕಲಂ ನವನವಪದಾಂಬುಜೇ ಕಪಿಲಸಿದ್ಧಮುನೇಃ ಕರುಣಾನಿಧೇ ರತಿತರಾಮಿತರಾಸುದೃಶಸ್ತದಾ ॥೪೪॥

ಅಭಿನವನೃಷನಾಥ ಸ್ತರ್ಹಿನಿರ್ವಾಣಮಂತ್ರೀ ಕಲಯತಿ ಪರಿಚರ್ಯಾಂಸ್ವಾನುಭಾವೈರ್ನಿರೂಢೈಃ । ಭವತಿಕಪಿಲಸಿದ್ಧ ಸ್ತತ್ರದಿಷ್ಟ್ಯಾರ್ಥದಾಯೀ ಧುರಮಿಹವಹತಿ ಶ್ರೀಧೀರಲಿಂಗಪ್ರಣೇತಾ ॥೪೫॥ ವ್ರಜತಿಕಪಿಲಸಿದ್ಧ ಶ್ರೀಮಹೀಶಂಭಜಿಷ್ಣುಸ್ಸಕಲಭಜಕಸಂಘೈಃ ಪ್ರಾಪಿತಾತ್ಮೋಪಚಾರಃ । ಗುರುಬಸವ ಯತೀಂದ್ರಸ್ಸಾಕ್ಷಿಚೈತನ್ಯರೂಪಃ ಕಲಿತಸಕಲಪೂಜಾವೈಭವಂ ಪಶ್ಯತಿಸ್ಮ ॥೪೬॥ ಲಿಂಗಪ್ಪಮಂತ್ರೀ ಕತಿಚಿದ್ದಿನಾನಿ ಕೃತ್ವಾಸಪರ್ಯಾಂ ಚರಮೂರ್ತಿಸಂಘೇ । ತೇಷಾಂ ಸಮಾಜೇ ಪರಮಾರ್ಥ-

---

ಈರೀತಿಯಾಗಿ ಆ ಮಹೋತ್ಸವವು ನಡೆದನಂತರ ಆಗ ಕೃಪಾಸಮುದ್ರನಾದ ಕಪಿಲಸಿದ್ಧಸ್ವಾಮಿಯ ಮಹಾಪಾದಕಮಲ ಸನ್ನಿಧಿಯಲ್ಲಿ ಪ್ರತಿಕ್ಷಣವೂ ನಡೆಯಬೇಕಾದ ಅಲ್ಪೋತ್ಸವವೂ, ಪ್ರತಿದಿನವೂ ನಡೆಯಬೇಕಾದ ಮಧ್ಯಮೋತ್ಸವವೂ, ಪ್ರತಿವಾರವೂ ನಡೆಯಬೇಕಾದ ಉತ್ತಮೋತ್ಸವವೂ, ಪ್ರತಿತಿಂಗಳಲ್ಲಿಯೂ ನಡೆಯಬೇಕಾದ ವಿಶೇಷೋತ್ಸವವೂ, ಪ್ರತಿವರ್ಷದಲ್ಲಿಯೂ ನಡೆಯಬೇಕಾದ ಮಹೋತ್ಸವವೂ ಕೂಡ ದಿನೇದಿನೇ ನೂತನವಾಗಿಯೇ ಅನನ್ಯಸಾಧಾರಣವಾಗಿ ನಡೆಯುತ್ತಿದ್ದವು. ॥೪೪॥

ಆದರೆ ಆಗ ನೂತನವೃಷಭೇಶ್ವರ ಸ್ವರೂಪನಾದ ನಿರ್ವಾಣಮಂತ್ರಿಯು ಆಗಮೋಕ್ತವಾಗಿ ತನ್ನ ಅನುಭವಕ್ಕೆ ಗೋಚರವಾದಂತೆ ಅತಿವೈಭವದಿಂದ ಆ ಕಪಿಲ ಸಿದ್ಧಸ್ವಾಮಿಯ ಸೇವಾಸತ್ಕಾರವನ್ನು ಕ್ರಮವಾಗಿ ಮಾಡಿಸುತ್ತಿದ್ದನು. ಆ ಕಪಿಲಸಿದ್ಧಸ್ವಾಮಿಯು ಕೂಡ ಆ ನಿರ್ವಾಣಮಂತ್ರಿಯ ಇಷ್ಟಾರ್ಥಗಳನ್ನು ಕೊಡುತ್ತಿದ್ದನು. ಪ್ರಾಜ್ಞನಾದ ಆ ಲಿಂಗಪ್ಪಮಂತ್ರಿಯು ಅಲ್ಲಿನ ಸರ್ವಾಧಿಕಾರಿತನವನ್ನು ವಹಿಸಿದ್ದನು. ॥೪೫॥

ಅನಂತರ ಭೂಲೋಕದಲ್ಲಿ ಪರಶಿವಸ್ವರೂಪನಾದ ಆ ಕಪಿಲಸಿದ್ಧಮಹೇಶ್ವರನು ತನ್ನಬಳಿಗೆ ಬಂದು ಸೇವಿಸುವ ಭಕ್ತಜನರು ಮಾಡಿದ ಉಪಚಾರಗಳನ್ನೆಲ್ಲಾ ಅಂಗೀಕರಿಸುತ್ತಿದ್ದನು. ಸರ್ವಸಾಕ್ಷಿಯಾದ ಚೈತನ್ಯಸ್ವರೂಪನಾದ ಗುರುಬಸವ ಶಿವಯೋಗಿಯು ಆಮಹೋತ್ಸವ ಪೂಜಾ ವೈಭವಂಗಳನ್ನೆಲ್ಲಾ ನಿತ್ಯದಲ್ಲಿಯೂ ತಾನೇ ಪ್ರತ್ಯಕ್ಷವಾಗಿ ಸಂತೋಷದಿಂದ ನೋಡುತ್ತಿದ್ದನು. ॥೪೬॥

ಹೀಗಿರಲು ಮಹಾಸಮರ್ಥನಾದ ಲಿಂಗಪ್ಪಮಂತ್ರಿಯು ಆಕಪಿಲಸಿದ್ಧಮಹೇಶ್ವರನ ಸೇವಾಸತ್ಕಾರವನ್ನು ಕೆಲವು ದಿನ ಮಾಡಿಸುತ್ತಿದ್ದು, ಅನಂತರ ಒಂದಾನೊಂದು ದಿವಸಲ

ಭೂತಮರ್ಥಂ ಸಮರ್ಥ ಸ್ತ್ವಮುಪೃಚ್ಛದ್ದೇವಃ ॥೪೭॥ ಯೂಯಂ ಮಹಾಂತಃ ಪರಮಾರ್ಥನಿಷ್ಠಾಃ ಕೃಪಾವಲಂಬಾಃ ಕಲಿದೋಷಹೀನಾಃ। ಭೂಯೋಽನುಗೃಹ್ಣಂತು ಮದೀಯಬುದ್ಧಿಂ ಪ್ರಕಾಶಯಂತಃ ಪರಮಾರ್ಥತತ್ವಂ ॥೪೮॥ ಪೃಚ್ಛಂತಮೇವಂ ಕರುಣಾಭರೇಣ ಪುರುಷಾರ್ಥಭೂತಂ ಪರಮಾರ್ಥರೂಪಂ । ಪ್ರಬೋಧಿತುಂ ತೇ ಗುರವ ಸ್ಸಮಸ್ತಾ ನಸ್ಮದ್ವಿದ್ವಾನಿತಿ ಮಾಮವೋಚನ್ ॥೪೯॥ ಅಧೀತಶಾಸ್ತ್ರಾಗಮವೇದವಿದ್ಯಃ ಶೈವಾರ್ಥವೇತ್ತಾ ರುಚಿರಸ್ವಭಾವಃ । ಆಬಾಲ್ಯ ಮೇತಾವದನೇನ ಪುಷ್ಟೋ ನಿರ್ವಾಣನೇತಾ ನಿಗಮಾರ್ಥವೇತ್ತಾ ॥೫೦॥ ಶ್ರೀಮತ್ತರ್ಕಸುಶಬ್ದಜೈಮಿನಿಸಮಾಹ್ವಯವೈಶೇಷಿಕೇಷೂತ್ತಮಃ ವಿದ್ವಾನ್ವಾದಕಥಾಸುಮಾವಿವಿ

ಕಪಿಲಸಿದ್ಧಸ್ವಾಮಿಯು ಸನ್ನಿಧಿಯಲ್ಲಿ ಶಿವಾನುಭವಗೋಷ್ಠಿಗಾಗಿ ಸೇರಿದ್ದ ಚರಮೂರ್ತಿಗಳ ಸಮೀಪದಲ್ಲಿ ಅತ್ಯಂತ ಸಾರವಾದ ಅಭಿಪ್ರಾಯವನ್ನು ಈ ವಕ್ಷ್ಯಮಾಣಪ್ರಕಾರವಾಗಿ ಕೇಳಿದನು ಏನೆಂದರೆ:— ॥೪೭॥

ಎಲೈ ಶಿವಸ್ವರೂಪಿಗಳಾದ ಚರಮೂರ್ತಿಗಳಿರಾ! ಮಹಾತ್ಮರೂ, ಪರಮಾರ್ಥನಿಷ್ಠರೂ, ಕೃಪಾವಲಂಬಿಗಳೂ, ಕಲಿದೋಷನಾಶಕರೂ, ಪರಮಾರ್ಥತತ್ವವನ್ನಪೇಕ್ಷಿಸುವ ನನ್ನಬುದ್ಧಿಗೆ ಪ್ರಕಾಶಕರೂ ಆದ ನೀವುಗಳು ಧರ್ಮಾರ್ಥಕಾಮಮೋಕ್ಷಂಗಳೆಂಬ ಚತುರ್ವಿಧ ಫಲಪುರುಷಾರ್ಥಗಳನ್ನುಂಟುಮಾಡುವ ನಿಜತತ್ವಾರ್ಥವನ್ನು ನನಗೆ ವಿಸ್ತಾರವಾಗಿ ತಿಳಿಹಿಸಬೇಕು. ॥೪೮॥

ಎಂದು ಪೂರ್ವೋಕ್ತಪ್ರಕಾರವಾಗಿ ಕೇಳುವ ಆ ಲಿಂಗಪ್ಪಮಂತ್ರಿಯನ್ನು ಆ ಸಮಸ್ತಗುರುಗಳೂ ಕೃಪಾಕಟಾಕ್ಷದಿಂದ ನೋಡಿ, ಎಲೈ ಲಿಂಗಪ್ಪ ಮಂತ್ರಿಯೇ! ಕೇಳು; ಪುರುಷಾರ್ಥಭೂತವಾಗಿಯೂ ಪರಮಾರ್ಥರೂಪವಾಗಿಯೂ ಇರುವ ಅರ್ಥವನ್ನು ನಿನಗೆ ವಿಸ್ತಾರವಾಗಿ ಬೋಧಿಸುವದಕ್ಕೆ ನಮ್ಮ ಈ ಗೋಷ್ಠಿಯಲ್ಲಿರುವ ಈ ಮೌನಪ್ಪವಿದ್ವಾಂಸನೇ ಸಮರ್ಥನು, ಎಂದು ಆ ಚರಮೂರ್ತಿಗಳೆಲ್ಲರೂ ನನ್ನನ್ನು ತೋರಿಸುವವರಾದರು. ॥೪೯॥

ನಿರ್ವಾಣಮಂತ್ರಿಯು ಸಕಲ ಶಾಸ್ತ್ರಾಗಮವೇದ ವಿದ್ಯೆಗಳನ್ನು ಬಲ್ಲಾತನೆನಿಸಿ, ಶೈವಸಿದ್ಧಾಂತತತ್ವಾರ್ಥವನ್ನು ಬಲ್ಲವನಾಗಿ, ಮನೋಹರವಾದ ಸ್ವಭಾವವುಳ್ಳಾತನೆನಿಸಿ, ಸಮಸ್ತೋಪನಿಷದ್ವಾಕ್ಯಗಳಲ್ಲಿಯೂ ಸಮರ್ಥನಾಗಿ; ಬಾಲ್ಯದಿಂದಲೂ ಲಿಂಗಪ್ಪಮಂತ್ರಿಯಿಂದಲೇ ಪೋಷಿತನಾಗಿರುವನು. ॥೫೦॥

ಮೌನಪ್ಪವಿದ್ವಾಂಸನಾದರೋ, ತರ್ಕವ್ಯಾಕರಣ ಮೀಮಾಂಸಾವೈಶೇಷಿಕ ಸಾಂಖ್ಯ ಯೋಗ ಶಾಸ್ತ್ರಗಳಲ್ಲಿ ಪಂಡಿತನಾಗಿಯೂ, ಶಾಸ್ತ್ರಾರ್ಥವಾದಗಳಲ್ಲಿ ವಿದ್ವಾಂಸನಾಗಿಯೂ,

ಬುಧೇಭಖ್ಯಾತಕಂಠೀರವಃ । ಶಂಭುಪ್ರೋಕ್ತಸಮಸ್ತತಂತ್ರನಿಚಯೇ ಸತ್ಸಂಪ್ರದಾಯಾನ್ವಿತ ಸ್ಸ್ಮೃತ್ಯಾದ್ಯರ್ಥವಿಚಾರಣೈಕನಿಪುಣೋ ಮೌನಪ್ರವಿಷ್ಟನ್ಮಣಿಃ ॥೨೦॥ ಲಿಂಗಪ್ರಭುಧರಣೀಸುರದ್ರುಮೋsಸಾವಾಶೀರ್ಭಿಸ್ತ್ರ್ಯಹವಸತಾಂ ಸಮೇಧಿಷೀಷ್ಟ । ಆಕಲ್ಪಂ ಕಲಯತು ತೇ ವಚೋವಿಲಾಸಸ್ಸಾಕಲ್ಪಂ ಹೃದಯಸರೋಜಮಸ್ಮದೀಯಂ ॥೨೧॥ ಲಿಂಗಪ್ರಸೇತಾರ ಮನುಂ ಬುಭೂತ್ಸಂ ಲೋಕೋಪಕಾರಾಯ ಪರಂ ಪುಮರ್ಥಂ । ಆಲಂಬ್ಯ ತತ್ಸಂ ಮದನುಗ್ರಹೇಣ ಮೌನಪ್ರವಿಷ್ಟ ಪ್ರತಿಬೋಧಯ ತ್ವಂ ॥೨೨॥ ತರ್ಕೋದರ್ಕಾ ತು ತೇ ಮತಿಶ್ಶ್ರುತಿವಚೋವ್ಯಾಖ್ಯಾಸು ಮೀಮಾಂಸತಾ ಲ್ಲಿಂಗಾಂಗೋಭಯಸಾಮರಸ್ಯಕಥನೇ ನಿಶ್ಶೇಷವೇದಾಂತತಾತ್ । ನಾನಾಭೇದಸುಶಬ್ದತತ್ತ್ವಕಥನೇ ಶ್ರೀಪಾಣಿನೀಯಾತ್ಮತಾತ್ ಪ್ರಾಚೀನಾಗತವೀರಶೈವಸಮಯವ್ಯಾಖ್ಯಾಸು ತತ್ತ್ವಾರ್ಥತಾತ್ ॥೨೩॥ ಇತ್ಯೇವಮಾಜ್ಞಾಂ ಶಿರಸಾಗೃಹೀತ್ವಾ ಲಿಂಗಪ್ರಮಂತ್ರಿ ಪ್ರತಿಪಾದಿತಾರ್ಥಂ ।

ವಾದಿಗಳೆಂಬ ಮದಗಜಗಳಿಗೆ ಸಿಂಹಪ್ರಾಯನಾಗಿಯೂ, ಪರಮೇಶ್ವರನಿಂದುಕ್ತವಾದ ಸಮಸ್ತ ತಂತ್ರಗಳ ಸಂಪ್ರದಾಯಾರ್ಥಗಳನ್ನು ಬಲ್ಲವನಾಗಿಯೂ, ಸಮಸ್ತ ಧರ್ಮಶಾಸ್ತ್ರಗಳನ್ನು ವಿಚಾರಮಾಡುವುದರಲ್ಲಿ ಮಹಾನಿಪುಣನಾಗಿಯೂ ಇರುವನು. ॥೨೦॥

ಆಗ ಆ ಚರಮೂರ್ತಿಗಳೆಲ್ಲರೂ ಇಾತೊಪ್ಪವಮೌನಪ್ಪ ವಿದ್ವಾಂಸನನ್ನು ನೋಡಿ ಲಿಂಗಪ್ಪ ಪ್ರಭುವೆಂಬ ಈ ಭೂಕಲ್ಪವೃಕ್ಷವು ಇಲ್ಲಿರುವ ಸಕಲಜಂಗಮರ ಆಶೀರ್ವಚನಗಳಿಂದ ವೃದ್ಧಿಹೊಂದಿತು. ಎಲೈಮೌನಪ್ಪವಿದ್ವಾಂಸನೆ, ನಿನ್ನ ವಾಗ್ವಿಲಾಸವು ಪ್ರಳಯಪರ್ಯಂತನಾಗಿಯೂ ನಮ್ಮ ಹೃದಯಕಮಲವನ್ನು ಅಲಂಕೃತವಾದುದನ್ನಾಗಿ ಮಾಡಲಿ. ॥೨೧॥

ಎಲೈಮೌನಪ್ಪವಿದ್ವಾಂಸನೆ ! ಲೋಕೋಪಕಾರಾರ್ಥವಾಗಿ ಪರಮಪುರುಷಾರ್ಥವನ್ನುಬೋಧಿಸುವುದಕ್ಕಿಚ್ಛೈಸುವ ಈ ಲಿಂಗಪ್ಪಪ್ರಭುವನ್ನುದ್ದೇಶಿಸಿ ನಮ್ಮಗಳನುಗ್ರಹದಿಂದ ತತ್ತ್ವಾರ್ಥವನ್ನು ನಿರೂಪಿಸುವವನಾಗು. ॥೨೨॥

ನಿನ್ನ ಬುದ್ಧಿಯು ತರ್ಕದಲ್ಲಿ ಉತ್ತರಫಲವಾದ ಏಕವಿಂಶತಿದುಃಖಧ್ವಂಸರೂಪಮೋಕ್ಷ (ಇಪ್ಪತ್ತೊಂದು ತೆರದ ದುಃಖಗಳ ನಾಶವಾಗುವಿಕೆಯೇಮೋಕ್ಷ) ವನ್ನು ಸ್ಥಾಪಿಸುವಂಥಾದ್ದಾಗಲಿ; ವೇದಭಾಷ್ಯಗಳನ್ನು ವಿವರಿಸಿಹೇಳುವುದರಲ್ಲಿ ಪೂರ್ವಮೀಮಾಂಸೋತ್ತರ ಮೀಮಾಂಸೆಗಳೇಆಗಲಿ. ಲಿಂಗಾಂಗಗಳೆರಡರಸಾಮರಸ್ಯರಹಸ್ಯವನ್ನು ತಿಳಿಹಿಸುವವಿಷಯದಲ್ಲಿ ಸಮಸ್ತೋ

ಯಥೋಪಮತಿ ವ್ಯಾಕೃತವಾನ್ಪ್ರಸಾದೈ ರುದ್ರೈರ್ಧಿತಾಂತಃಕರಣಶ್ಚ ರೇಣುಃ ॥೪೪॥ ವಿಜ್ಞಾಯ ತತ್ತ್ವಂ ಸಕಲಾಗಮೋಕ್ತಂ ನಿವೃತ್ತಸಂದೇಹತಯಾ ಸಮಂತ್ರೀ । ಸ್ವಶ್ರೇಯಸಂ ಸರ್ವಹಿತಂಕರಾರ್ಥಂ ವ್ಯಜಿಜ್ಞಪಜ್ಜಂಗಮಲಿಂಗಸಂಘೌ ॥೪೫॥ ವಿರಚಿತನತಿರಾದೌ ತತ್ರ ಲಿಂಗಪ್ರಮಂತ್ರೀ ಚರಣಪದಮುಪಗೃಹ್ಯಾಥೋಪಚಸ್ಕೃತಿಪೂರ್ವಂ । ನಿಶ್ಚವಮಧುರಭಾವೈರ್ವಾಕ್ಯಪ್ರಸೂನೈರಸೇಕೈಸ್ಸಕಲಭುವನಲಕ್ಷ್ಮೀಬೀಜವಿನ್ಯಾಸರೂಪೈಃ ॥೪೬ ಆತ್ಮಾರಾಮೋಽಭಿರಾಮೋ ಹೃದಿವಿನಿಮಸುರಸಾಸ್ಥಾಪಿತಂ ಬ್ರಹ್ಮತಸ್ಮಾದ್ದೇಹೋ ದೇವಾಲಯತ್ವಸ್ಯ ಚಿತ್ರಿಯುಗಕುಹರೇಷ್ವಂತ್ರಸಿಕ್ತೇಷು ವಾಸೀತ್ ॥ ಪುತ್ರಶ್ಶಿಷ್ಯಾಭಿಧಾನ ಸ್ತ್ರ್ಯಪಮಿತಿ ಭವತಾಂ ಸತ್ಕೃತಿರ್ಲಿಂಗತತ್ತ್ವೇ ಸಂತಾನಾಸ್ಸಪ್ತ ಕ್ಷೇತ್ರಾಣಿಕೃಥಲಮಹಿಮಾಭಿ ಸ್ತೈಶ್ಚಸ್ಮದಾದೌ

ಪನಿಷತ್ತುಗಳೇ ಆಗಲಿ; ನಾನಾ ವಿಧಗಳಾದ ಶಬ್ದರೂಪನಿಷ್ಪತ್ತಿ ತತ್ವವನ್ನು ಹೇಳುವುದರಲ್ಲಿ ಪಾಣಿನೀಯ ಸೂತ್ರಗಳೇ ಆಗಲಿ. ಜಗದಾದಿಯಾಗಿಬಂದ ವೀರಶೈವಮತಧರ್ಮವನ್ನು ವ್ಯಾಖ್ಯಾನಮಾಡುವುದರಲ್ಲಿ ಸಿದ್ಧಾಂತಶಾಸ್ತ್ರವೇ (ಇಪ್ಪತ್ತೆಂಟಾಗಮಗಳೇ) ಆಗಲಿ. ॥೪೩॥

ಈರೀತಿಯಾಗಿ ಆ ಗುರುಗಳೆಲ್ಲರಿಂದ ಆಶೀರ್ವದಿಸಿ ಮಾಡಲ್ಪಟ್ಟ ಅಪ್ಪಣೆಯನ್ನು ಮೌನಪ್ರಸಾದಾಂಶವನು ಶಿರಸ್ಸಿನಲ್ಲಿ ಧರಿಸಿ ಆ ಚರಮೂರ್ತಿಗಳ ಅನುಗ್ರಹಗಳಿಂದ ಪ್ರೇರಿಸಲ್ಪಟ್ಟ ಅಂತಃಕರಣಚತುಷ್ಟಯವುಳ್ಳವನಾಗಿ ಲಿಂಗಪ್ರಮಂತ್ರಿಯು ಸೂಚಿಸಿದ ಅಭಿಪ್ರಾಯವನ್ನು ತಿಳಿದ ಮಟ್ಟಿಗೆ ವಿವರಿಸಿದನು. ॥೪೪॥

ಮೌನಪ್ರಸಾದಾಂಶದಿಂದ ಸಕಲಾಗಮಸಾರವಾಗಿ ಹೇಳಲ್ಪಟ್ಟ ಮಂಗಳಕರವಾದಪರಮಾರ್ಥ ತತ್ವವನ್ನು ಲಿಂಗಪ್ರಮಂತ್ರಿಯು ಕೇಳುತ್ತಿದ್ದು, ತನ್ನ ಸಂಶಯಗಳೆಲ್ಲ ಕಳೆದುಹೋದುದರಿಂದ ಹೀಗೆಯೇ ಸಮಸ್ತರಿಗೂ ಹಿತವನ್ನುಂಟುಮಾಡಬೇಕೆಂದು ಯೋಚಿಸಿ, ಪುನಃ ಆ ಜಂಗಮಲಿಂಗ ಸಮೂಹದಲ್ಲಿ ಈ ರೀತಿಯಾಗಿ ವಿಜ್ಞಾಪಿಸಿಕೊಂಡನು. ॥೪೫॥

ಆ ಜಂಗಮರ ಬಳಿಗೈದಿ ಮೊದಲು ನಮಸ್ಕರಿಸಿ, ಅವರ ಪಾದವನ್ನು ಹಿಡಿದು, ಭಕ್ತಿಪುರಸ್ಸರವಾಗಿ ನಿರ್ಮಲಗಳಾಗಿಯೂ, ಮನೋಹರಗಳಾಗಿಯೂ, ಸಮಸ್ತ ಪ್ರಾಣಿಗಳಿಗೂ ಭೋಗಮೋಕ್ಷಸಂಪತ್ತನ್ನುಂಟುಮಾಡುವುದಕ್ಕೆ ಮೂಲಕಾರಣವಾಗಿಯೂ ಇರುವ ವಾಕ್ಯಗಳೆಂಬ ಪುಷ್ಪಗಳಿಂದ ಪೂಜಿಸಿದನು. ॥೪೬॥

ಎಲೈ ಗುರುಗಳಾದ ಜಂಗಮರಿರಾ! ವಿಶೇಷ ಮಹಿಮೆಯುಳ್ಳ ನಿಮ್ಮಗಳಿಂದ ನಾನು ಮಂತ್ರಾದಿಗಳಲ್ಲಿ ಹೃದಯವು ಆತ್ಮನಿಗೆ ಮನೋಹರವಾದ ಕ್ರೀಡಾಸ್ಥಾನವಾಯಿತು. ಆ ತೋ

ಭವಿಷ್ಯತಿ ॥೫೪॥ ಏಷಾಸಾತ್ವಿಕಸಂತತಿಃ ಪ್ರಕಲಿತಾ ಯಾರಾಜಸೀಸಂ ತತಿ ಹೇತು ಸ್ಸಾತ್ವಿಕಸಂತತೆ ರಪಿಸಂತಾನಾವಾದಿಕಾಷಡ್ವಿಧಾಃ। ಲಬ್ಧಾ ಯುಷ್ಮದನುಗ್ರಹೇಣತು ಮಯಾ ಲಬ್ಧಾನ ಸೈಕಾಕೃತಿ ರ್ಯಸ್ಯಾ ವಾಙ್ಮಯವರ್ಣನೇ ಪ್ರತಿಫಲಂತ್ವಾಕಲ್ಪ ಮರ್ಥಾ ಇಮೇ ॥೫೫॥ ಇತ್ಯೇವಂ ತಂ ವಸಂತಂ ಪ್ರಥಿತ-ಲತಿಲಕಂ ಸತ್ಕೃತಿಂ ಪ್ರಾರ್ಥಯಂತಂ ಲಿಂಗವಿಪ್ರಾನಾತ್ಯ ಮೇತೇದು ತನುಘ ಗುರವಃ ಪೂರಿತಂ ವಾಂಛಿತಾರ್ಥೈರ್ಗಿರ್ದೃಷ್ಟ್ವಾ ಶ್ಚರ್ಯಸ್ಥಿತಂ ಮಾಂ ಭುವನಹಿತಕೃತೆ ಸತ್ಕೃತೆ ರಾವಿರರ್ಥಂ ಸ್ವಪ್ರಷ್ಟ್ವಾನ್ ಹಸ್ತೈಕೃತವಸ್ಯಾ ಶ್ರಿತಸಕರಣಯಾ ಸಾಧಕಂತಂ ನ್ಯಶಾಸುಃ

ಟದಲ್ಲಿ ನಿರ್ಮಲತ್ವವೆಂಬ ಸರೋವರವು ಸ್ಥಾಪಿಸಲ್ಪಟ್ಟಿತು. ಆ ಸರೋವರ ತೀರದಲ್ಲಿ ಆತ್ಮವೆಂಬ ಬೃಕ್ಷವು ಸ್ಥಾಪಿಸಲ್ಪಟ್ಟಿತು. ಆ ಬೃಕ್ಷಕ್ಕೆ ಈ ದೇಹವೇ ಶಿವಾಲಯವಾಗಿ ಮಾಡಲ್ಪಟ್ಟಿತು. ಶ್ರೋತ್ರದ್ವಾರದಲ್ಲಿ ಉಪದೇಶಿಸಲ್ಪಟ್ಟ ಮಂತ್ರವೆಂಬ ಧನವು ನಿಕ್ಷೇಪಿಸಲ್ಪಟ್ಟಿತು. ಶಿಷ್ಯನಾಮಕನಾದ ನಾನೇ ಪುತ್ರನಾದೆನು. ಲಿಂಗತತ್ವವಿಷಯಕವಾದ ಸತ್ಕಾವ್ಯ ನಿರ್ಮಾಣವು (ಶಿವಾನುಭವ ಶಾಸ್ತ್ರವು) ಮಾಡಲ್ಪಟ್ಟಿತು. ಈ ರೀತಿಯಾದ ಸಾತ್ವಿಕಸಪ್ತಸಂತತಿಯು ನಿಮ್ಮಿಂದ ನನಗೆ ಪ್ರಾಪ್ತವಾಯಿತು. ॥೫೪॥

ಆ ಸಾತ್ವಿಕಸಪ್ತಸಂತತಿಗೆ ಮೂಲಕಾರಣವಾದ ರಾಜಸ ಸಪ್ತಸಂತತಿಗಳಲ್ಲಿ ಅಂದರೆ “ತಟಾಕಂ ಧನನಿಕ್ಷೇಪೋ ಬೃಕ್ಷಸ್ಥಾಪ್ಯಂ ಶಿವಾಲಯಂ। ವನಾನಿ ಸತ್ಕೃತಿಃ ಪುತ್ರಾಸ್ಸಪ್ತ ಸಂತಾನ ಮುಚ್ಯತೆ” ಎಂಬಿವುಗಳಲ್ಲಿ ತಟಾಕವು, ಧನನಿಕ್ಷೇಪವು, ಬೃಕ್ಷಸ್ಥಾಪನವು, ಶಿವಾಲಯ ನಿರ್ಮಾಣವು, ತೋಪನ್ನು ಹಾಕಿಸುವಿಕೆಯು, ಪುತ್ರರುಗಳೆಂಬ ಈ ಆರು ಸಂತಾನಗಳು ಮಾತ್ರ ನಿಮ್ಮ ಅನುಗ್ರಹದಿಂದ ನನ್ನಿಂದ ಹೊಂದಲ್ಪಟ್ಟಿರುವುವು. ಸತ್ಕಾವ್ಯ ನಿರ್ಮಾಣವೆಂಬ ಸಂತತಿಯು ಮಾತ್ರ ನನ್ನಿಂದ ಹೊಂದಲ್ಪಡಲಿಲ್ಲ. ಈಗ ಆ ಸತ್ಕಾವ್ಯವು ನಿರ್ಮಿಸಲ್ಪಟ್ಟರೆ, ಈಗ ನಾನು ಮಹಾಪ್ಪ ವಿಸ್ತಾರದಿಂದ ಕೇಳಿದ ಅರ್ಥಗಳೆಲ್ಲವೂ ಅಲ್ಲಿ ಗರ್ಭೀಕೃತವಾಗಿ ಆ ಕಲ್ಪಪರ್ಯಂತವಾಗಿಯೂ ಅದು ಶೋಭಿಸುವುದಲ್ಲದೆ, ನಾನೂ ರಾಜಸ ಸಪ್ತಸಂತತಿಯುಕ್ತನಾಗುವೆನು, ಆದುದರಿಂದ ಶಿವಸಂಬಂಧವಾದ ಸತ್ಕಾವ್ಯನಿರ್ಮಾಣವು ಮಾಡಲ್ಪಡಬೇಕೆಂದು ಲಿಂಗಪ್ಪ ಮಂತ್ರಿಯು ವಿಜ್ಞಾಪಿಸಿಕೊಂಡನು. ॥೫೫॥

ಈ ರೀತಿಯಾಗಿ ಸತ್ಕೃತಿಯನ್ನು ಬರೆಯಬೇಕೆಂದು ಪ್ರಾರ್ಥಿಸುತ್ತಲಿರುವ ಲಿಂಗಪ್ಪ ಮಂತ್ರಿಯನ್ನು ಆ ಗುರುಗಳೆಲ್ಲರೂ ಕೃಪಾವಲೋಕನದಿಂದ ನೋಡಿ, ಲಿಂಗಪ್ಪ ಮಂತ್ರಿಯ ಇಷ್ಟಾರ್ಥವನ್ನು ಬೇಗನೆ ಪೂರ್ತಿಗೊಳಿಸುವುದಕ್ಕೋಸ್ಕರವೂ, ಸಮಸ್ತ ಲೋಕಕ್ಕೂ ಉಪಕಾರವನ್ನು ಮಾಡುವುದಕ್ಕೋಸ್ಕರವೂ, ಸತ್ಕೃತಿಯನ್ನು ಬರೆಯುವುದಕ್ಕೋಸ್ಕರವೂ ಕೂಡ

||೨೦|| ಶ್ರೀಮನ್ನಾಮ್ನಸಪ್ಪವಿಪ್ವ ಸ್ತನುಪದಮಧಿಷಣಾಸಂಪ್ರಕಾರ ಸ್ತ್ವಯಿ ಸ್ಯಾ ಸ್ಮೃಕ್ತಾ ಸ್ತತ್ಸ್ಥಾನ ಪೀಠಿಕಾರ್ಥಾ ಸ್ಸಕಲಜಸಹಿತಾ ಧೀರಲಿಂಗಪ್ರನೇತುಃ। ಅಸ್ಮತ್ಕಂಠಾಸನೇನ ಪ್ರಥಿತಸುಕೃತಿತಾಂ ಯಾಂತು ಸರ್ವಾಭಿನಂದ್ಯಾ ಯಾವತ್ಕಲ್ಪಂ ತ್ವನಲ್ಪಂ ಕೃತಿರಪಿ ವಿದುಷಾಂ ಸತ್ಪುಮರ್ಥಂ ಪ್ರಸೂತಾಂ||೨೧|| ಇತ್ಯಾಜ್ಞಾಂ ಜಂಗಮಾನಾಂನಪವಿವಿಚಲಿತಾಮನ್ಮುಖಾದುನ್ಮುಖಾಭಾತ್ಯಾಂಚಿತ್ಕತಾರಂ ಕೃತಿಂ ಸಮ್ಯಗ್ಬುಧಜನಹೃದಯಂಗಾ ಪ್ರಿಣೀಂ ಯುಕ್ತಿಪುಂಜೈಃ। ನಾನಾಧರ್ಮಾಭಿಧಾನಸ್ಮೃತಿನಿಗಮಗಿರಾಮಾಶಯಂ ಕಾಮಿಕಾದಿ ಶ್ರೀಮದ್ದಿವ್ಯಾಗಮಾರ್ಥಾಶಯಮಭಿದಧತೀಂ ವೀರಶೈವಾನುಕೂಲಾಂ||೨೨|| ಶ್ರೀಮಜ್ಜಂಗಮಲೋಚನದ್ವಯಕೃಪಾಲೋಕಾಮೃತೈಃ ಪೂರಿತಾ ಸತ್ವಶ್ರೀಮಹಿಮಾಲಯಾಪರ್ಹೃದಯಸಾಂತ್ರೋದಿತಾ ಭಾಸ್ವತೀ। ಹಂಸೈಷ್ಷಟ್ಸ್ಥಲತೀರ್ಥಸೇವಿವಿಬುಧೈರ್ಲಿಂಗಪ್ರಮಂತ್ರೀರಣಾ ದೇಷಾ

ಪಾರ್ಶ್ವದಲ್ಲಿದ್ದ ಸಾಧಕನಾದ ಆ ನನ್ನನ್ನು ನೋಡಿ ಉತ್ಕೃಷ್ಟಗಳಾದ ಹಸ್ತಗಳನ್ನು ನನ್ನ ಮಸ್ತಕದಲ್ಲಿಟ್ಟು ಈ ರೀತಿಯಾಗಿ ಆಜ್ಞಾಪಿಸಿದರು. ||೨೦||

ಏನೆಂದರೆ:— ಎಲೈ ಮಗನಪ್ಪ ವಿದ್ವಾಂಸನೆ! ನಿನ್ನ ಬುದ್ಧಿಗೆ ವಿಶೇಷ ಪ್ರಕಾಶವುಂಟಾಗಲಿ. ಸಮಸ್ತಕ್ಕೂ ಉಪಕಾರಕವಾಗಿರುವ ಲಿಂಗಪ್ರಮಂತ್ರಿಯಿಂದ ಸೂಚಿಸಲ್ಪಟ್ಟ ಯಾವ ಅರ್ಥಗಳುಂಟೋ ಅವುಗಳು ಪ್ರಸಿದ್ಧವಾದ ಪ್ರಾಮಾಣ್ಯತ್ವವನ್ನು ಹೊಂದಲಿ. ನಿನ್ನಿಂದ ಬರೆಯಲ್ಪಡುವ ವೀರಶೈವಗ್ರಂಥವು ಸಕಲ ವಿದ್ವಾಂಸರಿಗೂ ಪುರುಷಾರ್ಥಪ್ರದವಾಗಲಿ. ನಿನ್ನ ಅಸದೃಶವಾದ ಕೃತಿಯು ಪ್ರಳಯಪರ್ಯಂತವಾಗಿಯೂ ಸರ್ವರಿಗೂ ಸಂತೋಷಜನಕವಾಗಲಿ. ||೨೧||

ಎಂದು ಆಗುರುಗಳು ಆಜ್ಞಾಪಿಸಿದರು. ನಾನಾಯುಕ್ತಿ ಸಮೂಹಗಳಿಂದ ಸಮಸ್ತ ವಿದ್ವಾಂಸರಹೃದಯವನ್ನು ಗ್ರಹಿಸತಕ್ಕದ್ದಾಗಿಯೂ, ಶ್ರುತಿಸ್ಮೃತಿಗಳ ಆಶಯಗಳನ್ನು ಹೊಂದಿರುವುದಾಗಿಯೂ ಕಾಮಿಕಾದಿವಾತುಲಾಂತಗಳಾದ ಇಪ್ಪತ್ತೆಂಟುದಿವ್ಯಾಗಮಗಳಲ್ಲಿ ಉಕ್ತವಾಗಿರುವ ಧರ್ಮಗಳನ್ನು ಬೋಧಿಸುವುದಾಗಿಯೂ, ವೀರಶೈವಮತಸ್ಥರಿಗೆ ಅನುಕೂಲವಾಗಿಯೂ. ಇರುವ ಒಂದು ಗ್ರಂಥವನ್ನು ರಚಿಸುವುದಕ್ಕಾಗಿ ನನ್ನ ಮುಖದಿಂದ ಈ ವಾಕ್ಯಸರಣಿಯು ಉದಿಸಿತು. ||೨೨||

ಶ್ರೀಮಜ್ಜಂಗಮರ ಕೃಪಾಲೋಕಾಮೃತದಿಂದ ತುಂಬಲ್ಪಟ್ಟಿರುವುದಾಗಿಯೂ, ಸಾತ್ವಿಕಸಂಪತ್ತಿಯ ವೃದ್ಧಿಗೆ ನಿವಾಸವಾಗಿರುವುದೇ ಪ್ರಯೋಜನವಾಗುಳ್ಳವರ ಹೃದಯದ

ವಾಕ್ಪಂಕ್ತಿ ರ್ವಿವೇಕಿಹೃದಯಾನ್ಯಾಕಲ್ಪ ಮಾಸಿಂಚತು ||೬೩|| ಕೈಲಾಸಾ
ದ್ರಿತಟೇಷು ನೃತ್ಯಸಮಯೇ ಬ್ರಹ್ಮಾದಿದೇವೈ ರ್ವೃತೇ ಶರ್ವಾಣೀಂ ಮುಖ
ವೀಕ್ಷ್ಯ ಭವ್ಯಸದಸೇ ನೃತ್ಯಸ್ಯ ತಾಂ ಸಾಕ್ಷಿಣೀಂ | ನೃತ್ತೋಪಕ್ರಮಣಾ
ರ್ಥ ಮುದ್ಯಮಭೃತ ಶ್ಶಂಭೋಃ ಶ್ರುತಿಪ್ರಾವರಾ ನ್ನಂದ್ಯಾದ್ಯೈ ರುಪನೀ
ಯತಾಂ ಸಕೃದಿಯಂ ಭವ್ಯಾ ಮದೀಯಾ ಕೃತಿಃ ||೬೪||

ಇತಿ ಶ್ರೀಮದನಾದಿಪ್ರಮಥಪರಂಪರಾಗತಷಟ್ಸ್ಥಲಜ್ಞಾನಬೋಧಕಾ
ಚಾರ್ಯವರ್ಯವರಗುರುಬಸವಮುಖಾದ್ವ್ಯಲಬ್ಧಬುದ್ಧಿವಿಕಾಸೇನ
ವೀರಶೈವದೀಕ್ಷಾಗುರುಚೆನ್ನವೀರಸ್ವಾಮಿಕರಕಮಲ
ಸಂಜಾತೇನ ಮೌನಪ್ಪವಿದುಷಾ ಕೃತೇ ವೀರಶೈ
ವಾಚಾರಕೌಸ್ತುಭೇ ಕ್ರಿಯಾಕಾಂಡೇ
ಸ್ವೇಷ್ಟದೇವತಾನತಿ ಸತ್ಕೃವಂ
ಶಾದಿನಿರೂಪಣಂನಾಮ
ಪ್ರಥಮಪ್ರಕರಣಂ

ಸನ್ನಿಧಿಯ ದೆಸೆಯಿಂದ ಹೊರಬಿದ್ದುದಾಗಿಯೂ, ಷಟ್ಸ್ಥಲಗಳೆಂಬ ತೀರ್ಥಗಳನ್ನು ಸೇವಿಸುವ
ವಿವ್ಯಾರಕರೆಂಬ ಹಂಸಪಕ್ಷಿಗಳಿಂದ ಶೋಭಿಸುವುದಾಗಿಯೂ, ಲಿಂಗಪ್ರಮಂತ್ರಿಯ ಪ್ರೇರಣೆ
ಯಿಂದ ಉತ್ಪನ್ನವಾಗಿಯೂ ಇರುವ ಈ ನನ್ನ ವಾಕ್ಪಂಕ್ತಿಯು ಕೃತ್ಯಾಕೃತ್ಯವಿವೇಕಶಾಲಿಗಳ
ಹೃದಯವನ್ನು ಪ್ರಳಯಪರ್ಯಂತವಾಗಿಯೂ ಸಂತೋಷಾಮೃತದಿಂದ ನೆನಸಲಿ. ||೬೩||
ಕೈಲಾಸ ಪರ್ವತದಲ್ಲಿ ಪರಶಿವನು ನರ್ತನಮಾಡುವಾಗ ವಿಷ್ಣು ಬ್ರಹ್ಮಾದಿಗಳೇ ಮೊದಲಾದ ಸ
ಮಸ್ತ ದೇವತೆಗಳಿಂದಲೂ ಕೂಡಿಕೊಂಡು, ಪಾರ್ವತೀದೇವಿಯನ್ನು ತನ್ನ ನಾಟ್ಯಕ್ಕೆ ಸಾಕ್ಷಿ
ಯನ್ನಾಗಿಮಾಡಿ ಮಂಗಳ ಮಂಟಪದಲ್ಲಿ ಕುಳ್ಳಿರಿಸಿ ನರ್ತನಮಾಡುವುದಕ್ಕೆ ಉಪಕ್ರಮಿಸಿದ
ಪರಶಿವನ ಕರ್ಣಪಥಕ್ಕೆ ನಂದ್ಯಾದಿ ಪ್ರಮಥರುಗಳು ಈ ನನ್ನ ಪೂಜ್ಯವಾದ ಕೃತಿಯನ್ನು ಒಂ
ದಾವೃತ್ತಿಯಾದರೂ ಹೊಂದಿಸಲಿ. ||೬೪||

ಎಂಬಲ್ಲಿಗೆ ಶ್ರೀಮೌನಪ್ಪ ವಿದ್ವತ್ಕೃತ ವೀರಶೈವಾಚಾರಕೌ
ಸ್ತುಭಕ್ಕೆ ಎಮ್. ಬಸವಲಿಂಗಶಾಸ್ತ್ರಿರಚಿತವಾ
ದ ಆಚಾರಪ್ರಕಾಶಿಕೆ ಯೆಂಬ ಕನ್ನಡಟಿಪ್ಪಣದ
ಲ್ಲಿ ಪೀಠಿಕಾವಿವರಣ ರೂಪವಾದ ೧ ನೆ
ಯ ಪ್ರಕರಣವು ಮುಗಿದುದು.

ದ್ವಿತೀಯ ಪ್ರಕರಣಂ

(ವೈದಿಕಾವೈದಿಕವಿದ್ಯೆ.)

ಲಿಂಗಪ್ಪಸೇತಿ ಶೃಣು ಸಾವಧಾನ ಸ್ಸರ್ವಾರ್ಥವಿದ್ಯಾಸಕಲಾರ್ಥಸಿ
ದ್ಧಿಃ । ಸಂಪ್ರಾಪ್ಯತೇ ಕ್ಷಿಪ್ರತರಂ ಶಿವೋಽಪಿ ಕಟಾಕ್ಷನೇತ್ರೈ ರಭಿಷಿಂಚ
ಯೇತ್ತ್ವಾಂ ॥೧॥ ಪರಾಜಿತಸುರಾಚಾರ್ಯ ಬುದ್ಧಿಕೌಶಲಶೋಭಿತ । ಪ್ರ
ತ್ಯರ್ಥಿಕಾಲದಂಡಾಭಭುಜಾರ್ಥಿಸುರಭೂರುಹ ॥೨॥ ಲಿಂಗಪ್ಪಮಂತ್ರಿ
ಧನ್ಯೋಽಸಿ ತ್ವಮೇವ ಜಗತೀತಳೇ । ಯಜ್ಜಾತಾ ಸರಳಾಬುದ್ಧಿ ಸ್ಸತ್ಕಾಲ
ತಿಶ್ರವಣೇ ತವ ॥೩॥ ತತಸ್ತೇ ವಿಶದಾ ಕೀರ್ತಿ ಸ್ಸಾಸ್ಯಾಚ್ಛಾಶ್ವತಕಲ್ಪ ಮುಜ್ವಲಾ ।
ವಿಚಾರೇಣ ವಿನಾ ತತ್ತ್ವನಿಷ್ಕರ್ಷಸ್ಸಾಸ್ತ್ಯ ನ್ನಕಸ್ಯಚಿತ್ ॥೪॥ ತಸ್ಮಾದ್ವಿ
ದ್ಯಾಂ ಸಮಭ್ಯಸ್ಯ ತತ್ಪದಾರ್ಥಾಂಶ್ಚ ವಿಚಾರಯೇತ್ । ಸಚ ವಿದ್ಯೋದ್ದೇಶತೋ

---

೨ ನೆಯ ಪ್ರಕರಣವು.

(ವೈದಿಕವಿದ್ಯೆ ಅವೈದಿಕವಿದ್ಯೆಗಳು.)

ಎಲೈ ಲಿಂಗಪ್ಪ ಮಂತ್ರಿಯೆ ! ಸಾವಧಾನಚಿತ್ತನಾಗಿ ಕೇಳು, ಸಕಲಕ್ಕೂ ಪ್ರ
ಯೋಜಕಗಳಾದ ವಿದ್ಯೆಗಳ ಸರ್ವಾರ್ಥಸಿದ್ಧಿಯು (ಧರ್ಮ ಅರ್ಥ ಕಾಮ ಮೋಕ್ಷಗಳು) ನಿನ್ನಿಂ
ದ ಹೊಂದಲ್ಪಡಲಿ. ಮತ್ತೂ ಆ ಪರಶಿವನುಕೂಡ ಜಾಗ್ರತೆಯಾಗಿ ಕೃಪಾಕಟಾ
ಕ್ಷ ವರ್ಷಗಳಿಂದ ನಿನ್ನನ್ನು ಅಭಿಷೇಚನ ಮಾಡಲಿ. ॥೧॥ ಬುದ್ಧಿ ಕೌಶಲದಿಂದ ಬೃಹ
ಸ್ಪತಿಯನ್ನು ತಿರಸ್ಕರಿಸಿರುವ ಬುದ್ಧಿಯುಳ್ಳ ಎಲೈ ಲಿಂಗಪ್ಪ ಮಂತ್ರಿಯೆ ! ಶತ್ರುಗಳನ್ನು
ದಂಡಿಸುವವಕ್ಕೆ ಯಮದಂಡವಂತಿರ್ಪ ಭುಜವುಳ್ಳಾತನೇ ! ಎಲೈ ಯಾಚಕರುಗಳಿಗೆ ಕಲ್ಪ
ವೃಕ್ಷಪ್ರಾಯನಾದವನೇ ! ಈ ಲೋಕದಲ್ಲಿ ಯಾವಕಾರಣದ ದೆಸೆಯಿಂದ ಸತ್ಕೃತಿಯ
ನ್ನು ಶ್ರವಣಮಾಡಬೇಕೆಂಬದಾಗಿ ನಿನಗೆ ಸರಳವಾದ ಬುದ್ಧಿಯುಂಟಾಯಿತೋ, ಅದು ಕಾರ
ಣದಿಂದ ನೀನು ಧನ್ಯನಾಗಿದ್ದೀಯೆ. ॥೩॥ ಮತ್ತೂ ಸತ್ಕೃತಿಯನ್ನು ಶ್ರವಣಮಾಡಬೇ
ಕೆಂಬ ನಿನಗೆ ನಿರ್ಮಲನಾಗಿಯೂ ಪ್ರಕಾಶಮಾನವಾಗಿಯೂ ಇರುವ ಕೀರ್ತಿಯು ಆ ಪ್ರಳಯ
ಪರ್ಯಂತರವಾಗಿಯೂ ಶಾಶ್ವತವಾಗಲಿ. ಆದರೆ ಲೋಕದಲ್ಲಿ ಯಾವುದನ್ನೂ ವಿಚಾರಮಾಡ
ದ್ದಪಕ್ಷದಲ್ಲಿ ಅದರ ನಿಶ್ಚಯ ಜ್ಞಾನವು ಉಂಟಾಗುವುದಿಲ್ಲವಷ್ಟೆ ? ॥೪॥ ಅದು ಕಾರಣ
ದಿಂದ ಸಮಸ್ತ ವಿದ್ಯೆಗಳನ್ನೂ ಅವುಗಳ ಅರ್ಥಗಳನ್ನೂ ಚೆನ್ನಾಗಿ ವಿಚಾರಮಾಡಬೇಕು. ಈಗ
ನಾನು ಹೇಳುವ ಶ್ರುತಿಯಾವರೊ, ಆ ಪ್ರಸಿದ್ಧಗಳಾದ ವಿದ್ಯೆಗಳೇ ಸಿದ್ಧಾಂತವೆಂದು ನಿರ್ಧ

ತ್ರಸ್ತಾವಿದ್ಯಾ ಉದ್ದಿಶಾಮ್ಯಹಂ ॥೫॥ ಶೃತ್ವಾಯಥಾಕ್ರಮಂ ವಿದ್ಯಾ-
ಸ್ತದರ್ಥಾನ್ಸ್ವತ್ರ ರೋಚತೇ । ಮನಸ್ತಸ್ಮಿ ನ್ಮತೇನಿಷ್ಠಃ ಕೃತಾರ್ಥತ್ವ-
ಮುಪಯಾಸ್ಯಸಿ ॥೬॥ ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾ-
ಯವಿಸ್ತರಃ । ಪುರಾಣಂ ಧರ್ಮಶಾಸ್ತ್ರಂಚ ವಿದ್ಯಾಶ್ಚೈತಾ ಶ್ಚತುರ್ದ-
ಶ ॥೭॥ ಶಿಕ್ಷಾ ಕಲ್ಪೋವ್ಯಾಕರಣಂ ನಿರುಕ್ತಂ ಜ್ಯೋತಿಷಂತಥಾ । ಛಂ-
ದೋ ವಿಚಿತಿರಿತ್ಯೇತೇ ಷಡಂಗೋ ವೇದಉಚ್ಯತೇ ॥೮॥ ಋಗೇಕವಿಂಶಭೇ-
ದಸ್ಸ್ಯಾತ್ ಯಜುರೇಕಶತಂಮತಂ । ಸಹಸ್ರಧಾಸಾಮವೇದೋ ನವಧಾ-
ಥರ್ವಣಸ್ಸ್ಮೃತಃ ॥೯॥ ಪ್ರತಿಪಾದ್ಯವಿಭೇದೇನ ವೇದಾಃ ಕಾಂಡದ್ವಯಾ-
ತ್ಮಕಾಃ । ತತ್ರಾದಿಮಃ ಕರ್ಮಕಾಂಡೋಜ್ಞಾನಕಾಂಡ ಸ್ಸಮಂತತಃ ॥೧೦॥
ಪ್ರತಿಶಾಖಂ ಪರಿಜ್ಞೇಯ ಸ್ಸಚೋಪನಿಷದಾತ್ಮಕಃ । ಶ್ರೀಚಂದ್ರ ಬೃಹ-
ದಾರಣ್ಯ ಶ್ವೇತಾಶ್ವತರ ಮುಂಡಕಾಃ ॥೧೧॥ ಕೈವಲ್ಯ ಕಾಲಾಗ್ನಿರುದ್ರೌ
ಕಠವಲ್ಲೀಚ ಜಾಬಾಲಃ । ಹಂಸಃ ಪರಮಹಂಸಶ್ಚ ಬ್ರಹ್ಮನಾರಾಯಣಾ-
ವುಭೌ ॥೧೨॥ ರಾಮಪೂರ್ವೋತ್ತರೌ ತಾಪನೀಯೌ ಗೋಪಾಲಪೂ-

ರಿಸಿ ಆವಿದ್ಯೆಗಳನ್ನೇ ಉದ್ದೇಶಿಸಿ ಹೇಳತಕ್ಕದ್ದಾಗಿರುವುದು ॥೫॥ ಆದುದರಿಂದ ಈಗ ನೀನು ಆವಿದ್ಯೆಗಳಲ್ಲಿ ಪ್ರತಿಪಾದಿಸುವ ಮತಗಳ ವಿಷಯಗಳನ್ನು ಕ್ರಮವಾಗಿ ಕೇಳಿ ಯಾವ ಮತದಲ್ಲಿ ನಿನ್ನ ಮನವು ನಿಶ್ಚಂಚಲವಾಗಿ ನಿಲ್ಲುವುದೋ ಆಮತದಲ್ಲಿ ನಿಷ್ಠನಾಗಿ ಕೃತಾರ್ಥತೆಯನ್ನು ಹೊಂದುವವನಾಗು. ಆವಿದ್ಯೆಗಳಾವಾವೆಂದೊಡೆ? ॥೬॥ ಅಂಗಗಳಾರು, ವೇದಗಳು ನಾಲ್ಕು, ಮೀಮಾಂಸ, ನ್ಯಾಯ, ಪುರಾಣ, ಧರ್ಮಶಾಸ್ತ್ರ, ಇವುಗಳೇ ಪ್ರಸಿದ್ಧಗಳಾದ ಹದಿನಾಲ್ಕು ವಿದ್ಯೆಗಳು ॥೭॥ ಅವುಗಳಲ್ಲಿ;—ಛಂದಸ್ಸು ಕಲ್ಪ ವ್ಯಾಕರಣ ಶಿಕ್ಷೆ ಜ್ಯೋತಿಷ ನಿರುಕ್ತಿಗಳೆಂಬವುಗಳೇ ಷಡಂಗಗಳು. ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದಂಗಳೆಂಬವೇ ನಾಲ್ಕು ವೇದಗಳು ॥೮॥ ಆನಾಲ್ಕು ವೇದಗಳಲ್ಲಿ;—ಋಗ್ವೇದವು ಇಪ್ಪತ್ತೊಂದು ಭೇದವಾಗಿರುವುದು. ಯಜುರ್ವೇದವು ನೂರೊಂದುಭೇದವಾಗಿರುವದು. ಸಾಮವೇದವು ಸಾವಿರಭೇದವಾಗಿರುವುದು. ಅಥರ್ವಣವೇದವು ಒಂಭತ್ತುಭೇದವಾಗಿರುವುದು. ಮತ್ತು ಆವೇದಗಳು ಪ್ರತಿಪಾದ್ಯವಿಭೇದದಿಂದ ಎರಡು ಕಾಂಡಗಳಾಗಿರುವುವು ॥೯॥ ಅವುಗಳಲ್ಲಿ;- ಯಜ್ಞಯಾಗಾದಿಗಳನ್ನು ಪ್ರತಿಪಾದಿಸುವ ವೇದ ಪೂರ್ವಭಾಗವೇ ಮೊದಲನೆಯಕಾಂಡವಾಗಿರುವುದು. ಬ್ರಹ್ಮಜ್ಞಾನಾದಿಗಳನ್ನು ಬೋಧಿಸುವ ಉಪನಿಷದಾತ್ಮಕಗಳಾದ ವೇದೋತ್ತರಭಾಗವೇ ಜ್ಞಾನಕಾಂಡವೆನಿಸುವುದು. ಇವುಗಳಲ್ಲಿ ಪೂರ್ವಭಾಗವಾದ ಕರ್ಮ ಪ್ರತಿಪಾದಕವಾದವುಗಳು ವೇದಗಳು. ॥೧೦॥

ರ್ವಕೌ । ಪೂರ್ವೋತ್ತರೌ ತಾಪನೀಯೌ ನೃಸಿಂಹಾಖ್ಯೌ ತತಃಪರಂ ॥೧೩॥ ಪೂರ್ವಾಪರೌ ತಾಪನೀಯೌ ವೆಂಕಟೇಶ್ವರಪೂರ್ವಕೌ । ಪೂರ್ವೋತ್ತರೌ ತಾಪನೀಯೌ ಕ್ಷುರಿಕಶ್ಚ ತತಃಪರಂ ॥೧೪॥ ಯೋಗಶಿಖಾ ದೀಪಶಿಖಾ ಲಿಂಗೋಪನಿಷದಃ ಕ್ರಮಾತ್ । ಕಾತ್ಯಾಯನೋ ಬ್ರಹ್ಮಬಿಂದುರಾರುಣ್ಯಾಮೃತಬಿಂದುಕೌ ॥೧೫॥ ಪಂಚಬ್ರಹ್ಮ ಚ ಜಾಬಾಲಿಃ ತೇಜೋಬಿಂದುಶ್ಚ ಮೌದ್ಗಲಃ । ಬೋಧಾಯನೀಯ ಚರ್ಚೇ ಚ ಶ್ರವಣಂ ಚ ಪರಾಕ್ರಮಃ ॥೧೬॥ ಪ್ರಾಚ್ಯಶ್ಚ ಶೌನಕೀಯಂ ಚ ಶಿವಸಂಕಲ್ಪಮೇವ ಚ । ಆಸುರಾಯಣಮೈತ್ರಾಯಣೀಯ ವಾಜಸನೇಯಕಂ ॥೧೭॥ ವೇದಾಂತಸಾರ ಪ್ರಣವವಜ್ರಸೂಚ್ಯಂಬಿಕಾಸ್ತಥಾ । ಸಿದ್ಧಾಂತಶಿಖಾಮುಖ್ಯಾ ಭಕ್ತಿಯೋಗಾದಯೋ ಮತಾಃ ॥೧೮॥ ಸಂಖ್ಯಾಸಂಖ್ಯೋಪನಿಷದ ಉತ್ತರಃಕಾಂಡ ಉಚ್ಯತೇ । ಪೂರ್ವೋತ್ತರವಿಭೇದೇನ ಮೀಮಾಂಸಾಪಿ ದ್ವಿಧಾ ಮತಾ ॥೧೯॥

ಮತ್ತೂ ಬ್ರಹ್ಮಜ್ಞಾನಪ್ರತಿಪಾದಕವಾದ ಉಪನಿಷತ್ತುಗಳು ಯಾವುವೆಂದೊಡೆ—ಶ್ರೀರುದ್ರ, ಬೃಹದಾರಣ್ಯ, ಶ್ವೇತಾಶ್ವತರ, ಮುಂಡಕ, ಕೈವಲ್ಯ, ಕಾಲಾಗ್ನಿರುದ್ರ, ಕಠವಲ್ಲಿ, ಬಾಷ್ಕಳ, ಹಂಸ, ಪರಮಹಂಸ, ಬ್ರಹ್ಮ, ನಾರಾಯಣ, ರಾಮಪೂರ್ವತಾಪನೀಯ, ರಾಮೋತ್ತರತಾಪನೀಯ, ಗೋಪಾಲಪೂರ್ವ ತಾಪನೀಯ, ಗೋಪಾಲೋತ್ತರತಾಪನೀಯ, ನೃಸಿಂಹಪೂರ್ವತಾಪನೀಯ, ನೃಸಿಂಹೋತ್ತರತಾಪನೀಯ, ವೆಂಕಟೇಶ್ವರ ಪೂರ್ವತಾಪನೀಯ, ವೆಂಕಟೇಶ್ವರೋತ್ತರತಾಪನೀಯ, ಪೂರ್ವತಾಪನೀಯ. ಉತ್ತರತಾಪನೀಯ, ಕ್ಷುರಿಕೆ, ಯೋಗಶಿಖೆ, ದೀಪಶಿಖೆ, ಲಿಂಗೋಪನಿಷತ್, ಕಾತ್ಯಾಯನ, ಬ್ರಹ್ಮಬಿಂದು, ಆರುಣ್ಯ, ಅಮೃತಬಿಂದು, ಪಂಚಬ್ರಹ್ಮ, ಜಾಬಾಲ, ತೇಜೋಬಿಂದು, ಮೌದ್ಗಲ, ಬೋಧಾಯನೀಯ, ಚರ್ಚ, ಶ್ರವಣ, ಪರಾಕ್ರಮ, ಪ್ರಾಚ್ಯ, ಶೌನಕೀಯ, ಶಿವಸಂಕಲ್ಪ. ಆಸುರಾಯಣ, ಮೈತ್ರಾಯಣೀಯ, ವಾಜಸನೇಯ, ವೇದಾಂತಸಾರ, ಪ್ರಣವ, ವಜ್ರಸೂಚಿ, ಅಂಬಿಕಾ, ಸಿದ್ಧಾಂತಶಿಖೆ, ಭಕ್ತಿಯೋಗ, ಇವುಗಳೇ ಮೊದಲಾದುಪನಿಷತ್ತುಗಳು ಅಸಂಖ್ಯಾತಗಳಾಗಿರುವವು. ಈ ಭಾಗವೇ ಜ್ಞಾನಪ್ರತಿಪಾದಕವಾದ ಉತ್ತರಕಾಂಡವೆನಿಸುವುದು. ॥೧೮॥ ಮತ್ತೂ ಮೀಮಾಂಸಾಶಾಸ್ತ್ರವೂ ಕೂಡ ಯಜ್ಞಯಾಗಾದಿಗಳನ್ನು ಪ್ರತಿಪಾದಿಸುವ ಪೂರ್ವಭಾಗವೇ (ಪೂರ್ವಮೀಮಾಂಸೆ) ಯೆಂತಲೂ, ಬ್ರಹ್ಮಜ್ಞಾನಾದಿಗಳನ್ನು ಪ್ರತಿಪಾದಿಸುವ ಉತ್ತರಭಾಗವೇ (ಉತ್ತರಮೀಮಾಂಸೆ) ಯೆಂತಲೂ ಎರಡುವಿಧವು. ನ್ಯಾಯಶಾಸ್ತ್ರವು:- ವೈಶೇಷಿಕ, ಕಾಣಾದವೆಂದು ಎರಡುವಿಧವು. ॥೧೯॥

ವೈಶೇಷಿಕಂಚ ಕಾಣಾದಂ ನ್ಯಾಯಶಾಸ್ತ್ರಂ ದ್ವಿಧಾಮತಂ । ಈಶಾನ ಸ್ಸರ್ವವಿದ್ಯಾನಾಂ ಸಪಿವಾದಿಗುರು ರ್ಬುಧಾಃ ॥೨೦॥ ತಸ್ಯಶಿಷ್ಯೋ ಮಹಾವಿಷ್ಣು ಸ್ಸರ್ವಜ್ಞಾನಮಹೋದಧಿಃ । ತಸ್ಮಾದಾತ್ತಪರಿಜ್ಞಾನೋ ಬ್ರಹ್ಮಾ ಸರ್ವಜಗದ್ಗುರುಃ ॥೨೧॥ ಸನತ್ಕುಮಾರೋ ಭಗವಾನ್ ಬ್ರಹ್ಮಣಶ್ಶ್ರುತವಾನಿದಂ । ಸನತ್ಕುಮಾರಾ ತ್ಸರ್ವಜ್ಞಃ ಕೃಷ್ಣದ್ವೈಪಾಯನೋ ಮುನಿಃ ॥೨೨॥ ಅವಾಪಾಖಿಲವಿಜ್ಞಾನ ಸ್ತಸ್ಮಾದೇತ ಚ್ಛ್ರುತಂಮಯಾ । ಅಪ್ಯಾಪಿ ದೇವಲೋಕೇಽಸ್ತಿ ಶತಕೋಟಿಪ್ರವಿಸ್ತರಂ ॥೨೩॥ ಇದಂಲೋಕಹಿತಾರ್ಥಾಯ ಸಂಕ್ಷಿಪ್ತಂ ಪರಮರ್ಷಿಣಾ । ಚತುರ್ಲಕ್ಷಮಿತಂ ಪ್ರೋಕ್ತಂ ವ್ಯಾಸೇನಾದ್ಭುತಕರ್ಮಣಾ ॥೨೪॥ ಅಥಾಷ್ಟಾದಶಧಾ ಕೃತ್ವಾ ತದರ್ಥಾಭಿನಿವೇಶಿತಂ । ಭಾರತಾಖ್ಯಾನ ಮಕರೋತ್ಸಪಾಲ್ಲಕ್ಷಂತು ಸಂಖ್ಯಯಾ ॥೨೫॥ ಏವಂ ಸಪಾದಾಃಪಂಚೈತೇ ಲಕ್ಷಾಃಪುಣ್ಯಾಃ ಪ್ರಕೀರ್ತಿತಾಃ । ವಾಲ್ಮೀಕಿನಾಚ ಯತ್ಪ್ರೋಕ್ತಂ ರಾಮೋಪಾಖ್ಯಾನ ಮುತ್ತಮಂ ॥೨೬। ಬ್ರಹ್ಮಣಾಭಿಹಿತಂ ಪೂರ್ವಂ ಶತಕೋಟಿಪ್ರವಿಸ್ತರಂ । ಆ

ವಿದ್ಯೋಪದೇಶವು:- ಈ ಪೂರ್ವೋಕ್ತಗಳಾದ ಸಕಲ ವಿದ್ಯೆಗಳಿಗೂ ಪರಶಿವಮೂರ್ತಿಯೇ 'ಆದಿಗುರುವು ಈ ಆದಿಗುರುವಾದ ಪರಶಿವ ಮೂರ್ತಿಗೆ ವಿಷ್ಣುವು ಶಿಷ್ಯನಾಗಿ ಆತನಿಂದ ಈ ವಿದ್ಯೆಗಳನ್ನು ತಿಳಿದುಕೊಂಡನು. ಆಜ್ಞಾನ ಸಮುದ್ರನಾದ ವಿಷ್ಣುವಿಗೆ ಬ್ರಹ್ಮನು ಶಿಷ್ಯನಾಗಿ ಅವನಿಂದ ಈ ವಿದ್ಯೆಗಳನ್ನು ತಿಳಿದುಕೊಂಡನು. ಈಸಕಲ ಲೋಕಕ್ಕೂ ಜಗದ್ಗುರುವಾದ ಬ್ರಹ್ಮನಿಗೆ ಸನತ್ಕುಮಾರಮಹರ್ಷಿಯು ಶಿಷ್ಯನಾಗಿ ಈ ಸಕಲ ವಿದ್ಯೆಗಳನ್ನೂ ತಿಳಿದುಕೊಂಡನು. ಆ ಸರ್ವಜ್ಞನಾದ ಸನತ್ಕುಮಾರಮಹರ್ಷಿಗೆ ವ್ಯಾಸನು ಶಿಷ್ಯನಾಗಿ ಸಕಲ ವಿದ್ಯೆಗಳನ್ನು ತಿಳಿದುಕೊಂಡನು. ಆವ್ಯಾಸಮಹರ್ಷಿಯಿಂದ (ತದುಕ್ತ ಗ್ರಂಥ ಮೂಲಕವಾಗಿ) ನಾನು ತಿಳಿದುಕೊಂಡೆನು. ಈಗಲೂ ಆಗ್ರಂಥವು ದೇವಲೋಕದಲ್ಲಿ ನೂರುಕೋಟಿಯಷ್ಟು ವಿಸ್ತಾರವಾಗಿರುತ್ತದೆ. ಈ ಗಂಥ್ರವಾದರೊ, ವೇದವ್ಯಾಸಮಹರ್ಷಿಯಿಂದ ಲೋಕಹಿತಾರ್ಥವಾಗಿ ೪ ಲಕ್ಷದಷ್ಟಾಗಿ ಸಂಕ್ಷೇಪಗೊಳಿಸಲ್ಪಟ್ಟಿರುವುದು. ಬಳಿಕ ಆ ನಾಲ್ಕುಲಕ್ಷ ಗ್ರಂಥಗಳನ್ನೇ ಹದಿನೆಂಟು ವಿಭಾಗವಾಗಿಮಾಡಿರುವನು. ಮತ್ತೂ ಒಂದೂಕಾಲು ಲಕ್ಷ (೧೨೫ ಸಾವಿರ) ಗ್ರಂಥಸಂಖ್ಯೆಯುಳ್ಳ ಭಾರತವೆಂಬಗ್ರಂಥವನ್ನೂ ಬರೆದಿರುವನು. ಮತ್ತೂ ವಾಲ್ಮೀಕಿ ಮಹರ್ಷಿಯಿಂದ ಹೇಳಲ್ಪಟ್ಟ ಉತ್ತಮವಾದ ಯಾವ ರಾಮೋಪಾಖ್ಯಾನ (ರಾಮಾಯಣ) ವುಂಟೋ ? ಅದು, ಪೂರ್ವದಲ್ಲಿ ಬ್ರಹ್ಮನಿಂದ ಒಂದು ಕೋಟಿಸಂಖ್ಯೆ

ದಿತೋ ನಾರದಾದ್ಯೈತತ್ತಸ್ಯ ವಾಲ್ಮೀಕಯೇ ಪುನಃ ॥೧೭॥ ವಾಲ್ಮೀಕಿ ನಾಚ ಲೋಕೇಷು ಪ್ರಕಾಶಿತ ಮನುತ್ತಮಂ । ಚತುರ್ವಿಂಶತಿಸಾಹಸ್ರಂ ಧರ್ಮಕಾಮಾರ್ಥಮೋಕ್ಷದಂ ॥೧೮॥

ಕ್ರಮಾತ್ಪುರಾಣಾದೀನಾಮ ಕಥಯಾಮಿಸಮಾಸತಃ । ಶೃಣು ತ್ವಂ ಭಕ್ತಿಯುಕ್ತೇನ ಚೇತಸಾ ಮಂತ್ರಿಶೇಖರ ॥೧೯॥ ಬ್ರಾಹ್ಮಂ ಪುರಾಣಂ ಪ್ರಥಮಂ ಪಾದ್ಮಂವೈಷ್ಣವಮೇವಚ । ಶೈವಂಭಾಗವತಂ ಚೈವ ಭವಿಷ್ಯಂ ನಾರದೀಯಕಂ ॥ ೨೦ ॥ ಮಾರ್ಕಂಡೇಯ ಮಥಾ ಗ್ನೇಯಂ ಬ್ರಹ್ಮಕೈವರ್ತಮೇವಚ । ಲೈಂಗ್ಯಂತಥಾಚ ವಾರಾಹಂ ಸ್ಕಾಂದಂ ವಾಮನಮೇವಚ ॥ ೨೧ ॥ ಕೌರ್ಮಂ ಮಾತ್ಸ್ಯಂಗಾ ರುಡಂಚ ಬ್ರಹ್ಮಾಂಡಂ ತಪಸಂತರಂ । ಅಷ್ಟಾದಶಪುರಾಣಾನಿನಿಧಿ ತಾನಿ ಯಥಾಕ್ರಮಂ ॥ ೨೨ ॥ ಅಷ್ಟಾದಶಪುರಾಣೇಷು ದಶಭಿಃ ಕ ಥ್ಯತೇ ಶಿವಃ । ಚತುರ್ಭಿ ರ್ಭಗವಾ ನ್ವಿಷ್ಣು ರ್ದ್ವಾಭ್ಯಾಂ ಬ್ರಹ್ಮಾತಥಾ

ಯುಳ್ಳವನ್ನಾಗಿ ಹೇಳಲ್ಪಟ್ಟು, ಅನಂತರ ಅದು ಆ ಬ್ರಹ್ಮನಿಂದ ನಾರದನಿಗೆ ಉಪದೇಶಿಸಲ್ಪಟ್ಟಿ ತು. ಅನಂತರ ನಾರದನಿಂದ ವಾಲ್ಮೀಕಿಗೆ ಉಪದೇಶಿಸಲ್ಪಟ್ಟಿತು. ಆ ವಾಲ್ಮೀಕಿಯು ಆ ರಾಮಾಯಣವನ್ನು ಲೋಕೋಪಕಾರಾರ್ಥವಾಗಿ ಸಂಕ್ಷೇಪಿಸಿ ೨೪ ಸಾವಿರ ಗ್ರಂಥಸಂಖ್ಯೆ ಯುಳ್ಳುದನ್ನಾಗಿ ಮಾಡಿದನು. ಮತ್ತೂ ಆ ರಾಮಾಯಣವಾದರೋ, ಕೇಳಿದವರಿಗೆ ಧರ್ಮ ಅರ್ಥ ಕಾಮ ಮೋಕ್ಷಗಳನ್ನು ಕೊಡುತ್ತಲಿರುವುದು. ॥೧೮॥

— ಹದಿನೆಂಟು ಪುರಾಣಗಳು. —

ಎಲೈ ಮಂತ್ರಿಶ್ರೇಷ್ಠನಾದ ಲಿಂಗಪ್ಪ ಮಂತ್ರಿಯೇ ! ಕ್ರಮವಾಗಿಯೂ ಸಂಕ್ಷೇಪ ವಾಗಿಯೂ ಪುರಾಣಗಳ ಹೆಸರನ್ನು ಹೇಳುತ್ತೇನೆ. ಭಕ್ತಿಯುಕ್ತ ಚಿತ್ತನಾಗಿಕೇಳು ॥೧೯॥ ಮೊದಲನೆಯದು ಬ್ರಹ್ಮಪುರಾಣವು, ಅನಂತರ ಪದ್ಮಪುರಾಣ, ವೈಷ್ಣವಪುರಾಣ, ಶೈವಪುರಾ ಣ, ಭಾಗವತಪುರಾಣ, ಭವಿಷ್ಯತ್ಪುರಾಣ, ನಾರದೀಯ ಪುರಾಣ, ಮಾರ್ಕಂಡೇಯಪುರಾಣ, ಆಗ್ನೇಯಪುರಾಣ, ಬ್ರಹ್ಮಕೈವರ್ತಪುರಾಣ, ಲೈಂಗ್ಯಪುರಾಣ, ವರಾಹಪುರಾಣ, ಸ್ಕಾಂದಪು ರಾಣ, ವಾಮನಪುರಾಣ, ಕೌರ್ಮಪುರಾಣ, ಮತ್ಸ್ಯಪುರಾಣ, ಗಾರುಡಪುರಾಣ, ಬ್ರ ಹ್ಮಾಂಡ ಪುರಾಣ, ಇವೇ ಪ್ರಸಿದ್ಧಗಳಾದ ಹದಿನೆಂಟು ಪುರಾಣಗಳು ॥ ೨೨ ॥ ಈ ಹದಿ ನೆಂಟು ಪುರಾಣಗಳೊಳಗೆ ಹತ್ತು ಪುರಾಣಗಳಿಂದ ಶಿವನು ಹೇಳಲ್ಪಡುತ್ತಾನೆ. ನಾಲ್ಕು ಪು ರಾಣಗಳಿಂದ ವಿಷ್ಣುವು ಹೇಳಲ್ಪಡುತ್ತಾನೆ. ಎರಡು ಪುರಾಣಗಳಿಂದ ಬ್ರಹ್ಮನು ಹೇಳಲ್ಪಡು

ಪುನಃ ॥೩೩॥ ಏಕೇನಾಗ್ನಿ ರಥಾವಿತ್ಯೈಃ ಪುರಾಣಾನಿ ವಿಭಾಗಶಃ । ಶೈವಂ ಸ್ಕಾಂದಂ ತಥಾಲೈಂಗ್ಯಂ ಕೌರ್ಮಂ ವಾಮನಮೇವಚ ॥೩೪॥ ವಾರಾಹಂ ಚ ಭವಿಷ್ಯಂಚಮಾತ್ಸ್ಯಂ ಮಾರ್ಕಂಡಮೇವಚ । ಬ್ರಹ್ಮಾಂಡಂಚೇತಿ ಶೈವಾನಿ ಪುರಾಣಾನಿ ಮುನೀಶ ॥೩೫॥ ನಾರದೀಯಂ ಭಾಗವತಂ ಗಾರುಡಂ ವೈಷ್ಣವಂತಥಾ । ವೈಷ್ಣವಾನಿ ಪುರಾಣಾನಿ ಚತ್ವಾರ್ಯೇತಾನಿ ಕುಂಭಜ ॥೩೬॥ ಬ್ರಾಹ್ಮಂ ಪಾದ್ಮಂ ವಿಧೇಃ ಪ್ರೋಕ್ತೇ ಬ್ರಹ್ಮಕೈವರ್ತಮೇವಚ । ಆಗ್ನೇಯಮಗ್ನೇರಿತ್ಯೇಂಹಿ ಪುರಾಣಾನಿ ಮುನೀಶಕ್ರಮಾತ್ ॥೩೭॥ ಉಪಪುರಾಣ್ಯಥೋವಕ್ಷ್ಯೇ ಪುರಾಣಾನಿ ಯಥಾಕ್ರಮಂ । ಆದ್ಯಂ ಸನತ್ಕುಮಾರೋಕ್ತಂ ನಾರಸಿಂಹಂ ತಥೋತ್ತರಂ ॥೩೮॥ ನಂದಿಸಂಜ್ಞಂ ಕುಮಾರೇಣ ಕಥಿತಂ ತದನಂತರಂ । ಚತುರ್ಥಂ ಶಿವಧರ್ಮಾಖ್ಯಂ ಪುರಾಣಂ ನಂದಿನೇರಿತಂ ॥೩೯॥ ತತೋದೂರ್ವಾಸಸಾಪ್ರೋಕ್ತಂ ನಾರದೀಯಂ ತತಃಪರಂ । ಕಾಪಿಲಂ ಮಾನವಂಚೈವ ತಥೈವೋಶನಸೇರಿತಂ ॥೪೦॥ ಬ್ರಹ್ಮಾಂಡಂಚ ಮಹಾಪುಣ್ಯಂ ವಾರುಣಾಖ್ಯಂ ತತಃಪರಂ । ತತಃಕಾಳೀಪುರಾಣಾಖ್ಯಂ ಕಾಲಕಂಠಂಚ ನಾಮತಃ ॥೪೧॥ ತ

ತ್ತಾನೆ. ಒಂದು ಪುರಾಣದಿಂದ ಅಗ್ನಿಯು ಹೇಳಲ್ಪಡುತ್ತಾನೆ. ಒಂದು ಪುರಾಣದಿಂದ ಸೂರ್ಯನು ಹೇಳಲ್ಪಡುತ್ತಾನೆ. ಆ ಪುರಾಣಗಳು ಆವಾವೆಂದರೆ ಶೈವ, ಸ್ಕಾಂದ, ಲೈಂಗ್ಯ, ಕೌರ್ಮ, ವಾಮನ, ವಾರಾಹ, ಭವಿಷ್ಯತ್ತು, ಮತ್ಸ್ಯ, ಮಾರ್ಕಂಡೇಯ, ಬ್ರಹ್ಮಾಂಡಗಳೆಂಬ ಈ ಹತ್ತು ಪುರಾಣಗಳು ಶೈವಪುರಾಣಗಳು ॥೩೫॥ ನಾರದೀಯ, ಭಾಗವತ, ಗಾರುಡ, ವೈಷ್ಣವಗಳೆಂಬ ಈನಾಲ್ಕು ಪುರಾಣಗಳು ವೈಷ್ಣವಪುರಾಣಗಳು. ಬ್ರಾಹ್ಮ, ಪಾದ್ಮಗಳೆಂಬ ಎರಡು ಪುರಾಣಗಳು ಬ್ರಹ್ಮಪರಪುರಾಣಗಳು. ಬ್ರಹ್ಮಕೈವರ್ತವೊಂದೇ ಸೂರ್ಯಪರವಾದುದು. ಆಗ್ನೇಯ ಪುರಾಣವೊಂದೇಅಗ್ನಿಪರವಾದುದು. ॥೩೭॥

— ಉಪಪುರಾಣಗಳು —

ಎಲೈ ಲಿಂಗಪ್ರಮುಂತ್ರಿಯೆ ! ಅನಂತರ ಉಪಪುರಾಣಗಳನ್ನು ಹೇಳುತ್ತೇನೆ ಕೇಳು:- ಒಂದನೆಯದು ಸನತ್ಕುಮಾರ ಪುರಾಣ, ಅನಂತರ ನಾರಸಿಂಹಪುರಾಣ, ನಂದಿಪುರಾಣ, ಶಿವಧರ್ಮಪುರಾಣ, ದೂರ್ವಾಸಪುರಾಣ, ನಾರದೀಯಪುರಾಣ, ಕಪಿಲಪುರಾಣ, ಮಾನವಪುರಾಣ, ಉಶನಃಪುರಾಣ, ಬ್ರಹ್ಮಾಂಡಪುರಾಣ, ವಾರುಣಪುರಾಣ,ಕಾಳೀಪುರಾಣ, ಕಾಲಕಂಠಪುರಾಣ, ವಾಸಿಷ್ಠ ಲೈಂಗ್ಯಪುರಾಣ, ಮಾಹೇಶ್ವರಪುರಾಣ, ಸಾಂಬಪುರಾಣ, ಸೌರಪು

ತ್ರೋಪಾಸಿಷ್ಠಲೈಂಗ್ಯಾಖ್ಯಾ ನಾಮ್ನಾಮಾಹೇಶ್ವರಂಚತತ್ । ತತ್ರ ಸಾಂಬಪುರಾಣಾಖ್ಯಂ ಸಾವಿತ್ರಮಿತಿಚೇರಿತಂ ॥೪೨॥ ಪಾರಾಶರೋಕ್ತಮಮಲಂ ಮಾರೀಚಂ ಭಾರ್ಗವಾಭಿಧಂ । ಮಹಾಭಾರತಮುಕ್ತ್ವಾಪಿ ಸೇತಿಹಾಸಾನಿ ಕೃತ್ಸ್ನಶಃ ॥೪೩॥

ಮುನೀನಾಂ ಕಥಯಾಮಾಸ ಸರ್ವೇಷಾಂ ರೋಮಹರ್ಷಣಿಃ । ಮಿತಂತದ್ಭಾರತಂ ಜ್ಞೇಯ ಮಷ್ಟಾದಶಪರ್ವಭಿಃ ॥೪೪॥ ಆದಿಪರ್ವಂ ಸಭಾಪರ್ವಂ ಪರ್ವಮಾರಣ್ಯಕಂತಥಾ । ವಿರಾಟ್ಪರ್ವಂತು ವಿಜ್ಞೇಯಂ ಚತುರ್ಥಂ ತದನಂತರಂ ॥೪೫॥ ಉದ್ಯೋಗಂಪಂಚಮಂ ಪರ್ವಂ ಭೀಷ್ಮಪರ್ವ ಮತಃಪರಂ । ಸಪ್ತಮಂ ದ್ರೋಣಪರ್ವಂಚ ಕರ್ಣಪರ್ವ ಮಥಾಷ್ಟಮಂ ॥೪೬॥ ನವಮಂ ಶಲ್ಯಪರ್ವಂಚ ಗದಾಯುದ್ಧ ಮತಃಪರಂ । ಐಷಿಕಂ ತದನುಪ್ರೋಕ್ತಂ ಗರ್ಭಪಾತಸಮೇವಚ ॥೪೭॥ ತ್ರಯೋದಶಂತು ಸ್ತ್ರೀಪರ್ವಂ ಪ್ರದಾನ ಮುದಕಸ್ಯಚ । ಶಾಂತಿಪರ್ವ ಮಥಪ್ರೋಕ್ತ ಮಾಶ್ವಮೇಧಿಕಮೇವಚ॥೪೮॥ ಸ್ವರ್ಗಾರೋಹಣಕಂ ಪರ್ವಂ ಹರಿವಂಶ ಸ್ತಥೈವಚ । ಇತ್ಯಷ್ಟಾದಶಪರ್ವಣಾಂ ಸಂಖ್ಯಾನಂ ಮನುರಬ್ರವೀತ್॥೪೯॥

ರಾಣ, ಪರಾಶರಪುರಾಣ, ಮಾರೀಚಪುರಾಣ, ಭಾರ್ಗವಪುರಾಣಗಳೆಂಬ ಉಪಪುರಾಣಂಗಳು ಆಯಾಯ ನಾಮಧೇಯ ಮುಖದಿಂದಲೇಹೇಳಲ್ಪಟ್ಟವು. ॥೪೩.॥

— ಮಹಾಭಾರತವು —

ಅನಂತರ,-ವೇದವ್ಯಾಸನು ಸಕಲಮುನಿವರ್ಯರಿಗೂ ಮಹಾಭಾರತದಕಥೆಯನ್ನು ಸಾಂಗವಾಗಿ ಭೋಧಿಸಿದನು ॥೪೪॥ ಆಭಾರತವಾದರೊ ಹದಿನೆಂಟು ಪರ್ವಗಳಿಂದ ಕೂಡಿ ಕೊಂಡಿರುವುದು. ಅವುಗಳಲ್ಲಿ ;— ಮೊದಲನೆಯಪರ್ವವೇ ಆದಿಪರ್ವವು, ಅನಂತರ ಸಭಾಪರ್ವ, ಆರಣ್ಯಪರ್ವ, ವಿರಾಟ್ಪರ್ವವೇ ನಾಲ್ಕನೆಯದು, ಐದನೆಯದು ಉದ್ಯೋಗಪರ್ವ, ಆರನೆಯದು ಭೀಷ್ಮಪರ್ವ, ಏಳನೆಯದು ದ್ರೋಣಪರ್ವ, ಎಂಟನೆಯದು ಕರ್ಣಪರ್ವ, ಒಂಭತ್ತನೆಯದು ಶಲ್ಯಪರ್ವ, ಹತ್ತನೆಯದು ಗದಾಪರ್ವ, ಹನ್ನೊಂದನೆಯದು ಐಷಿಕಪರ್ವ, ಹನ್ನೆರಡನೆಯದು ಗರ್ಭಪಾತನಪರ್ವ, ಹದಿಮೂರನೆಯದುಸ್ತ್ರೀಪರ್ವ, ಹದಿನಾಲ್ಕನೆಯದು ಉದಕ ಪ್ರದಾನಪರ್ವ, ಹದಿನೈದನೆಯದುಶಾಂತಿಪರ್ವ, ಹದಿನಾರನೆಯದು ಆಶ್ವಮೇಧಿಕಪರ್ವ, ಹದಿನೇಳನೆಯದು ಸ್ವರ್ಗಾರೋಹಣಪರ್ವ, ಹದಿನೆಂಟನೆಯದು ಹರಿವಂಶಪರ್ವವೆಂಬದಾಗಿ ಈಹದಿನೆಂಟುಪರ್ವಗಳ ಸಂಖ್ಯೆಗಳನ್ನು ಮನುವುಹೇಳಿರುತ್ತಾನೆ ॥೪೯॥

ಬ್ರಾಹ್ಮಂ ತದ್ದಶಸಾಹಸ್ರಂ ಪುರಾಣಂ ಪರಿಕೀರ್ತಿತಂ । ಪಾದ್ಮಂ ಚ ಪಂಚಪಂಚಾಶತ್ಸಹಸ್ರಂ ವೈಷ್ಣವಂ ವಿದುಃ ॥೫೦॥ ವಿಷ್ಣ್ವಾಖ್ಯ ಮಷ್ಟಸಾಹಸ್ರಂ ಶೈವಂ ತತ್ ವ್ಯಷ್ಟಸಮಾಯುತಂ। ಹಯಗ್ರೀವಂ ಬ್ರಹ್ಮವಿದ್ಯಾ ಯತ್ರ ವೃತ್ರವಧ ಸ್ತಥಾ ॥೫೧॥ ಗಾಯತ್ರೀಂ ಚ ಸಮಾರಂಭ ಸ್ತದ್ಭಾಗವತ ಮುಚ್ಯತೇ । ಅಷ್ಟಾದಶಸಹಸ್ರಾಣಿ ಭವಿಷ್ಯಾಖ್ಯಂ ತದುಚ್ಯತೇ ॥೫೨॥ ಚತುರ್ವಿಂಶತ್ಸಹಸ್ರಾಣಿ ನಾರದೇನಾಭಿಭಾಷಿತಂ । ತಥಾನವದಶಸಾಹಸ್ರಂ ಮಾರ್ಕಂಡೇಯಮಿಹೋಚ್ಯತೇ ॥೫೩॥ ಆಗ್ನೇಯ ಷಟ್ಸಾಹಸ್ರಂ ಕೈವರ್ತಂ ದ್ವಾದಶಂಸ್ಮೃತಂ। ರುದ್ರಸಂಖ್ಯಂ ತಥಾ ಲೈಂಗ್ಯಂ ಚತುರ್ವಿಂಶದ್ವರಾಹಕಂ ॥೫೪॥ ತ್ರಯೋದಶಸಹಸ್ರಂತಂ ಸ್ಕಾಂದಂ ಚೈಕಶತಾವೃತಂ। ಚತುರ್ದಶಸಹಸ್ರಾಣಿ ವಾಮನೇ ಷಟ್ಸಹಸ್ರಕಂ ॥೫೫॥ ಕೌರ್ಮಂ ಚತುರ್ದಶೈವಸ್ಯ ಮಾತ್ಸ್ಯೇ ಷೋಡಶಗಾರುಡೇ । ಬ್ರಹ್ಮಾಂಡೇ ದ್ವಾದಶೈವಸ್ಯಾತ್ಸಹಸ್ರಾಣಿ ಯಥಾಕ್ರಮಂ ॥೫೬॥ ಅಷ್ಟಾದಶಪುರಾಣಾನಿ ಸಂಕ್ಷಿಪ್ಯ ಸುಮಹಾಯಶಾಃ । ಕೃತವಾನ್ ಶ್ಲೋಕರೂಪೇಣ ಗಣೇಶ ಸ್ತಾನಿಚಾಲಿಖತ್ ॥೫೭॥ ಪುರಾಣಂ ಧರ್ಮಶಾಸ್ತ್ರೇಭ್ಯಃ ಪ್ರಥಮಂ ಬ್ರಹ್ಮಣಾ ಕೃತಂ। ಅನಂತರಂ ತು ವಕ್ತ್ರೇಭ್ಯೋ ವೇದಾ ಸ್ತಸ್ಯ ವಿನಿರ್ಗತಾಃ ॥೫೮॥

ಅಷ್ಟಾದಶೈತಾ ಸ್ಸ್ಮೃತಯಃ ಕ್ರಮೇಣ ಪರಿವಿಶ್ರುತಾಃ । ತಾಸು ಪೂರ್ವೋ ಮನುಃ ಪ್ರೋಕ್ತೋ ಬೃಹಸ್ಪತಿ ರನಂತರಂ ॥೫೯॥ ದಕ್ಷನಾವಾತ್ರ್ಯ

— ಹದಿನೆಂಟು ಪುರಾಣಗಳ ಗ್ರಂಥಸಂಖ್ಯೆ —

ಬ್ರಹ್ಮಪುರಾಣ ೧೦ ಸಾವಿರ, ಪದ್ಮಪುರಾಣ ೫೫ ಸಾವಿರ, ವಿಷ್ಣುಪುರಾಣ ೮ ಸಾವಿರ, ಶೈವಪುರಾಣ ೧೩ ಸಾವಿರ, ಭಾಗವತಪುರಾಣ ೧೮ ಸಾವಿರ, ಭವಿಷ್ಯತ್ಪುರಾಣ ೨೪ ಸಾ॥ ನಾರದೀಯಪುರಾಣ ೧೨ ಸಾವಿರ, ಮಾರ್ಕಂಡೇಯಪುರಾಣ ೮ ಸಾವಿರ, ಆಗ್ನೇಯಪುರಾಣ ೧೨ ಸಾವಿರ, ಬ್ರಹ್ಮಕೈವರ್ತಪುರಾಣ ೧೧ ಸಾವಿರ, ಲೈಂಗ್ಯಪುರಾಣ ೨೪ ಸಾವಿರ, ವರಾಹಪುರಾಣ ೧೩ ಸಾವಿರ, ಸ್ಕಾಂದಪುರಾಣ ೧೦೧ ಸಾವಿರ, ವಾಮನಪುರಾಣ ೧೪ ಸಾವಿರ, ಕೂರ್ಮಪುರಾಣ ೬ ಸಾವಿರ, ಮಾತ್ಸ್ಯಪುರಾಣ ೧೪ ಸಾವಿರ, ಗರುಡ ಪುರಾಣ ೧೬ ಸಾವಿರ, ಬ್ರಹ್ಮಾಂಡಪುರಾಣ ೧೨ ಸಾವಿರ, ಗ್ರಂಥಸಂಖ್ಯೆಯುಳ್ಳದ್ದಾಗಿರುವುದು ॥೫೬॥ * ಈ ಅಷ್ಟಾದಶಪುರಾಣಗಳನ್ನು ಸಂಕ್ಷೇಪಮಾಡಿ ಮಹಾಕೀರ್ತಿವಂತನಾದ ವೇದವ್ಯಾಸನು ಶ್ಲೋಕರೂಪವಾಗಿ

ತ್ರೀಮನುಸ್ಸ್ಮೃತ್ಯ ವೃದ್ಧಗೌತಮೋಽಥ ಯಮೋಽಂಗಿರಾಃ । ಯೋಗೀಶ್ವರಂ ಪ್ರಚೇತಾಶ್ಚ ಶಾತಾತಪಪರಾಶರೌ ॥೬೦॥ ಸಂವರ್ತೋಶನಸೌ ಶಂಖಲಿಖಿತಾವಪಿ ಷ್ಯಾವತ್ರಿರೇವಚ । ವಿಷ್ಣ್ವಾಪಸ್ತಂಬಹಾರೀತಾ ಧರ್ಮಶಾಸ್ತ್ರಪ್ರವರ್ತಕಾಗಿ ॥೬೧॥

ಅಷ್ಟಾದಶೋಪಸ್ಮೃತಯ ಸ್ತನ್ಮಾನ್ಯಪರಿಚ್ಛಿನ್ನತಾಃ । ಜಾಬಾಲಿ ರ್ನಾಭಿಕೇತಶ್ಚ ಸ್ಕಂದೋ ಲೋಕಾಕ್ಷಿಕಾಶ್ಯಪೌ ॥೬೨॥ ವ್ಯಾಸ ಸ್ಸನ

ಮಾಡಿದನು. ಅದನ್ನು ಗಣೇಶನು ಬರೆದನು ॥೫೨॥ ಪೂರ್ವದಲ್ಲಿ ಬ್ರಹ್ಮನು ಧರ್ಮಶಾಸ್ತ್ರಗಳ ಅರ್ಥಗಳನ್ನೇ ಅನುಸರಿಸಿ ಪುರಾಣಗಳನ್ನು ಬರೆದನು. ಅನಂತರ ಆ ಬ್ರಹ್ಮನ ನಾಲ್ಕು ಮುಖಗಳಿಂದಲೂ ನಾಲ್ಕುವೇದಗಳು ಜನಿಸಿದವು ॥೫೮॥

— ಹದಿನೆಂಟು ಸ್ಮೃತಿಗಳು —

ಅನಂತರ ಪ್ರಖ್ಯಾತಗಳಾದ ಹದಿನೆಂಟು ಸ್ಮೃತಿಗಳು, ಅವುಗಳಲ್ಲಿ ಮೊದಲನೆಯದು ಮನುಸ್ಮೃತಿ, ಅನಂತರ ಬೃಹಸ್ಪತಿ, ಸ್ಮೃತಿ,ಮೂರನೆಯದು ದಕ್ಷಸ್ಮೃತಿ, ಅನಂತರ ಗೌತಮಸ್ಮೃತಿ, ಯಮಸ್ಮೃತಿ, ಆಂಗಿರಸಸ್ಮೃತಿ, ಯೋಗೀಶ್ವರಸ್ಮೃತಿ, ಪ್ರಚೇತಸಸ್ಮೃತಿ, ಶಾತಾತಪಸ್ಮೃತಿ,ಸಂವರ್ತಕಸ್ಮೃತಿ, ಉಶನಸಸ್ಮೃತಿ,ಶಂಖಲಿಖಿತಸ್ಮೃತಿ, ವಸಿಷ್ಠಸ್ಮೃತಿ, ಅತ್ರಿಸ್ಮೃತಿ, ವಿಷ್ಣುಸ್ಮೃತಿ, ಆಪಸ್ತಂಬಸ್ಮೃತಿ, ಹಾರೀತಸ್ಮೃತಿಗಳು ಆಯಾಯ ನಾಮಧೇಯ ಮುಖ್ಯರಿಂದ ರಚಿಸಲ್ಪಟ್ಟು ಧರ್ಮಶಾಸ್ತ್ರಪ್ರತಿಪಾದಕಗಳಾಗಿರುವವು. ॥೬೧॥

— ಹದಿನೆಂಟು ಉಪಸ್ಮೃತಿಗಳು —

ಅನಂತರ;- ಜಾಬಾಲಿಸ್ಮೃತಿ, ನಾಭಿಕೇತಸ್ಮೃತಿ, ಸ್ಕಂದಸ್ಮೃತಿ,ಲೋಕಾಕ್ಷಿಸ್ಮೃತಿ, ಕಶ್ಯಪಸ್ಮೃತಿ, ವ್ಯಾಸಸ್ಮೃತಿ, ಸನತ್ಕುಮಾರಸ್ಮೃತಿ, ಶಂತನುಸ್ಮೃತಿ, ಜನಕಸ್ಮೃತಿ, ಕ್ರತುಸ್ಮೃತಿ, ಕಾತ್ಯಾಯನಸ್ಮೃತಿ, ಜಾತೂಕರ್ಣಸ್ಮೃತಿ, ಕಪಿಂಜಲಸ್ಮೃತಿ,ಬೋಧಾಯನಸ್ಮೃತಿ,

---

* ಗ್ರಂಥಾಂತರದಲ್ಲಿ—" ಬ್ರಹ್ಮಪುರಾಣ ೧೦ ಸಾವಿರ, ಪದ್ಮಪುರಾಣ ೫೫ ಸಾವಿರ, ವಿಷ್ಣುಪುರಾಣ ೨೪ ಸಾವಿರ, ಶೈವಪುರಾಣ ೧೨ ಸಾವಿರ, ಭಾಗವತಪುರಾಣ ೧೮ ಸಾವಿರ, ಭವಿಷ್ಯತ್ಪುರಾಣ ೧೪ ಸಾವಿರ, .ನಾರದೀಯ ಪುರಾಣ ೨೫ ಸಾವಿರ, ಮಾರ್ಕಂಡೇಯ ಪುರಾಣ ೯ ಸಾವಿರ, ಅಗ್ನಿ ಪುರಾಣ ೧೫, ಬ್ರಹ್ಮಕೈವರ್ತ ಪುರಾಣ ೧೮ ಸಾವಿರ, ಲಿಂಗಪುರಾಣ ೧೧ ಸಾವಿರ, ವರಾಹ ಪುರಾಣ ೨೪ ಸಾವಿರ, ಸ್ಕಾಂದ ಪುರಾಣ ೧ ಲಕ್ಷ, ವಾಮನಪುರಾಣ ೧೪ ಸಾವಿರ, ಕೂರ್ಮಪುರಾಣ ೬ ಸಾವಿರ, ಮತ್ಸ್ಯಪುರಾಣ ೧೪ ಸಾವಿರ, ಗಾರುಡಪುರಾಣ ೧೯ ಸಾವಿರ, ಬ್ರಹ್ಮಾಂಡಪುರಾಣ ೧೨ ಸಾವಿರ,, — ಈರೀತಿಯಾಗಿರುವುದು.

ತ್ಸುಮನ್ತಾರಶ್ಚ ಶಂತನು ರ್ಜನಕಸ್ತಥಾ । ಕ್ರತುಃ (ವ್ಯಾಘ್ರಃ) ಕಾತ್ಯಾಯನಶ್ಚೈವ ಜಾತುಕರ್ಣಃ ಕಪಿಂಜಲಃ ॥೬೩॥ ಬೋಧಾಯನಶ್ಚ ಕಾಣಾದೋ ವಿಶ್ವಾಮಿತ್ರ ಸ್ತಥೈವಚ । ಪೈಠೀನಸಿ ರ್ಗೋಭಿಲಶ್ಚೇ ತ್ಯುಪಸ್ಮೃತಿವಿಧಾಯಕಾಃ ॥೬೪॥ ಅಷ್ಟಾದಶೋಪಸ್ಮೃತಯ ಸ್ತನ್ನಾಮುಪರಿಚಿನ್ಹಿತಾಃ । ಏವಂಚತುರ್ದಶ ಖ್ಯಾತಾವಿದ್ಯಾ ಶ್ಶಿವವಿನಿರ್ಮಿತಾಃ ॥೬೫॥

ಏತಾಸಾಮಪಿ ವಿದ್ಯಾನಾ ಮುಪಷ್ಟಂಭತಯಾ ಪುನಃ । ಸಾಕ್ಷಾಚ್ಛಿವಮುಖೋದ್ಗೀತಾ ಅಷ್ಟಾವಿಂಶತಿಸಂಹಿತಾಃ ॥೬೬॥ ಅಷ್ಟಾವಿಂಶತಿಧಾ ಭಿನ್ನಂ ಶೈವಂಸಿದ್ಧಾಂತಸತ್ತಮಂ । ಸಿದ್ಧಾಂತಂ ದ್ವಿವಿಧಂಜ್ಞೇಯಂ ಶೈವಂ ರೌದ್ರಮಿತಿಸ್ಥಿತಿಃ ॥೬೭॥ ದಶಧಾ ಶಿವಭೇದಾಸ್ಸ್ಯುಃ ರೌದ್ರಮಷ್ಟಾದಶೋದಿತಾಃ । ಕಾಮಿಕಾದ್ಯಾವಾತುಲಾಂತಾ ಶ್ಶಿವೇನೋಕ್ತಾ ಶ್ಶಿವಾಗಮಾಃ ॥೬೮॥ ಆಗತಾ ಶ್ಶಿವವಕ್ತ್ರೇಭ್ಯೋ ಗತಾಶ್ಚ ಗಿರಿಜಾಮುಖಂ । ಮತಾಶ್ಚ ವಾಮದೇವೇನೇತ್ಯಾಗಮಾಃ ಪರಿಕೀರ್ತಿತಾಃ ॥೬೯॥ ತ್ರಿಪದಾರ್ಥಂ ಚತುಷ್ಪಾ

ಕಾಣಾದಸ್ಮೃತಿ, ವಿಶ್ವಾಮಿತ್ರಸ್ಮೃತಿ, ಪೈಠೀನಸಿಸ್ಮೃತಿ, ಗೋಭಿಲಸ್ಮೃತಿ, ಎಂಬಿವುಗಳೇ ಹದಿನೆಂಟು ಉಪಸ್ಮೃತಿಗಳು ಆಯಾಯ ನಾಮಧೇಯವುಳ್ಳವರಿಂದಲೇ ರಚಿಸಲ್ಪಟ್ಟು ಆಯಾಯ ಋಷಿಗಳ ಹೆಸರುಗಳನ್ನೇ ಹೊಂದಿ ಧರ್ಮಶಾಸ್ತ್ರಪ್ರತಿಪಾದಕಗಳಾಗಿ ಜಗದ್ವಿಖ್ಯಾತಗಳಾಗಿರುವವು. ಈರೀತಿಯಾಗಿರುವ ಹದಿನಾಲ್ಕು ವಿದ್ಯೆಗಳು ಪರಶಿವಮೂರ್ತಿಯಿಂದ ನಿರ್ಮಿಸಲ್ಪಟ್ಟು ಜಗತ್ಪ್ರಸಿದ್ಧಗಳಾಗಿರುವವು ॥೬೫॥

ಅನಂತರ ಹಿಂದೆ ಹೇಳಿದ ಹದಿನಾಲ್ಕು ವಿದ್ಯೆಗಳ ಅರ್ಥವನ್ನೇ ಅನುಸರಿಸಿ ಆಸಾಕ್ಷಾತ್ಪರಶಿವನಮುಖದಿಂದಲೇ ಇಪ್ಪತ್ತೆಂಟು ಶೈವಾಗಮಗಳು ಹುಟ್ಟಿರುವವು. ಇದಕ್ಕೆ ಸಿದ್ಧಾಂತವೆಂದು ಹೆಸರು. ಆ ಸಿದ್ಧಾಂತವು;—ಶೈವವೆಂದು, ರೌದ್ರವೆಂದು ಎರಡು ಪ್ರಕಾರವು. ಅವುಗಳಲ್ಲಿ;—ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದಕವೆಂಬ ಈ ಹತ್ತಾಗಮಗಳಿಗೆ ಶೈವವೆಂದು ಹೆಸರು. ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ವೀರ, ರೌರವ ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಶರ್ವೋಕ್ತ, ಪಾರಮೇಶ್ವರ, ಕಿರಣ, ವಾತುಳ ಎಂಬ ಈ ಹದಿನೆಂಟಾಗಮಗಳಿಗೆ ರೌದ್ರವೆಂದು ಹೆಸರು. ಈ ಇಪ್ಪತ್ತೆಂಟು ಶೈವಾಗಮಗಳೂ ಪರಶಿವನಿಂದಲೇಹೇಳಲ್ಪಟ್ಟಿರುವವು. ಮತ್ತೂ ಈ ಶೈವಾಗಮಗಳು;—ಪರಶಿವನ ಮುಖದಿಂದಲೇ ಬಂದುದರಿಂದಲೂ, ಪಾರ್ವತಿಯ ಮುಖವನ್ನೇ ಹೊಂದಿದುದರಿಂದಲೂ, ಮತ್ತು ವಾಮದೇವಮೂರ್ತಿಯಿಂದಲೇ ಸಮ್ಮತಿಸಲ್ಪಟ್ಟುದರಿಂದಲೂ ಕೂಡ— "ಆಗಮ"—ಎಂಬ ಹೆಸರಿನಿಂದ ಲೋಕಪ್ರಸಿದ್ಧವಾಗಿರುವುವು. ಮತ್ತು ಜಗತ್ಪತಿಯಾದ ಪರಶಿವನು;—ಧರ್ಮಮೋಕ್ಷಾರ್ಥಸಾಧನವಾಗಿಯೂ, ಪಶು ಪತಿ ಪಾಶ ಎಂಬ ಮೂರು

ದಂ ಮಹಾತಂತ್ರಂ ಜಗತ್ಪತಿಃ। ಪ್ರೋಕ್ತವಾನ್ ಹಿಮವತ್ಪುತ್ರ್ಯೈ ಧರ್ಮಮೋಕ್ಷಾರ್ಥಸಾಧನಂ ॥೨೦॥ ಶ್ರೀಶಿವಃ— ಸೂಕ್ಷ್ಮಾಗಮೇ ಜ್ಞಾನಪಾದೇ ಶ್ರುತಮಾಗಮಲಕ್ಷಣಂ। ಸರ್ವಭೂತಕ್ಷಯೇ ಸರ್ವಲೋಕಾನಾಂ ವಿಲಯೇ ಸತಿ ॥೨೧॥ ತ್ವತ್ಪ್ರೀತ್ಯೈ ವಿಸ್ತೃತಸ್ಸ್ಪಷ್ಟಮಾಗಮಾಃ ಪರಿಕೀರ್ತಿತಾಃ। ಚತುರ್ಥಾಯಂ ವಿಭಿನ್ನೋಸೌ ಜ್ಞಾನಯೋಗಕ್ರಿಯಾತ್ಮಕಾಃ ॥೨೨॥ ಚರ್ಯಾಖ್ಯಶ್ಚೇತಿಮೇವಾಪಿ ಜ್ಞೇಯಂ ಪಾದಚತುಷ್ಟಯಂ"—ದೇವ್ಯುವಾಚ—ಜ್ಞಾನಪಾದಾಧಿಕಂ ಸ್ಪಷ್ಟಂ ಮಯಿಪ್ರೀತ್ಯಾ ಕೃಪಾಪ್ರಭೋ ॥೨೩॥ ಶ್ರೀಶಿವಃ—ಮದ್ಜ್ಞಾನಂ ಜ್ಞಾನಪಾದಂಸ್ಯಾನ್ಮದ್ಯೋಗಂ ಯೋಗಪಾದತಃ। ಕ್ರಿಯಾ ಮಲ್ಲಿಂಗಧೃತ್ಯಾದಿ ದೇವಸ್ಯಾಲಯನಿರ್ಮಿತಿಃ ॥೨೪॥ ಮತ್ಪೂಜಾ ಮತ್ಪರಾಚಾರೋ ಮನ್ಮಂತ್ರಜಪಲಕ್ಷಣಂ। ಚರ್ಯಾಪಾದಮಿಮಂ ಪ್ರಾಹುರಾಗಮಾರ್ಥವಿವೇಕಿನಃ ॥೨೫॥ ಕಾಮಿಕಂ ಯೋಗಜಂ ಚಿಂತ್ಯಂ ಕಾರಣಂ ತ್ವಜಿತಂ ತಥಾ। ದೀಪ್ತಂ ಸೂಕ್ಷ್ಮಂ ಸಹಸ್ರಂ ಚಾಪ್ಯಂಶುಮಾನ್ ಸುಪ್ರಭೇದಕಃ ॥೨೬॥ ವಿಜಯಂಚೈವ ನಿಶ್ವಾಸಂ

ಪದಾರ್ಥಗಳುಳ್ಳದ್ದಾಗಿಯೂ, ಜ್ಞಾನ, ಯೋಗ, ಕ್ರಿಯೆ, ಚರ್ಯೆ, ಎಂಬ ನಾಲ್ಕು ಪಾದಗಳುಳ್ಳದಾಗಿಯೂ ಇರುವ ಮಹಾತಂತ್ರವನ್ನು ಪಾರ್ವತಿಗೋಸ್ಕರ ಉಪದೇಶಮಾಡಿದನು. ॥೨೦॥ ಏನೆಂದರೆ ;—ಎಲೈ ಪಾರ್ವತಿಯೆ! ಸೂಕ್ಷ್ಮಾಗಮದ ಜ್ಞಾನಪಾದದಲ್ಲಿ ಆಗಮಲಕ್ಷಣವು ನಿನ್ನಿಂದ ಕೇಳಲ್ಪಟ್ಟಿರುವುದು. ಕಲ್ಪಪ್ರಳಯದಲ್ಲಿ ಸಮಸ್ತ ಲೋಕಗಳೂ, ಸಮಸ್ತ ಪ್ರಾಣಿಗಳೂ ನಾಶವಾಗಿರಲು, ಆಕಾಲದಲ್ಲಿ ನಾನು ನಿನ್ನ ಮೇಲಣ ಪ್ರೀತಿಯಿಂದ ಆಗಮಗಳನ್ನು ವಿಸ್ತಾರವಾಗಿಯೂ ಸ್ಪಷ್ಟವಾಗಿಯೂ ಹೇಳಿದೆನಷ್ಟೆ? ಆಗಮವು;—ಜ್ಞಾನಪಾದವೆಂದು, ಯೋಗಪಾದವೆಂದು, ಕ್ರಿಯಾಪಾದವೆಂದು, ಚರ್ಯಾಪಾದವೆಂದು ನಾಲ್ಕು ಪಾದಗಳುಳ್ಳದಾಗಿರುವುದು ಎಂದನು. ಆಗ ಪಾರ್ವತಿಯು ; ಎಲೈ ಪ್ರಭುವಾದ ಪರಶಿವಮೂರ್ತಿಯೆ ! ಆ ಆಗಮಗಳ ಆ ನಾಲ್ಕು ಪಾದಗಳ ಅರ್ಥವನ್ನು ನನ್ನಮೇಲಣ ಪ್ರೀತಿಯಿಂದ ಸ್ಪಷ್ಟವಾಗಿ ಹೇಳಬೇಕು ಎಂದಳು. ಆಗ ಪರಶಿವನು ಹೇಳುತ್ತಾನೆ ;—ಎಲೈ ಗಿರಿಜೆಯೆ ಕೇಳು! ಆ ಆಗಮಗಳಲ್ಲಿ ಶಿವಜ್ಞಾನವನ್ನು ಬೋಧಿಸತಕ್ಕ ಪಾದವೇ ಜ್ಞಾನಪಾದವೆನಿಸುವುದು. ಶಿವಯೋಗವನ್ನು ಬೋಧಿಸತಕ್ಕ ಪಾದವೇ ಯೋಗಪಾದವೆನಿಸುವುದು. ಶಿವಲಿಂಗಧಾರಣೆ ಮೊದಲಾದುದನ್ನು ಶಿವಾಲಯನಿರ್ಮಾಣಮಾಡುವ ರೀತಿಯನ್ನು ಹೇಳುವ ಪಾದವೇ ಕ್ರಿಯಾಪಾದವೆನಿಸುವುದು. ಮತ್ತು ನನ್ನ ಪೂಜಾವಿಧಾನವನ್ನೂ ನನ್ನ ಸಂಬಂಧವಾದ ಆಚಾರವನ್ನೂ ನನ್ನ ಮಂತ್ರಜಪ ಲಕ್ಷಣವನ್ನೂ ಹೇಳತಕ್ಕ ಪಾದವೇ ಚರ್ಯಾಪಾದವೆಂದು ಆಗಮಾರ್ಥವಿಶಾರದರುಗಳು ಹೇಳುತ್ತಾರೆ. ॥೨೫॥ ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮತ್, ಸುಪ್ರಭೇದ, ವಿಜಯ, ನಿಶ್ವಾಸ, ಸ್ವಾಯಂಭುವ,

ಸ್ವಾಯಂಭುವ ಮಥಾನಲಃ । ವೀರಂಚ ರೌರವಂಚೇತಿ ಮಕುಟಂ ವಿಮಲಂತಥಾ ॥೭೭॥ ಚಂದ್ರಜ್ಞಾನಂಚ ಬಿಂಬಂಚ ಪ್ರೋದ್ಗೀತಂ ಲಲಿತಂತಥಾ । ಸಿದ್ಧಸಂತಾನಶರ್ವೋಕ್ತಾಃ ಪಾರಮೇಶ್ವರಮೇವಚ ॥೭೮॥ ಕಿರಣಂ ವಾತುಳಂಚೈತಾ ಅಷ್ಟಾವಿಂಶತಿಸಂಹಿತಾಃ । ಸದ್ಯೋಜಾತಮುಖಾಜ್ಜಾತಾಃ ಪಂಚಾದ್ಯಾಃ ಕಾಮಿಕಾದಯಃ ॥೭೯॥ ವಾಮದೇವಮುಖಾಜ್ಜಾತಾ ದೀಪ್ತಾದ್ಯಾಃ ಪಂಚಸಂಹಿತಾಃ । ಅಘೋರವಕ್ತ್ರಾದುದ್ಭೂತಾಃ ಪಂಚಾಥ ವಿಜಯಾದಯಃ ॥೮೦॥ ಪುಂವಕ್ತ್ರಾದಥ ಸಂಭೂತಾಃ ಪಂಚಾಥೋ ರೌರವಾದಯಃ । ಈಶಾನವದನಾಜ್ಜಾತಾಃ ಪ್ರೋದ್ಗೀತಾದ್ಯಷ್ಟಸಂಹಿತಾಃ ॥೮೧॥

ಶೈವಾನಾಂ ದಶಭೇದಾನಾಂ ಶ್ರೋತಾರಸ್ತು ತ್ರಯಸ್ತ್ರಯಃ । ರೌದ್ರಾಷ್ಟಾದಶಭೇದಾನಾಂ ದ್ವೌದ್ವೌ ಸಿದ್ಧೌ ಮತಾಬುಧೈಃ ॥೮೨॥ ಮಹೇಶಾತ್ಪ್ರಣವಃ ಪ್ರಾಪ್ತಃ ಪ್ರಣವಾತ್ತ್ರಿಕಲಸ್ಸ್ಮೃತಃ । ತ್ರಿಕಲಾಚ್ಚ ಹರಃ ಪ್ರಾಪ್ತಃ ಶ್ರೋತಾರಃ ಕಾಮಿಕಸ್ಮೃತೇಃ ॥೮೩॥ ಶುದ್ಧೋ

ಅನಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ ಸಿದ್ಧ, ಸಂತಾನ, ಶರ್ವೋಕ್ತ, ಪಾರಮೇಶ್ವರ, ಕಿರಣ, ವಾತುಳ ಎಂಬ ಈ ಇಪ್ಪತ್ತೆಂಟು ಸಂಹಿತೆಗಳೇ ಇಪ್ಪತ್ತೆಂಟಾಗಮಗಳು. ಮತ್ತೂ ನನ್ನ ಸದ್ಯೋಜಾತಮುಖದ ದೆಸೆಯಿಂದ—" ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ,,—ಎಂಬ ಐದಾಗಮಗಳು ಜನಿಸಿದವು. ವಾಮದೇವಮುಖದದೆಸೆಯಿಂದ—" ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮತ್, ಸುಪ್ರಭೇದ,,—ಎಂಬ ಐದಾಗಮಗಳು ಜನಿಸಿದವು. ಅಘೋರ ಮುಖದದೆಸೆಯಿಂದ—" ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ವೀರ,,—ಎಂಬ ಐದಾಗಮಗಳು ಜನಿಸಿದವು. ತತ್ಪುರುಷ ಮುಖದದೆಸೆಯಿಂದ—" ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ,,—ಎಂಬ ಐದಾಗಮಗಳು ಜನಿಸಿದವು. ಈಶಾನ ಮುಖದದೆಸೆಯಿಂದ—" ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಶರ್ವೋಕ್ತ, ಪಾರಮೇಶ್ವರ, ಕಿರಣ, ವಾತುಳ,,—ಎಂಬ ಎಂಟಾಗಮಗಳು ಜನಿಸಿದವು. ॥೮೧॥

ಮತ್ತೂ ಶೈವಭೇದಗಳೆನಿಸಿದ ಹತ್ತಾಗಮಗಳನ್ನು ನನ್ನಿಂದ ಉಪದೇಶವಂ ಪಡೆದು ಅವುಗಳಲ್ಲಿಯೇ ಆಸಕ್ತರಾಗಿ ಸಿದ್ಧರೆನಿಸಿರುವವರು ಮೂರು ಮೂರು ಜನರು. ರೌದ್ರಭೇದಗಳೆನಿಸಿದ ಹದಿನೆಂಟಾಗಮಗಳನ್ನು ನನ್ನಿಂದಉಪದೇಶವಂ ಪಡೆದು ಅವುಗಳಲ್ಲಿಯೇ ಆಸಕ್ತರಾಗಿ ಸಿದ್ಧರೆನಿಸಿರುವವರು ಇಬ್ಬಿಬ್ಬರು. ॥೮೨॥ ಹೇಗೆಂದರೆ;—ಕಾಮಿಕಾಗಮವನ್ನು—ಮಹೇಶ್ವರನಿಂದ ಪ್ರಣವನು ಪಡೆದನು, ಪ್ರಣವನಿಂದ ತ್ರಿಕಲನು ಪಡೆದನು, ತ್ರಿಕಲನಿಂದ ಹರನು ಹೊಂದಿದನು, ಆದುದರಿಂದ ಕಾಮಿಕಾಗಮಕ್ಕೆ ಮೂರುಜನ ಸಿದ್ಧ ಪುರುಷರೆಂದು

ಭಸ್ಮ ವಿಭೂತಿಶ್ಚ ಶ್ರೋತಾರೋ ಯೋಗಜಸ್ಯತೇ । ಚಿಂತ್ಯಸ್ಯ ಚಿತ್ತೋ ಭೂತೇಶ ಶ್ಶ್ರೋತಾರ ಸ್ತತ್ವಪಾರಗಃ ॥೮೪॥ ಕಾರಣಂ ಸರ್ವರುದ್ರಶ್ಚ ಕಾರಣಜ್ಞಃ ಪ್ರಜಾಪತಿಃ । ಶ್ರೋತಾರ ಸ್ತ್ವಜಿತಸ್ಯಾಸ್ಯ ಸುಶಿವಾಖ್ಯಃ ಶಿವಾಚ್ಯುತಾಃ ॥೮೫॥ ದೀಪ್ತಂಚೋದ್ಧಾರ ಈಶಶ್ಚ ತ್ರಿಮೂರ್ತಿಶ್ಚ ಹುತಾಶನಃ। ಸೂಕ್ಷ್ಮಂ ವೈಶ್ರವಣ ಸ್ಸೂಕ್ಷ್ಮತಂತ್ರಜ್ಞಶ್ಚ ಪ್ರಭಂಜನಃ॥೮೬॥ ಕಾಲೋ ಭೀಮಶ್ಚ ಧರ್ಮಶ್ಚ ಸಹಸ್ರಾಗಮಕೋವಿದಾಃ। ಅಂಶು ರುಗ್ರೋ ರವಿಶ್ಚೈವ ಶ್ರೋತಾರೋಂಶುಮತ ಸ್ತ್ರಯಃ॥೮೭॥ ಚೋದ್ಧಾರ ಸ್ಸುಪ್ರಭೇದಸ್ಯ ದೇವೇಶೋ ವಿಘ್ನರಾಟ್ಛಶೀ। ಚೋದ್ಧಾರ ಶ್ಶೈವಭೇದಾನಾಂ ದಶಾನಾಂ ತ್ರಿಂಶದೀರಿತಾಃ ॥೮೮॥

ತಿಳಿಯುವದು. ॥೮೩॥ ಯೋಗಜಾಗಮವನ್ನು;—ಮಹೇಶ್ವರನಿಂದ ಶುದ್ಧನೂ, ಶುದ್ಧನಿಂದ ಭಸ್ಮನೂ, ಭಸ್ಮನಿಂದ ವಿಭೂತಿಯೂ ಪಡೆದರು. ಆದುದರಿಂದ ಯೋಗಜಾಗಮಕ್ಕೆ ಮೂರುಜನ ಸಿದ್ಧಪುರುಷರೆಂದು ತಿಳಿಯುವದು. ಚಿಂತ್ಯಾಗಮವನ್ನು;—ಮಹೇಶ್ವರನಿಂದ ಚಿತ್ತನೂ, ಚಿತ್ತನಿಂದ ಭೂತೇಶನೂ, ಭೂತೇಶನಿಂದ ತತ್ವಪಾರಗನೂ ಪಡೆದರು. ಆದುದರಿಂದ ಚಿಂತ್ಯಾಗಮಕ್ಕೆ ಮೂರು ಜನಸಿದ್ಧಪುರುಷರು. ॥೮೪॥ ಕಾರಣಾಗಮವನ್ನು;—ಮಹೇಶ್ವರನಿಂದ ಸರ್ವರುದ್ರನೂ, ಸರ್ವರುದ್ರನಿಂದ ಕಾರಣಜ್ಞನೂ, ಕಾರಣಜ್ಞನಿಂದ ಪ್ರಜಾಪತಿಯೂ ಪಡೆದರು. ಆದುದರಿಂದ ಕಾರಣಾಗಮಕ್ಕೆ ಮೂರು ಜನಸಿದ್ಧಪುರುಷರು. ಅಜಿತಾಗಮವನ್ನು;— ಮಹೇಶ್ವರನಿಂದ ಸುಶಿವಾಖ್ಯನೂ, ಸುಶಿವಾಖ್ಯನಿಂದ ಶಿವನೂ, ಶಿವನಿಂದ ಅಚ್ಯುತನೂ ಪಡೆದರು. ಆದುದರಿಂದ ಅಜಿತಾಗಮಕ್ಕೆ ಮೂರುಜನ ಸಿದ್ಧಪುರುಷರು. ॥೮೫॥ ದೀಪ್ತಾಗಮವನ್ನು;—ಮಹೇಶ್ವರನಿಂದ ಈಶನೂ, ಈಶನಿಂದ ತ್ರಿಮೂರ್ತಿಯೂ, ತ್ರಿಮೂರ್ತಿಯಿಂದ ಹುತಾಶನನೂ ಪಡೆದರು. ಆದುದರಿಂದ ದೀಪ್ತಾಗಮಕ್ಕೆ ಮೂರುಜನ ಸಿದ್ಧಪುರುಷರು. ॥ ಸೂಕ್ಷ್ಮಾಗಮವನ್ನು;—ಮಹೇಶ್ವರನಿಂದ ವೈಶ್ರವಣನೂ ವೈಶ್ರವಣನಿಂದ ಸೂಕ್ಷ್ಮತಂತ್ರಜ್ಞನೂ, ಅವನಿಂದ ಪ್ರಭಂಜನನೂ ಪಡೆದರು. ಆದಕಾರಣ ಸೂಕ್ಷ್ಮಾಗಮಸಿದ್ಧರು ಮೂರುಜನರು. ॥೮೬॥ ಸಹಸ್ರಾಗಮವನ್ನು ;—ಮಹೇಶ್ವರನಿಂದ ಕಾಲನೂ; ಕಾಲನಿಂದ ಭೀಮನೂ, ಭೀಮನಿಂದ ಧರ್ಮನೂ ಪಡೆದರು. ಆದಕಾರಣ ಸಹಸ್ರಾಗಮಸಿದ್ಧರು ಮೂರುಜನರು. ॥ ಅಂಶುಮದಾಗಮವನ್ನು ;—ಮಹೇಶ್ವರನಿಂದ ಅಂಶುವೂ, ಅಂಶುವಿನಿಂದ ಉಗ್ರನೂ, ಉಗ್ರನಿಂದ ರವಿಯೂ ಪಡೆದರು. ಆದುದರಿಂದ ಅಂಶುಮದಾಗಮಸಿದ್ಧರು ಮೂರುಜನರು. ॥೮೭॥ ಸುಪ್ರಭೇದಾಗಮವನ್ನು ;—ಮಹೇಶ್ವರನಿಂದ ದೇವೇಶನೂ, ದೇವೇಶನಿಂದ ವಿಘ್ನರಾಜನೂ, ವಿಘ್ನರಾಜನಿಂದ ಶಶಿಯೂ ಪಡೆದರು. ಆದಕಾರಣ ಸುಪ್ರಭೇದಾಗಮ ಸಿದ್ಧರು ಮೂರುಜನರು. ಈರೀತಿಯಾಗಿರುವುದರಿಂದ ಶೈವಭೇದಗಳೆನಿಸಿದ ಹತ್ತಾಗಮಗಳಿಗೆ ಮೂವತ್ತು ಜನ ಸಿದ್ಧ ಪುರುಷರಾಗಿರುವರು ॥೮೮॥

ಅನಾದಿಃ ಪರಮೇಶಶ್ಚ ಶ್ರೋತಾರೌ ವಿಜಯಸ್ಯ ತೌ। ದಶಾರ್ಣೋ ಗಿರಿಜಾ ಜ್ಞೇಯೌ ನಿಶ್ವಾಸಜ್ಞೌ ವಿಚಕ್ಷಣೌ ॥೪೯॥ ಸ್ವಾಯಂಭುವಜ್ಞೌ ನಿಧನಃ ಪದ್ಮೋದ್ಭೂತೋ ಯಥಾಕ್ರಮಂ। ಬೋದ್ಧಾರಾವನಲಂ ತಂತ್ರಂ ವಾಮಾಖ್ಯೋ ಹ್ಯಗ್ನಿಸಂಜ್ಞಕಃ ॥೫೦॥ ಜ್ಞೇಯೌ ವೀರಾಖ್ಯತಂತ್ರಜ್ಞೌ ಕ್ರಮಾದೇಕಾಸುಶೋಭನೌ। ರೌರವಾಗಮಶ್ರೋತಾರೌ ನಂದಿಭೃಂಗಿರಿಟೀ ತಥಾ ॥೫೧॥ ಶಿವಾಖ್ಯಶ್ಚ ಮಹಾದೇವೋ ಮಕುಟಾಗಮಕೋವಿದೌ। ಸರ್ವಾತ್ಮದೇವೋ ವಿಮಲಶ್ರೋತಾರೌ ವೀರಭದ್ರಕಃ ॥೫೨॥ ಚಂದ್ರಜ್ಞಾನಸ್ಯ ಬೋದ್ಧಾರಾವನಂತಶ್ಚ ಬೃಹಸ್ಪತಿಃ। ಬಿಂಬಾಗಮಸ್ಯ ಬೋದ್ಧಾರೌ ಪ್ರಶಾಂತಶ್ಚ ದಧೀಚಕಃ ॥೫೩॥ ಪ್ರೋದ್ಗೀತತಂತ್ರಬೋದ್ಧಾರೌ ಶೂಲೀ ಕವಚನಾಮಕಃ। ಜ್ಞಾತಾರೌ ಲಲಿತಂ ತಂತ್ರಂ ಲಯಾಖ್ಯೋ ರುದ್ರಭೈರವಃ ॥೫೪॥ ಬೋದ್ಧಾರೌ ಸಿದ್ಧತಂತ್ರಸ್ಯ ವೀರಶ್ಚಂಡೀಶ್ವರಸ್ತಥಾ। ಸಂತಾನತಂತ್ರಬೋದ್ಧಾರೌ ಶಿವನಿಷ್ಠೋಂಶವಾಸನಃ ॥೫೫॥ ಸೋಮದೇ

ಅನಂತರ ರೌದ್ರಭೇದಗಳೆನಿಸಿದ ಹದಿನೆಂಟು ಆಗಮಗಳೊಳಗೆ-ವಿಜಯಾಗಮವನ್ನು;- ಮಹೇಶ್ವರನಿಂದ ಅನಾದಿಯು ಪಡೆದನು, ಅನಾದಿಯಿಂದ ಪರಮೇಶನು ಪಡೆದನು. ಆದಕಾರಣ ವಿಜಯಾಗಮಸಿದ್ಧರು ಈರ್ವರು. ‖ ನಿಶ್ವಾಸಾಗಮವನ್ನು ; ಮಹೇಶ್ವರನಿಂದ ದಶಾರ್ಣನೂ, ಅವನಿಂದ ಗಿರಿಜೆಯೂ ಪಡೆದರು. ಆದುದರಿಂದ ನಿಶ್ವಾಸಾಗಮಸಿದ್ಧರು ಈರ್ವರು. ॥೪೯॥ ಸ್ವಾಯಂಭುವಾಗಮವನ್ನು ;—ಮಹೇಶ್ವರನಿಂದ ನಿಧನನೂ, ನಿಧನನಿಂದ ಪದ್ಮೋದ್ಭೂತನೂ ಪಡೆದರು. ‖ ಅನಲಾಗಮವನ್ನು ;—ಮಹೇಶ್ವರನಿಂದ ವಾಮಾಖ್ಯನೂ, ಅವನಿಂದ ಅಗ್ನಿ ಸಂಜ್ಞಕನೂ ಪಡೆದರು. ॥೫೦॥ ವೀರಾಗಮವನ್ನು ;—ಮಹೇಶ್ವರನಿಂದ ಏಕಾಸ್ಯನೂ, ಅವನಿಂದ ಶೋಭನನೂ ಪಡೆದರು. ‖ ರೌರವಾಗಮವನ್ನು ;—ಮಹೇಶ್ವರನಿಂದ ನಂದಿಯೂ, ಅವನಿಂದ ಭೃಂಗಿರಿಟಿಯೂ ಪಡೆದರು. ॥೫೧॥ ಮಕುಟಾಗಮವನ್ನು ;—ಮಹೇಶ್ವರನಿಂದ ಶಿವಾಖ್ಯನೂ, ಅವನಿಂದ ಮಹಾದೇವನೂ ಪಡೆದರು. ‖ ವಿಮಲಾಗಮವನ್ನು ;—ಮಹೇಶ್ವರನಿಂದ ಸರ್ವಾತ್ಮದೇವನೂ, ಅವನಿಂದ ವೀರಭದ್ರನೂ ಪಡೆದರು. ॥೫೨॥ ಚಂದ್ರಜ್ಞಾನಾಗಮವನ್ನು ;—ಮಹೇಶ್ವರನಿಂದ ಅನಂತನೂ, ಅವನಿಂದ ಬೃಹಸ್ಪತಿಯೂ ಪಡೆದರು. । ಬಿಂಬಾಗಮವನ್ನು ;—ಮಹೇಶ್ವರನಿಂದ ಪ್ರಶಾಂತನೂ ಅವನಿಂದ ದಧೀಚಕನೂ ಪಡೆದರು. ॥೫೩॥ ಪ್ರೋದ್ಗೀತಾಗಮವನ್ನು ;—ಮಹೇಶ್ವರನಿಂದ ಶೂಲಿಯೂ, ಅವನಿಂದ ಕವಚನೂ ಪಡೆದರು. ‖ ಲಲಿತಾಗಮವನ್ನು ;—ಮಹೇಶ್ವರನಿಂದ ಲಯನೂ, ಲಯನಿಂದ ರುದ್ರಭೈರವನೂ ಪಡೆದರು. ॥೫೪॥ ಸಿದ್ಧಾಗಮವನ್ನು;—ಮಹೇಶ್ವರನಿಂದ ವೀರನೂ, ವೀರನಿಂದ ಚಂಡೀಶ್ವರನೂ ಪಡೆದರು. ‖ ಸಂತಾನಾಗಮವನ್ನು ;—ಮಹೇಶ್ವರನಿಂದ ಶಿವನಿಷ್ಠನೂ, ಅವನಿಂದ ಅಂಶವಾಸನನೂ ಪಡೆದರು. ॥೫೫॥

ರ್ಪೋ ನೃಸಿಂಹಶ್ಚ ಶರ್ವೋಕ್ತಂ ತಂತ್ರಮಾಶ್ರಿತೌ । ಶ್ರೀದೇವೀ ಪ್ರೋಷ್ಠನಃ ಪ್ರೋಕ್ತಂ ಜ್ಞಾತಾರೌ ಪಾರಮೇಶ್ವರಃ ॥೯೬॥ ದೇವಃ ಪಿಶಾಚಸಂವರ್ತೌ ಜ್ಞಾತಾರೌ ಕಿರಣಾಗಮಂ । ಶಿರಶ್ಚಾಥ ಮಹಾಕಾಳಃ ಜ್ಞಾತಾರೌ ವಾತುಳಾಗಮಂ ॥೯೭॥

ಅಷ್ಟಾವಿಂಶತಿತಂತ್ರಾಣಾಂ ಪೃಥಗ್ಭೇದೋ ನಿಗದ್ಯತೇ— “ಸಪ್ತಾರ್ಚಿರ್ಭರ್ಗತರ್ಷಣ್ಮುನಿಜಲನಿಧಿಭಿಃ ಸ್ಕಂದಶೀತಾಂಶುದಿಗ್ಭಿಃ ಸ್ತಿಗ್ಮಾರ್ಚಿಸ್ಸೋಮಭೋಗದ್ವಿರದಹುತವಹೈರ್ವ್ಯಗ್ನಿಕಾಮೈರ್ಗುಣೇಶೈಃ । ಪಕ್ಷ್ಮತ್ತ್ವಾಕ್ಷಂಕಲಾಭಿರ್ಮನುದಿನಸಕಳಾವಹ್ನಿವಾರ್ಧ್ಯೋಘಭಾತ-ಬಾಣೈರ್ಲೋಕೈಃ ಸ್ಸ್ವರಂಧ್ರೈಃ ಸ್ವಪನಸಗುಣಿತೈರ್ಮಾಗಮಾನಾಂ ವಿಭೇದಾಃ,—॥೯೮॥ ಉತ್ತರೋ ನಾರಸಿಂಹಶ್ಚ ಭೈರವೋತ್ತರ ಏವ ಚ । ಕಾಮಿಕಸ್ಯ ತ್ರಯೋ ಭೇದಾಃ ಕೀರ್ತಿತಾಸ್ತಂತ್ರಕೋವಿದೈಃ ॥೯೯॥ ವೀಣಾ ಶಿವೋತ್ತರಂ ತಂತ್ರಂ ಸೂತಸಂತಾನಸಾರಗೌ । ಆತ್ಮಯೋಗಮಿತಿ ಖ್ಯಾತಂ ಪಂಚಧಾ ಯೋಗಜಸ್ಯ ಚ ॥೧೦೦॥ ಪಾಪನಾಶಂ ಪರೋದ್ಭೂತಂ ಸುಚಿಂ

ಶರ್ವೋಕ್ತಾಗಮವನ್ನು:-ಮಹೇಶ್ವರನಿಂದ ಸೋಮದೇವನು, ಅವನಿಂದ ನೃಸಿಂಹನೂ ಪಡೆದನು. ಆದುದರಿಂದ ಬಾದೊಂವಾಗಮಕ್ಕೆ ಇಬ್ಬರು ಸಿದ್ಧಪುರುಷರು. ॥ ಪಾರಮೇಶ್ವರಾಗಮವನ್ನು;—ಮಹೇಶ್ವರನಿಂದ ಶ್ರೀದೇವಿಯೂ, ಶ್ರೀದೇವಿಯಿಂದ ಬೋಧನನೂ ಪಡೆದರು. ॥೯೬॥ ಕಿರಣಾಗಮವನ್ನು;-ಮಹೇಶ್ವರನಿಂದ ದೇವನೂ, ದೇವನಿಂದ ಪಿಶಾಚಸಂವರ್ತನನೂ ಪಡೆದರು ಆದುದರಿಂದ ಕಿರಣಾಗಮಸಿದ್ಧರು ಈರ್ವರು. ॥ ವಾತುಳಾಗಮವನ್ನು; ಮಹೇಶ್ವರನಿಂದ ಶಿರನೂ, ಶಿರನಿಂದ ಮಹಾಕಾಳನೂ ಪಡೆದರು. ಆದುದರಿಂದ ವಾತುಳಾಗಮಸಿದ್ಧರು ಈರ್ವರು. ಈರೀತಿಯಾಗಿ ರೌದ್ರಭೇದಗಳೆನಿಸಿದ ಹದಿನೆಂಟಾಗಮಗಳಿಗೆ ಮೂವತ್ತಾರುಜನ ಸಿದ್ಧಪುರುಷರೆಂದು ತಿಳಿಯುವದು. ॥೯೭॥

ಕಾಮಿಕಾಗಮವು ಮೊದಲಾದ ಇಪ್ಪತ್ತೆಂಟು ಶಿವಾಗಮಗಳು ಕ್ರಮವಾಗಿ ಸಂಜ್ಞಾಸಂಖ್ಯೆಯನ್ನನುಸರಿಸಿ—ಮೂರು, ಐದು, ಆರು, ಏಳು, ನಾಲತ್ತು, ಒಂಭತ್ತು, ಒಂದು, ಹತ್ತು, ಹನ್ನೆರಡು, ಒಂದು, ಎಂಟು, ಏಳು, ಮೂರು, ಎರಡು, ಹದಿಮೂರು, ಆರು, ಎರಡು, ಹದಿನಾರು, ಹದಿನಾಲ್ಕು, ಹದಿನೈದು, ಹದಿನಾರು, ಮೂರು, ನಾಲ್ಕು, ಏಳು, ಐದು, ಏಳು, ಒಂಭತ್ತು, ಹನ್ನೆರಡು ಭೇದಗಳುಳ್ಳವಾಗಿರುವುವು. ॥೯೮॥ ಆ ಆಗಮಗಳ ಕ್ರಮವಾದ ವಿವರವೆಂತೆಂದೊಡೆ;—ಕಾಮಿಕಾಗಮವು—ಉತ್ತರ, ನಾರಸಿಂಹ, ಭೈರವೋತ್ತರ, ಎಂಬ ಭೇದಗಳಿಂದ ಮೂರುಪ್ರಕಾರವೆಂದು ತಂತ್ರವಿಶಾರದರು ಹೇಳುವರು. ॥೯೯॥ ಯೋಗಜಾಗಮವು;—ವೀಣಾ, ಶಿವೋತ್ತರ, ಸೂತಸಾರಗ, ಸಂತಾನಸಾರಗ, ಆತ್ಮಯೋಗ, ಎಂದು ಐದುಭೇದಗಳುಳ್ಳವು. ॥೧೦೦॥ ಚಿಂತ್ಯಾಗಮವು;—ಪಾಪನಾಶ, ಪರೋದ್ಭೂತ,

ತ್ರ್ಯಂ ಸುಭಗಾಮೃತಂ । ವಾಮಾಖ್ಯಂ ಚೇತ್ಯತೋತಂತ್ರಸ್ಯ ಭೇದಾಸ್ಸನ್ತಿ ಷಟ್ ಸ್ಮೃತಾ ಬುಧೈಃ ॥೧೦೧॥ ಮಹೇಂದ್ರಂ ಪಾವಕಂ ದೈರ್ಘ್ಯಂ ಮಾರಣಂ ಭೀಮಸಂಹಿತಾ । ವಿದ್ವೇಷಂ ಕರಣಂ ಚೇತಿ ಸಪ್ತಧಾ ಕಾರಣಂ ಸ್ಮೃತಂ ॥೧೦೨॥ ಪ್ರಾವೃತೀಶಂ ಪರೋದ್ಭೂತಂ ಪ್ರಭೂತಂ ಪದ್ಮಸಂಹಿತಾ। ಅಜಿತಸ್ಯ ಚತುರ್ಭೇದಾಃ ಕೀರ್ತಿತಾಸ್ತಂತ್ರಪಾರಗೈಃ ॥೧೦೩॥ ಅಮೇಯಮಕ್ಷಯಂ ಚಾಬ್ಧಮಾನಂದಮಮಿತೌಜಸಂ। ಮಾಧವೋದ್ಭವಮುತ್ಪನ್ನಮಪ್ಯೇಚಾಸಂಖ್ಯಂ ಹಿ ತತ್ರೋದ್ಭುತಂ ॥೧೦೪॥ ದೀಪ್ತಸ್ಯ ನವಭೇದಾಸ್ಸ್ಯುಃ ಸೂಕ್ಷ್ಮಸ್ಯ ತ್ವೇಕಭೇದಕಂ । ಅತೀತಮಮಲಂ ಶುದ್ಧಮಪ್ರಮೇಯಂ ಸುಬೋಧಕಂ ॥೧೦೫॥ ಜಾತಿಭೇದಂ ಬೋಧತಂತ್ರಮಲಂಕಾರಃ ಪ್ರಬೋಧಕಂ। ಸಹಸ್ರಾಖ್ಯಸ್ಯ ತಂತ್ರಸ್ಯ ಭೇದಾಸ್ಸ್ಯುರ್ದಶಧಾ ತಥಾ ॥೧೦೬॥ ಕಾಶ್ಯಪಂ ವಾಸವಂ ಬಾರ್ಹಸ್ಪತ್ಯಂ ಗೌತಮಂ ನೀಲಲೋಹಿತಂ । ವಿದ್ಯಾಪುರಾಣಂ ವಾಸಿಷ್ಠಂ ಭೂತತಂತ್ರಂ ಮಹೇಂದ್ರಕಂ ॥೧೦೭॥ ಆತ್ಮಾಲಂಕಾರ ಮೀಶಾನೋತ್ತರಂ ಪ್ರಕರಣಂ ತ್ವಿತಿ । ದ್ವಾದಶಾಂಶುಮತೋಭೇದಾಸ್ಸುಪ್ರಭೇದಮಭೇದಕಂ ॥೧೦೮॥ ಮೃತ್ಯುನಾಶಂ ಭವಂ ಸೌಮ್ಯಂ ಕಾಚೇಶಂ ಪದ್ಮೋದ್ಭವಂ । ಅಘೋರಂ ಚ ಮಹಾಘೋರಂ ವಿ

ಸುಚಿಂತ್ಯ, ಸುಭಗ, ಅಮೃತ, ವಾಮಾಖ್ಯ ಎಂಬ ಭೇದಗಳಿಂದ ಆರು ಪ್ರಕಾರವಾಗಿರ್ಪುವೆಂದು ವಿದ್ವಾಂಸರು ಹೇಳುವರು ॥೧೦೧॥ ಕಾರಣಾಗಮವು;—ಮಹೇಂದ್ರ, ಪಾವಕ, ದೈರ್ಘ್ಯ, ಮಾರಣ, ಭೀಮಸಂಹಿತೆ, ವಿದ್ವೇಷ, ಕರಣ ಎಂದು ಏಳು ಭೇದಗಳಾಗಿರ್ಪುದು ॥೧೦೨॥ ಅಜಿತಾಗಮವು;—ಪ್ರಾವೃತೀಶ, ಪರೋದ್ಭೂತ, ಪ್ರಭೂತ, ಪದ್ಮಸಂಹಿತೆ ಎಂದು ನಾಲ್ಕು ಭೇದಗಳಾಗಿರ್ಪುದೆಂದು ತಂತ್ರವಿಶಾರದರು ಹೇಳುವರು ॥೧೦೩॥ ದೀಪ್ತಾಗಮವು;—ಅಮೇಯ, ಅಕ್ಷಯ, ಅಬ್ಧ, ಆನಂದ, ಅಮಿತೌಜಸ್ಸು, ಮಾಧವೋದ್ಭವ, ಮತ್ಸ್ಯ, ಅಸಂಖ್ಯ, ಅದ್ಭುತ ಎಂದು ಒಂಭತ್ತು ಪ್ರಕಾರವಾಗಿರ್ಪುದು ॥ ಸೂಕ್ಷ್ಮಾಗಮವು;—ಒಂದೇ ಭೇದವಾಗಿರ್ಪುದು ॥ ಸಹಸ್ರಾಗಮವು;—ಅತೀತ, ಅಮಲ, ಶುದ್ಧ, ಅಪ್ರಮೇಯ, ಸುಬೋಧಕ, ಜಾತಿ, ಭೇದ, ಬೋಧತಂತ್ರ, ಅಲಂಕಾರ, ಪ್ರಬೋಧಕ ಎಂದು ಹತ್ತು ಭೇದವಾಗಿರುವುದು ॥೧೦೬॥ ಅಂಶುಮದಾಗಮವು;—ಕಾಶ್ಯಪ, ವಾಸವ, ಬಾರ್ಹಸ್ಪತ್ಯ, ಗೌತಮ, ನೀಲಲೋಹಿತ, ವಿದ್ಯಾಪುರಾಣ, ವಾಸಿಷ್ಠ, ಭೂತತಂತ್ರ, ಮಹೇಂದ್ರಕ, ಆತ್ಮಾಲಂಕಾರ, ಈಶಾನೋತ್ತರ, ಪ್ರಕರಣ ಎಂದು ಹನ್ನೆರಡು ಭೇದವಾಗಿಹುದು ॥ ಸುಪ್ರಭೇದಾಗಮವು;—ಒಂದೇ ಭೇದವಾಗಿರ್ಪುದು ॥೧೦೮॥ ವಿಜಯಾಗಮವು;—ಮೃತ್ಯುನಾಶ, ಭವ, ಸೌಮ್ಯ, ಕಾಜೇಶ, ಪದ್ಮೋದ್ಭವ, ಅಘೋರ,

ಮಲಂ ವಿಜಯೋಷ್ಟಧಾ ॥೧೦೯॥ ನಿಶ್ವಾಸಂ ಘೋರನಿಶ್ವಾಸಂ ನಿಶ್ವಾಸನಯನಂ ಸುಧಾ। ನಿಶ್ವಾಸೋತ್ತರಕೋಲೇ ಚ ನಿಶ್ವಾಸವದನೋದಯಂ ॥೧೧೦॥ ನಿಶ್ವಾಸಕಾರಿಕಾಭೇದೋ ನಿಶ್ವಾಸಸ್ಯಾಷ್ಟಭೇದಕಾಃ । ಪ್ರಜಾಪತಿಮತಂ ಪದ್ಮಂ ಸ್ವಾಯಂಭುವ ಮಿತಿತ್ರಿಧಾ ॥೧೧೧॥ ಆಗ್ನೇಯಂ ವ್ಯೋಮಸಂಜ್ಞಂ ಚ ದ್ವಿಧಾ ಚಾಗ್ನೇಯ ಮಾಸ್ಥಿತಂ । ಪ್ರಸ್ತರಂ ಪುಲ್ಲನಯನಂ ಪ್ರಬೋಧಂ ಬೋಧಬೋಧಕಂ ॥೧೧೨॥ ಅಮೋಹಂ ಮೋಹಸಮಯಂ ಶಕಟಂ ಶಾಕಟಾಯಕಂ । ವಿಲೇಖನಂ ಚ ವಿಮಲಂ ಹಲಂ ಭದ್ರಂ ಚ ವೀರಕಂ ॥೧೧೩॥ ಭೇದಾಸ್ಸ್ಯುರ್ವೀರತಂತ್ರಸ್ಯ ಕೀರ್ತಿತಾಸ್ತು ತ್ರಯೋದಶ। ಕಾಲಾಖ್ಯಂ ಕಾಲದಹನಂ ರೌರವಂ ರೌರವೋತ್ತರಂ ॥೧೧೪॥ ಮಹಾಕಾಲಮತ್ರಾಚಿಂತ ಷಡ್ಭೇದಾ ರೌರವಸ್ಯ ಚ । ಮಕುಟಸ್ಯ ದ್ವಿಧಾಭೇದೋ ಮಕುಟಂ ಮಕುಟೋತ್ತರಂ ॥೧೧೫॥ ಅಲಂಕೃತಂ ಭೀಮರೌದ್ರ ಅಟ್ಟಹಾಸಂ ವೃಷೋದರಂ। ಆರೇವತ ಮತಿಕ್ರಾಂತಂ ವೃಷಲಿಂಗಂ ಸುಭದ್ರಕಂ॥೧೧೬॥ ಆಕ್ರಾಂತ ಮರ್ಚಿತಂ ಭೋಗ ಮನಂತಾಖ್ಯಂ ಚ ಮಾರಣಂ । ವೃಷಗುಹ್ಯಂ ಸುದತ್ತಂ ಚ ವಿಮಲಸ್ಯ ತು ಷೋಡಶ ॥೧೧೭॥ ಏಕಪಾದಪುರಾಣಂ ಚ ಸ್ಥಾಣ್ವಾಖ್ಯಂ ನಂದಿಕೇಶ್ವರಃ। ಶ್ರೀಮುಖಂ ಶಂಕರಪ್ರೋಕ್ತಂ ವಾ

ಮಹಾಘೋರ, ವಿಮಲ ಎಂಬ ಎಂಟು ಭೇದವು ॥೧೦೯॥ ನಿಶ್ವಾಸಾಗಮವು ;—ನಿಶ್ವಾಸ, ಘೋರನಿಶ್ವಾಸ, ನಿಶ್ವಾಸನಯನ, ಸುಧೆ, ನಿಶ್ವಾಸೋತ್ತರ, ನಿಶ್ವಾಸಕೋಲ, ನಿಶ್ವಾಸವದನೋದಯ, ನಿಶ್ವಾಸಕಾರಿಕೆ ಎಂದು ಎಂಟು ಭೇದಗಳು ॥ ಸ್ವಾಯಂಭುವಾಗಮವು ;—ಪ್ರಜಾಪತಿಮತ, ಪದ್ಮ, ಸ್ವಾಯಂಭುವ, ಎಂಬ ಮೂರುಭೇದಗಳು. ॥೧೧೧॥ ಅನಲಾಗಮವು ;—ಆಗ್ನೇಯಸಂಜ್ಞೆ, ವ್ಯೋಮಸಂಜ್ಞೆ, ಎಂದು ಎರಡು ಪ್ರಕಾರವು. ॥ ವೀರಾಗಮವು ;—ಪ್ರಸ್ತರ, ಪುಲ್ಲನಯನ, ಪ್ರಬೋಧ, ಬೋಧಬೋಧಕ, ಅಮೋಹ, ಮೋಹಸಮಯ, ಶಕಟ, ಶಾಕಟಾಯ, ವಿಲೇಖನ, ವಿಮಲ, ಹಲ, ಭದ್ರ, ವೀರಕ, ಎಂದು ಹದಿಮೂರು ಭೇದಗಳಾಗಿರುವುದು. ॥ ರೌರವಾಗಮವು ;—ಕಾಲಾಖ್ಯ, ಕಾಲದಹನ, ರೌರವ, ರೌರವೋತ್ತರ, ಮಹಾಕಾಲಮತ, ಅಚಿಂತ, ಎಂದು ಆರುಪ್ರಕಾರವಾಗಿಹುದು. ॥ ಮಕುಟಾಗಮವು ;—ಮಕುಟ, ಮಕುಟೋತ್ತರ, ಎಂದು ಎರಡು ಭೇದಗಳು. ॥೧೧೫॥ ವಿಮಲಾಗಮವು ;—ಅಲಂಕೃತ, ಭೀಮ, ರೌದ್ರ, ಅಟ್ಟಹಾಸ, ವೃಷೋದರ, ಆರೇವತ, ವೃಷಲಿಂಗ, ಸುಭದ್ರಕ, ಆಕ್ರಾಂತ, ಅರ್ಚಿತ, ಭೋಗ, ಅನಂತ, ಮಾರಣ, ವೃಷಗುಹ್ಯ, ಸುದತ್ತ, ಎಂದು ಹದಿನಾರು ಭೇದವಾಗಿರುವುದು. ॥೧೧೭॥ ಚಂದ್ರಜ್ಞಾನಾಗಮವು ; ಏಕಪಾದಪುರಾಣ, ಸ್ಥಾಣು, ನಂದಿಕೇಶ್ವರ, ಶ್ರೀಮುಖ, ಶಂಕರಪ್ರೋಕ್ತ, ವಾಯುವ್ಯ, ಶಿವಶಾ

ಯವ್ಯಂ ಶಿವಶಾಸನಂ ॥೧೧॥ ಶಿವಭದ್ರಂ ಕಲ್ಪಭೇದಂವಾರಣಂಶಿವ ಶೇಖರಂ । ದೇವೀವುತಂ ಸ್ಥಿರಂ ವ್ಯಾಪ್ತಂ ಚಂದ್ರಜ್ಞಾನೆ ಚತುರ್ದಶ॥ ॥೧೯॥ ಅರ್ಧಾಲಂಕಾರ ಮೈಶಾನಂ ಪ್ರತಿಬಿಂಬ ಮಯೋಗಜಂ । ಕೌಟಕಂ ಕಟನೀರಂಚ ಕುಟ್ಟಮಂ ಪಟ್ಟಶೇಖರಂ॥೨೦॥ ಮಹಾವಿದ್ಯಾ ಮಹಾಸಾರಂ ತುಲಾಪ್ರತ್ಯಯನೈರುತೆ । ಚತುರ್ಮುಖ ಸ್ತುಲಾಕೋಟ ಸಂಸ್ತೋಭ ಮಿತಿಕೀರ್ತಿತಾಃ॥೨೧॥ಮುಖಬಿಂಬಸ್ಯತಂತ್ರಸ್ಯ ಭೇದಾಃ ಪಂಚದಶ ಕ್ರಮಾತ್।ಶೈವಜ್ಞಾನಂಚ ಕವಚಂ ವಾರಾಹಂ ಪಿಂಗಲಾಮ ತಂ॥೨೨॥ಕಾಲಜ್ಞಾನಂ ಧನುರ್ವೇದಮಾಯುರ್ವೇದಂ ಧನುರ್ಧರಂ । ವಿ ಜ್ಞಾನಮಂಕುಶಂಗೀತ ಮಾತೋದ್ಯಂ ಭರತಂತಥಾ॥೨೩॥ಪಾಶಬಂಧಂ ದಂಡಧರಂ ಸಪ್ತದಂಷ್ಟ್ರ ಮಿತಿಕ್ರಮಾತ್। ಪ್ರೋದ್ಗೀತನಾಮತಂತ್ರಸ್ಯ ಭೇದಾಷ್ಷೋಡಶಕೀರ್ತಿತಾಃ॥೨೪॥ಲೀಲೋತ್ತರಂಚ ಲಲಿತಂ ಕೋಮ ಲಂ ಲಲಿತಸ್ಯಚ।ಶಾಲಾಮೌಸಲಸಂಸಾರಸಂಗ್ರಹಂ ಶಶಿಮಂಡಲಂ॥೨೫॥ ಭೇದಾ ಸ್ಸಿದ್ಧಾಖ್ಯತಂತ್ರಸ್ಯ ಚತುರ್ಧಾ ಕೀರ್ತಿತಾಬುಧೈಃ। ಅಮರೇಶಂ ಸುರಾಧ್ಯಕ್ಷಂ ಲಿಂಗಾಧ್ಯಕ್ಷ ಮಸಂಖ್ಯಕಂ ॥೨೬॥ ಅನಿಲಂ ಶಾಂಕರಂ ದ್ವಂದ್ವಂ ಸಂತಾನೆ ಸಪ್ತಧಾ ಮತಾಃ । ಈಶಾನಂ ಶಿವಧರ್ಮಂಚ ಶಿವ

ಸನ, ಶಿವಭದ್ರ, ಕಲ್ಪಭೇದ, ವಾರಣ, ಶಿವಶೇಖರ, ದೇವೀಮತ, ಸ್ಥಿರ, ವ್ಯಾಪ್ತ, ಎಂದು ಹದಿನಾಲ್ಕು ಭೇದವಾಗಿರುವುದು ॥೧೯॥ ಬಿಂಬಾಗಮವು,—ಅರ್ಧಾಲಂಕಾರ, ಐಶಾನ, ಪ್ರತಿ ಬಿಂಬ, ಅಯೋಗಜ, ಕೌಟಕ, ಕಟನೀರ, ಕುಟ್ಟಮ, ಪಟ್ಟಶೇಖರ, ಮಹಾವಿದ್ಯೆ, ಮಹಾಸಾರ, ತುಲಾಪ್ರತ್ಯಯ, ನೈರುತ, ಚತುರ್ಮುಖ, ತುಲಾಕೋಟ ಸಂಸ್ತೋಭ,—ಎಂಬದಾಗಿ ಹದಿನೈದು ಭೇದವಾಗಿರುವುದು. ಪ್ರೋದ್ಗೀತಾಗಮವು;— ಶೈವಜ್ಞಾನ, ಕವಚ, ವಾರಾಹ, ಪಿಂಗಲ, ಕಾಲಜ್ಞಾನ, ಧನುರ್ವೇದ, ಆಯುರ್ವೇದ, ಧನುರ್ಧರ, ವಿಜ್ಞಾನ, ಅಂಕುಶ, ಗೀತ, ಆತೋದ್ಯ, ಭರತ, ಪಾಶಬಂಧ, ದಂಡಧರ, ಸಪ್ತದಂಷ್ಟ್ರ—ಎಂಬದಾಗಿ ಹದಿನಾರು ಭೇದವಾಗಿರುವುದು. ॥೨೪॥ ಲಲಿತಾಗಮ ವು;—ಲೀಲೋತ್ತರ, ಲಲಿತ, ಕೋಮಲ, ಎಂಬದಾಗಿ ಮೂರು ಭೇದವಾಗಿರುವುದು॥ ಸಿದ್ಧಾಗಮವು,—ಶಾಲಾಸಂಗ್ರಹ, ಮೌಸಲಸಂಗ್ರಹ, ಸಂಸಾರ ಸಂಗ್ರಹ, ಶಶಿಮಂಡಲ- ಎಂಬದಾಗಿ ನಾಲ್ಕು ಭೇದವಾಗಿರುವುದು ॥ ಸಂತಾನಾಗಮವು,—ಅಮರೇಶ,ಸುರಾಧ್ಯ ಕ್ಷ, ಲಿಂಗಾಧ್ಯಕ್ಷ, ಅಸಂಖ್ಯಕ, ಅನಿಲ, ಶಾಂಕರ, ದ್ವಂದ್ವ—ಎಂಬದಾಗಿ ಏಳು ಭೇ ದವಾಗಿರುವುದು ॥ ಶರ್ವೋಕ್ತಾಗಮವು,—ಈಶಾನ, ಶಿವಧರ್ಮ, ಶಿವಧರ್ಮೋತ್ತರ,

ಥವರ್ಮೋತ್ತರಂ ತಥಾ ॥೧೨॥ ದೇವಪ್ರಣೀತಂ ಸೌಮ್ಯಂಚ ಶರ್ವೋ ಕ್ತೌ ಪಂಚಧಾ ಸ್ಮೃತಾಃ । ಸಾಮಾನ್ಯಂ ಸಾಕ್ಷಿಣಂ ಹಂಸಂ ಮತಂಗಂ ಸುಪ್ರಯೋಗಕಂ ॥೧೬॥ ಪದ್ಮಾಖ್ಯಂ ಪೌಷ್ಕರಂ ಭೇದಾ ಸ್ಸಪ್ತಥಾ ಪಾರಮೇಶ್ವರೆ । ವಿಶ್ವಾತ್ಮಕಂ ಶಿವದ್ವಂದ್ವಂ ಕಾಲಜ್ಞಾನಂ ಮಹಾಮು ಖಂ ॥೧೯॥ ಶರ್ವಂ ಸರ್ವಾತ್ಮಕಂ ಶುದ್ಧಂ ಶ್ರೇಷ್ಠಂ ರುದ್ರಂ ಪ್ರರೋ ಹಿತಂ। ವಾತುಳೊತ್ತರ ಮಿತ್ಯೇತೆ ವಾತುಳೆದ್ವಾದಶಸ್ಮೃತಾಃ ॥೩೦॥ ಇ ತ್ಯೇತಾ ಸ್ಸಂಹಿತಾ ಸ್ಸರ್ವಾ ಅಷ್ಟಾಧಿಕಶತದ್ವಯಂ । ಶೈವಾನಾ ಮಷ್ಟ ಪಂಚಾಶ ದ್ರೌದ್ರಾಣಾಮಿತಿ ಭೇದಕಾಃ॥೩೧॥ ರೌದ್ರಾಷ್ಟಾದಶಭೇದಾ ನಾಂ ಶತಂ ಸಾರ್ಧ ಮುದಾಹೃತಂ ॥

—ಅಥ ಆಗಮಷಡ್ದರ್ಶನಾನಿ—

ವೈನಾಯಕಂ ತಥಾಶಾಕ್ತಂ ಕಾಪಾಲಂ ಸೌರಮೇವಚ ॥೩೨॥ ವೈಷ್ಣವಂಚಾಥ ಶೈವಂಚ ಷಡ್ದರ್ಶನ ಮಿತೀರಿತಂ । ಪಾದಂ ವೈನಾಯ ಕಂ ವಿಂದ್ಯಾತ್ಕಟಿಂ ಶಾಕ್ತಂ ವಿದುರ್ಬುಧಾಃ ॥೩೩॥ ಕಾಪಾಲಂ ಜ

ದೇವೀಪ್ರಣೀತ, ಸೌಮ್ಯ—ಎಂಬದಾಗಿ ಐದು ಭೇದವಾಗಿರುವುದು ॥ ಪಾರಮೇಶ್ವರಾ ಗಮವು,—ಸಾಮಾನ್ಯ, ಸಾಕ್ಷಿ, ಹಂಸ, ಮತಂಗ, ಸುಪ್ರಯೋಗಕ, ಪದ್ಮ, ಪೌ ಷ್ಕರ—ಎಂಬದಾಗಿ ಏಳು ಭೇದವಾಗಿರುವುದು. ॥ ಕಿರಣಾಗಮವು,—ಒಂಬತ್ತು ಭೇದ ವಾಗಿರುವುದು ॥ ವಾತುಳಾಗಮವು,—ವಿಶ್ವಾತ್ಮಕ, ಶಿವ, ದ್ವಂದ್ವ, ಕಾಲಜ್ಞಾನ, ಮ ಹಾಮುಖ, ಶರ್ವ, ಸರ್ವಾತ್ಮಕ, ಶುದ್ಧ, ಶ್ರೇಷ್ಠ, ರುದ್ರ, ಪ್ರರೋಹಿತ, ವಾತುಳೋ ತ್ತರ—ಎಂಬದಾಗಿ ಹನ್ನೆರಡು ಭೇದವಾಗಿರುವುದು. ॥೩೦॥ ಈರೀತಿಯಾಗಿ ಇಪ್ಪ ತ್ತೆಂಟಾಗಮಗಳೆಲ್ಲ ಎರಡುನೂರ ಎಂಟು ಭೇದವಾಗಿರುವುದು. ಇವುಗಳೊಳಗೆ ಶೈವ ಭೇದಗಳೆನಿಸಿದ ಹತ್ತಾಗಮಗಳು ಐವತ್ತೆಂಟು ಭೇದಗಳಾಗಿರುವುವು. ರೌದ್ರಭೇದಗ ಳೆನಿಸಿದ ಹದಿನೆಂಟಾಗಮಗಳು ಒಂದುನೂರ ಐವತ್ತು ಭೇದಗಳಾಗಿರುವುವು.

— ತಾಂತ್ರಿಕಷಡ್ದರ್ಶನಗಳು —

ಅನಂತರ,—ವೈದಿಕಾಗಮಗಳೆನಿಸಿದ ಕಾಮಿಕಾದಿವಾತುಳಾಂತವಾದ ಇಪ್ಪ ತ್ತೆಂಟು ಆಗಮಗಳ ದೆಸೆಯಿಂದ—ವೈನಾಯಕ ದರ್ಶನ, ಶಾಕ್ತದರ್ಶನ, ಕಾಪಾಲದ ರ್ಶನ, ಸೌರದರ್ಶನ, ವೈಷ್ಣವದರ್ಶನ, ಶೈವದರ್ಶನಗಳೆಂಬದಾಗಿ ಷಡ್ದರ್ಶನಗಳು (ಆರುಶಾಸ್ತ್ರಗಳು) ಹುಟ್ಟಿದುವು. ಮತ್ತೂ ಪರಶಿವನು ಪಾರ್ವತಿಗೆ ಹೇಳುತ್ತಾನೆ ಎಲೌ ಪಾರ್ವತಿಯೇ ಕೇಳು:-ಈ ಆರು ಶಾಸ್ತ್ರಗಳೊಳಗೆ ವಿನಾಯಕಶಾಸ್ತ್ರವೇ ಸಣ್ಣ

ಠರಂ ಪ್ರೋಕ್ತಂ ವಕ್ಷಸ್ಸ್ಥಾನಂತು ಸೌರಕಂ। ಸ್ಕಂಧೌ ತಥಾವೈಷ್ಣವಂ ತು ತಥಾ ಶೈವಂಶಿರಸ್ಸ್ಮೃತಂ॥೧೪೪॥ ಷಡ್ದರ್ಶನಂ ಮಮಾಂಗಾನಾಂ ಷಟ್ಸ್ಥಾನಂ ಪರಿಕೀರ್ತಿತಂ । ಗಚ್ಛೇದನ್ಯತ್ತು ದೂಷ್ಯಂಹಿ ಮಮಾಂಗಂ ಸರ್ವಪಾವನಂ ॥೧೪೫॥ ದೂಷಣಚ್ಛೇದನೇ ದೇವಿ ಮಮಾಂಗಸ್ಯ ಸತಾವೃತಃ। ಆತತಾಯಿಸನೋಲೋಕೇ ಮದ್ಭಕ್ತೋಪಿ ನಶೈವವಿತ್ ॥೧೪೬॥

—ಅಥ ವೈದಿಕಾಗಮಾನಾಂಗ್ರಂಥಸಂಖ್ಯಾ—

ಗ್ರಂಥಸಂಖ್ಯಾ ಮಾಗಮಾನಾಂ ವೈದಿಕಾನಾಂತು ವರ್ಣ್ಯತೆ ॥

ಪಾದವು. ಶಾಕ್ತಶಾಸ್ತ್ರವೇ ನನ್ನ ಕಟಿಯು (ನಡುವು). ಕಾಪಾಲಶಾಸ್ತ್ರವೇ ನನ್ನ ಜಠರವು (ಹೊಟ್ಟೆಯು.) ಸೌರಶಾಸ್ತ್ರವೇ ನನ್ನ ವಕ್ಷಸ್ಥಾನವು (ಎದೆಯು.) ವೈಷ್ಣವ ಶಾಸ್ತ್ರವೇ ನನ್ನ ಭುಜಗಳು. ಶೈವಶಾಸ್ತ್ರವೇ ನನ್ನ ಶಿರಸ್ಸು ಆಗಿರುವುದರಿಂದ ನನ್ನ ಆರಂಗಸ್ಥಾನಗಳಾದ ಆ ಆರು ಶಾಸ್ತ್ರಗಳೂ ಕೂಡ ಎಲ್ಲಾ ಶಾಸ್ತ್ರಗಳಿಗಿಂತಲೂ ಅತ್ಯುತ್ತಮಗಳಾದ ಶಾಸ್ತ್ರಗಳು. ಮತ್ತೂ ಈ ಆರುಶಾಸ್ತ್ರಗಳೊಳಗೆ—ಪಾದವಾದ ವೈನಾಯಕ ಶಾಸ್ತ್ರಕ್ಕಿಂತಲೂ ಕಟಿಯಾದ ಶಾಕ್ತಶಾಸ್ತ್ರವು ಶ್ರೇಷ್ಠವು. ಆಕಟಿಯಾದ ಶಾಕ್ತಶಾಸ್ತ್ರಕ್ಕಿಂತಲೂ ಜಠರವಾದ ಕಾಪಾಲಶಾಸ್ತ್ರವು ಶ್ರೇಷ್ಠವು. ಆ ಜಠರವಾದ ಕಾಪಾಲಶಾಸ್ತ್ರಕ್ಕಿಂತಲೂ ವಕ್ಷಸ್ಥಾನವಾದ ಸೌರಶಾಸ್ತ್ರವು ಶ್ರೇಷ್ಠವು. ಆ ವಕ್ಷಸ್ಥಾನವಾದ ಸೌರಶಾಸ್ತ್ರಕ್ಕಿಂತಲೂ ಸ್ಕಂಧಗಳಾದ ವೈಷ್ಣವಶಾಸ್ತ್ರವುಶ್ರೇಷ್ಠವು. ಆ ಸ್ಕಂಧಗಳಾದ ವೈಷ್ಣವ ಶಾಸ್ತ್ರಕ್ಕಿಂತಲೂ ಶಿರಸ್ಸಾದ ಶೈವಶಾಸ್ತ್ರವು ಶ್ರೇಷ್ಠವು. ಆದುದರಿಂದಲೇ ಈ ಶೈವಶಾಸ್ತ್ರವು ಎಲ್ಲಾ ವಿದ್ಯೆಗಳೊಳಗೂ ಅತ್ಯುತ್ತಮೋತ್ತಮವಾಗಿರುವುದು. ಮತ್ತೂ ಎಲೌ ಪಾರ್ವತಿಯೇ! ಕೇಳು—ಲೋಕದಲ್ಲಿ ಯಾವನು ನನ್ನ ಅಂಗಸ್ಥಾನಗಳಾದ ಈ ಆರು ದರ್ಶನಗಳನ್ನು ದೂಷಣೆಮಾಡಿ ಖಂಡಿಸುತ್ತಾನೋ ಅವನು, ತನ್ನ ವಂಶವನ್ನು ತಾನೇ ನಾಶಮಾಡುವುದಕ್ಕೆ ಉದ್ಯೋಗಿಸಿದವನಿಗೆ ಸಮಾನನಾಗುತ್ತಾನೆ. ಮತ್ತೂ ನನ್ನ ಭಕ್ತನಾಗಿದ್ದರೂ ಕೂಡ ಅವನು ನನ್ನ ಭಕ್ತನಲ್ಲ. ಮತ್ತೂ ಅವನು ಶೈವಶಾಸ್ತ್ರವನ್ನು ತಿಳಿದಿದ್ದರೂ ಕೂಡ ಅವನು ಶೈವಶಾಸ್ತ್ರವನ್ನು ತಿಳಿಯದವನೇ ಆಗುತ್ತಾನೆ. ಎಂದು ಪರಶಿವನು ಹೇಳಿದನೆಂದು ಮಾನಪ್ಪವಿದ್ವಾಂಸನು ಲಿಂಗಪ್ಪ ಮಂತ್ರಿಗೆ ಹೇಳಿದನು. ॥೧೪೬॥

— ಅನಂತರ ವೈದಿಕಾಗಮಗಳ ಗ್ರಂಥಸಂಖ್ಯೆಯು —

ಎಲೈ ಲಿಂಗಪ್ಪ ಮಂತ್ರಿಯೇ! ವೈದಿಕಗಳಾದ ಆಗಮಗಳ ಗ್ರಂಥಸಂಖ್ಯೆಯನ್ನು ಕ್ರಮವಾಗಿ ವಿವರಿಸಿ ಹೇಳುತ್ತೇನೆ ಕೇಳು,—ಕಾಮಿಕಾಗಮವು-ಪರಾರ್ಧಸಂಖ್ಯೆಯು

ಪರಾರ್ಧ ಲಕ್ಷೋಪಿಚ ಲಕ್ಷಕೋಟಿ ತತೋಽಯುತಂ ವೈ ನಿಯುತಂಚ ಪದ್ಮಂ। ಶಂಖೇಷುಲಕ್ಷೇಽನಲಕೋಟಿಯುಗ್ಮೇ ಕೋಟಿ ಸ್ವಹಾರ್ಧೇನತು ಕೋಟಿರೇಕಾ॥೧೪೪॥ ನಾಡೀಸಹಸ್ರಂ ನಿಯುತಾರ್ಬುದೇಽಥೋ ಕೋಟಿ ತ್ರಿಲಕ್ಷಾನಲಕೋಟಿಯಕ್ಷ್ಯ । ಸಹಸ್ರಲಕ್ಷ ತ್ರಿತಯೇ ತಥಾಚ ಸಹಸ್ರಮರ್ಧೇನಚ ಕೋಟಿರೇಕಾ ॥೧೪೫॥ ಸಹಸ್ರಷಟ್ಕಂಚ ತಥೋಪಿ ಲಕ್ಷಂ ಚಂಡಾಂಶುಲಕ್ಷಂ ಶತಕೋಟಿ ಲಕ್ಷಂ । ದಿವ್ಯಾಗಮಾನಾಂ ಶಿವರುದ್ರಕಾನಾಂ ಗ್ರಂಥಸ್ಯ ಸಂಖ್ಯಾ ಗದಿತಾ ಕ್ರಮೇಣ ॥೧೪೦॥

ಪರಾರ್ಧಶಂಖಂ ಕಮಲಾರ್ಬುದೇಽಥೋ ವ್ಯೋಮಾರ್ಕಕೋಟಿ

ಗ್ರಂಥವುಳ್ಳುದು. ಯೋಗಜಾಗಮವು—ಒಂದುಲಕ್ಷ ಗ್ರಂಥವುಳ್ಳುದು. ಚಿಂತ್ಯಾಗಮವು—ಒಂದು ಲಕ್ಷಗ್ರಂಥವುಳ್ಳದ್ದು. ಕಾರಣಾಗಮವು—ಒಂದುಕೋಟಿ ಗ್ರಂಥವಾಗಿರುವುದು. ಅಜಿತಾಗಮವು—ಹತ್ತುಸಾವಿರ ಗ್ರಂಥವುಳ್ಳುದು. ದೀಪ್ತಾಗಮವು—ಎಂಭತ್ತುಸಾವಿರ ಗ್ರಂಥವುಳ್ಳುದು. ಸೂಕ್ಷ್ಮಾಗಮವು—ಒಂದು ಪದ್ಮ ಗ್ರಂಥವಾಗಿರುವುದು. ಸಹಸ್ರಾಗಮವು—ಒಂದುಶಂಖ ಗ್ರಂಥವುಳ್ಳುದು. ಅಂಶುಮದಾಗಮವು—ಐದುಲಕ್ಷ ಗ್ರಂಥವಿರುವುದು. ಸುಪ್ರಭೇದಾಗಮವು—ಆರುಕೋಟಿ ಗ್ರಂಥವುಳ್ಳುದು. ವಿಜಯಾಗಮವು—ಒಂದುವರೆಕೋಟಿ ಗ್ರಂಥವುಳ್ಳುದು. ನಿಶ್ವಾಸಾಗಮವು—ಒಂದು ಕೋಟಿ ಗ್ರಂಥವುಳ್ಳುದು. ಸ್ವಾಯಂಭುವಾಗಮವು—ಮೂರುಸಾವಿರ ಗ್ರಂಥವುಳ್ಳುದು. ಅನಲಾಗಮವು—ಎಂಭತ್ತುಸಾವಿರ ಗ್ರಂಥವುಳ್ಳುದು. ವೀರಾಗಮವು—ಒಂದರ್ಬುದ ಗ್ರಂಥವುಳ್ಳುದು. ರೌರವಾಗಮವು—ಒಂದು ಕೋಟಿ ಗ್ರಂಥವುಳ್ಳುದು. ಮಕುಟಾಗಮವು—ಮೂರುಲಕ್ಷ ಗ್ರಂಥವುಳ್ಳುದು. ವಿಮಲಾಗಮವು—ಮೂರು ಕೋಟಿ ಗ್ರಂಥವುಳ್ಳುದು. ಚಂದ್ರಜ್ಞಾನಾಗಮವು—ಒಂದುಸಾವಿರ ಗ್ರಂಥವುಳ್ಳುದು. ಬಿಂಬಾಗಮವು—ಮೂರುಲಕ್ಷ ಗ್ರಂಥವಿರುವುದು. ಪ್ರೋದ್ಗೀತಾಗಮವು—ಒಂದುವರೆಸಾವಿರ ಗ್ರಂಥವುಳ್ಳುದು. ಲಲಿತಾಗಮವು—ಒಂದುಕೋಟಿ ಗ್ರಂಥವುಳ್ಳುದು. ಸಿದ್ಧಾಗಮವು—ಆರುಸಾವಿರ ಗ್ರಂಥವುಳ್ಳುದು. ಸಂತಾನಾಗಮವು—ಆರುಸಹಸ್ರ ಗ್ರಂಥವುಳ್ಳುದು. ಶರ್ವೋಕ್ತಾಗಮವು—ಒಂದು ಲಕ್ಷ ಗ್ರಂಥವುಳ್ಳುದು. ಪಾರಮೇಶ್ವರಾಗಮವು—ಹನ್ನೆರಡುಲಕ್ಷ ಗ್ರಂಥವುಳ್ಳುದು. ಕಿರಣಾಗಮವು—ಒಂದುಶತಕೋಟಿ ಗ್ರಂಥವಿರುವುದು. ವಾತುಳಾಗಮವು—ಒಂದುಲಕ್ಷಗ್ರಂಥವುಳ್ಳುದು. ॥೧೪೫॥

ಮತ್ತೂ, ಈ ಇಪ್ಪತ್ತೆಂಟು ವೈದಿಕಾಗಮಗಳ ಒಟ್ಟು ಗ್ರಂಥಸಂಖ್ಯೆಯು—ಒಂದುಪರಾರ್ಧವೂ, ಒಂದುಶಂಖವೂ, ಒಂದುಪದ್ಮವೂ, ಒಂದರ್ಬುದವೂ, ನೂರಹ

ಗ್ಗಜಸಿಂಧುಲಕ್ಷಂ।ಭೂತಾಗ್ನಿಸಾಹಸ್ರಮಿತೀರಿತಾಥ ಗ್ರಂಥಸ್ಯಸಂಖ್ಯಾ ಗದಿತಾ ಕ್ರಮೇಣ ॥೧೪೧॥

ಏಕದಶಶತಸಹಸ್ರಾಯುತಲಕ್ಷಪ್ರಯುತಕೋಟಯಃ ಕ್ರಮಶಃ । ಅರ್ಬುದನಿರ್ಬುದಖರ್ವ ನಿಖರ್ವಮಹಾಪದ್ಮಶಂಖವಸ್ತಸ್ಮಾತ್॥೧೪೨॥ ಜಲಧಿ ಶ್ಚಾಂತ್ಯಂ ಮಧ್ಯಂ ಪರಾರ್ಧಮಿತಿ ದಶಗುಣೋತ್ತರಂ ಸಂಜ್ಞಾಃ ಸಂಖ್ಯಾಯಾ ಸ್ಸ್ಥಾನಾನಾಂ ವ್ಯವಹಾರಾರ್ಥಂ ಕೃತಾಃ ಪೂರ್ವೈಃ॥೧೪೩॥

—ಅಥ ಅವೈದಿಕತಂತ್ರಾಣಿ—

ಅಥಾವೈದಿಕತಂತ್ರಾಣಿ ಭೂರಿಶ ಸ್ಸಂತಿ ಭೂತಳೆ । ಮಹಾಮಾಯಾಶಂಬರಂಚ ಯೋಗಿನೀ ಜಾಲಶಂಬರಂ ॥೧೪೪॥ ತತ್ವಶಂಬರಕಂಚೈವ ಭೈರವಾಷ್ಟಕಮೇವಚ । ಚಂದ್ರಜ್ಞಾನಂ ವಾಸುಕಂಚ ಮಹಾಸಮ್ಮೋಹನಂ ತಥಾ ॥೧೪೫॥ ಮಹೋಯಷ್ಕಂ ಮಹಾದೇವ ವಾತುಳಂ ವಾತುಳೋತ್ತರಂ । ಹೃದ್ಭೇದ ಮಾತ್ಮಭೇದಂಚ ಗುಹ್ಯತಂತ್ರಂಚ ಕಾಮಿಕಂ ॥೧೪೬॥ ಕಾಲಸೋಮಕಲಾಸಾರಂ ತಥಾನ್ಯಾಕುಬ್ಜಿಕಾ ಮತಾ ।

ನ್ನೆರಡುಕೋಟಿಯೂ, ಎಂಭತ್ತೇಳು ಲಕ್ಷವೂ, ಐವತ್ತುಮೂರುಸಾವಿರ ಗ್ರಂಥವಾಗಿರುವುದು.

— ಸಂಖ್ಯೆಯ ಪರಿಗಣನೆಯು —

ಏಕ, ದಶ, ಶತ, ಸಾವಿರ, ದಶಸಾವಿರ, ಲಕ್ಷ, ದಶಲಕ್ಷ, ಕೋಟಿ, ದಶಕೋಟಿ, ಶತಕೋಟಿ, ಅರ್ಬುದ, ನಿರ್ಬುದ, ಖರ್ವ, ನಿಖರ್ವ, ಪದ್ಮ, ಮಹಾಪದ್ಮ, ಶಂಖ, ಮಹಾಶಂಖ, ಸಾಗರ, ಮಹಾಸಾಗರ, ಮಧ್ಯ, ಪರಾರ್ಧ—ಎಂಬದಾಗಿ ಪೂರ್ವಿಕರು ವ್ಯವಹಾರಕ್ಕೋಸ್ಕರವಾಗಿ ಸಂಖ್ಯೆಯ ಸ್ಥಾನಗಳನ್ನು ಒಂದಕ್ಕಿಂತ ಮತ್ತೊಂದು ಹತ್ತರಷ್ಟು ಹೆಚ್ಚಾದ ಗುಣವುಳ್ಳದ್ದೆಂದು ಸಂಕೇತಮಾಡಿ ನಿರ್ಧರಿಸಿ ಹೇಳಿರುವರು.

— ಅವೈದಿಕ ತಂತ್ರಗಳು —

ಅನಂತರ ಎಲೈ ಲಿಂಗಪ್ಪ ಮಂತ್ರಿಯೇ ! ಈ ಭೂತಲದಲ್ಲಿ ಅವೈದಿಕ ತಂತ್ರಗಳು ಅನೇಕ ಪ್ರಕಾರಗಳಾಗಿರುವುವು. ಅವುಗಳಲ್ಲಿ;—ಮಹಾಮಾಯೆ, ಶಂಬರ, ಯೋಗಿನಿ, ಜಾಲಶಂಬರ, ತತ್ವಶಂಬರ, ಭೈರವಾಷ್ಟಕ, ಚಂದ್ರಜ್ಞಾನ, ವಾಸುಕ, ಮಹಾಸಮ್ಮೋಹನ, ಮಹೋಯುಷ್ಕ, ಮಹಾದೇವವಾತುಳ, ವಾತುಳೋತ್ತರ, ಹೃದ್ಭೇದ, ಆತ್ಮಭೇದ, ಗುಹ್ಯತಂತ್ರ, ಕಾಮಿಕತಂತ್ರ, ಕಾಲತಂತ್ರ, ಸೋಮತಂತ್ರ, ಕಲಾ

ಮಾಯೋತ್ತರಂಚವೀಣಾಖ್ಯಂ ತ್ರೋತಳಂತ್ರೋತಳೋತ್ತರಂ ॥೧೪೬॥ ಪಂಚಾಮೃತಂ ರೂಪಭೇದಂ ಭೂತೋಡ್ಡಾಮರಮೇವಚ। ಕಲಾಸಾರಂ ಕುಲೋಡ್ಡೀಶಂ ಕುಲಚೂಡಾಮಣಿ ಸ್ತಥಾ ॥೧೪೭॥ ಸರ್ವಜ್ಞಾನೋತ್ತರಂಚೈವ ಮಹಾಶಿವಮತಂ ತಥಾ । ಮಹಾಲಕ್ಷ್ಮೀಮತಂಚೈವ ಸಿದ್ಧಯೋಗೀಶ್ವರೀಮತಂ ॥೧೪೮॥ ಕುರೂಪಿಕಾಮತಂಚೈವ ರೂಪಿಕಾಮತಮೇವಚ । ಸರ್ವವೀರಮತಂಚೈವ ವಿಮಲಾಮತ ಮುತ್ತಮಂ ॥೧೫೦॥ ಪೂರ್ವಪಶ್ಚಿಮದಾಕ್ಷಿಣ್ಯಮುತ್ತರಂಚ ನಿರುತ್ತರಂ। ತಂತ್ರಂವೈಶೇಯಕಂ ಜ್ಞೇಯಂ ವೀರಯೋಗಂ ತತಃಪರಂ ॥೧೫೧॥ ಅರುಣೇಶಂ ಮೋಹನೇಶಂ ವಿಶುದ್ಧೇಶ್ವರಮೇವಚ । ಏವಮೆತಾನಿತಂತ್ರಾಣಿ ತಥಾನ್ಯಾನ್ಯಪಿ ಭೂರಿಶಃ ॥೧೫೨॥

—ಅಥವೈಷ್ಣವತಂತ್ರಾಣಿ—

ಅಥವೈಷ್ಣವತಂತ್ರಾಣಿ ತಾನ್ಯೇಕಶತಸಂಖ್ಯಯಾ । ಪಾದ್ಮಂ ಪಾದೋದ್ಭವಂ ಮಾಯಾವೈಭವಂ ನಳಕೂಬರಂ ॥೧೫೩॥ ತ್ರೈಲೋಕ್ಯಮೋಹನಂ ವಿಷ್ಣುತಿಲಕಂ ಕನಕಾಹ್ವಯಂ । ನಾರದೀಯಂ ಲಾನದೀಯಂ ವಾಶಿಷ್ಠಂ ಪುಷ್ಕಳಾಹ್ವಯಂ ॥೧೫೪॥ ಸನತ್ಕುಮಾರಂ ಸನಕಂ

ಸಾರತಂತ್ರ, ಕುಬ್ಜಿಕಾತಂತ್ರ, ಮಾಯೋತ್ತರ, ವೀಣಾ, ತ್ರೋತಳ, ತ್ರೋತಳೋತ್ತರ, ಪಂಚಾಮೃತ, ರೂಪಭೇದ, ಭೂತೋಡ್ಡಾಮರ, ಕಲಾಸಾರ, ಕುಲೋಡ್ಡೀಶ, ಕುಲಚೂಡಾಮಣಿ, ಸರ್ವಜ್ಞಾನೋತ್ತರ, ಮಹಾಶಿವಮತ, ಮಹಾಲಕ್ಷ್ಮೀಮತ, ಸಿದ್ಧಯೋಗೀಶ್ವರೀಮತ, ಕುರೂಪಿಕಾಮತ, ರೂಪಿಕಾಮತ, ಸರ್ವವೀರಮತ, ವಿಮಲಾಮತ, ಉತ್ತಮ, ಪೂರ್ವ, ಪಶ್ಚಿಮದಾಕ್ಷಿಣ್ಯ, ಉತ್ತರ, ನಿರುತ್ತರ ತಂತ್ರ, ವೈಶೇಯಕ, ವೀರಯೋಗ, ಅರುಣೇಶ, ಮೋಹನೇಶ, ವಿಶುದ್ಧೇಶ್ವರ—ಎಂಬದಾಗಿ ಮುಖ್ಯ ತಂತ್ರಗಳು. ಇದಲ್ಲದೆ ಅವೈದಿಕ ತಂತ್ರಗಳು ಇನ್ನೂ ಅನೇಕಪ್ರಕಾರಗಳಾಗಿರುವುವು. ॥೧೫೨॥

— ವೈಷ್ಣವ ತಂತ್ರಗಳು —

ಅನಂತರ ವೈಷ್ಣವ ತಂತ್ರಗಳು ನೂರೊಂದು ಪ್ರಕಾರಗಳಾಗಿರುವುವು. ಅವುಗಳನ್ನು ಹೇಳುತ್ತೇನೆ ಕೇಳು:—ಪಾದ್ಮ, ಪದ್ಮೋದ್ಭವ,ಮಾಯಾವೈಭವ, ನಳಕೂಬರ, ತ್ರೈಲೋಕ್ಯಮೋಹನ, ವಿಷ್ಣುತಿಲಕ, ಕನಕಾಹ್ವಯ. ನಾರದೀಯ, ಲಾನದೀಯ ವಾಶಿಷ್ಠ, ಪುಷ್ಕಳ, ಸನತ್ಕುಮಾರ, ಸನಕ, ಸತ್ಯ, ವಿಶ್ವಸಂಹಿತೆ, ಸಾನಂದ, ಮಹೀಪ್ರ

ಸತ್ಯಾಖ್ಯಂ ವಿಶ್ವಸಂಹಿತಾ । ಸಾನಂದಾಖ್ಯಂ ಮಹೀಪ್ರಶ್ನಂ ಸ್ತ್ರೀಪ್ರಶ್ನಂ ಪುರುಷೋತ್ತಮಂ॥೧೫೫॥ ಮಹೇಂದ್ರಸಂಹಿತಾವಜ್ಞ?ಪ್ರಶ್ನಾತ್ಯಂ ತತ್ರ ಸಾಗರಂ । ವಾಸಿಷ್ಠ ಸಾತ್ವತಂ ತೇಜೋ ದ್ರವಿಣಂ ಶ್ರೀಕರಾಹ್ವಯಂ ॥೧೫೬॥ ಸಾಂವರ್ತಂ ವಿಷ್ಣುಸದ್ಭಾವಂ ಸಿದ್ಧಾಂತಂ ವಿಷ್ಣುಪೂರ್ವಕಂ। ವಿಷ್ಣುತತ್ವಂಚ ಕೌಮಾರಂ ರಹಸ್ಯಂಜಿಷ್ಣುಪೂರ್ವಕಂ ॥ ೧೫೭ ॥ ವಿಷ್ಣುವೈಭವಿಕಂ ರೌರಂ ಸೌಮ್ಯ ಮೀಶಾನಸಂಹಿತಾ । ಪುಷ್ಟಿತಂತ್ರಂ ಶೌನಕೀಯಂ ಮಾರೀಚಂ ದಕ್ಷಸಂಹಿತಾ ॥ ೧೫೮ ॥ ಔಪೇಂದ್ರಂ ಯೋಗಹೃದಯಂ ಹಾರೀತಂ ಪಾರಮೇಶ್ವರಂ । ಆತ್ರೇಯಂ ಮಂದಿರಂ ವಿಷ್ವಕ್ಸೇನ ಮೌಶನಸಾಹ್ವಯಂ ॥೧೫೯॥ ವೈಹಾಯಸಂ ವಿಹಂಗೇಂದ್ರಂ ಹಾರ್ಷಂ ಪರಮಪೌರುಷಂ । ಯಾಜ್ಞ್ಯವಲ್ಕ್ಯಂ ಗೌತಮೀಯಂ ಪೌಲಸ್ತ್ಯಂ ಶಾಕಲಾಹ್ವಯಂ ॥೧೬೦॥ ಜ್ಞಾನಾಖ್ಯಂ ಜಾಮದಗ್ನ್ಯಂಚ ಯಾಮ್ಯಂ ನಾರಾಯಣಾತ್ಮಕಂ । ಪಾರಾಶರ್ಯಂಚ ಜಾಬಾಲಂ ಕಾಪಾಲಂ ವಾಮನಾಹ್ವಯಂ ॥೧೬೧॥ ದ್ವಯೋತ್ತರಂ ಬಾರ್ಹಸ್ಪತ್ಯಂ ಜೈಮಿನಂ ಸಾತ್ವತಾಹ್ವಯಂ । ಕಾತ್ಯಾಯನೀಯಂವಾಲ್ಮೀಕಮೌಪಗಾಯನಸಂಹಿತಾ ॥ ೧೬೨ ॥ ಹಿರಣ್ಯಗರ್ಭ ಮಾಗಸ್ತ್ಯಂ ಕಾರ್ಷ್ಣ್ಯಂ ಬೋಧಾಯನಾಹ್ವಯಂ । ಭಾರದ್ವಾಜಂ ನಾರಸಿಹ್ಮಂ ಗಾರ್ಗ್ಯ ಮುತ್ತಮಪೂರ್ವಕಂ ॥ ೧೬೩ ॥ ಶಾತಾತಪಂ ಚಾಂಗಿರಸಂ

ಷ್ಣ. ಸ್ತ್ರೀಪ್ರಶ್ನ, ಪುರುಷೋತ್ತಮ, ಮಹೇಂದ್ರಸಂಹಿತೆ, ಪ್ರಶ್ನಾತ್ಯ, ಸಾಗರ, ವಾಸಿಷ್ಠ ಸಾತ್ವತ, ತೇಜೋದ್ರವಿಣ, ಶ್ರೀಕರ, ಸಾಂವರ್ತ, ವಿಷ್ಣುಸದ್ಭಾವ, ಸಿದ್ಧಾಂತ, ವಿಷ್ಣುಪೂರ್ವಕ, ವಿಷ್ಣುತತ್ವ, ಕೌಮಾರರಹಸ್ಯ, ಜಿಷ್ಣುಪೂರ್ವಕ, ವಿಷ್ಣುವೈಭವಿಕ, ರೌರ, ಸೌಮ್ಯ, ಈಶಾನಸಂಹಿತೆ, ಪುಷ್ಟಿತಂತ್ರ, ಶೌನಕೀಯ, ಮಾರೀಚ, ದಕ್ಷಸಂಹಿತೆ, ಔಪೇಂದ್ರ, ಯೋಗಹೃದಯ, ಹಾರೀತ, ಪಾರಮೇಶ್ವರ, ಆತ್ರೇಯಮಂದಿರ, ವಿಷ್ವಕ್ಸೇನ, ಔಶನಸ, ವೈಹಾಯಸ, ವಿಹಂಗೇಂದ್ರ, ಹಾರ್ಷ, ಪರಮಪೌರುಷ, ಯಾಜ್ಞ್ಯವಲ್ಕ್ಯ, ಗೌತಮೀಯ, ಪೌಲಸ್ತ್ಯ, ಶಾಕಲ, ಜ್ಞಾನ, ಜಾಮದಗ್ನ್ಯ, ಯಾಮ್ಯ, ನಾರಾಯಣಾತ್ಮಕ, ಪಾರಾಶರ್ಯ, ಜಾಬಾಲ, ಕಾಪಾಲ, ವಾಮನ, ದ್ವಯೋತ್ತರ, ಬಾರ್ಹಸ್ಪತ್ಯ, ಜೈಮಿನ, ಸಾತ್ವತ, ಕಾತ್ಯಾಯನೀಯ, ವಾಲ್ಮೀಕ, ಔಪಗಾಯನಸಹ್ಮಿತ, ಹಿರಣ್ಯಗರ್ಭ, ಆಗಸ್ತ್ಯ, ಕಾರ್ಷ್ಣ್ಯ, ಬೋಧಾಯನ, ಭಾರದ್ವಾಜ, ನಾರ

ಕಾಶ್ಯಪಂ ಪೈಂಗಲಾಹ್ವಯಂ । ತ್ರೈಲೋಕ್ಯಮೋಹನಂ ಯೋಗನಾರ ದೀಯಂಚ ವಾರುಣಂ ॥೧೬೪॥ ಕೃಷ್ಣಚಾಮರ ಮಾಗ್ನೇಯಂ ಮಾ ರ್ಕಂಡೇಯಸ್ಯ ಸಂಗ್ರಹಂ । ಮಹಾಸನತ್ಕುಮಾರಾಖ್ಯಂ ವ್ಯಾಸಾಖ್ಯಂ ವಿಷ್ಣುಸಂಹಿತಾ॥೧೬೫॥ಮಾರ್ಕಂಡೇಯಂ ಪಾರ್ಶ್ವಜಂಚ ಬ್ರಾಹ್ಮಂನರ ಕಸಂಹಿತಾ।ಸಂವಾದಂ ಕದ್ರುಶುಕ್ರಾಖ್ಯ ಮುಮಾಮಾಹೇಶ್ವರಾಹ್ವಯಂ ॥೧೬೬॥ ದತ್ತಾತ್ರೇಯಂಚ ಶರ್ವಾಖ್ಯಂ ನ್ಯಾಸಾಖ್ಯ ಮಭಿರಾಹ್ವಯಂ। ಸಂಕರ್ಷಣಾಖ್ಯಂ ಪ್ರದ್ಯುಮ್ನಂ ವಾಮನಂ ಕಲ್ಕಿರಾಘವೌ ॥೧೬೭॥ ಪ್ರಾಚೇತಸಾಖ್ಯ ಮಿತ್ಯೇತದ್ಯತ ಮೇಕೋತ್ತರಂ ಶತಂ । ಏತಾನಿತಂತ್ರ ನಾಮಾನಿ ಪೂರ್ವೈ ರುಕ್ತಾನ್ಯನುಕ್ರಮಾತ್ ॥೧೬೮॥ ಏವಮೇಕೋತ್ತ ರಶತಂ ವೈಷ್ಣವಂ ತಂತ್ರ ಮುಚ್ಯತೆ । ಚತುಷ್ಷಷ್ಟಿಶ್ಶೈವತಂತ್ರಾಣ್ಯ ನ್ಯಾನ್ಯಪಿಚಭೂರಿಶಃ ॥೧೬೯॥ ವೇದಾನುರೋಧಾ ತ್ತಂತ್ರಾಣಾಂ ಪ್ರಾ ಮಾಣ್ಯ ಮಿತರಾಣಿತು । ಅವೈದಿಕಪರಾಣ್ಯೇವ ಸದೃಶೌ ನಿಗಮಾಗಮೌ ॥೧೭೦॥ ವೇದಸಿದ್ಧಾಂತಯೊ ರೈಕ್ಯ ಮೇಕಾರ್ಥಪ್ರತಿಪಾದನಾತ್। ಪ್ರಾ ಮಾಣ್ಯಂ ಸದೃಶಂಜ್ಞೇಯಂ ಪಂಡಿತೈ ರೇತಯೊ ಸ್ಸದಾ ॥೧೭೧॥ ಅಥ

ಸಿಹ್ಮ, ಗಾರ್ಗ್ಯ, ಉತ್ತಮಗಾರ್ಗ್ಯ, ಶಾತಾತಪ, ಆಂಗಿರಸ, ಕಾಶ್ಯಪ, ಪೈಂಗಲ, ತ್ರೈಲೋಕ್ಯಮೋಹನ, ಯೋಗನಾರದೀಯ, ವಾರುಣ, ಕೃಷ್ಣಚಾಮರ, ಆಗ್ನೆಯ, ಮಾರ್ಕಂಡೇಯಸಂಗ್ರಹ, ಮಹಾಸನತ್ಕುಮಾರ, ವ್ಯಾಸ, ವಿಷ್ಣುಸಂಹಿತೆ, ಮಾರ್ಕಂಡೇಯ, ಪಾರ್ಶ್ವಜ, ಬ್ರಹ್ಮನರಕಸಂಹಿತೆ, ಕದ್ರುಶುಕ್ರಾಖ್ಯಸಂವಾದ, ಉಮಾಮಹೇಶ್ವರಾಹ್ವಯ, ದತ್ತಾತ್ರೇಯ, ಶರ್ವಾಖ್ಯ, ನ್ಯಾಸಾಖ್ಯ, ಅಭಿರಾಹ್ವಯ, ಸಂಕರ್ಷಣಾಖ್ಯ, ಪ್ರದ್ಯುಮ್ನ, ವಾಮನ, ಕಲ್ಕಿ, ರಾಘವ, ಪ್ರಾಚೇತಸ ಎಂಬುದಾಗಿ ಹೆಸರುಳ್ಳ ನೂರೊಂದು ವೈಷ್ಣವತಂತ್ರಗಳು ಪೂರ್ವಿಕರಿಂದ ಕ್ರಮವಾಗಿ ಹೇಳಲ್ಪಟ್ಟವು. ಈರೀತಿಯಾಗಿ ಹೇಳಲ್ಪಟ್ಟ ನೂರೊಂದು ವೈಷ್ಣವತಂತ್ರಗಳೊಳಗೆ ಶಿವವಿಷಯವನ್ನು ಪ್ರತಿಪಾದಿಸತಕ್ಕ ಅರವತ್ತುನಾಲ್ಕು ತಂತ್ರಗಳು ಮಾತ್ರ ವೇದಾರ್ಥವನ್ನು ಅನುಸರಿಸಿ ಹೇಳಲ್ಪಟ್ಟಿರುವುದರಿಂದ ಈ ಅರವತ್ತುನಾಲ್ಕು ತಂತ್ರಗಳು ಮಾತ್ರ ಪ್ರಮಾಣತಂತ್ರಗಳೆನಿಸುವುವು. ಉಳಿದಮೂವತ್ತೇಳು ತಂತ್ರಗಳು ಅವೈದಿಕಪರಗಳಾಗಿರುವುದರಿಂದ ಅಪ್ರಮಾಣಗಳೆನಿಸುವುವು ॥೧೬೯॥ ಆದರೆ ಲೋಕದಲ್ಲಿ ವೇದಗಳ ಅರ್ಥವನ್ನು ಆಗಮಗಳೂ ಆಗಮಗಳ ಅರ್ಥವನ್ನು ವೇದಗಳೂ ಅನುಸರಿಸಿ

ವಾ ಶಿವನಿಶ್ವಾಸಶ್ರುತಿಭ್ಯಸ್ತೇ ಶಿವಾಗಮಾಃ । ಅಧಿಕಾಶ್ಶಿವವಕ್ತ್ರೇಭ್ಯಸ್ಸಾ ಕ್ಷಾದೇವವಿನಿರ್ಗತಾಃ ॥೧೩೨॥ ಪರಸ್ಪರವಿರೋಧಾರ್ಥಾ ಶ್ಶಿವೋಕ್ತಾ ನಿಗ ಮಾಗಮಾಃ । ಅಲ್ಪಬುದ್ಧಿಭಿರನ್ಯೋನ್ಯಸ್ಯ ವಿರೋಧಃಪರಿಕಲ್ಪ್ಯತೆ ॥೧೩೩॥ ನಿಗಮಾನಾಮಾಗಮಾನಾಂ ಪರಮಾಪ್ತೋಪದೇಶತಃ। ಪ್ರಾಮಾಣ್ಯಮವಿಶೇಷೆ ಣ ಜ್ಞಾತವ್ಯಂತತ್ತ್ವದರ್ಶಿಭಿಃ ॥೧೩೪॥ ನರರ್ಷಿದೇವದ್ರುಹಿಣ ವಿಷ್ಣು ರು ದ್ರಾದ್ಯುದೀರಿತಂ । ಉತ್ತರೋತ್ತರಮುತ್ಕರ್ಷಂ ಪೂರ್ವಪೂರ್ವಪ್ರಬೋ ಧಕಂ ॥೧೩೫॥ ಇತಿ ಕ್ರಿಯಾಸಾರ ಮುಖ್ಯಗ್ರಂಥೆಷು ಪ್ರತಿಪಾದ್ಯತೆ॥

ರುವುದರಿಂದಲೇ ವೇದಾಗಮುಗಳೆರಡೂ ಕೂಡ ಸಮಾನಪ್ರಮಾಣಗಳಾಗಿ ವೈದಿಕಗಳೆನಿ ಸುವವು, ಆದುದರಿಂದಲೇ ತದಿತರಗಳಾದವುಗಳೆಲ್ಲಾ ಅವೈದಿಕಪರಗಳೆನಿಸುವವು॥೧೩೦ ಮತ್ತೂ ವೇದಸಿದ್ಧಾಂತಗಳೆರಡೂ ಯಾವಾಗಲೂ ಒಂದೇ ಅರ್ಥವನ್ನು ಪ್ರತಿಪಾದನೆ ಮಾಡುವುದರಿಂದ ಈ ವೇದಾಗಮುಗಳೆರಡಕ್ಕೂ ಪಂಡಿತರುಗಳಿಂದ ಪ್ರಾಮಾಣ್ಯ ಕತ್ವವು ಸಮಾನವಾದದ್ದೆಂಬದಾಗಿ ನಿಶ್ಚೈಸಲ್ಪಟ್ಟಿರುವುದು ॥೧೩೧॥ ಆದರೆ ಪರಶಿವ ನ ನಿಶ್ವಾಸೋಚ್ಛ್ವಾಸಗಳಿಂದ ಜನಿಸಿದ ವೇದಗಳಿಗಿಂತಲೂ, ಆ ಸಾಕ್ಷಾತ್ಪರಶಿವನ ಮುಖದಿಂದಲೇ ವೈಖರೀರೂಪವಾಗಿ ಜನಿಸಿದ ಆಗಮುಗಳೇ ಅಧಿಕಂಗಳಾದುವು. ಆದಾ ಗ್ಗೂ ಕೂಡ ವೇದಾಗಮುಗಳೆರಡೂ ಒಂದಕ್ಕೊಂದು ವಿರುದ್ಧವಲ್ಲದಿರುವ ಅರ್ಥವನ್ನು ಪ್ರತಿಪಾದಿಸುವವಲ್ಲದೆ, ವಿರುದ್ಧವಾದ ಅರ್ಥವನ್ನ ಎಂದಿಗೂ ಪ್ರತಿಪಾದಿಸುವುದಿಲ್ಲ. ಆದರೆ ಬುದ್ಧಿ ಹೀನರುಗಳಿಂದ ಈ ವೇದಾಗಮುಗಳಿಗೆ ಅನ್ಯೋನ್ಯವಿರೋಧವು ಪರಿಕಲ್ಪಿ ಸಲ್ಪಡುತ್ತದೆಯಲ್ಲದೆ ಮತ್ತೆ ಬೇರೆಯಲ್ಲ॥೧೩೨॥ ಆದುದರಿಂದಲೇ ತತ್ವಜ್ಞರುಗಳಿಂದ ಈವೇದಾಗಮುಗಳೆರಡಕ್ಕೂ ಪರಮಾಪ್ತೋಪದೇಶದ ದೆಸೆಯಿಂದ ಪ್ರಾಮಾಣ್ಯವು ಸಂ ಕ್ಷೇಪವಾಗಿಯೇ ಹೇಳಲ್ಪಟ್ಟಿರುವುದು ॥೧೩೪॥ ಆದರೆ ಲೋಕದಲ್ಲಿ ಮನುಷ್ಯರಿಂದ ಹೇಳಲ್ಪಟ್ಟಗ್ರಂಥಕ್ಕಿಂತಲೂ ಋಷಿಗಳಿಂದ ಹೇಳಲ್ಪಟ್ಟ ಗ್ರಂಥವು ಉತ್ತಮವು. ಋ ಷಿಗಳಿಂದ ಹೇಳಲ್ಪಟ್ಟ ಗ್ರಂಥಕ್ಕಿಂತಲೂ ದೇವತೆಗಳಿಂದ ಹೇಳಲ್ಪಟ್ಟ ಗ್ರಂಥವು ಸರ್ವೋ ತ್ತಮವು. ದೇವತೆಗಳಿಂದ ಹೇಳಲ್ಪಟ್ಟ ಗ್ರಂಥಕ್ಕಿಂತಲೂ ಬ್ರಹ್ಮನಿಂದ ಹೇಳಲ್ಪಟ್ಟ ಗ್ರಂಥವು ಉತ್ತಮೋತ್ತಮವು. ಬ್ರಹ್ಮನಿಂದ ಹೇಳಲ್ಪಟ್ಟಗ್ರಂಥಕ್ಕಿಂತಲೂ ವಿಷ್ಣು ವಿನಿಂದ ಹೇಳಲ್ಪಟ್ಟ ಗ್ರಂಥವು ಸರ್ವೋತ್ತಮವು.ವಿಷ್ಣುವಿನಿಂದ ಹೇಳಲ್ಪಟ್ಟಗ್ರಂಥಕ್ಕಿಂ ತಲೂ ರುದ್ರನಿಂದ ಹೇಳಲ್ಪಟ್ಟ ಗ್ರಂಥವು ಸರ್ವೋತ್ತಮವು. ಸರ್ವೋತ್ತಮವು॥೧೩೫॥ ಎಂಬದಾಗಿ ಕ್ರಿಯಾಸಾರವೇ ಮೊದಲಾದ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವುದು.

ಇತಿ ಶ್ರೀಮದನಾದಿ ಪ್ರಮಥಪರಂಪರಾಗತ ಷಟ್ಸ್ಥಲಜ್ಞಾನಬೋಧ
ಕಾಚಾರ್ಯವರ್ಯ ವರಗುರುಬಸವಯತಿವರ್ಯ ಲಬ್ಧಬುದ್ಧಿವಿ
ಕಾಸೇನ ವೀರಶೈವದೀಕ್ಷಾಗುರು ಚೆನ್ನವೀರಸ್ವಾಮಿ
ಕರಕಮಲಸಂಜಾತೇನ ಮಾನಪ್ಪವಿದುಷಾಕೃ
ತೇ ವೀರಶೈವಾಚಾರಕೌಸ್ತುಭೇ ಕ್ರಿಯಾ
ಕಾಂಡೇ ವೈದಿಕಾವೈದಿಕವಿದ್ಯೋ
ದ್ದೇಶಸಿರೂಪಣಂ ನಾಮ
ದ್ವಿತೀಯಪ್ರಕರಣಂ.

ತೃತೀಯಪ್ರಕರಣಂ.

(ಅನಾದಿಭಕ್ತಪ್ರಭೃತಿ ಸೃಷ್ಟಿನಿರೂಪಣಂ)

ಮಾನಪ್ಪವಿದ್ವನ್ನುದ್ದಿಷ್ಟವಿದ್ಯೋದ್ದೇಶಪರಾತ್ಪರ । ಕಸ್ಮಾಚ್ಚ
ರಾಚರಂವಿಶ್ವಂ ಪ್ರಾದುರ್ಭವತಿ ತದ್ವದ ॥೧॥ ಲಿಂಗಪ್ಪಮಂತ್ರಿಮೂರ್ಧ
ನ್ಯ ವಿದ್ವತ್ಕಾಮಿತಕಲ್ಪಕ । ಭವತ್ಪೃಷ್ಟಂ ವಿಶೇಷೇಣ ಪ್ರೋಚ್ಯತೇ ಶೃ

ಎಂಬಲ್ಲಿಗೆ ಶ್ರೀಮಾನಪ್ಪ ವಿದ್ವತ್ಕೃತ ವೀರಶೈವಾಚಾರ ಕೌಸ್ತುಭಕ್ಕೆ,
ಎಮ್. ಬಸವಲಿಂಗಶಾಸ್ತ್ರಿ ರಚಿತವಾದ "ಆಚಾರಪ್ರಕಾಶಿಕೆ"
ಎಂಬ ಕನ್ನಡ ಟಿಪ್ಪಣದಲ್ಲಿ ವೈದಿಕಾವೈದಿಕಗಳನ್ನು
ನಿರೂಪಣ ಮಾಡುವ ೨ ನೆಯಪ್ರಕರಣವು
ಮುಗಿದುದು.

೩ನೆಯಪ್ರಕರಣವು.

(ಅನಾದಿಭಕ್ತನೇ ಮೊದಲಾದ ಸೃಷ್ಟಿಯ ನಿರೂಪಣವು.)

ವೈದಿಕಾವೈದಿಕ ವಿದ್ಯೆಗಳನ್ನು ಕ್ರಮವಾಗಿ ವಿವರಿಸಿ ಬೋಧಿಸಿದ ಎಲೈ ಮಾನ
ಪ್ಪ ವಿದ್ವಾಂಸನೇ! ಚರಾಚರಾತ್ಮಕವಾದ ಈ ಪ್ರಪಂಚವು ಯಾರಿಂದ ಉತ್ಪನ್ನವಾ
ಯಿತು? ಅದನ್ನು ಹೇಳು; ಎಂದು ಲಿಂಗಪ್ಪ ಮಂತ್ರಿಯು ಕೇಳಲು, ಆಗ ಆ ಮಾ
ನಪ್ಪ ವಿದ್ವಾಂಸನು ಆ ಮಂತ್ರಿಯನ್ನು ನೋಡಿ—ಸತ್ಪ್ರಭುವೂ ಮಂತ್ರಿಶಿರೋರತ್ನ

ಣುಸತ್ಪ್ರಭೋ ॥೨॥ ಈಶಾನಸ್ಸರ್ವವಿದ್ಯಾನಾಮಿತಿ ಯಾಜುಷಮಂತ್ರ ತಃ । ಈಶಾನಸ್ಸರ್ವವಿದ್ಯಾನಾಂ ಸಪವಾದಿಗುರುರ್ಬುಧಾಃ ॥೩॥ ಇತ್ಯಾ ದಿಭ್ಯಃ ಪ್ರಮಾಣೇಭ್ಯ ಶ್ಶಿವೋ ವಿದ್ಯಾಧಿಪ ಸ್ಸ್ಮೃತಃ । ಇತ್ಥಂ ಚರಾ ಚರಂವಿಶ್ವ ಮಾವಿರ್ಭವತಿ ತಚ್ಛೃಣು ॥೪॥ ಶ್ರೀಮನ್ಮಹಾನಾದಿಭಕ್ತ ಸ್ಸ್ವಪ್ರಕಾಶೋಽದ್ವಿತೀಯಕಃ। ಯೋಽಸೌಬ್ರಹ್ಮೇತಿ ಸಂಪ್ರೋಕ್ತ ಶ್ಶಿವ ತತ್ವಾರ್ಥವೇದಿಭಿಃ ॥೫॥ ತಸ್ಮಾದ್ವಸ್ತು ಪ್ರಾದುರಭೂ ತ್ಸನಿರಂಜನಜಂಗ ಮಃ । ತಚ್ಛಿಖಾಯಾಂ ಶೂನ್ಯಲಿಂಗಂ ಸಂಜಾತಂ ವಿಶ್ವಕಾರಣಂ ॥೬॥ ತಸ್ಮಾ ನ್ನಿಷ್ಕಳಲಿಂಗಂತು ಸಂಜಾತಂ ಸ್ವೇಚ್ಛಯಾಪುನಃ । ತಸ್ಮಾತ್ತು ನಿಷ್ಕಳಾಲ್ಲಿಂಗಾ ನ್ಮಹಾಲಿಂಗ ಮಭೂತ್ಸ್ವಯಂ ॥೭॥ ತಸ್ಮಾತ್ಪ್ರಣವ

ವೂ; ವಿದ್ವಾಂಸರುಗಳಿಗೆ ಕಲ್ಪವೃಕ್ಷವೂ, ಆದ ಎಲೈ ಲಿಂಗಪ್ಪ ಮಂತ್ರಿಯೆ ! ನೀನು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳುತ್ತೇನೆ ಕೇಳು—॥೨॥ ಯಜುರ್ವೇ ದವು— "ಈಶಾನಸ್ಸರ್ವವಿದ್ಯಾನಾ ಮೀಶ್ವರಸ್ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರ ಹ್ಮಣೋಽಧಿಪತಿರ್ಬ್ರಹ್ಮಾ ಶಿವೋಮೆ ಅಸ್ತು ಸದಾಶಿವೋಂ" ಎಂಬ ಮಂತ್ರದಿಂದ ಅರುವ ತ್ತು ನಾಲ್ಕು ವಿದ್ಯೆಗಳಿಗೂ ಅಧಿಪತಿಯೂ, ಭವನ ಶೀಲಗಳಾದ ಚರಾಚರ ಪ್ರಾಣಿಗ ಳಿಗೆ ನಿಯಾಮಕನೂ, ಬ್ರಹ್ಮ, ವಿಷ್ಣು, ರುದ್ರ, ಈಶ್ವರರುಗಳಿಗೆ ಅಧಿಪತಿಯೂ, ತಪ ಸ್ಸಿಗೆ ಅಧಿಪತಿಯೂ, ಪರಮಾನಂದಪರಿಬೃಂಹಿತನೂ, ಸ್ವೇಚ್ಛಪ್ರಕಾಶನೂ; ಅನಂತ ಕಲ್ಯಾಣಗುಣಪರಿಪೂರ್ಣನೂ, ಸಚ್ಚಿದಾನಂದರೂಪನೂ, ಉಮಾಪತಿಯೂ, ಆದ ಪರಶಿವನು ನನ್ನ ತಿರೋಧಾನಕಲಾನಿಷ್ಠವಾದ ಹೃದಯಕ್ಕೆ ಅನುಗ್ರಹವನ್ನು ಕೊ ಡುವವನಾಗಲಿ, ಎಂದು ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವುದರಿಂದ ಸಮ ಸ್ತ ವಿದ್ಯೆಗಳಿಗೂ ಪರಶಿವನೇ ಅಧಿಪತಿಯು. ಮತ್ತೂ ಚರಾಚರಾತ್ಮಕವಾದ ಈ ಜಗ ತ್ತು ಆ ಪರಶಿವನಿಂದಲೇ ಉತ್ಪನ್ನವಾಯಿತು. ಅದನ್ನು ಹೇಳುತ್ತೇನೆ ಕೇಳು ॥೪॥ ಶಿವತತ್ವಾರ್ಥವನ್ನು ಬಲ್ಲವರುಗಳಿಂದ ಯಾವ ವಸ್ತುವು—ಸ್ವಪ್ರಕಾಶವು, ಅದ್ವಿತೀ ಯವು ಪರಬ್ರಹ್ಮವು— ಎಂಬುದಾಗಿ ಹೇಳಿಸಿಕೊಳ್ಳಲ್ಪಡುತ್ತದೆಯೋ ಆ ವಸ್ತುವಿಗೆ "ಅನಾದಿಭಕ್ತ" ನೆಂದು ಹೆಸರು. ಆ ಅನಾದಿಭಕ್ತನ ದೆಸೆಯಿಂದ ನಿರಂಜನ ಜಂ ಗಮವು ಉತ್ಪನ್ನವಾಯಿತು. ಆ ನಿರಂಜನ ಜಂಗಮನ ಶಿಖೆಯಲ್ಲಿ ಪ್ರಪಂಚಕ್ಕೆ ಕಾ ರಣವಾದ ಶೂನ್ಯಲಿಂಗವು ಉತ್ಪನ್ನವಾಯಿತು. ಆ ಶೂನ್ಯಲಿಂಗದ ದೆಸೆಯಿಂದ ನಿಷ್ಕ ಲ ಲಿಂಗವು ಸ್ವೇಚ್ಛೆಯಿಂದ ಉತ್ಪನ್ನವಾಯಿತು. ಆ ನಿಷ್ಕಲ ಲಿಂಗದ ದೆಸೆಯಿಂದ ಮಹಾಲಿಂಗವು ತಾನೇತಾನಾಗಿ ಉತ್ಪನ್ನವಾಯಿತು. ಆ ಮಹಾಲಿಂಗದ ದೆಸೆಯಿಂದ

ಲಿಂಗಂತು ಸೃಷ್ಟ್ಯುನ್ಮುಖ ಮಜಾಯತ। ಏತಸ್ಮಾಚ್ಛಿವತತ್ವಂತು ಸಾದಾ ಖ್ಯಂಚ ತತೋಭವೇತ್ ॥೮॥ ತಸ್ಮಾನ್ಮಹೇಶ್ವರೋ ಜಾತ ಸ್ತಸ್ಮಾ ದ್ರುದ್ರಸಮುದ್ಭವಃ । ತಸ್ಮಾಜ್ಜನಾರ್ದನೋ ಜಾತ ಸ್ತಸ್ಮಾಜ್ಜಾತಃ ಪಿತಾಮಹಃ ॥೯॥ ಪಿತಾಮಹಾ ತ್ಸಮುದ್ಭೂತಂ ಜಗದೇತಚ್ಚರಾಚರಂ । ಆದಾವನಾದಿಭಕ್ತಸ್ಯ ಲಕ್ಷಣಂ ವಚ್ಮಿ ತೇಕ್ರಮಾತ್ ॥೧೦॥ ಯದಸ್ತಿ ತತ್ಪರಂ ಬ್ರಹ್ಮ ಸ್ವಯಂನಾದಿರ್ ಭಜೇದ್ಯತಃ । ತಸ್ಮಾದನಾದಿಭಕ್ತೋಽಯಮಿತ್ಯುಕ್ತ ಸ್ತತ್ವವೇದಿಭಿಃ ॥೧೧॥ ಲಿಂಗಾಜ್ಜಂಗಮಆದಿ ಸ್ಸ್ಯಾದ್ಭಕ್ತಶ್ಚಾನಾದಿರೂಪಕಃ । ಅಂಗಂಲಿಂಗಮಿತಿ ಪ್ರೋಕ್ತಂ ಪ್ರಾಣೋಜಂಗಮಉಚ್ಯತೇ ॥೧೨॥ ಲಿಂಗಜಂಗಮಯೊ ರೈಕ್ಯಸ್ವರೂಪೋ ಭಕ್ತಉಚ್ಯತೇ । ಜಂಗಮೋ ಲಿಂಗರೂಪ ಸ್ಸ್ಯಾಲ್ಲಿಂಗಂ ಜಂಗಮರೂಪಕಂ ॥೧೩॥ ಲಿಂ

ಪ್ರಣವ ಲಿಂಗವು ಉತ್ಪನ್ನವಾಗಿ ಸೃಷ್ಟಿಗೆ ಮುಖವಾಯಿತು. ಆ ಪ್ರಣವ ಲಿಂಗದ ದೆಸೆಯಿಂದ ಶಿವತತ್ವವು ಉತ್ಪನ್ನವಾಯಿತು, ಆ ಶಿವ ತತ್ವದ ದೆಸೆಯಿಂದ ಸದಾಶಿವತತ್ವವು ಉತ್ಪನ್ನವಾಯಿತು. ಆ ಸದಾಶಿವ ತತ್ವದ ದೆಸೆಯಿಂದ ಮಹೇಶ್ವರನು ಉತ್ಪನ್ನನಾದನು. ಆ ಮಹೇಶ್ವರನ ದೆಸೆಯಿಂದ ರುದ್ರನು ಉತ್ಪನ್ನನಾದನು. ಆ ರುದ್ರನ ದೆಸೆಯಿಂದ ಜನಾರ್ದನನು (ವಿಷ್ಣುವು) ಉತ್ಪನ್ನನಾದನು. ಆ ವಿಷ್ಣುವಿನ ದೆಸೆಯಿಂದ ಬ್ರಹ್ಮನು ಉತ್ಪನ್ನನಾದನು. ಆ ಬ್ರಹ್ಮನ ದೆಸೆಯಿಂದ ಚರಾಚರಾತ್ಮಕವಾದ ಈ ಜಗತ್ತು ಉತ್ಪನ್ನವಾಯಿತು. ಆದುದರಿಂದ ಎಲೈ ಲಿಂಗಪ್ಪ ಮಂತ್ರಿಯೆ ! ಈ ಜಗದುತ್ಪತ್ತಿಗೆ ಮೊದಲೆನಿಸುವನಾದ ಅನಾದಿ ಭಕ್ತನ ಲಕ್ಷಣವನ್ನು ನಿನಗೆ ಕ್ರಮವಾಗಿ ಹೇಳುತ್ತೇನೆ ಕೇಳು ॥೧೦॥ ಯಾವ ಪರಬ್ರಹ್ಮಕ್ಕಿಂತಲೂ ಮೊದಲು ಮತ್ತಾವುದೊಂದು ವಸ್ತುವೂ ಇಲ್ಲವೆ ಎಲ್ಲಕ್ಕೂ ಈ ಪರಬ್ರಹ್ಮವೇ ಮೂಲಕಾರಣವಾಗಿರುವುದೊ ಆವಸ್ತುವನ್ನೇ ಶಿವತತ್ವಾರ್ಥ ವೇದಿಗಳು "ಅನಾದಿಭಕ್ತ" ಎಂಬುದಾಗಿ ಹೇಳುತ್ತಾರೆ ॥೧೧॥ ಮತ್ತೂ ಲಿಂಗಕ್ಕಿಂತಲೂ ಜಂಗಮವೇ ಆದಿಯಾಗಿರುವುದರಿಂದಲೂ, ಆ ಜಂಗಮಕ್ಕಿಂತಲೂ ಭಕ್ತನೇ ಆದಿಯಾಗಿ, ಆ ಭಕ್ತನಿಗಿಂತಲೂ ಆದಿಯಾವ ವಸ್ತುವು ಮತ್ತೊಂದೇನೂ ಇಲ್ಲದಿರುವುದರಿಂದ ಆ ಭಕ್ತನೇ ಅನಾದಿರೂಪಕನೆನಿಸುವನು. ಆದುದರಿಂದಲೇ ಲಿಂಗವು ಅಂಗವೆಂಬದಾಗಿ ಹೇಳಲ್ಪಟ್ಟಿತು. ಜಂಗಮವು ಪ್ರಾಣವೆಂಬದಾಗಿ ಹೇಳಲ್ಪಟ್ಟಿತು. ಈ ಲಿಂಗಜಂಗಮರ ಐಕ್ಯಸ್ವರೂಪೀ ಭಕ್ತನು ಎಂಬದಾಗಿ ಹೇಳಲ್ಪಟ್ಟಿತು. ಮತ್ತೂ ಜಂಗಮವೇ ಲಿಂಗರೂಪವಾಗಿರುವುದು. ಲಿಂಗವೇ ಜಂಗಮ ರೂಪವಾಗಿರುವುದು. ಈ ಲಿಂಗ ಜಂಗಮರ ಸಂಯೋಗವೇ ಅನಾ-

ಗಜಂಗಮಸಂಯೋಗೋಽನಾದಿಭಕ್ತಸ್ಯ ಲಕ್ಷಣಂ । ಲಿಂಗಜಂಗಮಭಕ್ತಾಶ್ಚ ತ್ರಯ ಸ್ತ್ವೇಕಸ್ವರೂಪಕಾಃ ॥೧೪॥ ದೇಹಪ್ರಾಣಿ ಸ್ತಥಾ ಜಾತೇತ್ಯಾಗಮಾನ್ವಯನಿರ್ಣಯಃ । ನಿತ್ಯಂ ಪೂರ್ಣಂ ಚಿದಾನಂದಂ ಸದ್ರೂಪಂ ಬ್ರಹ್ಮಕೀರ್ತಿತಂ ॥೧೫॥ ಯದೇವಾಖಂಡರೂಪಂ ಸ್ಯಾದೇತದ್ಭಕ್ತಸ್ಯ ಲಕ್ಷಣಂ । ಗುರುರ್ಲಿಂಗಂ ಚರಶ್ಚೇಷಃಪಾದಾಂಭಶ್ಚೈಕರೂಪಕಂ॥೧೬॥ ಅಲಘು ರ್ಯದ್ಬೃಹದ್ವಸ್ತು ಪರಿಪೂರ್ಣಂ ಗುರುಸ್ಸ್ಮೃತಂ। ದೃಶ್ಯಂ ಲೀನಂ ಜಗದ್ಯಸ್ಮಿನ್ ತನ್ನಿತ್ಯಂಲಿಂಗಮುಚ್ಯತೇ ॥೧೭॥ ಸ್ವಯಂಪ್ರಕಾಶರೂಪಶ್ಚ ಸಚ್ಚಿಜ್ಜಂಗಮ ಇಷ್ಯತೇ । ಸೌಖ್ಯಂ ಶತಗುಣಾಧಿಕ್ಯಂ ಪ್ರಸಾದೋಽಯಂವಿಶಿಷ್ಯತೇ ॥೧೮॥ ಏತೇಷಾಂ ಸ್ವರಸಾಪೂರ್ಯೈ ಸ್ಸರಸೀ

ದಿ ಭಕ್ತನ ಲಕ್ಷಣವಾಗಿರುವುದು. ಅದು ಕಾರಣದಿಂದಲೇ ಲಿಂಗವು ಜಂಗಮವು ಭಕ್ತನು ಈಮೂರುಕೂಡ ಒಂದೇ ಸ್ವರೂಪವಾಗಿ ಮೆರೆದಿರುವುದು॥೧೪॥ಮತ್ತೂ ದೇಹವು ಪ್ರಾಣಕ್ಕೆ ಹೇಗೆ ಆಶ್ರಯವೋ ಪ್ರಾಣವು ದೇಹಕ್ಕೆ ಹೇಗೆ ಆಶ್ರಯವೋ ಹಾಗೆ ಲಿಂಗವು ಜಂಗಮಕ್ಕೆ ಆಶ್ರಯವು. ಜಂಗಮವು ಲಿಂಗಕ್ಕೆ ಆಶ್ರಯವು ಈ ಲಿಂಗ ಜಂಗಮದ ಸಂಯೋಗವೇ ಅನಾದಿಭಕ್ತನಾಗಿರುವುದರಿಂದಲೇ ಆಗಮ ಸಂಪ್ರದಾಯಾನುಸಾರವಾಗಿ ಅನಾದಿ ಭಕ್ತನು—ನಿತ್ಯವು, ಪೂರ್ಣವು, ಚಿದಾನಂದವು, ಸದ್ರೂಪವು, ಪರಬ್ರಹ್ಮತ್ವವು, ಅಖಂಡರೂಪವು— ಈ ಆರು ಲಕ್ಷಣಂಗಳುಳ್ಳವನೆಂದು ಹೇಳಿಸಿಕೊಂಡು,—ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ—ಇವೆಲ್ಲವೂ ಒಂದೇ ಸ್ವರೂಪವಾಗಿರುವುದು. ॥೧೬॥ ಆದರೆ ಲೋಕದಲ್ಲಿ ಯಾವುದು—ಲಘುವಲ್ಲದುದಾಗಿಯೂ, ದೊಡ್ಡವಸ್ತುವಾಗಿಯೂ, ಪರಿಪೂರ್ಣವಾಗಿಯೂ ಇರುವುದೋ ಆ ವಸ್ತುವೇ ಗುರು ಎಂಬದಾಗಿ ಹೇಳಿಸಿಕೊಳ್ಳಲ್ಪಡುತ್ತದೆ. ನಿತ್ಯವಾದ ಯಾವ ವಸ್ತುವಿನಲ್ಲಿ ಕಾಣತಕ್ಕ ಈ ಚರಾಚರಾತ್ಮಕವಾದ ಜಗತ್ತು ಐಕ್ಯವಾಗುವುದೊ ಆ ವಸ್ತುವೇ ಲಿಂಗವೆಂಬುದಾಗಿ ಹೇಳಿಸಿಕೊಳ್ಳಲ್ಪಡುತ್ತದೆ ॥೧೭॥ ಯಾವ ವಸ್ತುವು ಸ್ವಯಂಪ್ರಕಾಶರೂಪವಾಗಿ ಸದ್ರೂಪವೂ ಚಿದ್ರೂಪವೂ ಆಗಿರುವುದೋ ಆ ವಸ್ತುವೇ ಜಂಗಮವೆಂಬದಾಗಿ ಹೇಳಿಸಿಕೊಳ್ಳಲ್ಪಡುತ್ತದೆ. ಯಾವ ವಸ್ತುವಿನಲ್ಲಿ ಶತಗುಣಾಧಿಕವಾದ ಸೌಖ್ಯವು ಪ್ರಾಪ್ತವಾಗುವುದೋ ಆ ವಸ್ತುವೇ ಪ್ರಸಾದವೆಂಬುದಾಗಿ ಹೇಳಿಸಿಕೊಳ್ಳಲ್ಪಡುತ್ತದೆ ॥೧೮॥ ಮತ್ತೂ ಗುರು, ಲಿಂಗ, ಜಂಗಮ, ಪ್ರಸಾದ ಈ ನಾಲ್ಕು ವಸ್ತುಗಳೂ ಕೂಡ ತಮ್ಮಷ್ಟಕ್ಕೆ ತಾವೇ ಸಮರಸವಾಗಿ, ಏಕೀಕರಿಸಿದ ಆ ವಸ್ತುವು ಯಾವಾ

ಕೃತಚಿಧ್ಭಿದಂ। ಏತತ್ಪಾದೋದಕಂ ವಿಂದ್ಯಾತ್ತದ್ರೂಪೋ ಭಕ್ತ ಉಚ್ಯತೇ ॥೧೯॥ ಆಚಾರೋ ಗುರುಸಂಬಂಧೋ ನಿಷ್ಠಾ ತಲ್ಲಿಂಗಸಂಯುತಾ। ಸುಜ್ಞಾನಂ ಜಂಗಮಶ್ಚೈವ ಪ್ರತ್ಯಕ್ಷಂಚ ಪ್ರಸಾದಕಃ ॥೨೦॥ ತತ್ತದೇಕರಸಂಚೈವ ಪಾದೋದಕ ಮಿದಂಶೃಣು । ಇದಂಚಾನಾದಿಭಕ್ತಸ್ಯ ಪಂಚಾಚಾರಸ್ವರೂಪಕಂ ॥೨೧॥ ತಸ್ಯರೂಪಾಂತರೇಣೈವಂ ಷಡ್ವಿಧಾಚಾರಲಕ್ಷಣಂ। ಅಖಂಡಪೂರ್ಣಂ ನಿತ್ಯಂಚ ಚಿತ್ಪ್ರಕಾಶಂಪ್ರಕೀರ್ತಿತಂ ॥೨೨॥ ಪರಾನಂದಂ ಚಿದ್ರಸಂಚ ಷಡ್ವಿಧಂ ಭಕ್ತಲಕ್ಷಣಂ। ಪೂರ್ಣಂ ನಿತ್ಯಂ ಚಿತ್ಪ್ರಕಾಶಂ ಪರಾನಂದಂಚ ಚಿದ್ರಸಂ ॥೨೩॥ ಅಖಂಡತ್ವಂ ಮಹಾದೇವಿ ಷಡ್ವಿಧಂ ಗುರುಲಕ್ಷಣಂ । ನಿತ್ಯಂ ಪೂರ್ಣಂ ಚಿತ್ಪ್ರಕಾಶಂ ಪರಾನಂದಂಚ ಚಿದ್ರಸಂ ॥೨೪॥ ಶೃಣುದೇವಿ ಹ್ಯಖಂಡತ್ವಂ ಷಡ್ವಿಧಂ ಲಿಂಗಲಕ್ಷಣಂ। ಚಿತ್ಪ್ರಕಾಶಂ ಪೂರ್ಣನಿತ್ಯೇ ಪರಮಾನಂದಚಿ

ಗ ಜ್ಞಾನಾಚಾರದಿಂದ ಭೇದಿಸಲ್ಪಡುತ್ತದೆಯೋ ಆವಾಗ ಆ ವಸ್ತುವಿಗೆ ಪಾದೋದಕವೆಂಬುದಾಗಿ ಹೆಸರು ಬರುವುದು. ಮತ್ತೂ ಆ ಪಾದೋದಕಸ್ವರೂಪವೇ ಭಕ್ತನು. ॥೧೯॥ ಆದುದರಿಂದಲೇ ಗುರುಸಂಬಂಧವಾದ ಕ್ರಿಯೆಗೆ ಆಚಾರವೆಂಬದಾಗಿ ಹೆಸರು. ಲಿಂಗಸಂಬಂಧವಾದ ವ್ಯಾಪಾರಕ್ಕೆ ನಿಷ್ಠೆ ಎಂಬದಾಗಿ ಹೆಸರು. ಜಂಗಮ ಸಂಬಂಧವಾದ ಕ್ರಿಯೆಗೆ ಸುಜ್ಞಾನವೆಂಬದಾಗಿ ಹೆಸರು. ಪ್ರಸಾದ ಸಂಬಂಧವಾದ ಕ್ರಿಯೆಗೆ ಅನುಭವವೆಂಬದಾಗಿ ಹೆಸರು. ಪಾದೋದಕ ಸಂಬಂಧವಾದ ಕ್ರಿಯೆಗೆ ಸಮರಸವೆಂಬದಾಗಿ ಹೆಸರುಂಟಾಗಿ, ಈ ಆಚಾರ, ನಿಷ್ಠೆ, ಸುಜ್ಞಾನ, ಅನುಭವ, ಸಮರಸಗಳೆಂಬ ಈ ಐದೂ ಕೂಡ ಅನಾದಿಭಕ್ತನ ಪಂಚಾಚಾರ ಸ್ವರೂಪವೆಂಬದಾಗಿ ಹೇಳಲ್ಪಟ್ಟಿತು. ॥೨೧॥ ಮತ್ತೂ ಆ ಅನಾದಿಭಕ್ತನೇ ಮೊದಲಾದುವುಗಳಿಗೆ ರೂಪಾಂತರದಿಂದ ಷಡ್ವಿಧಾಚಾರಲಕ್ಷಣವನ್ನು ಹೇಳುತ್ತೇನೆ. ಹೇಗೆಂದೊಡೆ—ಅಖಂಡವು, ಪೂರ್ಣವು, ನಿತ್ಯವು, ಚಿತ್ಪ್ರಕಾಶವು, ಪರಾನಂದವು,ಚಿದ್ರಸವು— ಈ ಆರೂ ಅನಾದಿ ಭಕ್ತನ ಲಕ್ಷಣವು ॥ ಪೂರ್ಣವು, ನಿತ್ಯವು, ಚಿತ್ಪ್ರಕಾಶವು, ಪರಾನಂದವು, ಚಿದ್ರಸವು, ಅಖಂಡತ್ವವು ಈ ಆರೂ ಗುರುಲಕ್ಷಣವು ॥ ಎಲೌ ಪಾರ್ವತಿಯೆ ! ಕೇಳು—ನಿತ್ಯವು, ಪೂರ್ಣವು, ಚಿತ್ಪ್ರಕಾಶವು, ಪರಾನಂದವು, ಚಿದ್ರಸವು, ಅಖಂಡತ್ವವು ಈ ಆರೂಕೂಡ ಲಿಂಗಲಕ್ಷಣವು ॥ ಚಿತ್ಪ್ರಕಾಶವು, ಪೂರ್ಣವು, ನಿತ್ಯವು, ಪರಾನಂದವು, ಚಿದ್ರಸವು ಅಖಂಡತ್ವವು ಈ ಆರೂ ಕೂಡ ಜಂಗಮಲಕ್ಷಣವು॥ ಪರಮಾನಂದವು, ಪೂರ್ಣವು, ನಿತ್ಯವು,

ದ್ರಸಾ॥೨೫॥ಅಖಂಡತ್ವಂ ಮಹಾದೇವಿ ಷಡ್ವಿಧಂ ಚರಲಕ್ಷಣಂ। ಪರಮಾ ನಂದಪೂರ್ಣೇಚ ನಿತ್ಯತ್ವಂ ಚಿತ್ಪ್ರಕಾಶಕಂ॥೨೬॥ ಚಿದ್ರಸಂಸ್ಯಾದಖಂ ಡತ್ವಂ ಷಡ್ವಿಧಂ ಶೇಷಲಕ್ಷಣಂ।ಚಿದ್ರಸಂಪೂರ್ಣನಿತ್ಯೇಚಚಿತ್ಪ್ರಕಾಶಂ ಮಮಪ್ರಿಯೆ॥೨೭॥ಪರಾನಂದ ಮಖಂಡತ್ವಂ ಷಡ್ವಿಧಂ ತೀರ್ಥಲಕ್ಷಣಂ। ಇದಂತಸ್ಯ ಪೃಥಙ್ಮಿಶ್ರಷಡ್ವಿಧಾಚಾರಲಕ್ಷಣಂ॥೨೮॥ ಗುರುರ್ಲಿಂಗಂ ಚರ ಶ್ಚೈವ ಪ್ರಸಾದಃ ಪಾದವಾರಿಚ।ಭೂತಿರುದ್ರಾಕ್ಷಮಂತ್ರಾಶ್ಚ ಭಕ್ತಾಂಗ ಮಿತಿಕಥ್ಯತೆ ॥೨೯॥ ಭೂತಿಃ ಪರಾನುಭೂತಿರ್ಹಿ ಸ್ನಾನಂ ತತ್ರಾವಗಾ ಹನಂ । ತ್ರಿಪುಂಡ್ರಂ ತ್ರಿಗುಣೋಭಾವೋ ಹ್ಯಲಿಂಗಂ ಲಿಂಗಮೇವತತ್ ॥೩೦॥ ಮನೋಮುಖಾನಿ ಚಾಕ್ಷಾನಿ ರುದ್ರಾಕ್ಷಾಣಿ ವಿಧಾಯಮೈ । ಚ

ಚಿತ್ಪ್ರಕಾಶವು, ಚಿದ್ರಸವು ಅಖಂಡತ್ವವು ಈ ಆರೂಕೂಡ ಪ್ರಸಾದ ಲಕ್ಷಣವು ॥ ಚಿದ್ರಸವು, ಪೂರ್ಣವು, ನಿತ್ಯವು, ಚಿತ್ಪ್ರಕಾಶವು, ಪರಾನಂದವು, ಅಖಂಡತ್ವವು ಈ ಆರೂ ಕೂಡ ತೀರ್ಥಲಕ್ಷಣವು ॥ ಈರೀತಿಯಾಗಿ ಅನಾದಿ ಭಕ್ತನೊಡನೆ—ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕಗಳು ಪ್ರತ್ಯೇಕ ಪ್ರತ್ಯೇಕವಾಗಿ ಮಿಶ್ರವಾಗಿ ಒಂದೊಂದು ಆರಾರು ವಿಧಂಗಳಾದ ಲಕ್ಷಣಗಳುಳ್ಳವುಗಳಾದುವು. ॥೨೮॥ ಮತ್ತೂ ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ಭೂತಿ, ರುದ್ರಾಕ್ಷ, ಮಂತ್ರ— ಈ ಎಂಟೂ ಕೂಡ ಅನಾದಿಭಕ್ತನಿಗೆ ಅಂಗಗಳೆಂಬದಾಗಿ ಹೇಳಲ್ಪಟ್ಟುವು ॥೨೯॥ ಮತ್ತೂ ಭೂತಿಯು ಎಂದೊಡೆ— ಆ ಪರಬ್ರಹ್ಮದ ಅನುಭವವನ್ನುಂಟುಮಾಡುವುದ ರಿಂದ ಇದಕ್ಕೆ ಭೂತಿಯೆಂಬದಾಗಿ ಹೆಸರುಂಟಾಯಿತು. ಮತ್ತೂ ಭೂತಿಸ್ನಾನವೆಂ ದೊಡೆ ಆ ಪರಬ್ರಹ್ಮದಲ್ಲಿಯೇ ಬೆರೆದು ಆ ಸಮರಸ ಭಾವರೂಪವಾದ ನಿತ್ಯ ಸುಖ ವನ್ನೇ ಕೊಡುವುದರಿಂದ ಇದಕ್ಕೆ ಭೂತಿಸ್ನಾನವೆಂಬದಾಗಿ ಹೆಸರುಂಟಾಯಿತು. ಮತ್ತೂ ಭೂತಿ ತ್ರಿಪುಂಡ್ರವೆಂದೊಡೆ ಸತ್ವಗುಣ, ರಜೋಗುಣ, ತಮೋಗುಣಗಳ ಸ್ವರೂಪಗಳನ್ನು ಭಿನ್ನಭಿನ್ನವಾಗಿ ತೋರಿಸುತ್ತ ಆ ಮೂರು ಗುಣಗಳ ಸ್ವರೂಪವನ್ನೂ ನಾಶಮಾಡಿ ಸತ್ವಮಯವನ್ನಾಗಿಯೇ ಮಾಡುವುದರಿಂದ ಇದಕ್ಕೆ ಭೂತಿತ್ರಿಪುಂಡ್ರವೆಂ ಬುದಾಗಿ ಹೆಸರುಂಟಾಯಿತು. ಏನೇನೂ ಚಿಹ್ನೆಯಿಲ್ಲದೆ ಇರುವ ವಸ್ತುವಿಗೆ ಒಂದು ಚಿಹ್ನೆಯು ಪ್ರಾಪ್ತವಾದುದರಿಂದ ಇದಕ್ಕೆ ಲಿಂಗ ಎಂಬುದಾಗಿ ಹೆಸರುಂಟಾಯಿತು ॥೩೦॥ ಮನ, ಬುದ್ಧಿ, ಚಿತ್ತ, ಅಹಂಕಾರಗಳೆಂಬ ಚತುಷ್ಕರಣಗಳು—ವಾಕ್,ಪಾದ, ಪಾಣಿ, ವಾಯು, ಉಪಸ್ಥಗಳೆಂಬ ಕರ್ಮೇಂದ್ರಿಯ ಪಂಚಕಗಳು, ತ್ವಕ್ಕು, ಚಕ್ಷು, ಶ್ರೋತ್ರ, ಜಿಹ್ವಾ, ಘ್ರಾಣಗಳೆಂಬ—ಜ್ಞಾನೇಂದ್ರಿಯ ಪಂಚಕಗಳು—ಈ ಹದಿನಾಲ್ಕು

ತುರ್ದಶ ಕ್ರಮಾಧ್ಧಾರ್ಯಾ ಣ್ಯೇತದ್ರುದ್ರಾಕ್ಷಧಾರಣಂ ॥೩೧॥ ಪಂಚಷ ಡ್ವಿಧತತ್ವಾನಿ ನಕ್ಷರಂತೆ ಸಮಾಸತಃ। ಯಸ್ಯಾಂ ಪಂಚಾಕ್ಷರೀ ಸಾಚಸ್ಯ ಯಮೇವಷಡಕ್ಷರೀ ॥೩೨॥ ಇತ್ಯಷ್ಟಾವರಣಂ ತಸ್ಯ ತನ್ವಷ್ಟಕ ಮುದೀ ರಿತಂ । ಆಚಾರಪಂಚಕಂ ರೂಪಷಟ್ಕ ಮಾವರಣಾಷ್ಟಕಂ ॥೩೩॥ ತನ್ವಷ್ಟಕಂ ಸ್ವಸ್ವರೂಪಾದ್ವಿಭಿನ್ನಂ ತಸ್ಯಬಿಭ್ರತಃ । ಭವೇದನಾದಿಭಕ್ತ ಸ್ಯ ಸ್ವರೂಪಮಿದ ಮೇವಹಿ ॥೩೪॥ ಸರ್ವಕಾರಣರೂಪಂಚ ಸರ್ವತತ್ವ ಪರಂ ತಥಾ । ಅನಾದಿಭಕ್ತರೂಪಂತು ತವೋದಿತ ಮಿದಂಶೃಣು॥ ೩೫ ॥ ಭಕ್ತೋೀ ನಿರೂಢೇನಿಜಭಾವರೂಪಿಣಿ ನಿರಾಶ್ರಯಾನಂದನಿವಾಸದಾಯಿ

ಇಂದ್ರಿಯಗಳನ್ನೂ ಶುದ್ಧಗಳನ್ನಾಗಿ ಮಾಡುವುದರಿಂದ ಇದಕ್ಕೆ ರುದ್ರಾಕ್ಷ-ಎಂಬದಾಗಿ ಹೆಸರುಂಟಾಯಿತು, ಆದುದರಿಂದಲೇ ರುದ್ರಾಕ್ಷಧಾರಣೆಯು ಅವಶ್ಯಕವಾಗಿ ಮಾಡತ ಕ್ಕದು ॥೩೧॥ ಯಾವುದರಲ್ಲಿ—ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಐದುತತ್ವಗಳು ಸಂಕ್ಷೇಪವಾಗಿ, ನಾಶವಾಗದೆ ಸ್ಥೂಲವಾಗಿಯೇ ಕಾಣಿಸಿಕೊಳ್ಳುವು ವೋ ಅದೇ ಪಂಚಾಕ್ಷರೀ ಮಂತ್ರವೆನಿಸುವುದು. ಮತ್ತೂ ಯಾವುದರಲ್ಲಿ—ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಆತ್ಮಗಳೆಂಬ ಈ ಆರು ತತ್ವಗಳು ಸಂಕ್ಷೇಪ ವಾಗಿ ನಾಶವಾಗದೆ ಸ್ಥೂಲವಾಗಿಯೇ ಕಾಣಿಸಿಕೊಳ್ಳುವವೋ ಅದೇ ಷಡಕ್ಷರೀಮಂತ್ರ ವೆನಿಸುವುದು ॥೩೨॥ ಈರೀತಿಯಾಗಿ ಹೇಳಲ್ಪಟ್ಟ—ಗುರು, ಲಿಂಗ, ಜಂಗಮ, ಪ್ರಸಾ ದ, ಪಾದೋದಕ, ವಿಭೂತಿ, ರುದ್ರಾಕ್ಷ, ಮಂತ್ರಗಳೆಂಬ ಈ ಎಂಟು ಆ ಅನಾದಿಭಕ್ತ ನಿಗೆ ಅಷ್ಟಾಂಗವೆಂದು ಹೇಳಲ್ಪಟ್ಟಿತು. ಮತ್ತೂ ಇಂತೊಪ್ಪುವ ಭಕ್ತನ ಮನವೇ ಲಿಂಗ, ತನ್ಮನದ ಜ್ಞಾನವೇ ಜಂಗಮ, ಆಜ್ಞಾನದ ಪರಿಪೂರ್ಣತ್ವವೇ ಗುರು, ತದ್ಭಕ್ತನೇ ಶೇಷ, ಆಜ್ಞಾನದ ಸಾರವೇ ಪಾದೋದಕ, ಆಜ್ಞಾನದ ಪ್ರಕಾಶವೇ ವಿಭೂತಿ, ಆಯಾಯ ಕರಣಂಗಳ ಮೇಲೆ ಕರೆವ ಜ್ಞಾನಸಾರಾಮೃತದ ವೃಷ್ಟಿಯೇ ರುದ್ರಾಕ್ಷ, ಭಕ್ತನ ನಾ ಮವೇ ಮಂತ್ರ—ಹೀಗಾಗಲಾಗಿ, ಅಷ್ಟಾವರಣಸಂಯುಕ್ತನೆನಿಸಿರುವುದರಿಂದ ಆ ಅ ನಾದಿ ಭಕ್ತನಿಗೆ—ಆಚಾರ, ನಿಷ್ಠೆ, ಸುಜ್ಞಾನ, ಅನುಭವ, ಸಮರಸಗಳೆಂಬ ಪಂಚಾ ಚಾರವು ॥ ಅಖಂಡ, ಪೂರ್ಣ, ನಿತ್ಯ, ಚಿತ್ಪ್ರಕಾಶ, ಪರಾನಂದ, ಚಿದ್ರಸಗಳೆಂಬ ಈ ಷಡ್ರೂಪವು ॥ಗುರು, ಲಿಂಗ, ಜಂಗಮ,ಪ್ರಸಾದ, ಪಾದೋದಕ ವಿಭೂತಿ, ರುದ್ರಾ, ಕ್ಷ, ಮಂತ್ರಗಳೆಂಬ ಈ ಅಷ್ಟಾವರಣವು, ಈ ಅಷ್ಟತನುವು ತನ್ನ ಸ್ವರೂಪಿಗೆ ಭಿನ್ನ ಗಳಾಗಿದ್ದಾಗ್ಯೂ ಅವುಗಳನ್ನು ದರಿಸಿದ ಅನಾದಿಭಕ್ತನಿಗೆ ಅವು ಸ್ವಸ್ವರೂಪವಾಗಿಯೇ ಇರುವುವು. ॥೩೪॥ ಆದುದರಿಂದಲೇ ಎಲೈ ಲಿಂಗಪ್ಪ ಮಂತ್ರಿಯೆ ! ಸರ್ವಕಾರಣ

ನಿ।ನಿರ್ದೇಹಕೇನಿರ್ವಿಷಯೇ ನಿರಿಂದ್ರಿಯೇ ನಿಷ್ಕೇವಲೇ ನಿತ್ಯಪದೇ ವಿರಾಜಿತೇ ॥೩೬॥ ಇದಂಚಾನಾದಿಭಕ್ತಸ್ಯ ಸ್ವರೂಪಂ ಪರಿಕೀರ್ತಿತಂ । ತಸ್ಯ ಕಾರಣಮೂರ್ತೀನಾಮಾಶ್ರಯತ್ವ ಮಥೋಚ್ಯತೇ॥೩೭॥ ಪಶ್ಚಿಮೇಽನಾದಿ ಭಕ್ತಸ್ಯ ಹೃದಿಭಾತಿ ನಿರಂಜನಃ । ಶಿಖಾಯಾಂ ಶೂನ್ಯಲಿಂಗಂತು ಬ್ರಹ್ಮರಂಧ್ರೇ ಚಿದಂಬರಂ ॥೩೮॥ ಭ್ರೂಮಧ್ಯೇ ಶಿವಭಕ್ತಿಶ್ಚ ಕಂಠೇ ಪಂಚೈವ ಶಕ್ತಯಃ । ಕಲಾಪಂಚಕಮೇವಂಸ್ಯಾ ನ್ಮುಖಪಂಚಕ ಮೇವಚ ॥೩೯॥ ಸಾದಾಖ್ಯಪಂಚಕಂ ನಾದಪಂಚಕಂ ಮೂರ್ತಿಪಂಚಕಂ । ಅನಾಹತೇ ತಸ್ಯಭಾತಿ ಚೇಶ್ವರಾಷ್ಟಕ ಮೇವಚ ॥೪೦॥ ಮಣಿಪೂರಕಚಕ್ರಸ್ಯ ಪಂಚವಿಂಶತಿಮೂರ್ತಯಃ । ಸ್ವಾಧಿಷ್ಠಾನೇ ತಸ್ಯ ಚೈಕಾದಶರುದ್ರಾಃ ಪ್ರಕೀರ್ತಿತಾಃ॥೪೧॥ ತಸ್ಯಾಧಾರೇ ವಿರಾಡಂತರ್ಯಾಮಿಹೈರಣ್ಯಗರ್ಭಕಾಃ। ಬ್ರಹ್ಮಣೋ ನವಭೇದಾಶ್ಚ ವಿಷ್ಣೋಶ್ಚ ದಶಮೂರ್ತಯಃ ॥೪೨॥ ಏವಂ

ರೂಪವೂ ಸರ್ವ ತತ್ವಪರವೂ ಆಗಿರುವ ಅನಾದಿಭಕ್ತನ ಲಕ್ಷಣವನ್ನು ನಿನಗೋಸ್ಕರವಾಗಿ ಹೇಳಿದೆನು. ಮತ್ತೆ ಕೇಳು ॥೩೫॥ ನಿರೂಢವಾಗಿಯೂ, ನಿಜಭಾವರೂಪಿಯಾಗಿಯೂ, ನಿರಾಶ್ರಯವಾಗಿಯೂ, ಆನಂದ ನಿವಾಸದಾಯಿಯಾಗಿ ನಿರ್ದೇಹಕವಾಗಿಯೂ, ನಿರ್ವಿಷಯವಾಗಿಯೂ, ನಿರಿಂದ್ರಿಯವಾಗಿಯೂ, ನಿಷ್ಕೇವಲವಾಗಿಯೂ, ನಿತ್ಯಪದದಲ್ಲಿಯೇ ವಿರಾಜಿಸತಕ್ಕದಾಗಿಯೂ, ಇರುವ ಯಾವ ಸ್ವರೂಪವುಂಟೋ ಆ ಸ್ವರೂಪೇ ಅನಾದಿ ಭಕ್ತನ ಲಕ್ಷಣವಾಗಿರುವುದು ॥ ಅನಂತರ ಆ ಅನಾದಿ ಭಕ್ತನ ಚಿದ್ಗರ್ಭಾಂಡದಲ್ಲಿ ನಿವಾಸಿಸಿಕೊಂಡು ಆತನನ್ನೇ ಆಶ್ರಯಿಸಿಕೊಂಡಿರುವವುಗಳಾಗಿಯೂ, ವಿಶ್ವಯೋನಿಗಳಾಗಿ ನಿಯಮಿಸಲ್ಪಟ್ಟವುಗಳಾಗಿಯೂ ಇರುವ ಎಂಭತ್ತುಮೂರು ಮೂರ್ತಿಗಳನ್ನು ಹೇಳುತ್ತೇನೆ ಕೇಳು:-ಅವಾವಾವೆಂದೊಡೆ,—ಅನಾದಿ ಭಕ್ತನ-ಪಶ್ಚಿಮ ಚಕ್ರದಲ್ಲಿ ನಿರಂಜನ ಜಂಗಮವು, ಶಿಖೆಯಲ್ಲಿ ಶೂನ್ಯಲಿಂಗವು, ಬ್ರಹ್ಮರಂಧ್ರದಲ್ಲಿ ಚಿಂದಬರಲಿಂಗವು, ಭ್ರೂಮಧ್ಯದಲ್ಲಿ ಶಿವಭಕ್ತಿಯು, ಕಂಠದಲ್ಲಿ ಪಂಚಶಕ್ತಿಗಳು, ಕಲಾಪಂಚಕಗಳು, ಮುಖಪಂಚಕಗಳು, ಸಾದಾಖ್ಯಪಂಚಕಗಳು, ನಾದಪಂಚಕಗಳು, ಮೂರ್ತಿಪಂಚಕಗಳು ॥ ಅನಾಹತದಲ್ಲಿ ಈಶ್ವರಾಷ್ಟಕಗಳು ॥ ೪೦ ॥ ಮಣಿಪೂರಕ ಚಕ್ರದಲ್ಲಿ ಪಂಚವಿಂಶತಿ (ಇಪ್ಪತ್ತೈದು) ಮೂರ್ತಿಗಳು, ಸ್ವಾಧಿಷ್ಠಾನ ಚಕ್ರದಲ್ಲಿ ಏಕಾದಶರುದ್ರರು ॥೪೧॥ ಆಧಾರಚಕ್ರದಲ್ಲಿ ವಿರಾಟ್ ಅಂತರ್ಯಾಮಿ ಹಿರಣ್ಯಗರ್ಭರು, ನವಬ್ರಹ್ಮರು, ವಿಷ್ಣುವಿನ ದಶಮೂರ್ತಿಗಳು ಕೂಡ ಶೋಭಿಸಿ

ಹ್ಯನಾದಿಭಕ್ತಸ್ಯ ಚಿದ್ಗರ್ಭಾಂಡನಿವಾಸಿನಃ । ತ್ರ್ಯಶೀತಿಮೂರ್ತಯಃ ಪ್ರೋಕ್ತಾ ನಿಯಮವ್ಯಾ ವಿಶ್ವಯೋನಯಃ ॥೪೩॥ ಏವಂಹ್ಯನಾದಿಭಕ್ತಸ್ಯ ಲಕ್ಷಣಂ ಪರಿಕೀರ್ತಿತಂ । ಭಕ್ತಸ್ಯ ಪಶ್ಚಿಮಹೃದಿ ಸ್ಥಿತೊ ಯೋಽನಾದಿ ಜಂಗಮಃ ॥೪೪॥ ತಸ್ಯಸ್ತ್ವರೂಪ ಮಧುನಾ ಸಮಾಸೇನ ಪ್ರಕಾಶ್ಯತೇ । ಪಶ್ಚಾದನಾದಿಭಕ್ತಸ್ಯ ಹೃಚ್ಚಿತ್ಪದ್ಮಾಂತರೆ ಸದಾ॥೪೫॥ ಚಿನ್ಮಂಡಲತ್ರಯೋಪೇತಪ್ರಣವಾಸನಮಧ್ಯಗಃ । ನಿರಂಜನ ಸ್ತತ್ಪ್ರಣವಸ್ವರೂಪೋಽತ್ರ ನಿಗದ್ಯತೇ ॥೪೬॥ ನಿರಾಕೃತಂ ರಂಜನಂ ಯನ್ಮಾಯಾಮೋಹವಿಜೃಂಭಿತಂ। ಯೇನಸ್ವರೂಪಸಿದ್ಧೇನ ಸಭವೇದ್ಧಿ ನಿರಂಜನಃ । ತದೇವ ನಿಷ್ಕಳಂಬ್ರಹ್ಮ ನಿರ್ವಿಕಲ್ಪಂ ನಿರಂಜನಂ ॥೪೭॥ ನಿರ್ನಾಮಂ ನಿರವಗ್ರಹಂ ನಿರಶನಂ ನಿಷ್ಕಾರಣಂ ನಿಷ್ಕಳಂ ನಿಸ್ಸಂಗಂ ನಿರುಪಾಧಿಕಂ ನಿರುಪಮಂ ನಿಷ್ಪ್ರಕ್ರಿಯಂ ನಿಶ್ಚಲಂ । ನಿಷ್ಪುಣ್ಯಂ ನಿರನುಗ್ರಹಂ ನಿರಧಿಕಂ ನಿರ್ವಾಸನಂ ನಿರ್ವಹಂ ನಿರ್ವೇದ್ಯಂ ನಿರಘಂ ನಿರಂಜನಪದಂ ಚೈತನ್ಯಬೀಜ್ಜಂಗಮಂ ॥೪೮॥ ಆದ್ಯಂತರಹಿತಂ ಜ್ಯೋತಿ ರನಾದಿಃ ಪ್ರಭುರವ್ಯಯಃ । ಅನಾದೇ

ರುವರು ॥೪೩॥ ಆದಕಾರಣದಿಂದಲೇ ಮೇಲೆ ಹೇಳಲ್ಪಟ್ಟ ಎಂಭತ್ತುಮೂರು ಮೂರ್ತಿಗಳು ಕಾರಣಮೂರ್ತಿಗಳೆನಿಸಿಕೊಂಡವು. ಎಲೈ ಲಿಂಗಪ್ಪ ಮಂತ್ರಿಯೆ! ಇದೇ ಅನಾದಿ ಭಕ್ತನ ಲಕ್ಷಣವಾಗಿರುವುದು॥ಇನ್ನು ಆಅನಾದಿ ಭಕ್ತನ ಪಶ್ಚಿಮ ಚಕ್ರದಲ್ಲಿ ನಿರಂಜನ ಜಂಗಮವು ಶೋಭಿಸಿರುವುದು ॥೪೪॥ ಆ ನಿರಂಜನ ಜಂಗಮಸ್ವರೂಪವನ್ನು ಸಂಕ್ಷೇಪವಾಗಿ ಈಗ ನಿನಗೆ ಹೇಳುತ್ತೇನೆ ಕೇಳು ॥೪೫॥ ಆ ಅನಾದಿ ಭಕ್ತನ ಹೃಚ್ಚಿತ್ಪದ್ಮಾಂತರದಲ್ಲಿ ಯಾವಾಗಲೂ ಚಿನ್ಮಂಡಲತ್ರಯೋಪೇತವಾದ ಪ್ರಣವಾಸನವನ್ನು ಹೊಂದಿ ನಿರಂಜನ ಜಂಗಮವು ಶೋಭಿಸುವುದು. ಆನಿರಂಜನ ಜಂಗಮದ ಲಕ್ಷಣವನ್ನು ಹೇಳುತ್ತೇನೆ ಕೇಳು ॥೪೬॥ ಮಾಯಾ ಮೋಹ ವಿಜೃಂಭಿತವಾದ ಯಾವ ರಂಜನವು ಸ್ವರೂಪಸಿದ್ಧನಾದ ಯಾವನಿಂದ ನಿರಾಕರಿಸಲ್ಪಟ್ಟಿತೋ ಅವನೇ ನಿಷ್ಕಲಬ್ರಹ್ಮವು, ನಿರ್ವಿಕಲ್ಪವು, ನಿರಂಜನವು ಎಂಬದಾಗಿ ಹೇಳಿಸಿಕೊಳ್ಳಲ್ಪಟ್ಟನು. ॥೪೭॥ ಆದುದರಿಂದಲೇ ನಿರ್ನಾಮವು, ನಿರವಗ್ರಹವು, ನಿರಂಜನವು, ನಿಷ್ಕಾರಣವು, ನಿಷ್ಕಳವು, ನಿಸ್ಸಂಗವು, ನಿರುಪಾಧಿಕವು, ನಿರುಪಮವು, ನಿಷ್ಪ್ರಕ್ರಿಯವು, ನಿಶ್ಚಲವು, ನಿಷ್ಪುಣ್ಯವು, ನಿರನುಗ್ರಹವು, ನಿರಧಿಕವು, ನಿರ್ವಾಸನವು, ನಿರ್ವಹವು, ನಿರ್ವೇದ್ಯವು, ನಿರಘವು, ನಿರಂಜನಪದವು, ಆದ್ಯಂತರಹಿತಜ್ಯೋತಿಯು, ಅನಾದಿಯು, ಪ್ರಭುವು, ಅವ್ಯಯವು, ಅನಾದೇಶವು, ಅಸುಸ್ನವು, ಎನಿಸಿ ನಿರಂಜನ ಜಂಗಮವೆಂಬದಾಗಿ ಹೇಳಿಸಿಕೊಳ್ಳಲ್ಪ

ಶೋ ಹ್ಯಯತ್ನಶ್ಚ ಜಂಗಮ ಸ್ಸ್ಯಾನ್ನಿರಂಜನಃ ॥೪೯॥ ಇದಂತಸ್ಯ ನಿರಾಲಂಬಸ್ವರೂಪಂ ಸಮುದೀರಿತಂ । ಚತುರ್ವೇದಾಶ್ಚ ತದ್ಗರ್ಭಂ ಪುರಾಣಂ ತಸ್ಯ ಮಧ್ಯಮಾ ॥೫೦॥ಯೋಗಿನೋಮುನಯ ಸ್ಸರ್ವೆ ಜಂಗಮಾಂಘ್ರಿಂ ಸಮಾಶ್ರಿತಾಃ।ತಸ್ಯದೇಹೆ ಸಮಸ್ತಾನಿ ಭುವನಾನಿ ಚತುರ್ದಶ॥೫೦॥ ಪಾದಯೊ ರತಳಂವಿದ್ಯಾ ತ್ಪಾದೋರ್ಧ್ವಂ ವಿತಳಂತಥಾ।ಜಂಘೆಯೊ ಸ್ಸುತಲಂಜ್ಞೇಯಂ ಜಾನುದೇಶೆಮಹಾತಳಂ ॥೫೨॥ ತಳಾತಳಂತದೂರ್ವ್ಯೋಶ್ಚ ಗುಹ್ಯಸ್ಥಾನೆ ರಸಾತಳಂ । ಕಟಬಂಧೇತು ಪಾತಾಳಂಸಪ್ತಲೋಕಾಸ್ಸಮೀರಿತಾಃ ॥೫೩॥ ಭೂಲೋಕೊ ನಾಭಿಮಧ್ಯೇತು ಭುವರ್ಲೋಕಸ್ತು ಚೋದರೆ।ಸುವರ್ಲೋಕಸ್ತು ಹೃದಯೆ ಜನರ್ಲೋಕಸ್ತು ಕಂಧರೆ॥೫೪॥ ತಾಲ್ವೋಶ್ಚಾಪಿ ತಪೋಲೋಕಸ್ಸತ್ಯಲೋಕೊ ಲಲಾಟಕೆ । ಮಹರ್ಲೋಕಸ್ತುತಸ್ಯ ಮೂರ್ಧ್ನಿ ಚತುರ್ದಶ ಸಮೀರಿತಾಃ ॥೫೫॥ ಬ್ರಹ್ಮಾಂಡಂ ಮಕುಟಂ ತಸ್ಯ ವದನಂ ಗಗನಂ ಶೃಣು । ತದ್ಬಾಹವೊ ದಿಶಸ್ಸರ್ವಾ ನೇತ್ರೆ ಚಂದ್ರದಿವಾಕರೌ॥೫೬॥ ಶರೀರಂ ವ್ಯೋಮರೂಪಂಚ ವಿತಳಂ ಪಾದಪಂ

ಟ್ಟಿತು. ಇಂತಪ್ಪ ಆ ಜಂಗಮವನ್ನು ನಾನು ಭಜಿಸುತ್ತೇನೆ ॥೪೯॥ ಇಂತಪ್ಪ ಆ ನಿರಂಜನ ಜಂಗಮದ ನಿರಾಲಂಬ ಸ್ವರೂಪವು ಹೇಳಲ್ಪಟ್ಟಿತು. ಇನ್ನು ಆ ನಿರಂಜನ ಜಂಗಮದ ಸಾಕಾರ ಸ್ವರೂಪವನ್ನು ಹೇಳುತ್ತೇನೆ ಕೇಳು:—ನಾಲ್ಕು ವೇದಗಳು ಆ ನಿರಂಜನ ಜಂಗಮದ ಗರ್ಭವು, ಪುರಾಣವೇ ಆಜಂಗಮದ ಮಧ್ಯಭಾಗವು. ಸಮಸ್ತ ಯೋಗಿಗಳೂ ಸಮಸ್ತ ಮುನಿಗಳೂ ಆ ಜಂಗಮದ ಪಾದವನ್ನು ಆಶ್ರಯಿಸಿಕೊಂಡಿರುತ್ತಾರೆ. ಮತ್ತೂ ಆ ಜಂಗಮದ ದೇಹದಲ್ಲಿ ಹದಿನಾಲ್ಕು ಲೋಕಗಳು ಇರುವುವು ॥೫೧॥ ಹೇಗೆಂದೊಡೆ. ಆಜಂಗಮನ ಪಾದಗಳಲ್ಲಿ ತಳವು, ಪಾದೋರ್ಧ್ವದಲ್ಲಿ ವಿತಳವು, ಜಂಘೆಗಳಲ್ಲಿ ಸುತಳವು, ಜಾನುದೇಶದಲ್ಲಿ ಮಹಾತಳವು, ತೊಡೆಗಳಲ್ಲಿ ತಳಾತಳವು, ಗುಹ್ಯಸ್ಥಾನದಲ್ಲಿ ರಸಾತಳವು, ಕಟಿಬಂಧದಲ್ಲಿ ಪಾತಾಳವು-ಈರೀತಿಯಾಗಿ ಅಧೋಲೋಕಂಗಳೇಳೂ ವಾಸಿಸಿರುವುವು ॥೫೩॥ ಆ ಜಂಗಮನ ನಾಭಿಮಧ್ಯದಲ್ಲಿ ಭೂಲೋಕವು, ಉದರದಲ್ಲಿ ಭುವರ್ಲೋಕವು, ಹೃದಯದಲ್ಲಿ ಸುವರ್ಲೋಕವು, ಕಂಧರದಲ್ಲಿ ಜನರ್ಲೋಕವು, ತಾಲುಗಳಲ್ಲಿ ತಪೋಲೋಕವು,ಲಲಾಟದಲ್ಲಿ ಸತ್ಯಲೋಕವು,ಮಸ್ತಕದಲ್ಲಿ ಮಹರ್ಲೋಕವು. ಈರೀತಿಯಾಗಿ ಊರ್ಧ್ವಲೋಕಂಗಳೇಳೂ ವಾಸಿಸಿರುವುವು ॥೫೫॥ ಮತ್ತೂ ಬ್ರಹ್ಮಾಂಡವೇ ಆ ನಿರಂಜನ ಜಂಗಮನ ಮಕುಟವು, ಸಮಸ್ತ ದಿಕ್ಕುಗಳೇ ಅವನ ಭುಜಗಳು,ಸೂರ್ಯ ಚಂದ್ರರೇ ನೇತ್ರಗಳು, ಆಕಾಶವೇ ಶರೀರವು, ವಿತಳವೇ ಪಾ

ಕಜಂ। ಕರಸ್ಥಳೆ ಶೂನ್ಯಲಿಂಗಂ ಮೇಘಾಸ್ಸರ್ವೆ ಜಟಾಸ್ಸ್ಮೃತಾಃ॥೫೩॥ ಚಂದ್ರಜ್ಯೋತ್ಸ್ನಾ ವಿಭೂತಿಶ್ಚ ವೇದಾಸ್ಸರ್ವೆ ಕ್ರಿಯಾಮಯಾಃ। ನಕ್ಷತ್ರಾಣಿಚಪುಷ್ಪಾಣಿ ರುದ್ರಾಕ್ಷಾಃ ಕುಲಪರ್ವತಾಃ ॥೫೪॥ ಸಾಗರೋ ಜಲಪಾತ್ರಂಚ ಕಂಥಾ ಸೃಷ್ಟಿಮಯಂಜಗತ್। ಆಸನಂ ಪೃಥಿವೀತಸ್ಯ ಅಹೋರಾತ್ರಂ ಗುಹಾಮಠಂ ॥೫೫॥ ತ್ರಿಕಾಲಜ್ಞಾನಸೌಭಾಗ್ಯ ಮೃತವ ಷಟ್ಸ್ಥಲಂಪ್ರಿಯೆ । ಶೇಷ ಸ್ತಸ್ಯ ಕಟೀಸೂತ್ರಂ ಜ್ಞಾನಮುದ್ರಾಚವಾಙ್ಮಯಿ ॥೬೦॥ ಮೇರುರ್ದಂಡೊ ಗುಣಸೂತ್ರಂ ಗೋತ್ರಂಶಿವಕುಲಂ ಭವೇತ್ । ವನಸ್ಪತಿಶ್ಚ ಲೋಮಾನಿ ಹ್ಯೇವಮೇತಾನಿ ಪಾರ್ವತಿ ॥ ೬೧ ॥ ಇದಂತಸ್ಯಚ ಸಾಕಾರಸ್ವರೂಪಂ ಪರಿಕೀರ್ತಿತಂ। ಏತಸ್ಮಾಜ್ಜಂಗಮಾದೇವ ಶೂನ್ಯಲಿಂಗ ಮಭೂತ್ಸ್ವಯಂ ॥೬೨॥ ತಲ್ಲಿಂಗೇನ ಸಮುದ್ಭೂತಂ ಸರ್ವಮೇತ ದತಶ್ಶೃಣು । ಸಂಜಾತಂಮಕುಟೆಶೂನ್ಯಂ ಶೂನ್ಯಾಜ್ಜಾತಂ ಚಿದಂಬರಂ ॥೬೩॥ ಚಿದಂಬರಾಚ್ಚ ಚಿಚ್ಛಕ್ತಿಃ ಪರಾಶಕ್ತಿರಭೂತ್ತತಃ।

ದಕಮಲವು,ಕರಸ್ಥಲದಲ್ಲಿ ಶೂನ್ಯಲಿಂಗವು,ಮೇಘಗಳೇ ಜಡೆಗಳು, ಚಂದ್ರಚಂದ್ರಿಕೆಯೇ ವಿಭೂತಿಯು, ಸಮಸ್ತ ವೇದಗಳೇ ಕ್ರಿಯಾಮಯಗಳು, ನಕ್ಷತ್ರಗಳೇ ಪುಷ್ಪಗಳು, ಕುಲಪರ್ವತಂಗಳೇ ರುದ್ರಾಕ್ಷೆಗಳು, ಸಮುದ್ರವೇ ಜಲಪಾತ್ರೆಯು, ಸೃಷ್ಟಿಮಯವಾದ ಜಗತ್ತೇ ಕಂಥೆಯು, ಭೂಮಿಯೇ ಆಸನವು,ಅಹೋರಾತ್ರಿಗಳೇ ಗುಹಾಮಠವು,ತ್ರಿಕಾಲಜ್ಞಾನವೇ ಸೌಭಾಗ್ಯವು,ಷಡೃತುಗಳೇ ಷಟ್ಸ್ಥಲವು, ಆದಿಶೇಷನೇ ಕಟಿಸೂತ್ರವು, ವಾಙ್ಮಯತ್ವವೇ ಜ್ಞಾನಮುದ್ರೆಯು,ಮೇರುಪರ್ವತವೇ ದಂಡವು, ಗುಣತ್ರಯಂಗಳೇ ಸೂತ್ರವು, ಶಿವಕುಲವೇ ಗೋತ್ರವು, ವನಸ್ಪತಿಗಳೇ ರೋಮಗಳು ಆಗಿ ಮೆರೆದಿರುವವು. ಈ ಸ್ವರೂಪವೇ ಆ ನಿರಂಜನ ಜಂಗಮನ ಸಾಕಾರ ಸ್ವರೂಪವು, ಎಂದು ಪರಶಿವನು ಪಾರ್ವತಿಗೆ ಬೋಧಿಸಿದನು. ಮತ್ತೂ ಇಂತೊಪ್ಪುವ ಆ ನಿರಂಜನ ಜಂಗಮನ ದೆಸೆಯಿಂದಲೇ ಶೂನ್ಯಲಿಂಗವು ತಾನೇತಾನಾಗಿ ಉತ್ಪನ್ನವಾಯಿತು. ಆ ಶೂನ್ಯಲಿಂಗದ ದೆಸೆಯಿಂದ ಈ ಸಮಸ್ತವೂ ಉತ್ಪನ್ನವಾಯಿತು. ಅದನ್ನು ಕ್ರಮವಾಗಿ ಹೇಳುತ್ತೇನೆ ಕೇಳು—ಆ ನಿರಂಜನ ಜಂಗಮನ ಮಕುಟದಲ್ಲಿ ಶೂನ್ಯಲಿಂಗವು ಉತ್ಪನ್ನವಾಯಿತು. ಆ ಶೂನ್ಯಲಿಂಗದ ದೆಸೆಯಿಂದ ಚಿದಂಬರಲಿಂಗವು ಉತ್ಪನ್ನವಾಯಿತು.॥೬೩॥ ಆ ಚಿದಂಬರಲಿಂಗದ ದೆಸೆಯಿಂದ ಚಿಚ್ಛಕ್ತಿಯು ಉತ್ಪನ್ನವಾಯಿತು. ಆ ಚಿಚ್ಛಕ್ತಿಯ ದೆಸೆಯಿಂದ ಪರಾಶಕ್ತಿಯು ಉತ್ಪನ್ನವಾಯಿತು. ಆ ಪರಾಶಕ್ತಿಯ ದೆಸೆಯಿಂದ ಆದಿಶಕ್ತಿಯು ಉತ್ಪನ್ನವಾಯಿತು. ಆ ಆದಿಶಕ್ತಿಯ ದೆಸೆಯಿಂದ ಇಚ್ಛಾಶಕ್ತಿಯು

ಆದಿಶಕ್ತಿಸ್ತು ತಸ್ಯಾವೈ ಇಚ್ಛಾಶಕ್ತಿ ರಭೂತ್ತತಃ ॥೬೪॥ ಕ್ರಿಯಾಶಕ್ತಿ
ಸ್ತತಸ್ತಸ್ಯಾಃ ಕ್ರಮಾ ದುದ್ಭವತೇಽಯತಃ । ತಸ್ಯಾಸ್ಸಹಸ್ರಾಂಶಕೇಽಚ
ನಾದಕೋಟಿಸಮುದ್ಭವಃ ॥೬೫॥ ತಸ್ಯಸಾಹಸ್ರಾಂಶಕೇಽಚ ಪಂಚಸಾದಾ
ಖ್ಯಸಂಭವಃ । ತೇಷಾಂಸಹಸ್ರಕೈರಂಶೈ ರ್ಜಾತೋ ಮಾಹೇಶ್ವರಸ್ಸ್ವ
ಯಂ॥೬೬॥ತಸ್ಯಕೋಟಿಸಹಸ್ರಾಂಶೆ ವಿಗ್ರಹಃ ಪಂಚವಿಂಶತಿಃ । ತದಂಶ
ಸಂಭವೋ ರುದ್ರ ಸ್ತಸ್ಮಾಜ್ಜಾತೋ ಜನಾರ್ದನಃ ॥೬೭॥ ಜನಾರ್ದನಸ
ಹಸ್ರಾಂಶೆ ಬ್ರಹ್ಮಾ ಲೋಕಪಿತಾಮಹಃ । ಪಿತಾಮಹಾಚ್ಚ ಸಂಜಾತಂ
ಜಗದೇತಚ್ಚರಾಚರಂ ॥೬೮॥ ಅನಾದಿಜಂಗಮೋತ್ಪನ್ನಸೃಷ್ಟಿಕ್ರಮ ಇತೀ
ರಿತಃ । ಅನಾದಿಭಕ್ತಾ ದ್ಯಾಸೃಷ್ಟಿ ರ್ಯಾನಿರಂಜನಜಂಗಮಾತ್ ॥೬೯॥
ಪ್ರಾಕ್ಪಿತಾಮಹಪರ್ಯಂತಂ ತದ್ವತ್ಪೂರ್ವಂ ಪ್ರದರ್ಶಿತೆ । ಶೂನ್ಯಲಿಂಗಾದಿ
ಸೃಷ್ಟೀನಾಂ ಕ್ರಮೊ ವಿದ್ವನ್ನಿರೂಪ್ಯತಾಂ ॥೭೦॥ ಪೃಷ್ಟವಾ ನ್ಮಂತ್ರಿ
ಮೂರ್ಧನ್ಯ ಯತ್ತುತಸ್ಯೋತ್ತರಂಬ್ರುವೆ । ಜ್ವಲತ್ಕಾಲಾನಲಾಭಾಸಾ

ಉತ್ಪನ್ನವಾಯಿತು. ॥೬೪॥ ಆ ಇಚ್ಛಾಶಕ್ತಿಯು ದೆಸೆಯಿಂದ ಕ್ರಿಯಾಶಕ್ತಿಯು ಉತ್ಪನ್ನವಾಯಿತು. ಆ ಕ್ರಿಯಾಶಕ್ತಿಯ ಸಹಸ್ರಾಂಶದ ದೆಸೆಯಿಂದ ನಾದಕೋಟಿಯು ಉತ್ಪನ್ನವಾಯಿತು. ಆ ನಾದಕೋಟಿ ಸಹಸ್ರಾಂಶದ ದೆಸೆಯಿಂದ ಪಂಚಸಾದಾಖ್ಯಗಳು ಉತ್ಪನ್ನವಾದುವು. ಆ ಪಂಚಸಾದಾಖ್ಯಗಳ ಸಹಸ್ರಾಂಶದ ದೆಸೆಯಿಂದ ಈಶ್ವರನ ಪಂಚವಿಂಶತಿ ಮೂರ್ತಿಗಳು ಉತ್ಪನ್ನವಾದುವು. ಆ ಈಶ್ವರನ ದೆಸೆಯಿಂದ ರುದ್ರನು ಉತ್ಪನ್ನನಾದನು. ಆ ರುದ್ರನ ದೆಸೆಯಿಂದ ವಿಷ್ಣುವು ಉತ್ಪನ್ನನಾದನು. ಆ ವಿಷ್ಣುವಿನ ಸಹಸ್ರಾಂಶದ ದೆಸೆಯಿಂದ ಲೋಕಪಿತಾಮಹನಾದ ಬ್ರಹ್ಮನು ಉತ್ಪನ್ನನಾದನು. ಆ ಪಿತಾಮಹನ ದೆಸೆಯಿಂದ ಚರಾಚರಾತ್ಮಕವಾದ ಈ ಜಗತ್ತು ಉತ್ಪನ್ನವಾಯಿತು. ॥೬೫॥ ಅನಾದಿ ಜಂಗಮನಿಂದ ಉತ್ಪನ್ನವಾದ ಸೃಷ್ಟಿಯೇ ಇದು, ಎಂದು ಹೇಳಲು, ಲಿಂಗಪ್ಪ ಮಂತ್ರಿಯು ಕೇಳಿ, ಎಲೈ ಮೌನಪ್ಪ ವಿದ್ವಾಂಸನೆ! ಅನಾದಿಭಕ್ತನೇ ಮೊದಲಾಗಿ ಬ್ರಹ್ಮಪರ್ಯಂತವಾಗಿ ಯಾವ ಸೃಷ್ಟಿಯುಂಟಾಯಿತೋ ಅದೂ, ಮತ್ತು ನಿರಂಜನ ಜಂಗಮನೇ ಮೊದಲಾಗಿ ಬ್ರಹ್ಮಪರ್ಯಂತವಾಗಿ ಯಾವ ಸೃಷ್ಟಿಯುಂಟಾಯಿತೋ ಅದೂ ಕೂಡ ನಿನ್ನಿಂದ ಹೇಳಲ್ಪಟ್ಟಿತು. ಈಗ ಶೂನ್ಯಲಿಂಗವೇ ಮೊದಲಾದ ಸೃಷ್ಟಿಗಳ ಕ್ರಮವು ನಿಮ್ಮಿಂದ ಹೇಳಲ್ಪಡಲಿ, ಎಂದು ಲಿಂಗಪ್ಪ ಮಂತ್ರಿಯು ಪ್ರಾರ್ಥಿಸಲು, ಮೌನಪ್ಪ ವಿದ್ವಾಂಸನು ಕೇಳಿ ಮಂತ್ರಿಯನ್ನು ನೋಡಿ—ಎಲೈ ಮಂತ್ರಿಯೆ ! ಕೇಳು, ಬಳಿಕ ಆ ನಿರಂಜನ ಜಂಗಮದ ಊರ್ಧ್ವಶಿಖೆ

ತಟಿತ್ಕೋಟಿಸಮಪ್ರಭಾ ॥೨೧॥ ತಸ್ಯಚೋರ್ಧ್ವಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾಕಲಾ । ತಸ್ಯಾಂಶಿಖಾಯಾ ಮಚಲಂ ಶೂನ್ಯಲಿಂಗ ಮಜಾಯತ ॥೨೨॥ ತಸ್ಮಾಚ್ಛಿರಸ್ಸಮುತ್ಪನ್ನ ಮಾದಿಜಂಗಮರೂಪಿಣಃ । ಶೂನ್ಯಲಿಂಗ ಮಿತಿಖ್ಯಾತಂ ಸರ್ವಕಾರಣಕಾರಣಂ ॥೨೩॥ ಆದಿಮಧ್ಯಾಂತಶೂನ್ಯತ್ವಂ ಚಿಹ್ನಂ ಲಿಂಗಸ್ಯಯಸ್ಯತತ್ । ಶೂನ್ಯಲಿಂಗಮಿತಿ ಪ್ರೋಕ್ತಮಾಗಮಜ್ಞೈ ರನಾಮಯಂ ॥೨೪॥ ತನುಶ್ಶೂನ್ಯಂ ಮನಶ್ಶೂನ್ಯಂ ಭಾವನಾಭಾವವರ್ಜಿತಂ । ಕಾಮಕ್ರೋಧಾದಿಶೂನ್ಯಂಚ ಶೂನ್ಯಂ ನಾಮೇತಿ ಕೀರ್ತಿತಂ ॥೨೫॥

— ಅಥನಿಷ್ಕಲಲಿಂಗಸ್ಯಸ್ವರೂಪಮುಪವರ್ಣ್ಯತೇ —

ಶೂನ್ಯಲಿಂಗಸ್ಯ ಮಧ್ಯೇತು ನಿಷ್ಕಲಸ್ಯ ಸಮುದ್ಭವಃ । ನವಿದ್ಯತೇಕಲಾ ಯತ್ರ ತನ್ನಿಷ್ಕಲಮುದಾಹೃತಂ ॥೨೬॥ ಲಿಂಗಚಿಹ್ನಂ ನಿಷ್ಕಲತ್ವಂ ಯಸ್ಯ ತತ್ತಾದೃಶಂಭವೇತ್। ಅಲಕ್ಷ್ಯಮದ್ವಯಂ ಶೂನ್ಯ ಮಮೂರ್ತಂ ಪರಮವ್ಯಯಂ ॥೨೭॥ ಅನಾಮಯಾವ್ಯಾಕುಲಂ ಸಿದ್ಧ ಮನಾದ್ಯಂ ಶೈವಮು

ಯು—ಜ್ವಲತ್ಕಾಲಾನಲಾಭಾಸವಾಗಿಯೂ, ತಟಿತ್ಕೋಟಿಸಮಪ್ರಭೆಯಾಗಿಯೂ, ಚಿದ್ರೂಪವಾಗಿಯೂ, ಉತ್ಕೃಷ್ಟವಾದ ತಲೆಯುಳ್ಳದ್ದಾಗಿಯೂ ಕೂಡ ಮೆರೆದಿರುವುದು. ಇಂತೊಪ್ಪುವ ಆ ನಿರಂಜನ ಜಂಗಮದ ಊರ್ಧ್ವಶಿಖೆಯಲ್ಲಿ ನಿಶ್ಚಲವಾದ ಶೂನ್ಯಲಿಂಗವು ಉತ್ಪನ್ನವಾಯಿತು ॥೨೨॥ ಆ ಜಂಗಮನ ಶಿಖೆಯಲ್ಲಿ ಉತ್ಪನ್ನವಾದ ಆ ಶೂನ್ಯಲಿಂಗವೇ ಸಮಸ್ತ ಕಾರಣಗಳಿಗೂ ಕಾರಣವಾಗಿರುವುದು ॥೨೩॥ ಮತ್ತೂ ಯಾವ ವಸ್ತುವು ಆದಿಶೂನ್ಯವೂ, ಮಧ್ಯಶೂನ್ಯವೂ, ಅಂತ್ಯಶೂನ್ಯವೂ ಆಗಿರುವುದೋ ಆವಸ್ತುವೇ ಅನಾಮಯವೆನಿಸಿ, ಯಾವುದಕ್ಕೆ ತನುವು ಶೂನ್ಯವಾಗಿ, ಮನವು ಶೂನ್ಯವಾಗಿ ಭಾವವು ಶೂನ್ಯವಾಗಿ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೂ ಶೂನ್ಯವಾಗಿ ಮೆರೆದಿರುವುದೋ ಅದು ಆಗಮಾರ್ಥವಿಶಾರದರುಗಳಿಂದ ಶೂನ್ಯಲಿಂಗವು ಎಂಬದಾಗಿ ಹೇಳಿಸಿ ಕೊಳ್ಳಲ್ಪಡುತ್ತದೆ ॥೨೫॥

— ಅನಂತರ ನಿಷ್ಕಲಲಿಂಗ ಸ್ವರೂಪವು —

ಇಂತೊಪ್ಪುವ ಶೂನ್ಯಲಿಂಗದ ಮಧ್ಯದಲ್ಲಿ ನಿಷ್ಕಲಲಿಂಗವು ಉತ್ಪನ್ನವಾಯಿತು. ನಿಷ್ಕಲಲಿಂಗವೆಂದೊಡೆ,—ಎಲ್ಲಿ ಕಲೆಯು ಇಲ್ಲವೋ ಅದೇ ನಿಷ್ಕಲವು. ಆನಿಷ್ಕಲವೆಂಬದಾಗಿ ಯಾವ ವಸ್ತುವಿಗೆ ಚಿಹ್ನವೋ ಆವಸ್ತುವೇ ನಿಷ್ಕಲಲಿಂಗವೆಂಬದಾಗಿ ಹೇಳಿಸಿಕೊಳ್ಳಲ್ಪಡುವುದು. ಈ ನಿಷ್ಕಲ ಲಿಂಗವೇ-ಅಲಕ್ಷ್ಯವು, ಅದ್ವಯವು,

ಜ್ಯತೆ । ತತ್ವಾತೀತಂ ಪರಾತೀತಂ ಪರತತ್ವಂ ಪರಾತ್ಪರಂ ॥೭೮॥ ನಿಷ್ಕಲಂನಿಷ್ಕ್ರಿಯಂಶಾಂತಂ ನಿರವದ್ಯಂ ನಿರಂಜನಂ । ತಲ್ಲಿಂಗೇನ ಸಮುದ್ಭೂತಿತಂ ಸರ್ವತತ್ವ ಮತಶ್ಶೃಣು॥೭೯॥ ನಿಷ್ಕಲಸ್ಯಾಂತರೇತ್ವಾಸೀ ಚ್ಚಾದಿಮೂರ್ತಿಸಮುದ್ಭವಃ । ಆದಿಮೂರ್ತಿಸಮಾಖ್ಯಾತ್ತು ಪರಾಶಕ್ತಿಸಮುದ್ಭವಃ ॥೮೦॥ ಪರಾಶಕ್ತಿಸಮಾಖ್ಯಾತ್ತು ನಾದಬಿಂದುಸಮುದ್ಭವಃ । ನಾದಬಿಂದುಸಮಾಖ್ಯಾಚ್ಚ ಸಾದಾಖ್ಯಾನಾಂ ಸಮುದ್ಭವಃ॥೮೧॥ ಸಾದಾಖ್ಯಾನಸಮಾಖ್ಯಾಚ್ಚಾ ಪೀಚ್ಛಾ ಶಿವಸಮುದ್ಭವಃ । ಇಚ್ಛಾ ಶಿವಸಮಾಖ್ಯಾಚ್ಚಾ ಪೀಶ್ವರಾತ್ಮಸಮುದ್ಭವಃ॥೮೨॥ಈಶ್ವರಾತ್ಮಸಮಾಖ್ಯಾಚ್ಚ ಕ್ರಿಯಾರುದ್ರಸಮುದ್ಭವಃ। ಕ್ರಿಯಾರುದ್ರಸಮಾಖ್ಯಾಚ್ಚ ವಿಷ್ಣುಲಕ್ಷ್ಮೀಸಮುದ್ಭವಃ ॥೮೩॥ವಿಷ್ಣುಲಕ್ಷ್ಮೀಸಮಾಖ್ಯಾಚ್ಚ ಬ್ರಹ್ಮವಾಣೀಸಮುದ್ಭವಃ।ಬ್ರಹ್ಮವಾಣೀಸಮಾಖ್ಯಾಚ್ಚ ಸರ್ವಜೀವಸಮುದ್ಭವಃ॥೮೪॥ ಉದಿತಂ ನಿಷ್ಕಲಂ ಲಿಂಗಂ ಸಂಗ್ರಹೇಣ ತತಃಪರಂ । ಪ್ರೋಚ್ಯತೇತು ಮಹಾಲಿಂಗಸ್ವರೂಪಂ ಶ್ರುತಿಚೋದಿತಂ ॥೮೫॥ ಮಹನೀಯಂ ಪೂಜ್ಯತರಂ ಲಿಂಗಂಲಕ್ಷ್ಮಚ

ಶೂನ್ಯವು, ಅಮೂರ್ತವು, ಪರವು, ಅವ್ಯಯವು, ಅನಾಮವು ಅವ್ಯಾಕುಲವು, ಸಿದ್ಧವು, ಅನಾದ್ಯವು, ಶೈವವು, ತತ್ವಾತೀತವು, ಪರಾತೀತವು, ಪರತತ್ವವು, ಪರಾತ್ಪರವು, ನಿಷ್ಕ್ರಿಯವು, ಶಾಂತವು, ನಿರವದ್ಯವು, ನಿರಂಜನವು,—ಎನಿಸಿ ಮೆರೆದಿರುವುದೋ, ಮತ್ತೂ ಆ ನಿಷ್ಕಲಲಿಂಗದ ದೆಸೆಯಿಂದಲೇ ಸಮಸ್ತ ತತ್ವವೂ ಉತ್ಪನ್ನವಾಯಿತೋ, ಅದನ್ನು ಹೇಳುತ್ತೇನೆ ಕೇಳು॥೭೯॥ ಆ ನಿಷ್ಕಲಲಿಂಗದ ದೆಸೆಯಿಂದ ಆದಿಮೂರ್ತಿಯು ಉತ್ಪನ್ನವಾಯಿತು. ಆ ಆದಿಮೂರ್ತಿಯ ದೆಸೆಯಿಂದ ಪರಾಶಕ್ತಿಯು ಉತ್ಪನ್ನವಾಯಿತು. ಆ ಪರಾಶಕ್ತಿಯ ದೆಸೆಯಿಂದ ನಾದಬಿಂದುವು ಉತ್ಪನ್ನವಾಯಿತು. ಆ ನಾದಬಿಂದುವಿನ ದೆಸೆಯಿಂದ ಸಾದಾಖ್ಯಗಳ ಉತ್ಪತ್ತಿಯಾಯಿತು. ಆಸಾದಾಖ್ಯಗಳ ದೆಸೆಯಿಂದ ಇಚ್ಛಾಶಕ್ತಿ ಶಿವರುಗಳ ಉತ್ಪತ್ತಿಯಾಯಿತು. ಆ ಇಚ್ಛಾಶಕ್ತಿ ಶಿವರುಗಳದೆಸೆಯಿಂದ ಮಾಯೇಶ್ವರರ ಉತ್ಪತ್ತಿಯಾಯಿತು, ಆ ಮಾಯಶ್ವರರ ದೆಸೆಯಿಂದ ಕ್ರಿಯಾಶಕ್ತಿರುದ್ರರುಗಳ ಉತ್ಪತ್ತಿಯಾಯಿತು. ಆ ಕ್ರಿಯಾಶಕ್ತಿರುದ್ರಗಳ ದೆಸೆಯಿಂದ ವಿಷ್ಣು ಲಕ್ಷ್ಮಿಯರುಗಳ ಉತ್ಪತ್ತಿಯಾಯಿತು. ಆ ವಿಷ್ಣು ಲಕ್ಷ್ಮಿಯರುಗಳ ದೆಸೆಯಿಂದ ಬ್ರಹ್ಮ ಸರಸ್ವತಿಯರ ಉತ್ಪತ್ತಿಯಾಯಿತು. ಆ ಬ್ರಹ್ಮ ಸರಸ್ವತಿಯರ ದೆಸೆಯಿಂದ ಸಮಸ್ತ ಜೀವವೂ ಉತ್ಪನ್ನವಾಯಿತು. ॥೮೪॥ ಎಲೈ ಲಿಂಗಪ್ಪ ಮಂತ್ರಿಯೆ! ನಿಷ್ಕಲಲಿಂಗಸ್ವರೂಪವು ಈ ರೀತಿಯಾಗಿ ಸಂಕ್ಷೇಪವಾಗಿ ಹೇಳಲ್ಪಟ್ಟಿತು. ಇನ್ನು

ಯಸ್ಯೈತತ್ । ತನ್ಮಹಾಲಿಂಗಮಿತ್ಯುಕ್ತಂ ವೀರಶೈವವಿಶಾರದೈಃ ॥೮೬॥ ನಾದಸ್ಸ್ಯಾನ್ನಿಷ್ಕಲಗುರುರ್ಬಿಂದುಸ್ಸ್ಯಾದನ್ಯಲಿಂಗಕಂ । ನಿರಂಜನಂ ಜಂಗಮೋಯಂ ಕಲಾರೂಪ ಇತೀರಿತಂ॥೮೭॥ ತ್ರಿಭಿರೇತೈಸ್ಸಮಾಯುಕ್ತಂಮಹಾಲಿಂಗ ಮಭೂತ್ಸ್ವಯಂ। ಮಹಾಲಿಂಗಮಿದಂ ದೇವಿಮನೋತೀತ ಮಗೋಚರಂ ॥೮೮॥ನಿರ್ನಾಮನಿರ್ಗುಣಂ ನಿತ್ಯಂ ನಿರಂಜನನಿರಾಮಯಂ । ನಿರ್ಮಲಂ ನಿಷ್ಕಲಂಜ್ಞೇಯಂ ನಿರ್ಭೇದ್ಯಂ ನಿರುಪಾಧಿಕಂ ॥೮೯॥ ಅದ್ವೈತಾನಂದ ಮಕ್ಷೀಣ ಮಸಾದೃಶ್ಯ ಮಿದಂಶ್ರೃಣು । ಪರಾನಂದಾತ್ಮಕಂ ಲಿಂಗಂಕೇವಲಂ ಸನ್ನಿರಂಜನಂ ॥೯೦॥ ಜ್ಞಾನಾತ್ಮಕಂ ಸರ್ವಗತಂ ಯೋಗಿನಾಂ ಹೃದಯಸ್ಥಿತಂ । ಗೋಳಕಂ ಪರತತ್ವಂಚಚಿನ್ಮಯಂ ಸದ್ವಿಲಾಸಕಂ ॥೯೧॥ ಶರಣ್ಯಂಸರ್ವತತ್ವಾನಾಂ ಲಿಂಗಾಕಾರೇಣ ವರ್ತತೆ । ನಾದೋಲಿಂಗಮಿತಿಜ್ಞೇಯಂ ಬಿದುಃ ಪೀಠಮುದಾಹೃತಂ ॥೯೨॥ ನಾದಬಿಂದುಯುತಂರೂಪಂ ಲಿಂಗಾಕಾರಮಿಹೋಚ್ಯತೆ । ಬಿಂದುಶ್ಶಕ್ತಿ

ಮುಂದೆ ಮಹಾಲಿಂಗ ಸ್ವರೂಪವನ್ನು ವೇದೋಕ್ತಕ್ರಮದಿಂದ ಹೇಳುತ್ತೇನೆ ಕೇಳು ॥೮೫॥ ಯಾವ ವಸ್ತುವು ಮಹನೀಯವು ಪೂಜ್ಯತರವು ಎಂಬ ಚಿಹ್ನೆಯಿಂದ ಕೂಡಿರುವುದೋ, ಆ ವಸ್ತುವೇ ಮಹಾಲಿಂಗವೆಂಬದಾಗಿ ವೀರಶೈವವಿಶಾರದರುಗಳಿಂದ ಹೇಳಿಸಿಕೊಳ್ಳಲ್ಪಡುತ್ತದೆ. ॥೮೬॥ ಮತ್ತೂ ನಾದವೇ ನಿಷ್ಕಲ ಗುರುವು, ಬಿಂದುವೇ ಸಕಲ ನಿಷ್ಕಲ ಲಿಂಗವು,ಕಲೆಯೇ ನಿರಂಜನ ಜಂಗಮವು ಎಂಬದಾಗಿ ಹೇಳಲ್ಪಟ್ಟಿತು. ॥೮೭॥ ಈ ಗುರುಲಿಂಗ ಜಂಗಮರಿಂದ ಕೂಡಿಕೊಂಡಿರುವ ಯಾವವಸ್ತುವು ಮನೋತೀತವೂ ಅಗೋಚರವೂ ಆಗಿ ಮೆರೆದಿರುವುದೋ, ಆ ವಸ್ತುವೇ ಮಹಾಲಿಂಗವೆಂಬದಾಗಿ ಪರಶಿವನು ಪಾರ್ವತಿಗೆ ಉಪದೇಶಿಸಿರುತ್ತಾನೆ. ॥೮೮॥ ಮತ್ತೂ ಆ ಮಹಾಲಿಂಗವು-ನಿರ್ನಾಮವು, ನಿರ್ಗುಣವು, ನಿತ್ಯವು, ನಿರಂಜನವು, ನಿರಾಮಯವು, ನಿರ್ಮಲವು, ನಿಷ್ಕಲವು. ನಿರ್ಭೇದ್ಯವು, ನಿರುಪಾಧಿಕವು, ಅದ್ವೈತಾನಂದವು, ಅಕ್ಷೀಣವು, ಅಸಾದೃಶ್ಯವು, ಪರಾನಂದಾತ್ಮಕವು, ಕೇವಲ ಲಿಂಗವು, ಸನ್ನಿರಂಜನವು. ಜ್ಞಾನಾತ್ಮಕವು, ಸರ್ವಗತವು, ಯೋಗಿಹೃದಯಸ್ಥಿತವು, ಗೋಳಕವು, ಪರತತ್ವವು, ಚಿನ್ಮಯವು, ಸದ್ವಿಲಾಸವು,—ಆಗಿ ಮೆರೆದಿರುವುದು. ॥೯೧॥ ಮತ್ತೂ ಈ ಲಿಂಗವು, ಸರ್ವತತ್ವಗಳಿಗೂ ಮೂಲತತ್ವವಾಗಿ ಲಿಂಗಾಕಾರದಿಂದ ಸಮಸ್ತವನ್ನೂ ಸಂರಕ್ಷಿಸುವುದರಿಂದ ಮಹಾಲಿಂಗವೆನಿಸಿತು. ಮತ್ತೂ ನಾದವೇ ಲಿಂಗವೆಂಬದಾಗಿ ಹೇಳಲ್ಪಟ್ಟಿತು. ಬಿಂದುವೇ ಪೀಠವೆಂಬದಾಗಿ ಹೇಳಲ್ಪಟ್ಟಿತು. ಈ ನಾದಬಿಂದುಗಳೊಡನೆ ಕೂಡಿಕೊಂಡಿರುವರೂ

ಶ್ಶಿವೋನಾದಃ ಕಲಾಸಂಯೋಗಏವಚ ॥೧೩॥ ಶಿವಶಕ್ತ್ಯೋರ್ಭವೇದ್ಯೋಗೋ ಜಗತ್ಸೃಷ್ಟ್ಯರ್ಥಕಾರಣಂ । ತತ್ಪರಾಶಕ್ತಿರಿತ್ಯುಕ್ತಂ ಪೀಠಿಕಾಸ್ಯೈವನಾಸ್ಯಥಾ ॥೧೪॥ ಸರ್ವಸ್ಯೋತ್ಪತ್ತಿಹೇತುತ್ವಾತ್ಪ್ರಥಮಂ ಲಿಂಗಮುಚ್ಯತೇ । ಪ್ರಸವಿತ್ರೀತುಶಕ್ತೀನಾಂ ಪರಾಶಕ್ತಿಸ್ತುಪೀಠಿಕಾ ॥ ಶಿವತತ್ವಂಪರಾನಂದಂ ಪರಲಿಂಗಮುದೀರಿತಂ ॥೧೫॥ ಆದ್ಯಂತಶೂನ್ಯಮಮಲಂ ಪರಿಪೂರ್ಣಮೇಕಂ ಸೂಕ್ಷ್ಮಂ ಪರಾತ್ಪರ ಮನಾಮಯ ಮಪ್ರಮೇಯಂ।ಭಾವೈಕಗಮ್ಯ ಮಜಡಂ ಶಿವತತ್ವಮಾಹು ಶ್ಚಿಚ್ಛಕ್ತಿಸಂಸ್ಫುರಣರೂಪಮಹಾತ್ಮಲಿಂಗಂ॥೧೬॥ ಚರಾಚರಾತ್ಮಕಮಿದಂ ಗಮ್ಯತೇಯತ್ರಲೀಯತೇ।ಉತ್ಪದ್ಯತೇ ಯತೋ ಭೂಯಸ್ತಲ್ಲಿಂಗಂ ಪರಮಿಷ್ಯತೇ॥೧೭॥ ಬ್ರಹ್ಮಾಂಡಕೋಟಯಸ್ತಸ್ಯ ನಿರ್ಮಾತು ಲಿಂಗರೂಪಿಣಃ।ಶಿವಸ್ಯಕುಕ್ಷಿಜಲಧೌಜಾಯಂತೇ ಬುದ್ಬುದೋಪಮಾಃ॥೧೮॥ ಬ್ರಹ್ಮವಿಷ್ಣ್ವಾದಯಸ್ಸ

ಪೇ ಲಿಂಗಾಕಾರವೆಂಬದಾಗಿ ಹೇಳಲ್ಪಟ್ಟಿತು. ಆದಕಾರಣ ಶಿವನೇ ನಾದವೆನಿಸಿ, ಶಕ್ತಿಯೇ ಬಿಂದುವೆನಿಸಿ, ಶಿವಶಕ್ತಿಗಳ ಸಂಯೋಗವೇ ಕಲೆಯೆನಿಸಿ ಮೆರೆದಿರುವುದು. ಮತ್ತೂ ಆಶಿವಶಕ್ತಿಗಳ ಸಂಯೋಗವೇ ಈ ಚರಾಚರಾತ್ಮಕವಾದ ಜಗತ್ತಿನ ಸೃಷ್ಟಿಗೆ ಮೂಲಕಾರಣವಾಗಿರುವುದು. ಆದುದರಿಂದಲೇ ಶಕ್ತಿಯೇ ಪೀಠವಾಯಿತು. ಶಿವತತ್ವವೇ ಲಿಂಗವಾಯಿತು. ಮತ್ತೂ ಆ ಪೀಠವಾದ ಶಕ್ತಿಯೇ ಸಮಸ್ತ ಶಕ್ತಿಗಳಿಗೂ ಉತ್ಪತ್ತಿಸ್ಥಾನವಾಗಿ ಪರಾಶಕ್ತಿ ಯೆಂಬದಾಗಿ ಹೇಳಿಸಿಕೊಳ್ಳಲ್ಪಟ್ಟಿತು. ಆ ಲಿಂಗವಾದ ಶಿವತತ್ವವೇ ಸಮಸ್ತವಾದ ಉತ್ಪತ್ತಿಗೂ ಮೂಲಕಾರಣವಾಗಿರುವುದರಿಂದ ಪರಾನಂದವು ಪರಲಿಂಗವು ಎಂಬದಾಗಿ ಹೇಳಿಸಿ ಕೊಳ್ಳಲ್ಪಟ್ಟಿತು. ॥೧೫॥ ಮತ್ತೂ ಶಿವತತ್ವವನ್ನು ಆದ್ಯಂತಶೂನ್ಯವು, ನಿರ್ಮಲವು, ಪರಿಪೂರ್ಣವು, ಅದ್ವಿತೀಯವು, ಸೂಕ್ಷ್ಮವು, ಪರಕ್ಕಿಂತಲೂಪರವು,ಊಹಿಸುವುದಕ್ಕಾಗದಿರುವುದು, ಭಾವನೆಗೆ ಮಾತ್ರ ಗೋಚರವು, ಅಜಡವು, ಜ್ಞಾನಶಕ್ತಿ ಪ್ರಕಾಶರೂಪವಾದ ಮಹಾತ್ಮಲಿಂಗವು, ಎಂಬದಾಗಿ ಹೇಳುತ್ತಾರೆ. ॥೧೬॥ ಆದುದರಿಂದಲೇ ಯಾವ ವಸ್ತುವಿನಲ್ಲಿ ಚರಾಚರಾತ್ಮಕವಾದ ಈ ಜಗತ್ತು ಉತ್ಪನ್ನವಾಗುತ್ತದೆಯೋ, ಮತ್ತೂ ಅಲ್ಲಿಯೇ ಲಯಿಸುತ್ತದೆಯೋ, ಆ ವಸ್ತುವೇ ಉತ್ಕೃಷ್ಟವಾದ ಲಿಂಗವು ಎಂಬದಾಗಿ ಹೇಳಿಸಿಕೊಳ್ಳಲ್ಪಡುತ್ತದೆ. ॥೧೭॥ ಮತ್ತೂ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಭಾವ, ಅನುಗ್ರಹಗಳೆಂಬ ಪಂಚಕೃತ್ಯಗಳನ್ನು ಮಾಡತಕ್ಕ ಲಿಂಗರೂಪಿಯಾದ ಆ ಪರಶಿವನ ಕುಕ್ಷಿಯೆಂಬ ಸಮುದ್ರದಲ್ಲಿ ಈ ಬ್ರಹ್ಮಾಂಡಕೋಟಿಗಳು ಗುಳ್ಳೆಗಳಿಗೆ ಸಮಾನಗಳಾಗಿ ಉತ್ಪನ್ನಗಳಾಗುವವು ॥೧೮॥

ರ್ವೇದೇವಾ ವೇದಾದಯಸ್ತಥಾ। ಲೀಯಮಾನಾಸ್ತು ಗಮ್ಯಂತೇ ತಲ್ಲಿಂಗಂ ಬ್ರಹ್ಮಕೇವಲಂ ॥೯೯॥ ದಕ್ಷಿಣೇ ಲೀಯತೇ ಬ್ರಹ್ಮಾ ವಾಮತಸ್ತು ಜನಾರ್ದನಃ। ಹೃದಯೇಚೈವ ಗಾಯತ್ರೀ ಸರ್ವವೇದೋತ್ತಮಾತಥಾ॥೧೦೦॥ ಪರಂ ಗೂಢಂ ಶರೀರಸ್ಥಂ ಲಿಂಗಂ ಕ್ಷೇತ್ರಮನಾದಿಮತ್ । ಯದಾದ್ಯಮೈಶ್ವರಂ ತೇಜಸ್ತಲ್ಲಿಂಗಂ ಪಂಚಸಂಜ್ಞಕಂ ॥೧೦೧॥ ಅವರ್ಣೋ ವರ್ಣಸಂಯುಕ್ತೋ ವಿರೂಪೋ ವಿಶ್ವರೂಪಧೃತ್ । ಪರಮಾತ್ಮಾಪರಬ್ರಹ್ಮಾ ಶಕ್ತಿದ್ವೇದೋಸ್ತಿ ಚಿಚ್ಛಿವಃ ॥೧೦೨॥ ಮಂತ್ರಾಧ್ವಾ ಚ ಪದಾಧ್ವಾ ಚ ವರ್ಣಾಧ್ವೇತಿ ಚ ಶಬ್ದತಃ । ಭುವನಾಧ್ವಾ ಚ ತತ್ವಾಧ್ವಾ ಕಲಾಧ್ವೇತಿ ಚ ವಿಶ್ರುತಃ ॥೧೦೩॥ ಜಗತ್ಯಾಂ ಭುವನಾಧ್ವಾನಂ ಪದಾಧ್ವಾನಂ ಚ ಪಂಕಜೇ। ವರ್ಣಾಧ್ವಾನಂತು ವೃತ್ತೇತು ಕಲಾಧ್ವಾನಂತು ಪಂಕಜೇ॥೧೦೪॥ ತತ್ವಾಧ್ವಾನಂ ಪಟ್ಟಿಕಾಯಾಂ ಮಂತ್ರಾಧ್ವಾನಂ ಪ್ರದಾರಿಕೇ । ಏವಂ ಷ

ಬ್ರಹ್ಮ ವಿಷ್ಣುಗಳೇ ಮೊದಲಾದ ಸಮಸ್ತ ದೇವತೆಗಳು ಸಮಸ್ತವೇದಗಳೂ ಕೂಡ ಆ ಶಿವತತ್ವದಲ್ಲಿ ಹಾಗೆಯೇ ಉತ್ಪನ್ನಗಳಾಗಿ ಹಾಗೆಯೇ ಲಯಿಸುವವೋ, ಅದೇ ಕೇವಲ ಬ್ರಹ್ಮವಾದ ಲಿಂಗವು ಎಂಬದಾಗಿ ಹೇಳಿಸಿಕೊಳ್ಳುವುದು. ॥೯೯॥ ಆದುದರಿಂದಲೇ ಆ ಲಿಂಗದ ದಕ್ಷಿಣಭಾಗದಲ್ಲಿ ಬ್ರಹ್ಮನು ಐಕ್ಯನಾಗಿರುತ್ತಾನೆ, ವಾಮಭಾಗದಲ್ಲಿ ವಿಷ್ಣುವು ಐಕ್ಯನಾಗಿರುತ್ತಾನೆ, ಹೃದಯದಲ್ಲಿ ವೇದಮಾತೃವಾದ ಗಾಯತ್ರಿಯು ಹಾಗೆಯೇ ಐಕ್ಯವಾಗಿರುತ್ತದೆ.॥೧೦೦॥ ಆದಕಾರಣದಿಂದಲೇ ಆದ್ಯವೂ ಈಶ್ವರ ಸಂಬಂಧವಾದ ತೇಜಸ್ಸೂ ಆದ ಆ ಲಿಂಗಕ್ಕೆ—ಪರವೆಂದೂ, ಗೂಢವೆಂದೂ, ಶರೀರಸ್ಥವೆಂದೂ, ಲಿಂಗವೆಂದೂ, ಅನಾದಿಯಾದ ಕ್ಷೇತ್ರವೆಂದೂ ಐದು ಸಂಜ್ಞೆಗಳುಂಟಾದುವು. ॥೧೦೧॥ ಇಂತೊಪ್ಪುವ ಈ ಲಿಂಗದಿಂದಲೇ ವರ್ಣಶೂನ್ಯನೂ, ವರ್ಣಸಂಯುಕ್ತನೂ, ವಿರೂಪನೂ, ವಿಶ್ವರೂಪವನ್ನು ಧರಿಸಿಕೊಂಡಿರುವಾತನೂ, ಪರಮಾತ್ಮನೂ, ಪರಬ್ರಹ್ಮವೂ, ಜ್ಞಾನಪ್ರಕಾಶಕನೂ, ಆದ ಒಬ್ಬಾನೊಬ್ಬನಾದ ಪರಶಿವನು ತಿಳಿಯುವುದಕ್ಕೆ ಯೋಗ್ಯನಾಗಿರುತ್ತಾನೆ. ॥೧೦೨॥ ಆ ಪರಶಿವನ ಚೈತನ್ಯಸ್ವರೂಪವಾದ ಆ ಲಿಂಗವಾದರೂ ಮಂತ್ರಾಧ್ವವು, ಪದಾಧ್ವವು, ವರ್ಣಾಧ್ವವು, ಭುವನಾಧ್ವವು, ತತ್ವಾಧ್ವವು, ಕಲಾಧ್ವವು—ಎಂಬ ಈ ಷಡಧ್ವಮಯವಾದ ಶರೀರವುಳ್ಳದ್ದು ಎಂಬದಾಗಿ ಪ್ರಸಿದ್ಧವಾಗಿದೆ.॥೧೦೩॥ ಆದುದರಿಂದಲೇ ಪಂಚಲಕ್ಷಣಲಕ್ಷಿತವಾದ ಲಿಂಗದ ಪೀಠದಲ್ಲಿ ಭುವನಾಧ್ವವನ್ನು ಆವಾಹಿಸಬೇಕು, ಮಧ್ಯದಲ್ಲಿ ಪದಾಧ್ವವನ್ನು ಆವಾಹಿಸಬೇಕು, ವರ್ತುಳದಲ್ಲಿ ವರ್ಣಾಧ್ವವನ್ನು ಆವಾಹಿಸಬೇಕು, ಪುನಃ ಮಧ್ಯದಲ್ಲಿ ಕಲಾಧ್ವವನ್ನು ಆವಾಹಿಸಬೇ

ಡಧ್ವಾಕಂ ನ್ಯಸ್ಯ ಸರ್ವಮಂತ್ರಾತ್ಮಕಂ ಶಿವಂ ॥೧೦೫॥ ಆದಿಪ್ರಣವಪೀಠಂ ಸ್ಯಾ ದಕಾರೋ ಮಧ್ಯಮೇವಚ । ಉಕಾರೋ ಗೋಮುಖಂಚೈವ ಮಕಾರೋ ವರ್ತುಳಂತಥಾ॥೧೦೬॥ ನಾಳೋ ಬಿಂದು ರ್ಮಹಾತೇಜೋ ನಾದಾಶ್ಚಾ ಖಂಡಲಿಂಗಕಂ। ನಕಾರಶ್ಚಾ ದಿಪೀಠಂಚ ಮಕಾರೋ ಮಧ್ಯ ಮೇವಚ ॥೧೦೭॥ ಶಿಕಾರೋ ವರ್ತುಳಂಚೈವ ವಾಕಾರೋ ಗೋಮು ಖಂತಥಾ । ಯಕಾರೋ ಬಿಂದುರೂಪ ಸ್ಸ್ಯಾತ್ಪ್ರಣವೋ ಲಿಂಗಮು ಚ್ಯತೇ॥೧೦೮॥ ನಮೇತಿಪೀಠಂ ಸಂಯುಕ್ತಂ ಶಿಕಾರೋಮಧ್ಯಮೇವಚ। ವಾಕಾರೋ ಗೋಮುಖಂಚೈವ ಯಕಾರೋವರ್ತುಳಂತಥಾ ॥೧೦೯॥ ಓಂಕಾರೋ ಗೋಳಕಸ್ಥಾನಂ ಲಿಂಗಂ ಷಡ್ವರ್ಣರೂಪಕಂ। ವೃತ್ತಂಚ ಗೋಳಕಂ ಭಾವೆಪ್ರಾಣೆಸ್ಯಾ ನ್ಮಧ್ಯಗೋಮುಖೆ ॥೧೧೦॥ ಇಷ್ಟ ಪೀ ಠಂತ್ರಿಧಾಚೈಕಂ ತತ್ವತ್ರಯ ಮುದಾಹೃತಂ । ಆಚಾರಂ ಗೌರವಂವೃತ್ತೇ

ಕು, ಗೋಮುಖದಲ್ಲಿ ತತ್ವಾಧ್ವವನ್ನು ಆವಾಹಿಸಬೇಕು,ಗೋಳಕದಲ್ಲಿ ಮಂತ್ರಾಧ್ವವನ್ನು ಆವಾಹಿಸಬೇಕು;—ಈರೀತಿಯಾಗಿ ಷಡಧ್ವಸಂಸ್ಕಾರದಿಂದ ಸಂಸ್ಕರಿಸಲ್ಪಟ್ಟ ಆ ಶಿವಲಿಂಗವು ಷಡಧ್ವಮಯ ಶರೀರವೇಳಗಿ ಸರ್ವಮಂತ್ರಾತ್ಮಕವೂ ಆಯಿತು.॥೧೦೫॥ ಅದುಕಾರಣವೇ ಆದಿಪ್ರಣವವೇ ಪೀಠವಾಯಿತು,ಅಕಾರವೇ ಮಧ್ಯವಾಯಿತು, ಉಕಾರವೇ ಗೋಮುಖವಾಯಿತು, ಮಕಾರವೇ ವರ್ತುಳವಾಯಿತು, ಬಿಂದುವೇ ಗೋಳಕವಾಯಿತು, ನಾದಕಳೆಗಳೇ ಅಖಂಡ ಲಿಂಗಾಕಾರವಾದುವು.॥ ಮತ್ತೂ ನಕಾರವೇ ಆದಿಪೀಠವಾಯಿತು, ಮಕಾರವೇ ಮಧ್ಯವಾಯಿತು, ಶಿಕಾರವೇ ವರ್ತುಳವಾಯಿತು, ವಾಕಾರವೇ ಗೋಮುಖವಾಯಿತು, ಯಕಾರವೇ ಬಿಂದು ರೂಪಗೋಳಕವಾಯಿತು, ಪ್ರಣವವೇ ಲಿಂಗವಾಯಿತು.॥೧೦೮॥ ಮತ್ತೂ ನಮಃಕಾರವೇ ಪೀಠವಾಯಿತು, ಶಿಕಾರವೇ ಮಧ್ಯವಾಯಿತು, ವಾಕಾರವೇ ಗೋಮುಖವಾಯಿತು, ಯಕಾರವೇ ವರ್ತುಳವಾಯಿತು, ಓಂಕಾರವೇ ಗೋಳಕಸ್ಥಾನವಾಯಿತು, ಆದುದರಿಂದಲೇ ಲಿಂಗವು ಷಡಕ್ಷರೀಮಂತ್ರ ಸ್ವರೂಪವಾಯಿತು. ॥ ಮತ್ತೂ ಲಿಂಗದ ವೃತ್ತವೂ ಗೋಳಕವೂ ಭಾವಲಿಂಗವಾಗಿರುವುದರಿಂದಲೂ, ಮಧ್ಯವೂ ಗೋಮುಖವೂ ಪ್ರಾಣಲಿಂಗವಾಗಿರುವುದರಿಂದಲೂ, ಪೀಠವೇ ಇಷ್ಟಲಿಂಗವಾಗಿರುವುದರಿಂದಲೂ ಕೂಡ ಆವೊಂದೇಲಿಂಗವು—ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳೆಂಬ ಲಿಂಗತತ್ವತ್ರಯಗಳೂ ಆಗಿ ಮೆರೆದಿರುವುದು. ॥ ಮತ್ತೂ ಆ ವೊಂದೇಲಿಂಗದ—ವೃತ್ತದಲ್ಲಿ ಆಚಾರಲಿಂಗ ಗುರುಲಿಂಗಗಳಿರುವವೆಂದು ಸಿದ್ಧಾಂತಮಾಡಲ್ಪಟ್ಟಿರುವುದು, ಮಧ್ಯದಲ್ಲಿ ಶಿವಲಿಂಗವಿರುವುದೆಂದು

ಮಧ್ಯೇ ಲಿಂಗಂ ವ್ಯವಸ್ಥಿತಂ ॥೧೧೧॥ ಗೋಮುಖೇಚರಲಿಂಗಂಚ ಪ್ರಸಾದೋ ವರ್ತುಳೆತಥಾ। ಗೋಮುಖೇಚ ಮಹದ್ರೂಪ ಮಿಷ್ಟಂ ಷಡ್ವಿಧಮೀರಿತಂ ॥೧೧೨॥ ಮದ್ಭಕ್ತಿಸಿಷ್ಠಾ ನಿಜಲಿಂಗಪೀಠೆ ಮಧ್ಯೇ ಪ್ರಸಾದೀಚತು ಗೋಮುಖೇಚ। ಯತ್ಪ್ರಾಣಲಿಂಗೀ ಶರಣಶ್ಚ ವೃತ್ತೇ ಚಿತ್ತೇಸಿಜೈಕ್ಯಂ ತ್ವಿತಿ ಷಟ್ಸ್ಥಲಾನಿ ॥೧೧೩॥ ಬಿಂದುಮಧ್ಯಗತೋನಾದೋ ನಾದಮಧ್ಯೇ ತು ಮೂರ್ತಯಃ । ಮೂರ್ತಿಮಧ್ಯಗತಂತತ್ವಂ ತತ್ವಮಧ್ಯಗತ ಶ್ಶಿವಃ ೧೧೪॥ ಮೂಲಮಂತ್ರಸ್ವರೂಪಾಯ ಮೂಲಮಂತ್ರಾತ್ಮರೂಪಿಣೆ। ಮೂಲಪ್ರಕೃತಿರೂಪಾಯ ಮೂಲಸ್ತಂಭಾಯಶಂಭವೆ॥೧೧೫॥ ಲೀಲಯಾಸಂಗ

ಸಿದ್ಧಾಂತ ಮಾಡಲ್ಪಟ್ಟಿರುವುದು, ಗೋಮುಖದಲ್ಲಿ ಜಂಗಮಲಿಂಗವಿರುವುದೆಂದು ಸಿದ್ಧಾಂತಮಾಡಲ್ಪಟ್ಟಿರುವುದು, ವರ್ತುಳದಲ್ಲಿ ಪ್ರಸಾದಲಿಂಗವಿರುವುದೆಂದು ಸಿದ್ಧಾಂತ ಮಾಡಲ್ಪಟ್ಟಿರುವುದು, ಗೋಳಕದಲ್ಲಿ ಮಹಾಲಿಂಗವಿರುವುದೆಂದು ಸಿದ್ಧಾಂತಮಾಡಲ್ಪಟ್ಟಿರುವುದು. ಆದಕಾರಣವೇ ಸಂಸ್ಕಾರಪೂರ್ವಕವಾಗಿ ಧರಿಸಿಕೊಂಡಿರುವ ನಿಜಲಿಂಗವು—ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ,ಪ್ರಸಾದಲಿಂಗ,ಮಹಾಲಿಂಗಗಳೆಂಬ ಷಡ್ಲಿಂಗರೂಪವೂ ಆಗಿರುವುದೆಂದು ಹೇಳಲ್ಪಟ್ಟಿತು. ॥೧೧೨॥ ಮತ್ತೂ ಲಿಂಗಧಾರಕನ ನಿಜಲಿಂಗದ ಪೀಠದಲ್ಲಿ ಭಕ್ತಸ್ಥಲವೂ ಮಾಹೇಶ್ವರ ಸ್ಥಲವೂ ನೆಲಸಿರುವುದರಿಂದ ತನ್ನಿಷ್ಠ ಧರ್ಮಗಳಾದ ಭಕ್ತಿಯೂ ಕರ್ಮಕ್ಷಯವೂ ಆತಂಗೆ ಸಿದ್ಧಿಸಿದನಂತರ, ಆತನೇ ಭಕ್ತನೆಂತಲೂ ಮಾಹೇಶ್ವರನೆಂತಲೂ ಹೇಳಿಸಿಕೊಳ್ಳುವನು,ಮತ್ತು ಲಿಂಗದ ಮಧ್ಯದಲ್ಲಿ ಪ್ರಸಾದಿಸ್ಥಲವು ನೆಲಸಿರುವುದರಿಂದ ತನ್ನಿಷ್ಠ ಧರ್ಮವಾದ ನಿರ್ಮಲ ಮತಿಯು ಆತಂಗೆ ಸಿದ್ಧಿಯಾದನಂತರ ಆತನೇ ಪ್ರಸಾದಿಯೆನಿಸಿಕೊಳ್ಳುವನು,ಮತ್ತೂ ಲಿಂಗದಗೋಮುಖದಲ್ಲಿ ಪ್ರಾಣಲಿಂಗಿಸ್ಥಲವು ನೆಲಸಿರುವುದರಿಂದ ತನ್ನಿಷ್ಠ ಧರ್ಮವಾದ ವಿಚಾರವು ಆತಂಗೆ ಸಿದ್ಧಿಯಾದ ನಂತರ ಆತನೇ ಪ್ರಾಣಲಿಂಗಿಯೆನಿಸಿಕೊಳ್ಳುವನು, ಮತ್ತು ಲಿಂಗದ ವರ್ತುಳದಲ್ಲಿ ಶರಣಸ್ಥಲವು ನೆಲಸಿರುವುದರಿಂದ ತನ್ನಿಷ್ಠ ಧರ್ಮವಾದ ದರ್ಪಸಂಕ್ಷಯವು ಆತಂಗೆ ಸಿದ್ಧಿಯಾದನಂತರ ಆತನೇ ಶರಣನೆನಿಸುವನು,ಮತ್ತೂ ಲಿಂಗದ ಗೋಳಕದಲ್ಲಿ ಐಕ್ಯಸ್ಥಳವು ನೆಲಸಿರುವುದರಿಂದ ತನ್ನಿಷ್ಠ ಧರ್ಮವಾದ ಸಮ್ಯಕ್ ಜ್ಞಾನವು ಆತಂಗೆ ಸಿದ್ಧಿಸಿದನಂತರ ಆತನೇ ಐಕ್ಯನೆನಿಸುವನು. ಆದುದರಿಂದ ಲಿಂಗದಲ್ಲಿಯೇ ಅಂಗಷಟ್ಸ್ಥಲಗಳು ನೆಲಸಿರುವವು. ॥೧೧೩॥ ಮತ್ತೂ ಬಿಂದು ಮಧ್ಯದಲ್ಲಿರುವುದು ನಾದವು, ನಾದಮಧ್ಯದಲ್ಲಿರುವವು ಮೂರ್ತಿಗಳು, ಮೂರ್ತಿಮಧ್ಯದಲ್ಲಿರುವುದು ತತ್ವವು, ತತ್ವಮಧ್ಯದಲ್ಲಿರುವವನು ಶಿವನು. ॥೧೧೪॥ ಆದಕಾರಣದಿಂದಲೇ ಮೂಲಮಂತ್ರಸ್ವರೂಪನೂ, ಮೂಲಮಂತ್ರಾತ್ಮರೂಪಿಯೂ, ಮೂಲಪ್ರಕೃತಿರೂ

ತ ಸ್ಸಾಕ್ಷಾ ದುಮಾಪತಿ ರಿತೀರಿತಃ ।ಲೀಲಯಾರಹಿತ ಸ್ಸಾಕ್ಷಾ ತ್ಸ್ವಯಂ ಭೂರಿತಿ ಕಥ್ಯತೇ ॥೧೧೬॥ ಶಿವಸ್ತು ಬ್ರಹ್ಮಚೈವೋಕ್ತ ಶ್ಶಕ್ತಿರೇವಾಂಗ ಮುಚ್ಯತೇ। ಶಿವಶಕ್ತಿಸಮಾಯೋಗೋ ಜಗತ್ಸೃಷ್ಟ್ಯರ್ಥಕಾರಣಂ॥೧೧೭॥ ಪರಾಶಕ್ತಿ ಸ್ತಸ್ಯ ಚಿಂತಾಸಹಸ್ರಾಂಶೇನ ಜಾಯತೇ। ತಚ್ಛಕ್ತೇಸ್ತು ಸಹಸ್ರಾಂಶಾ ದಾದಿಶಕ್ತಿಸಮುದ್ಭವಃ ॥೧೧೮॥ ತಚ್ಛಕ್ತೇಸ್ತು ಸಹಸ್ರಾಂಶಾ ದಿಚ್ಛಾಶಕ್ತಿಸಮುದ್ಭವಃ । ತಚ್ಛಕ್ತೇಸ್ತು ಸಹಸ್ರಾಂಶಾ ದ್ಜ್ಞಾನಶಕ್ತಿ ಸಮುದ್ಭವಃ ॥೧೧೯॥ ತಚ್ಛಕ್ತೆಸ್ತು ಸಹಸ್ರಾಂಶಾ ತ್ಕ್ರಿಯಾಶಕ್ತಿಸಮುದ್ಭವಃ। ಏಷಾಂವೈ ಪಂಚಧಾಶಕ್ತಿ ರ್ನಿಷ್ಕಳಾಚೇತಿ ಕೀರ್ತಿತಾ॥೧೨೦॥ ಕ್ರಿಯಾಕರ್ಮೇತಿಯದ್ಜ್ಞೇಯಂ ತತಸ್ಸ್ಯಾತ್ಕರ್ಮೇತಿ ನಾಮತಃ । ಲಿಂಗಪೀಠಪ್ರಕಾರೇಣ ಕರ್ಮಸಾದಾಖ್ಯಲಕ್ಷಣಂ ॥೧೨೧॥ ಚತ್ವಾರಿಕರ್ಮ

ಪನೂ, ಮೂಲಸ್ತಂಭನೂ ಆದ ಶಂಭುವಿಗೋಸ್ಕರ ನಮಸ್ಕಾರವು. ॥೧೧೫॥ ಮತ್ತು ಲೀಲೆಯಿಂದ ಕೂಡಿಕೊಂಡಿರುವ ಆ ಸಾಕ್ಷಾದುಮಾಪತಿಯೇ ಸಕಲ ಮೂರ್ತಿಯೆನಿಸಿಕೊಂಡನು, ಲೀಲೆಯಿಂದ ಶೂನ್ಯವಾದ ಆ ಸಾಕ್ಷಾತ್ಪರಶಿವನೇ ನಿಷ್ಕಲಮೂರ್ತಿಯು ಎಂಬದಾಗಿ ಹೇಳಿಸಿಕೊಳ್ಳುವನು. ॥೧೧೬॥ ಆದಕಾರಣ ಪರಶಿವನೇ ಆಸಾಕ್ಷಾದ್ಬ್ರಹ್ಮಸ್ವರೂಪವಾದ ಲಿಂಗವೆಂಬದಾಗಿ ಹೇಳಿಸಿಕೊಳ್ಳಲ್ಪಟ್ಟನು, ಶಕ್ತಿಯೇ ಅಂಗವೆಂಬದಾಗಿ ಹೇಳಿಸಿಕೊಳ್ಳಲ್ಪಟ್ಟಿತು, ಈ ಶಿವ ಶಕ್ತಿಯರುಗಳ ಸಮಾಯೋಗವೇ ಈ ಜಗತ್ತಿನ ಸೃಷ್ಟಿಗೆ ಕಾರಣವಾಯಿತು. ॥೧೧೭॥ ಆದುದರಿಂದ ಆ ಪರಶಿವನಿಗೆ ಜಗನ್ನಿರ್ಮಾಣ ಲೀಲೆಯುಂಟಾಗಲು, ಆಜಗನ್ನಿರ್ಮಾಣ ಚಿಂತಾಸಹಸ್ರಾಂಶದದೆಸೆಯಿಂದ ಪರಾಶಕ್ತಿಯು ಉತ್ಪನ್ನವಾಯಿತು, ಆ ಪರಾಶಕ್ತಿಯ ಸಹಸ್ರಾಂಶದ ದೆಸೆಯಿಂದ ಆದಿಶಕ್ತಿಯು ಉತ್ಪನ್ನವಾಯಿತು, ಆ ಆದಿಶಕ್ತಿಯ ಸಹಸ್ರಾಂಶದದೆಸೆಯಿಂದ ಇಚ್ಛಾಶಕ್ತಿಯು ಉತ್ಪನ್ನವಾಯಿತು, ಆ ಇಚ್ಛಾಶಕ್ತಿಯ ಸಹಸ್ರಾಂಶದ ದೆಸೆಯಿಂದ ಜ್ಞಾನಶಕ್ತಿಯು ಉತ್ಪನ್ನವಾಯಿತು, ಅಜ್ಞಾನಶಕ್ತಿಯ ಸಹಸ್ರಾಂಶದ ದೆಸೆಯಿಂದ ಕ್ರಿಯಾಶಕ್ತಿಯು ಉತ್ಪನ್ನವಾಯಿತು, ಈರೀತಿಯಾಗಿ ಉತ್ಪನ್ನಗಳಾದ ಈ ಐದು ಶಕ್ತಿಗಳೂ ಕೂಡ ನಿಷ್ಕಳಗಳೆಂಬದಾಗಿ ಹೇಳಲ್ಪಟ್ಟುವು. ॥೧೨೦॥ ಮತ್ತು ಕ್ರಿಯೆಯು ಕರ್ಮವು ಎಂಬದಾಗಿ ಯಾವುದು ತಿಳಿಯುವುದಕ್ಕೆ ಯೋಗ್ಯವಾಯಿತೋ ಅದೇ ಕರ್ಮವೆಂಬ ಹೆಸರಿನಿಂದ ಹೇಳಿಸಿಕೊಂಡು, ಲಿಂಗಪೀಠಪ್ರಕಾರದಿಂದ ಇದೇ ಕರ್ಮಸಾದಾಖ್ಯ ಲಕ್ಷಣವೆನಿಸಿತು. ॥೧೨೧॥ ಸೃಷ್ಟಿ, ಸ್ಥಿತಿ, ಸಂಹಾರ ತಿರೋಭಾವಗಳೆಂಬ ನಾಲ್ಕು ಕರ್ಮಗಳೇ ಕೇವಲನಾದವು ಎಂಬದಾಗಿ ಹೇಳಿಸಿಕೊಳ್ಳಲ್ಪಡುತ್ತದೆ. ಆದಕಾರಣ ಸೃಷ್ಟಿ,

ರೂಪಾದಿ ಕೇವಲಂ ನಾದಉಚ್ಯತೇ । ಲಿಂಗಂ ಶಿವಇತಿಜ್ಞೇಯಂ ಶಕ್ತಿಃ ಪೀಠ ಮುದಾಹೃತಂ ॥೧೨॥ ಯೋನಿಲಿಂಗಪ್ರಕಾರೇಣ ಜಗತ್ಸೃಷ್ಟ್ಯ ರ್ಥಕಾರಣಂ।ತಥಾ ಸಂಯೋಗಭಾವಶ್ಚ ಕರ್ಮತತ್ವ ಮುದಾಹೃತಂ॥೧೩॥ ತಸ್ಮಾನ್ನಾದಾತ್ಮತತ್ವಂಚ ಸರ್ವಕಾರಣಕಾರಣಂ। ಸದಾಶಿವಇತಿ ಪ್ರೋಕ್ತಂ ಸರ್ವಶಾಸ್ತ್ರೇಷು ನಿಶ್ಚಿತಂ ॥೧೪॥ ಅಸ್ಮಿನ್ ಪ್ರಕರಣೇ ಸವ್ಯಕ್ತೋಕ್ತಿ ಶ್ಶೂನ್ಯನಿಷ್ಕಲಲಿಂಗಯೋಃ। ಮಹಾಲಿಂಗಸ್ಯ ಚೋಕ್ತೋಽಯಂ ಕ್ರಮಸ್ಸೃಷ್ಟಿಸ್ವರೂಪಯೋಃ ॥೧೫॥ ನಿಷ್ಕಲಾಭ್ಯುದಿತಾ ಸೃಷ್ಟಿರನಾದಿ ರ್ಭವತಾ ಸ್ಫುಟಂ । ವಿದಿತಾಖಿಳತಂತ್ರಸ್ಯ ಜ್ಞಾತಂಕಿಲತವಾಖಿಳಂ ॥೧೬॥

—ಅಥಪ್ರಣವಲಿಂಗಸ್ವರೂಪಮುಪವರ್ಣ್ಯತೇ—

ಮಹಾಲಿಂಗಸಮುದ್ಭೂತಾಜ್ಜಾತಃ ಪ್ರಣವಲಿಂಗಕಃ । ಯಾಸ್ಯ

ಸ್ಥಿತಿ, ಸಂಹಾರ, ತಿರೋಭಾವ, ಅನುಗ್ರಹಗಳೆಂಬ ಪಂಚಕರ್ಮಪ್ರವಿಷ್ಟನಾದ ಶಿವನೇ ಸಕಲ ನಿಷ್ಕಲರೂಪವಾದ ಲಿಂಗವಾದನು. ಶಕ್ತಿಯೇ ಪೀಠವೆಂಬದಾಗಿ ಹೇಳಲ್ಪಟ್ಟಿತು. ॥೧೨॥ ಆ ಶಿವ ಶಕ್ತಿಯರುಗಳ ಸಾಮರಸ್ಯವೇ ಕರ್ಮತತ್ವವೆಂಬದಾಗಿ ಹೇಳಿಸಿಕೊಂಡು ಯೋನಿಲಿಂಗಗಳ ಪ್ರಕಾರವಾಗಿ ಜಗತ್ಸೃಷ್ಟಿಗೆ ಕಾರಣವೆಂಬದಾಗಿ ಹೇಳಿಸಿಕೊಳ್ಳಲ್ಪಟ್ಟಿತು. ॥೧೩॥ ಆದಕಾರಣದಿಂದಲೇ ಸರ್ವಶಾಸ್ತ್ರಗಳಲ್ಲಿಯೂ ನಿಶ್ಚಿತವಾದ, ಸರ್ವಕಾರಣಗಳಿಗೂ ಕಾರಣವಾದ, ನಾದರೂಪವಾದ ಆ ತತ್ವವು ಸದಾಶಿವ ಎಂಬದಾಗಿ ಹೇಳಿಸಿಕೊಳ್ಳಲ್ಪಟ್ಟಿತು. ॥೧೪॥ ಎಲೈ ಲಿಂಗಪ್ಪಮಂತ್ರಿಯೆ ! ಈ ಪ್ರಕರಣದಲ್ಲಿ ಶೂನ್ಯಲಿಂಗದ ಸೃಷ್ಟಿಸ್ವರೂಪಗಳ ಕ್ರಮವೂ, ನಿಷ್ಕಲಲಿಂಗದ ಸೃಷ್ಟಿಸ್ವರೂಪಗಳ ಕ್ರಮವೂ, ಮಹಾಲಿಂಗದ ಸೃಷ್ಟಿಸ್ವರೂಪಗಳ ಕ್ರಮವೂ ಕೂಡ ಹೇಳಲ್ಪಟ್ಟಿತು. ॥೧೫॥ ಎನಲು, ಲಿಂಗಪ್ಪಮಂತ್ರಿಯು ಕೇಳಿ, ಎಲೈ ಮಾನಪ್ಪ ವಿದ್ವಾಂಸನೇ! ಅನಾದಿಯೂ ನಿಷ್ಕಲವೂ ಆದ ಸೃಷ್ಟಿಯು ನಿನ್ನಿಂದ ಚೆನ್ನಾಗಿ ವಿವರಿಸಿ ಹೇಳಲ್ಪಟ್ಟಿತು. ಎನಲು, ಮಾನಪ್ಪವಿದ್ವಾಂಸನು ನೋಡಿ, ಎಲೈ ಲಿಂಗಪ್ಪ ಮಂತ್ರಿಯೇ ! ಸಮಸ್ತ ತಂತ್ರಗಳನ್ನೂ ತಿಳಿದಿತಕ್ಕ ನಿನಗೆ ಈಗ ನಾನು ಹೇಳಿದ ಸಮಸ್ತ ವಿಷಯವೂ ತಿಳಿಯಿತೋ? ಎಂದು ಕೇಳಿದನು. ॥೧೬॥

—ಅನಂತರಪ್ರಣವಲಿಂಗಸ್ವರೂಪವು—

ಅನಂತರ ಲಿಂಗಪ್ಪ ಮಂತ್ರಿಯು ಎಲೈ ಮಾನಪ್ಪ ವಿದ್ವಾಂಸನೇ ! ನೀನು ಹೇಳಿದ ವಿಷಯವೆಲ್ಲವೂ ತಿಳಿಯಿತು, ಈಗ ಮಹಾಲಿಂಗದ ದೆಸೆಯಿಂದ ಪ್ರಣವ ಲಿಂಗವು ಉತ್ಪನ್ನವಾಯಿತೆಂಬದಾಗಿ ಯಾವ ಸೃಷ್ಟಿಯು ಹೇಳಲ್ಪಟ್ಟಿತೋ, ಅದನ್ನೇ ಅತ್ಯ

ಷ್ಟಿ ಸ್ಸಾಂಪ್ರಧುನಾ ವಿದ್ವನ್ಕಥನೀಯಾಕಿಲಾದರಾತ್ ॥೧೨॥ ವಕ್ಷ್ಯೇಽಹಂತೇ ಸಮಾಸೇನ ಶಿವಮಂತ್ರಪರಾಯಣ । ಅಖಂಡಗೋಳಕಾಕಾರಮಹಾತೇಜಸ್ಸ್ವರೂಪಿಣಃ ॥೧೩॥ ಮಹಾಲಿಂಗಸ್ಯಚಿಂತಾಯಾಂ ಜಗತಾಂ ಸೃಷ್ಟಿಹೇತವೆ । ಪರಾಶಕ್ತಿಪ್ರಕಾಶೋಽಭೂತ್ತಸ್ಯಾ ಸ್ಸಂಯೋಗತ ಸ್ಸ್ವಯಂ ॥೧೪॥ ನಾದಬಿಂದುಕಲಾರೂಪತ್ರಿವಿಧಂ ಪ್ರಣವೇಸತು । ಲಿಂಗಮಾವಿರಭೂ ದೇಕಮಖಂಡಂ ಪ್ರಣವಾತ್ಮಕಂ ॥೧೫॥ ಊರ್ಧ್ವಗಮು ಸ್ನಾಮಯತ್ಯೇಷ ಓಂಕಾರೋ ವಿಶ್ವಮಾತ್ಮನಿ।ಲೀಯತೆ ಗಮ್ಯತೆ ಯತ್ರ ಲಿಂಗೆ ವಿಶ್ವಂ ಚರಾಚರಂ ॥೧೬॥ ಓಂಕಾರಏವ ಲಿಂಗಂಸ್ಯಾತ್ಸರ್ವಕಾರಣಕಾರಣಂ । ಓಮಿತಿಬ್ರಹ್ಮಪರಮಂ ಲಿಂಗಾಕಾರಂ ಮಹೇಶ್ವರಂ ॥೧೭॥ಸೃಷ್ಟ್ಯರ್ಥಂಸರ್ವತತ್ವಾನಾಂ ಲೋಕಸ್ಯೋತ್ಪತ್ತಿಕಾರಣಂ । ಶ

ದರದಿಂದ ಹೇಳಬೇಕೆನಲು ॥೧೨॥ ಮಾನಪ್ಪವಿದ್ವಾಂಸನು ನೋಡಿ, ಎಲೈ ಶಿವ ಮಂತ್ರಪರಾಯಣನಾದ ಲಿಂಗಪ್ಪಮಂತ್ರಿಯೇ ! ಈಗ ನೀನು ಕೇಳಿದ ವಿಷಯವನ್ನು ಕ್ರಮವಾಗಿ ಹೇಳುತ್ತೇನೆ ಕೇಳು—ಅನಂತರ ಅಖಂಡಗೋಳಕಾಕಾರವೂ ಮಹಾತೇಜಸ್ಸಿನ ಸ್ವರೂಪವೂ ಆದ ಮಹಾಲಿಂಗಕ್ಕೆ ಜಗತ್ತನ್ನು ನಿರ್ಮಿಸುವುದಕ್ಕೋಸ್ಕರ ಚಿಂತೆಯುಂಟಾಗಲು, ಆ ಚಿಂತಾಮಾತ್ರದಿಂದಲೇ ಪರಾಶಕ್ತಿಯ ಪ್ರಕಾಶವು ಉತ್ಪನ್ನವಾಯಿತು. ಬಳಿಕ ಆ ಪರಾಶಕ್ತಿಗೂ ಆ ಮಹಾಲಿಂಗಕ್ಕೂ ಕೂಡ ಸಾಮರಸ್ಯವುಂಟಾಗಲಾಗಿ ಆ ಸಂಯೋಗದ ದೆಸೆಯಿಂದ ನಾದಬಿಂದುಕಲೆಗಳುಂಟಾದುವು. ಆ ನಾದಬಿಂದುಕಲೆಗಳ ದೆಸೆಯಿಂದ-ಅಉಮ-ಎಂಬಮೂರುಪ್ರಣವಗಳು ಉತ್ಪನ್ನವಾದುವು. ಆಮೂರು ಪ್ರಣವಗಳ ದೆಸೆಯಿಂದ ಓಂಕಾರಪ್ರಣವಾತ್ಮಕವೂ, ಅಖಂಡವೂ, ಏಕವೂ ಆದ ಲಿಂಗವು ಉತ್ಪನ್ನವಾಯಿತು. ॥೧೫॥ ಲಿಂಗಾಕಾರವನ್ನು ಹೊಂದಿರತಕ್ಕ ಈ ಓಂಕಾರವು ತನ್ನಲ್ಲಿ ಪ್ರಪಂಚವನ್ನು ಊರ್ಧ್ವಗವಾಗಿ ಸೆಳೆದು ಐಕ್ಯಮಾಡಿಕೊಳ್ಳುವುದು. ಆದುದರಿಂದ ಚರಾಚರಾತ್ಮಕವಾದ ಈ ಪ್ರಪಂಚವು ಎಲ್ಲಿ ಲಯಿಸುವುದೋ, ಎಲ್ಲಿ ಪುನಃ ಉತ್ಪನ್ನವಾಗುವುದೋ, ಅದೇ ಲಿಂಗವೆನಿಸಿಕೊಳ್ಳುವುದು. ಆದುದರಿಂದ ಓಂಕಾರವೇ ಸರ್ವಕಾರಣಗಳಿಗೂ ಕಾರಣವಾದ ಲಿಂಗವಾಯಿತು. ಆ ಲಿಂಗವೇ ಪ್ರಣವವಾಯಿತು. ಆದಕಾರಣ, ಪರಬ್ರಹ್ಮವಾದ ಓಂಕಾರವು ಸಮಸ್ತ ತತ್ವಗಳನ್ನೂ ಸೃಷ್ಟಿಮಾಡುವುದಕ್ಕೋಸ್ಕರ ಸ್ವೇಚ್ಛೆಯಿಂದ ತನ್ನಲ್ಲಿಯೇ ತಾನು ಲಿಂಗಾಕಾರನಾದ ಮಹೇಶ್ವರನನ್ನು ಚಿಂತಿಸಿ ಸಮಸ್ತ ತತ್ವಗಳನ್ನೂ ಸೃಷ್ಟಿಸಿತು. ಮತ್ತೂ ಲೋಕಗಳನ್ನು ಉತ್ಪತ್ತಿ ಮಾಡುವುದಕ್ಕೋಸ್ಕರ ಶಕ್ತಿ ಸಂಯೋಗದೊಡನೆ ಕೂ

ಕ್ತಿಸಂಯೋಗಸದ್ಭಾವಂ ಸ್ವೇಚ್ಛಯಾಚಿಂತಯೇಚ್ಛಿವಂ ॥೧೩॥

—ಅಥಪ್ರಣವಾವಯವಮುಪವರ್ಣ್ಯತೇ—

ವೇದಾದಿಮೂಲಂ ಪ್ರಥಮಂ ಸ್ವರಾಣಾಂ ತ್ರಯೋದಶಸ್ಥಂ ಶಶಿ ಸೂರ್ಯಬಿಂಬಂ। ನಾದಾತ್ಮಕಂ ಸುಪ್ತಭುಜಂಗರೂಪಂ ತ್ರಿತತ್ವಮೂಲಂ ಪ್ರಣವಂ ನಮಾಮಿ ॥೧೪॥ ಪರಾಪರವಿಭಾಗೇನ ಪ್ರಣವಸ್ತು ದ್ವಿಧಾಮ ತಃ । ಪರಾತ್ಪರತರಂ ಬ್ರಹ್ಮಪ್ರಜ್ಞಾನಂದಾದಿಲಕ್ಷಣಂ॥೧೫॥ ಪ್ರಕರ್ಷೇಣ ನವಂ ಯಸ್ಮಾತ್ಪರಂ ಬ್ರಹ್ಮ ಸ್ವಭಾವತಃ। ಅಪರಃ ಪ್ರಣವ ಸ್ಸಾಕ್ಷಾ ಚ್ಛಬ್ದರೂಪಸ್ತು ನಿರ್ಮಲಃ॥೧೬॥ ಪ್ರಕರ್ಷೇಣೈವ ತತ್ವಸ್ಯ ಹೇತುತ್ವಾ ತ್ಪ್ರಣವ ಸ್ಸ್ಮೃತಃ।ಪರಮಪ್ರಣವಪ್ರಾಪ್ತಿಹೇತುತ್ವಾತ್ಪ್ರಣವೋಽಥ ವಾ ॥೧೭॥ ಅವಾಗ್ಜಪ್ರಣವೇ ವಿಂದ್ಯಾದೋಂಕಾರಂ ನಾದರೂಪಕಂ ।

ಡಿಕೊಂಡಿರುವ ಶಿವನನ್ನು ಸ್ವೇಚ್ಛೆಯಿಂದ ತನ್ನಲ್ಲಿಯೇ ತಾನು ಚಿಂತಿಸಿ ಲೋಕೋತ್ಪ ತ್ತಿಯನ್ನು ಮಾಡಿತು. ॥೧೩॥ ಇದೇ ಪ್ರಣವಲಿಂಗಸ್ವರೂಪವು.

—ಅನಂತರ ಪ್ರಣವಾವಯುವಸ್ವರೂಪವು—

ಎಲೈ ಲಿಂಗಪ್ರಮುತ್ರಿಯೆ! ಕೇಳು:—ವೇದಗಳಿಗೆ ಆದಿಮೂಲವು, ಸ್ವರವರ್ಣ ಗಳಿಗೆ ಮೊದಲನೆಯದು ಅ ಇ ಉ ಋ ಲೃ ಎ ಐ ಏ ಪೆ ಅ ಉ ಮಾ-ಎಂಬ ಈಹನ್ನೆ ರಡು ವರ್ಣಗಳಿಗಿಂತಲೂ ಮುಂದೆ ಹದಿಮೂರನೆಯದೂ, ಸೂರ್ಯಚಂದ್ರಬಿಂಬಪ್ರಕಾ ಶವೂ,ನಾದಾತ್ಮಕವೂ, ಮಲಗಿರುವ ಸರ್ಪಸ್ವರೂಪವೂ, ಶಿವ, ಸದಾಶಿವ, ಈಶ್ವರ— ರೆಂಬ ಮೂರು ತತ್ವಗಳಿಗೆ ಮೂಲವೂ ಆದ ಆ ಓಂಕಾರ ಪ್ರಣವವನ್ನು ನಾನು ನ ಮಸ್ಕರಿಸುತ್ತೇನೆ. ॥೧೪॥

ಪರಕ್ಕಿಂತಲೂ ಪರತರಬ್ರಹ್ಮವೂ, ಪ್ರಜ್ಞಾನಂದಾದಿಲಕ್ಷಣವೂ ಆದ ಆಪ್ರಣವವು ಪರವೆಂತಲೂ, ಅಪರವೆಂತಲೂ ಎರಡು ವಿಭಾಗವಾಯಿತು. ॥೧೫॥ ಪರಬ್ರಹ್ಮಸ್ವ ಭಾವವುಳ್ಳ ಯಾವುದರದೆಸೆಯಿಂದ ವಿಶೇಷವಾಗಿ ನಾದವು ಉತ್ಪನ್ನವಾಗಿ ನಾದಮಯ ವೆನಿಸಿರುವುದೋ, ಅದೇ ಪರಪ್ರಣವ ಎಂದು ಹೇಳಿಸಿಕೊಳ್ಳುವುದು. ಮತ್ತೂ ಯಾ ವುದು ನಿರ್ಮಲವಾಗಿ ಆ ಸಾಕ್ಷಾತ್ ಶಬ್ದಸ್ವರೂಪವಾಗಿರುವುದೋ, ಅದೇ ಅಪರ ಪ್ರಣವ ಎಂದು ಹೇಳಿಸಿಕೊಳ್ಳುವುದು. ॥ ೧೬ ॥ ಯಾವುದು ತತ್ವಗಳಿಗೆ ವಿಶೇ ಷವಾಗಿ ಮೂಲಕಾರಣವಾಗಿರುವುದೋ, ಅದು ಪ್ರಣವವೆಂಬದಾಗಿ ಹೇಳಿಸಿಕೊಳ್ಳು ವುದು. ಅಥವಾ ಯಾವುದು ಆ ಸಾಕ್ಷಾತ್ಪರಶಿವಮೂರ್ತಿಯಲ್ಲಿಯೇ ಸ್ಥಾಯಿತ್ವ ವನ್ನು ಹೊಂದಿರುವುದೋ, ಅದೇ ಪ್ರಣವವೆಂದು ಹೇಳಿಸಿಕೊಳ್ಳುವುದು. ॥೧೭॥ ಆದುದರಿಂದಲೇ, ಅವಾಗ್ಜಪ್ರಣವದಲ್ಲಿ ನಾದರೂಪವಾದ ಓಂಕಾರವಿರುವುದು.

ಓಂಕಾರಪ್ರಣವೇವಿಂದ್ಯಾ ದಕಾರಪ್ರಣವಂ ಪರಂ॥೧೩೪॥ ಅಕಾರಪ್ರಣವೆ ವಿಂದ್ಯಾ ದುಕಾರಪ್ರಣವಂತಥಾ । ಅಕಾರೋಕಾರಸಂಯೋಗೆ ಮಕಾರಪ್ರಣವಂತಥಾ ॥೧೩೫॥ ಏವಂಪ್ರವೃತ್ತಿಮಾರ್ಗೇಣ ಪ್ರೋಕ್ತಂ ಪ್ರಣವಪಂಚಕಂ । ನಿವೃತ್ತಿರ್ವಕ್ಷ್ಯತೆತೇಷಾಂ ಸ್ವರೂಪಮಪಿ ಗೋಪಿತಂ ॥೧೪೦॥ ಅಕಾರಂಪ್ರಥಮಂ ವಿಂದ್ಯಾ ದುಕಾರಂತುದ್ವಿತೀಯಕಂ। ತೃತೀಯಂತು ಮಕಾರಂಚ ಓಂಕಾರಂಚ ಚತುರ್ಥಕಂ ॥೧೪೧॥ ಅವಾಗ್ಜಂ ಪ್ರಣವಂವಿಂದ್ಯಾ ತ್ಪಂಚಪ್ರಣವ ಭೇದಕಂ ॥

ಅಕಾರಂನಾದರೂಪೇಣ ಜಾಗ್ರತ್ಸ್ಥಾನೇ ನಿವೇಶಯೇತ್ ॥೧೪೨॥ ಬಿಂದುರೂಪಮುಕಾರಂಚ ಸ್ವಪ್ನಸ್ಥಾನೆ ನಿವೇಶಯೇತ್ । ಕಲಾರೂಪಮಕಾರಂಚ ಸುಪ್ತಿಸ್ಥಾನೇ ನಿವೇಶಯೇತ್ ॥೧೪೩॥ ಓಂಕಾರಂಶಕ್ತಿ ರೂಪಂಚತುರ್ಯಸ್ಥಾನೆನಿವೇಶಯೇತ್ । ತುರ್ಯಾತೀತೆಹ್ಯವಾಗ್ಜಂಚಶಿವರೂಪಂ ವಿನಿಕ್ಷಿಪೇತ್ ॥೧೪೪॥ ನಕಾರಸ್ತ್ವುತ್ತರಕಸ್ಥಾನಂಮಕಾರೋದಂಡಉ

ಆ ಓಂಕಾರಪ್ರಣವದಲ್ಲಿ ಉತ್ಕೃಷ್ಟವಾದ ಅಕಾರಪ್ರಣವ ವಿರುವುದು. ಆ ಅಕಾರಪ್ರಣವದಲ್ಲಿ ಹಾಗೆಯೇ ಉಕಾರಪ್ರಣವವಿರುವುದು. ಹಾಗೆಯೇ ಆ ಅಕಾರ ಉಕಾರಪ್ರಣವಗಳಸಂಯೋಗದಲ್ಲಿ ಮಕಾರಪ್ರಣವವಿರುವುದು. ಎಂದು ತಿಳಿಯತಕ್ಕದ್ದು.॥ ಈರೀತಿಯಾಗಿ ಉತ್ಪನ್ನಗಳಾಗಿ ಅಲ್ಲಲ್ಲಿಯೇ ಇರುವ-ಅವಾಗ್ಜಪ್ರಣವವು, ಓಂಕಾರಪ್ರಣವವು,ಅಕಾರಪ್ರಣವವು, ಉಕಾರಪ್ರಣವವು, ಮಕಾರಪ್ರಣವವು-ಎಂಬ ಈ ಪ್ರಣವ ಪಂಚಕವೂಕೂಡ ಪ್ರವೃತ್ತಿಮಾರ್ಗಕ್ರಮದಿಂದ ಹೇಳಲ್ಪಟ್ಟಿತು. ಮತ್ತೂ ಆಪ್ರಣವ ಪಂಚಕಗಳ ನಿವೃತ್ತಿಮಾರ್ಗದ ಗೋಪ್ಯವಾದ ಸ್ವರೂಪವನ್ನು ಹೇಳುತ್ತೇನೆ. ಕೇಳು— ॥೧೪೦॥ ಅಕಾರಪ್ರಣವವನ್ನು ಮೊದಲನೆಯದೆಂದು ತಿಳಿಯಬೇಕು. ಉಕಾರಪ್ರಣವವನ್ನು ಎರಡನೆಯದೆಂದು ತಿಳಿಯಬೇಕು. ಮಕಾರಪ್ರಣವವನ್ನು ಮೂರನೆಯದೆಂದು ತಿಳಿಯಬೇಕು. ಓಂಕಾರಪ್ರಣವವನ್ನು ನಾಲ್ಕನೆಯದೆಂದು ತಿಳಿಯಬೇಕು ಅವಾಗ್ಜಪ್ರಣವವನ್ನು ಐದನೆಯದೆಂಬದಾಗಿ ತಿಳಿಯಬೇಕು. ಈರೀತಿಯಾಗಿ ಐದು ಪ್ರಕಾರಗಳಾದ ಪ್ರಣವಗಳೊಳಗೆ—ನಾದರೂಪವಾದ ಅಕಾರಪ್ರಣವವನ್ನು ಜಾಗ್ರತ್ಸ್ಥಾನದಲ್ಲಿ ಪ್ರವೇಶಮಾಡಿಸಬೇಕು. ಮತ್ತೂ ಬಿಂದುರೂಪವಾದ ಉಕಾರಪ್ರಣವವನ್ನು ಸ್ವಪ್ನಸ್ಥಾನದಲ್ಲಿ ಪ್ರವೇಶಮಾಡಿಸಬೇಕು. ಮತ್ತು ಕಲಾರೂಪವಾದ ಮಕಾರವನ್ನು ಸುಪ್ತಿಸ್ಥಾನದಲ್ಲಿ ಪ್ರವೇಶಮಾಡಿಸಬೇಕು. ॥೧೪೩॥ ಮತ್ತೂ ಶಕ್ತಿರೂಪವಾದ ಓಂಕಾರವನ್ನು ತುರ್ಯಸ್ಥಾನದಲ್ಲಿ ಪ್ರವೇಶಮಾಡಿಸಬೇಕು. ಮತ್ತೂ ಶಿವರೂಪವಾದ ಅವಾಗ್ಜಪ್ರಣವವನ್ನು ತುರ್ಯಾತೀತಸ್ಥಾನದಲ್ಲಿ ಪ್ರವೇಶಮಾಡಿಸಿ ಇರಿಸಬೇಕು ॥೧೪೪॥

ಚ್ಯತೇ । ಶಿಕಾರಃಕುಂಡಲಾಕಾರೋವಾಕಾರಶ್ಚಾರ್ಧಚಂದ್ರಕಃ ॥೧೪೫॥ ಯಕಾರೋಬಿಂದುರೂಪೋಽಯಮೋಂಕಾರಃಪಂಚವರ್ಣಕಃ ॥ ತಾರಕೇಽಸ್ಮಿನ್‌ಸ್ಥಿತೋಬ್ರಹ್ಮಾವಿಷ್ಣುಸ್ತದ್ದಂಡಕೇಸ್ಥಿತಃ ॥೧೪೬॥ ರುದ್ರಶ್ಚಕುಂಡಲಾಕಾರೇಅರ್ಧಚಂದ್ರೇತಥೇಶ್ವರಃ । ಬಿಂದೌಸದಾಶಿವಸ್ತಸ್ಥೌತೇಜೋರೂಪಂಕಲಾಪದೇ ॥೧೩೭॥ ತೈಲಧಾರಾನವಚ್ಛಿನ್ನಂದೀರ್ಘಂಘಂಟಾನಿನಾದವತ್ । ಅವಾಗ್ರಪ್ರಣವಸ್ಯಾಗ್ರಂಯಸ್ತಂವೇದಸವೇದವಿತ್ ॥೧೪೮॥ ತಸ್ಮಾದುಚ್ಚಾರಣಾಸ್ಸವ್ಯಕ್ಪ್ರಣವಸ್ಯಶಿವಾತ್ಮನಃ । ಪಾತಕಾನಿವಿನಶ್ಯಂತಿಹೃದಿಧ್ಯಾತೇಶಿವೇಪರೇ ॥೧೪೯॥ ಮಂತ್ರಾಣಾಮಾದಿರೋಂಕಾರಶ್ಛಂದಸಾಮಿವಶೋಭನೇ । ಯೇನೇದಂಜಗದುತ್ಪನ್ನಮೇತದ್ರೂಪಾನುಸಾರಿಣಾ ॥೧೫೦॥ ಓಂಕಾರಃಪ್ರಣವಶ್ಚೈವಬ್ರಹ್ಮಜ್ಞಾನಂಶಿವಾತ್ಮಕಂ । ತೇಜೋಬೀಜಂನಿಷ್ಕಲಂಸ್ಯಾತ್ತಾರಕಂನಿಷ್ಕಲಾತ್ಮಕಂ ॥೧೫೧॥ ನಾದೋನಾದಾದಿಹೃನ್ನಾದೋವೇದಾಗಿ[illegible]ದಭೂರಪಿ । ಮುಕ್ತಿಬೀಜಂಮಂತ್ರಬೀಜಂವರ್ಣ

ಮತ್ತೂ ನಕಾರವೇ ತಾರಕಾಕಾರಸ್ಥಾನವು, ಮಕಾರವೇ ದಂಡಕಾಕಾರಸ್ಥಾನವು, ಶಿಕಾರವೇ ಕುಂಡಲಾಕಾರಸ್ಥಾನವು, ವಾಕಾರವೇ ಅರ್ಧಚಂದ್ರಾಕಾರಸ್ಥಾನವು, ಯಕಾರವೇ ಜ್ಯೋತಿರಾಕಾರಸ್ಥಾನವು, ಓಂಕಾರವೇ ಪಂಚವರ್ಣಾಕಾರಸ್ಥಾನವು ಆಗಿರುವುದರಿಂದಲೇ, ತಾರಕಾಕೃತಿಯಲ್ಲಿ ಬ್ರಹ್ಮನು ಇರುತ್ತಾನೆ. ದಂಡಕಾಕಾರದಲ್ಲಿ ವಿಷ್ಣುವು ಇರುತ್ತಾನೆ. ಕುಂಡಲಾಕಾರದಲ್ಲಿ ರುದ್ರನು ಇರುತ್ತಾನೆ. ಅರ್ಧಚಂದ್ರಾಕಾರದಲ್ಲಿ ಈಶ್ವರನು ಇರುತ್ತಾನೆ. ಜ್ಯೋತಿರಾಕಾರದಲ್ಲಿ ಸದಾಶಿವನು ಇರುತ್ತಾನೆ. ಪಂಚವರ್ಣಕಲಾಸ್ಥಾನದಲ್ಲಿ ಅನವಚ್ಛಿನ್ನವಾದ ತೈಲಧಾರೆಯಂತೆಯೂ ಘಂಟಾನಿನಾದದಂತೆ,ದೀರ್ಘವಾಗಿಯೂ ಪರಶಿವನು ಇರುತ್ತಾನೆ. ಆಅವಾಗ್ರಪ್ರಣವಾಗ್ರವರ್ತಿಯಾದ ಪರಶಿವನನ್ನು ಯಾವನು ತಿಳಿಯುತ್ತಾನೋ ಅವನೇ ವೇದವಿತ್ತು ಎಂಬದಾಗಿ ಹೇಳಿಸಿಕೊಳ್ಳಲ್ಪಡುತ್ತಾನೆ. ॥೧೪೮॥ ಆದಕಾರಣದಿಂದಲೇ ಪ್ರಣವಸ್ವರೂಪನಾದ ಪರಶಿವನ ನಾಮವನ್ನು ಉಚ್ಚಾರಣೆ ಮಾಡಿದಾಗ್ಗೂ,ಮತ್ತೂ ಉತ್ಕೃಷ್ಟನಾದ ಪರಶಿವನನ್ನು ಹೃದಯದಲ್ಲಿ ಧ್ಯಾನಿಸಿದಾಗ್ಗೂ ಆಶಿವನಾಮೋಚ್ಚಾರಣೆಯೂ ಆ ಶಿವಧ್ಯಾನವೂ ಕೂಡ ಸಮಸ್ತಪಾಪಗಳನ್ನೂ ನಾಶಮಾಡುತ್ತದೆ. ॥೧೪೯॥ ಮತ್ತೂ ಎಲೈ ಲಿಂಗಪ್ಪಮಂತ್ರಿಯೇ! ಕೇಳು-ಪರಶಿವನು ಪಾರ್ವತಿಗೆ ಹೀಗೆ ಹೇಳುತ್ತಾನೆ. ಎಲೈ ಶೋಭನಾಂಗಿಯಾದಮಹೇಶ್ವರಿಯೆ!ಛಂದೋಬದ್ಧಂಗಳಾಗಿರುವ ಮಂತ್ರಗಳೊಳಗೆ ಯಾವ ಓಂಕಾರವೇ ಆದಿಯೋ ಆ ಓಂಕಾರಸ್ವರೂಪನ್ನೇ ಹೊಂದಿರುವ ಯಾವನಿಂದ ಈ ಚರಾಚರಾತ್ಮಕವಾದ ಜಗತ್ತು ಉತ್ಪನ್ನವಾಯಿತೋ, ಆ ಕಾರಣದಿಂದಲೇ ಆ ಪ್ರಣ

ಬೀಜಂಮಹೇಶ್ವರಿ ॥೧೫೨॥ ಇತ್ಯಷ್ಟಾದಶಭೇದಾನಿನಾಮಾನಿಪ್ರಣವಸ್ಯವೈ । ಅವ್ಯಂಜನಮಘೋಷಂಚವಿಸ್ತರಂರೇಫವರ್ಜಿತಂ ॥೧೫೩॥ ಆತಾಲುಕಂಠಹೃನ್ನಾಸಿಕೋಷ್ಠಜಂ ಚಾಕ್ಷರಂ ತಥಾ । ಓಂಕಾರಪ್ರಭವಾವೇದಾ ಓಂಕಾರಪ್ರಭವಾಸ್ಸ್ವರಾಃ ॥೧೫೪॥ ಓಂಕಾರಸಂಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ । ಪ್ರಣವೋಹಿ ಪರಂಬ್ರಹ್ಮ ಪ್ರಣವಃ ಪರಮಂಪದಂ ॥೧೫೫॥ ಸಾಕ್ಷಾತ್ಪರಶಿವೋ ಯೋಸಾವೊಮಿತ್ಯುಕ್ತೋಽದ್ವಿತೀಯಕಃ । ಸಂಖ್ಯಾತಃ ಪರಮಾತ್ಮೇತಿ ತಸ್ಮಾನ್ನಾದಸಮುದ್ಭವಃ ॥೧೫೬॥ ನಾದಾದುದ್ಭವತೆಬಿಂದು ರ್ಬಿಂದೋ ಸ್ಸಂಜಾಯತೆಕಳಾ।ಕಳಯಾಜಾಯತೆ ಶಕ್ತಿ ಸ್ತಯಾಸಂವಿತ್ಪ್ರಜಾಯತೆ ॥೧೫೭॥ ಸಂವಿದಾಜಾಯತೆ ಚಿತ್ತಂ ತಸ್ಮಾತ್ತೇಜಃ ಪ್ರಜಾಯತೆ । ತದ್ವೈಸದಾಶಿವಃಪ್ರೋಕ್ತ ಸ್ತಸ್ಮಾಜ್ಜಾತ ಸ್ಸಈಶ್ವರಃ ॥೧೫೮॥ ಈಶ್ವರಾಜ್ಜಾಯತೆ ರುದ್ರ

ವಕ್ಕೆ ಓಂಕಾರವೆಂತಲೂ, ಪ್ರಣವವೆಂತಲೂ, ಬ್ರಹ್ಮವೆಂತಲೂ, ಜ್ಞಾನವೆಂತಲೂ, ಶಿವಾತ್ಮಕವೆಂತಲೂ, ತೇಜಸ್ಸೆಂತಲೂ, ಬೀಜವೆಂತಲೂ, ನಿಷ್ಕಲವೆಂತಲೂ, ತಾರಕವೆಂತಲೂ, ನಿಷ್ಕಲಾತ್ಮಕವೆಂತಲೂ, ನಾದವೆಂತಲೂ, ನಾದಾದಿಯೆಂತಲೂ, ಹೃನ್ನಾದವೆಂತಲೂ, ವೇದಾದಿಯೆಂತಲೂ, ವೇದಭೂಯೆಂತಲೂ, ಮುಕ್ತಿಬೀಜವೆಂತಲೂ, ಮಂತ್ರಬೀಜವೆಂತಲೂ, ವರ್ಣಬೀಜವೆಂತಲೂ ಕೂಡ ಹದಿನೆಂಟು ಹೆಸರುಗಳು ಬಂದಿರುವುವು. ಆ ಪ್ರಣವವೆನಿಸಿದ ಓಂಕಾರವು-ಅವ್ಯಂಜನವೂ ಅಘೋಷವೂ, ವಿಸ್ತರವೂ, ರೇಫವರ್ಜಿತವೂ,ತಾಲುಕಂಠಹೃದಯನಾಸಿಕಓಷ್ಠ ಈಸ್ಥಾನಗಳಲ್ಲಿ ಹುಟ್ಟತಕ್ಕದ್ದೂ, ಅಕ್ಷರವೂ ಆಗಿ ಮೆರೆದಿರುವುದು. ಆದುದರಿಂದಲೇ ಓಂಕಾರದದೆಸೆಯಿಂದಲೇ ಸಮಸ್ತ ಸ್ವರಗಳೂ ಹುಟ್ಟಿರುವುವು. ॥೧೫೪॥ ಮತ್ತೂ ಸಚರಾಚರಾತ್ಮಕವಾದ ಈ ಸಮಸ್ತ ಲೋಕವೂ ಕೂಡ ಓಂಕಾರದಿಂದಲೇ ಉತ್ಪನ್ನವಾಯಿತು. ಆದಕಾರಣ ಪ್ರಣವವೇ ಪರಬ್ರಹ್ಮವಲ್ಲವೆ ? ಪ್ರಣವವೇ ಪರಮಪದವಲ್ಲವೆ ?॥೧೫೫॥ವ.ತ್ತೂ ಅದ್ವಿತೀಯನಾದ ಯಾವ ಆ ಸಾಕ್ಷಾತ್ಪರಶಿವನೇ ಪ್ರಣವವೆಂಬದಾಗಿ ಹೇಳಿಸಿಕೊಂಡು ಪರಮಾತ್ಮನು ಎಂದು ಎಣಿಸಲ್ಪಟ್ಟನೊ ಇಂತೊಪ್ಪುವ ಆ ಪರಶಿವನದೆಸೆಯಿಂದ ನಾದವು ಉತ್ಪನ್ನವಾಯಿತು. ॥ ೧೫೬ ॥ ಆ ನಾದದ ದೆಸೆಯಿಂದ ಬಿಂದುವು ಉತ್ಪನ್ನವಾಯಿತು. ಆ ಬಿಂದುವಿನ ದೆಸೆಯಿಂದ ಕಳೆಯು ಉತ್ಪನ್ನವಾಯಿತು. ಆ ಕಳೆಯದೆಸೆಯಿಂದ ಶಕ್ತಿಯು ಉತ್ಪನ್ನವಾಯಿತು. ಆ ಶಕ್ತಿಯದೆಸೆಯಿಂದ ಜ್ಞಾನವು ಉತ್ಪನ್ನವಾಯಿತು. ಆ ಜ್ಞಾನದದೆಸೆಯಿಂದ ಚಿತ್ತು ಉತ್ಪನ್ನವಾಯಿತು. ಆ ಚಿತ್ತಿನದೆಸೆಯಿಂದ ತೇಜಸ್ಸು ಉತ್ಪನ್ನವಾಯಿತು. ಆ ತೇಜಸ್ಸಿನದೆಸೆಯಿಂದ ಸದಾಶಿವನು ಉ

ಸ್ಸೃಷ್ಟಿವ್ಯಾಪಾದಕೋಹರಃ । ರುದ್ರಾತ್ಪ್ರಜಾಯತೆ ವಿಷ್ಣುರ್ವಿಷ್ಣೋರ್ಬ್ರಹ್ಮಾ ಪ್ರಜಾಯತೆ ॥೧೫೯॥ ಬ್ರಹ್ಮಣಾಜಾಯತೆ ದೇವಿ ಜಗತ್ಸರ್ವಂ ಚರಾಚರಂ। ಓಮಿತ್ಯಂಗಂ ಮಹೇಶಸ್ಯ ಮಹತಃ ಪರಮಾತ್ಮನಃ ॥೧೬೦॥ ವರ್ಣಾನ್ಯಸ್ಯತು ಸದ್ಯಾದಿಮುಖಾನೀತ್ಯಭಿವರ್ಣಿತಂ । ಪಂಚಬ್ರಹ್ಮಮಯಾನ್ಯೇತಾನ್ಯುಚ್ಯಂತೇ ಸ್ವಯಮೇವಚ ॥೧೬೧॥ ಅತಓಂಕಾರಪಿಪ್ರೋಕ್ತಂ ಷಡಂಗಂ ಬ್ರಹ್ಮಲಕ್ಷಣಂ । ಸದೈವತಂ ಸ್ಯಾತ್ಷಡ್ವರ್ಣಂ ಸಬೀಜಂ ತತ್ವಷಟ್ಕಕಂ ॥೧೬೨॥ ಯಕಾರಃಪರಿಪೂರ್ಣತ್ವಂ ವಾಕಾರೊ ನಿತ್ಯಮೇವಚ।ಆನಂದಕಶ್ಶಿಕಾರ ಸ್ಸ್ಯಾನ್ಮಕಾರಶ್ಚಿತ್ಸ್ವರೂಪಕಂ॥೧೬೩॥ನಕಾರಸ್ಸತ್ವರೂಪಂಚ ಪ್ರಣವೋಮಿಶ್ರರೂಪಕಃ । ಯಕಾರಃ ಪರಸಂಜ್ಞಸ್ಸ್ಯಾದ್ವಾಕಾರೋ ಗೂಢಮೇವಚ ॥೧೬೪॥ ಶರೀರಸ್ಥಂ ಶಿಕಾರ ಸ್ಸ್ಯಾ

ತ್ಪನ್ನನಾದನು. ಆ ಸದಾಶಿವನದೆಸೆಯಿಂದ ಈಶ್ವರನು ಉತ್ಪನ್ನನಾದನು. ಆ ಈಶ್ವರನದೆಸೆಯಿಂದ ಸೃಷ್ಟಿಸ್ಥಿತಿ ಸಂಹಾರವನ್ನು ಮಾಡತಕ್ಕ ರುದ್ರನು ಉತ್ಪನ್ನನಾದನು. ಆ ರುದ್ರನದೆಸೆಯಿಂದ ಸೃಷ್ಟಿಸ್ಥಿತಿಗಳನ್ನು ಮಾಡತಕ್ಕ ವಿಷ್ಣುವು ಹುಟ್ಟಿದನು. ಆ ವಿಷ್ಣುವಿನದೆಸೆಯಿಂದ ಸೃಷ್ಟಿಯನ್ನು ಮಾಡತಕ್ಕ ಬ್ರಹ್ಮನು ಹುಟ್ಟಿದನು. ॥೧೫೯॥ ಎಲೈ ಪಾರ್ವತಿಯೆ ! ಕೇಳು-ಆ ಬ್ರಹ್ಮನದೆಸೆಯಿಂದ ಚರಾಚರಾತ್ಮಕವಾದ ಈ ಸಮಸ್ತ ಜಗತ್ತೂ ಉತ್ಪನ್ನವಾಯಿತು. ಎಂದು ಪರಶಿವನು ಪಾರ್ವತಿಗೆ ಹೇಳಿದನು. ಎಲೈ ಲಿಂಗಪ್ರಮಂತ್ರಿಯೆ ಕೇಳು—ಪರಮಾತ್ಮನಾದ ಆ ಪರಶಿವನಿಗೆ ಓಂ ಎಂಬುವುದು ಅಂಗವಾಗಿರುವುದು, ಮತ್ತು ಉಳಿದ ೫ ಅಕ್ಷರಗಳು ಈ ಪರಶಿವನಿಗೆ—ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ—ಗಳೆಂಬ ಪಂಚಬ್ರಹ್ಮಮಯಗಳೂ ಪಂಚಮುಖಗಳೂ ಆಗಿರುವುವು. ಆದುದರಿಂದಲೇ ಪಂಚಾಕ್ಷರಗಳು ಮತ್ತೂ ಓಂಕಾರವು ಈ ಆರುವರ್ಣಗಳೂ ಕೂಡ ಪರಶಿವನಿಗೆ ಷಡಂಗಗಳು ಎಂಬದಾಗಿ ಹೇಳಲ್ಪಟ್ಟುವು. ಅನಂತರ ಆರಂಗವುಳ್ಳ ಆ ಬ್ರಹ್ಮದ ಲಕ್ಷಣವೆನಿಸಿದ ಆರುದೈವಗಳನ್ನೂ, ಆರುವರ್ಣಗಳನ್ನೂ, ಆರುಬೀಜಗಳನ್ನೂ, ಆರುತತ್ವಗಳನ್ನೂ, ಆರುಸ್ವರೂಪಗಳೇ ಮೊದಲಾದುವುಗಳನ್ನೂ ಹೇಳುತ್ತೇನೆ ಕೇಳು ॥೧೬೨॥ ಯಕಾರವೇ ಪರಿಪೂರ್ಣಸ್ವರೂಪವು, ವಾಕಾರವೇ ನಿತ್ಯಸ್ವರೂಪವು, ಶಿಕಾರವೇ ಆನಂದಸ್ವರೂಪವು, ಮಕಾರವೇ ಚಿತ್ಸ್ವರೂಪಕವು, ನಕಾರವೇ ಸತ್ವಸ್ವರೂಪಕವು, ಓಂಕಾರವೇ ಮಿಶ್ರರೂಪಕವು ಆಗಿ ಈ ಆರೂ ಆ ಬ್ರಹ್ಮದಸ್ವರೂಪವೆನಿಸಿದುವು. ॥ ಮತ್ತೂ-ಯಕಾರವೇ ಪರಸಂಜ್ಞೆಯನ್ನು, ವಾಕಾರವೇ ಗೂಢಸಂಜ್ಞೆಯನ್ನು, ಶಿಕಾರವೇ ಶರೀರಸ್ಥವೆನಿಸಿದ ಲಿಂಗಸಂಜ್ಞೆಯನ್ನು, ಮಕಾರವೇ ಕ್ಷೇತ್ರಸಂಜ್ಞೆಯನ್ನು, ನಕಾರವೇ ಅನಾ

ಲ್ಲಿಂಗಂಕ್ಷೇತ್ರಂ ಮಕಾರಕಂ।ನಕಾರೋಽನಾದಿಮದ್ರೂಪ ಮೋಂಕಾರ
ಶ್ಚ ಮಹತ್ಸಂಸ್ಕೃತಂ ॥೧೬೫॥ ಯಕಾರಶ್ಚ ಪರಾಶಕ್ತಿ ರ್ವಾಕಾರಶ್ಚಾದಿಸಂ
ಜ್ಞಕಃ।ಇಚ್ಛಾಶಕ್ತಿ ಶ್ಶಿಕಾರಸ್ಸ್ಯಾ ದ್ಜ್ಞಾನಶಕ್ತಿ ರ್ಮಕಾರಕಂ॥೧೬೬॥
ಕ್ರಿಯಾಶಕ್ತಿ ರ್ನಕಾರಶ್ಚ ಪ್ರಣವಶ್ಚಿತ್ಸ್ವರೂಪಕಃ । ಯಕಾರಶ್ಶಿವಸಾ
ದಾಖ್ಯಂ ವಾಕಾರಸ್ಸ್ಯಾದಮೂರ್ತಕಂ ॥೧೬೭॥ ಶಿಕಾರೋಮೂರ್ತಸಾ
ದಾಖ್ಯಂ ಮಕಾರಃಕರ್ತೃನಾಮಕಂ।ನಕಾರಂಕರ್ಮಸಾದಾಖ್ಯಂ ಪ್ರಣವಂ
ಮಹದುಚ್ಯತೇ॥೧೬೮॥ ಪ್ರಣವೋಗೋಪ್ಯವದನಮೈಶಾನ್ಯಂ ಯಾರ್ಣಮೇ
ವಚ। ತತ್ಪೂರುಷಂಚ ವಾಕಾರ ಶ್ಶಿಕಾರಸ್ಸ್ಯಾದಘೋರಕಂ ॥೧೬೯॥ಮ
ಕಾರೋವಾಮದೇವಂಚ ಸದ್ಯೋಜಾತೋ ನಕಾರಕಃ । ಪ್ರಣವೋ ಜ್ಞಾ
ನಬೀಜಂಸ್ಯಾ ದಾಚಾರಂಚನಕಾರಕಃ॥೧೭೦॥ಮಕಾರಶ್ಚ ಗುರೋರ್ಬೀ
ಜಂ ಶಿಕಾರಂಶಿವಲಿಂಗಕಂ । ವಾಕಾರಶ್ಚರಬೀಜಂಚ ಯಕಾರಶ್ಚ ಪ್ರಸಾ
ದಕಂ ॥೧೭೧॥ ಏವಂಬೀಜಾಕ್ಷರಜ್ಞಾನಂ ದುರ್ಲಭಂಹಿ ವರಾನನೇ । ಓಂ

ದಿಸಂಜ್ಞೆಯನ್ನು, ಓಂಕಾರವೇ ಮಹತ್ಸಂಜ್ಞೆಯನ್ನು ಹೊಂದಿ ಈ ಆರೂ ಆ ಬ್ರಹ್ಮ
ದ ಆರುಸಂಜ್ಞೆಗಳೆನಿಸಿದುವು ॥೧೬೫॥ ಮತ್ತು—ಯಕಾರವೇ ಪರಾಶಕ್ತಿಯನ್ನು,
ವಾಕಾರವೇ ಆದಿಶಕ್ತಿಯನ್ನು, ಶಿಕಾರವೇ ಇಚ್ಛಾಶಕ್ತಿಯನ್ನು, ಮಕಾರವೇ ಜ್ಞಾನ
ಶಕ್ತಿಯನ್ನು, ನಕಾರವೇ ಕ್ರಿಯಾಶಕ್ತಿಯನ್ನು, ಪ್ರಣವವೇ ಚಿಚ್ಛಕ್ತಿಯನ್ನು ಆಶ್ರಯಿ
ಸಿ, ಆಬ್ರಹ್ಮದ ಆರುಶಕ್ತಿಗಳೆನಿಸಿಕೊಂಡುವು. ॥ ಮತ್ತು ಯಕಾರವೇ ಶಿವಸಾದಾ
ಖ್ಯವಾಯಿತು, ವಾಕಾರವೇ ಅಮೂರ್ತಸಾದಾಖ್ಯವಾಯಿತು, ಶಿಕಾರವೇ ಮೂರ್ತ
ಸಾದಾಖ್ಯವಾಯಿತು, ಮಕಾರವೇ ಕರ್ತೃಸಾದಾಖ್ಯವಾಯಿತು, ನಕಾರವೇ ಕರ್ಮ
ಸಾದಾಖ್ಯವಾಯಿತು, ಪ್ರಣವವೇ ಮಹಾಸಾದಾಖ್ಯವಾಯಿತು, ಈರೀತಿಯಾಗಿ ಅವು
ಆ ಬ್ರಹ್ಮಕ್ಕೆ ಆರು ಸಾದಾಖ್ಯಗಳೆನಿಸಿದುವು. ॥೧೬೮॥ ಮತ್ತು ಪ್ರಣವವೇ ಗೋ
ಪ್ಯವದನವಾಯಿತು, ಯಕಾರವೇ ಈಶಾನ ಮುಖವಾಯಿತು, ವಾಕಾರವೇ ತತ್ಪುರು
ಷಮುಖವಾಯಿತು,ಶಿಕಾರವೇ ಅಘೋರ ಮುಖವಾಯಿತು,ಮಕಾರವೇ ವಾಮದೇವ
ಮುಖವಾಯಿತು, ನಕಾರವೇ ಸದ್ಯೋಜಾತ ಮುಖವಾಯಿತು, ಈರೀತಿಯಾಗಿ ಆಷ
ಡಕ್ಷರೀಮಂತ್ರವೇ ಆಬ್ರಹ್ಮಕ್ಕೆ ಆರು ಮುಖಗಳೆನಿಸಿರುವುವು.॥ ಮತ್ತು-ಪ್ರಣವವೇ
ಜ್ಞಾನಲಿಂಗಕ್ಕೆ ಬೀಜವೆನಿಸಿತು, ನಕಾರವೇ ಆಚಾರಲಿಂಗಕ್ಕೆ ಬೀಜವೆನಿಸಿತು, ಮಕಾ
ರವೇ ಗುರುಲಿಂಗಕ್ಕೆ ಬೀಜವೆನಿಸಿತು, ಶಿಕಾರವೇ ಶಿವಲಿಂಗಕ್ಕೆ ಬೀಜವೆನಿಸಿತು, ವಾ
ಕಾರವೇ ಜಂಗಮಲಿಂಗಕ್ಕೆ ಬೀಜವೆನಿಸಿತು, ಯಕಾರವೇ ಪ್ರಸಾದಲಿಂಗಕ್ಕೆ ಬೀಜವೆ
ನಿಸಿತು. ಈರೀತಿಯಾಗಿ ಈ ಆರೂ ಆ ಬ್ರಹ್ಮಕ್ಕೆ ಲಿಂಗಬೀಜಗಳೆನಿಸಿಕೊಂಡುವು.
॥೧೭೧॥ ಎಲೈ ಪಾರ್ವತಿಯೇ ! ಲೋಕದಲ್ಲಿ ಈರೀತಿಯಾದ ಬೀಜಾಕ್ಷರದ ಜ್ಞಾನವನ್ನು

ಕಾರಐಕ್ಯರೂಪ ಸ್ಸ್ಯಾದ್ಯಕಾರ ಶ್ಶರಣಸ್ತಥಾ ॥೧೩೨॥ ವಾಕಾರಃಪ್ರಾಣಲಿಂಗೀಚ ಪ್ರಸಾದೀಚ ಶಿಕಾರಕಃ । ಮಕಾರಶ್ಚ ಮಹೇಶಸ್ಸ್ಯಾನ್ನಕಾರೋಭಕ್ತಏವಚ॥೧೩೩॥ಷಟ್ಸ್ಥಲಂಚೈವ ಷಡ್ವರ್ಣಮಿತಿ ಗೋಪ್ಯಂ ವರಾನನೇ। ಪ್ರಣವೋ ಭಾವಹಸ್ತಶ್ಚ ಜ್ಞಾನಹಸ್ತೋಯಕಾರಕಃ ॥೧೩೪॥ ವಾಕಾರಸ್ಸುಮನೋಹಸ್ತಃ ಶಿಕಾರೋನಿರಹಂಕೃತಿಃ।ಮಕಾರೋಬುದ್ಧಿಹಸ್ತಶ್ಚ ಚಿತ್ತಹಸ್ತೋ ನಕಾರಕಃ ॥೧೩೫॥ ಭಾವಾದಿಹಸ್ತಷಟ್ಕಂಚ ಷಡಕ್ಷರಮಯಂ ಭವೇತ್ । ಓಂಕಾರಸ್ಸ್ಯಾತ್ಪರಶಿವೋ ಯಕಾರಸ್ತು ಸದಾಶಿವಃ ॥೧೩೬॥ ಈಶ್ವರೋಽಯಂಚ ವಾಕಾರ ಶಿಕಾರೋ ರುದ್ರಉಚ್ಯತೇ । ಮಕಾರೋವಿಷ್ಣುರೇವಸ್ಯಾದ್ಬ್ರಹ್ಮನಾರ್ಣ ಮಿತಿಕ್ರಮಾತ್ ॥೧೩೭॥ ಸೃಷ್ಟಿಮಾರ್ಗೇಣ ಜಾನೀಯಾಜ್ಜಪ್ಯಾಮೇನಾಂ ವಿಲೋಮತಃ । ಸರ್ವವರ್ಣ ಸ್ಸ್ಯಾದೋಂಕಾರೋಯಕಾರ ಸ್ಸ್ಫಟಿಕೋಪಮಃ ॥೧೩೮॥ ವಾಕಾರಶ್ಶ್ವೇತವರ್ಣಾಢ್ಯ ಶ್ಶಿಕಾರೋ ನೀಲವರ್ಣಭಾಕ್।ಮಕಾರೋ ರತ್ನಸಂಕಾಶೋ ನಕಾರಃ ಪೀತವರ್ಣಭಾಕ್॥೧೩೯॥

ಹೊಂದುವುದು ದುರ್ಲಭವು. ಮತ್ತೂ ಕೇಳು-ಓಂಕಾರವೇ ಐಕ್ಯಸ್ಥಲವಾಯಿತು, ಯಕಾರವೇ ಶರಣಸ್ಥಲವಾಯಿತು, ವಾಕಾರವೇ ಪ್ರಾಣಲಿಂಗಿಸ್ಥಲವಾಯಿತು, ಶಿಕಾರವೇ ಪ್ರಸಾದಿಸ್ಥಲವಾಯಿತು, ಮಕಾರವೇ ಮಹೇಶಸ್ಥಲವಾಯಿತು, ನಕಾರವೇ ಭಕ್ತಸ್ಥಲವಾಯಿತು, ಈರೀತಿಯಾಗಿ ಆ ಆರುವರ್ಣಗಳೇ ಆಬ್ರಹ್ಮಕ್ಕೆ ಗೋಪ್ಯತರಗಳಾದ ಆರು ಸ್ಥಲಗಳಾಗಿರುವುವು.॥ ಮತ್ತೂ ಪ್ರಣವವೇ ಭಾವಹಸ್ತವಾಯಿತು, ಯಕಾರವೇಜ್ಞಾನಹಸ್ತವಾಯಿತು, ವಾಕಾರವೇ ಸುಮನೋಹಸ್ತವಾಯಿತು, ಶಿಕಾರವೇ ನಿರಹಂಕಾರಹಸ್ತವಾಯಿತು,ಮಕಾರವೇ ಬುದ್ಧಿಹಸ್ತವಾಯಿತು, ನಕಾರವೇ ಚಿತ್ತಹಸ್ತವಾಯಿತು॥ ಈರೀತಿಯಾಗಿ ಭಾವಾದಿಗಳಾದ ಆ ಆರು ಹಸ್ತಗಳೂಕೂಡ ಷಡಕ್ಷರಮಯವೇ ಆಯಿತು. ಮತ್ತೂ ಸೃಷ್ಟಿಮಾರ್ಗವನ್ನನುಸರಿಸಿ ಕ್ರಮವಾಗಿ ಓಂಕಾರವೇ ಪರಶಿವನು, ಯಕಾರವೇ ಸದಾಶಿವನು, ವಾಕಾರವೇ ಈಶ್ವರನು, ಶಿಕಾರವೇ ರುದ್ರನು, ಮಕಾರವೇ ವಿಷ್ಣುವು,ನಕಾರವೇ ಬ್ರಹ್ಮನು ಆಗಿರುವುದರಿಂದ ಈಷಡ್ಬ್ರಹ್ಮಮಯವಾದ ಷಡಕ್ಷರೀ ಮಂತ್ರವನ್ನು ಲೋಮವಿಲೋಮಂಗಳಾಗಿ ಜಪಿಸತಕ್ಕದ್ದು ಎಂಬದಾಗಿ ತಿಳಿಯಬೇಕು. ಮತ್ತೂ ಓಂಕಾರವೇ ಸಮಸ್ತವರ್ಣಮಯವಾಗಿರುವುದು, ಯಕಾರವೇ ಸ್ಫಟಿಕೋಪಮವಾಗಿರುವುದು,ವಾಕಾರವೇ ಶ್ವೇತವರ್ಣದಿಂದೊಪ್ಪಿರುವುದು,ಶಿಕಾರವೇ ನೀಲವರ್ಣದಿಂದೊಪ್ಪಿರುವುದು,ಮಕಾರವೇ ರತ್ನಸಂಕಾಶದಿಂದೊಪ್ಪುವುದು,ನಕಾರವೇ ಪೀತವರ್ಣದಿಂದೊಪ್ಪುವುದು.॥೧೩೯॥ ಆದುದರಿಂದಲೇ ಸರ್ವಕ್ಕೂ ಕಾರಣವಾಗಿರುವ ಪ್ರಣವವು ಸಮಸ್ತ ವರ್ಣಕ್ಕೂ ಬೀಜವಾಗಿರುವುದು, ಯಕಾರವು ಆಕಾಶಕ್ಕೆ ಬೀಜ

ಸಮಸ್ತವರ್ಣಬೀಜಾಢ್ಯಃ ಪ್ರಣವಸ್ಸರ್ವಕಾರಣಂ । ವ್ಯೋಮಬೀಜಂ ಯಕಾರಸ್ಸ್ಯಾದ್ವಾಕಾರೋ ವಾಯುಬೀಜಕಃ ॥೧೯೦॥ ಶಿಕಾರೋ ವಹ್ನಿಬೀಜಂಸ್ಯಾನ್ಮಕಾರೋ ಜಲಬೀಜಕಂ । ನಕಾರಃಪೃಥಿವೀಬೀಜಂ ತಸ್ಮಾದೇತಜ್ಜಗತ್ಪ್ರಸೂಃ॥೧೯೧॥ಪ್ರಣವಸ್ಸರ್ವತತ್ವಾತ್ಮಾ ಸನ್ವೈ ಪರಶಿವಾತ್ಮಕಃ।ಯಕಾರಐಶ್ವರಂತತ್ವಂ ವಾರ್ಣಂ ಮಾಹೇಶ್ವರಂತಥಾ॥೧೯೨॥ ಶಿಕಾರಶ್ಶೈವತತ್ವಂಸ್ಯಾದ್ವಿದ್ಯಾತತ್ವಂತು ಮಸ್ಸ್ಮೃತಃ । ನಕಾರಶ್ಚಾತ್ಮತತ್ವಂ ಸ್ಯಾದೋಂಕಾರಸ್ಸರ್ವತತ್ವಕಃ ॥೧೯೩॥ ಓಂಕಾರಃ ಕೇವಲಂ ಜ್ಞಾನಂ ಯಾರ್ಣಂ ವೇದಸಹಸ್ರಕಂ । ಅಥರ್ವಣೋವಕಾರಸ್ಸ್ಯಾಚ್ಛಿಕಾರಸ್ಸಾಮಸಂಜ್ಞಕಃ ॥೧೯೪॥ ಮಕಾರೋಯಜುರೇವೋಕ್ತೋ ನಾರ್ಣ ವೃಗ್ವೇದಸಂಜ್ಞಕಃ । ತಸ್ಮಾದಾಮ್ನಾಯಜನಕಷ್ಷಡಕ್ಷರಮಹಾಮನುಃ ॥೧೯೫॥ ವೇದಾಸ್ಸ್ವರಾಶ್ಚ ಮಂತ್ರಾಶ್ಚ ಸರ್ವೇಪ್ಯತ್ರ ಸಮುತ್ಥಿತಾಃ । ಪಂಚಭೂತಾನಿ ಸರ್ವಾಣಿ ಪಂಚತನ್ಮಾತ್ರಕಾಣಿಚ ॥೧೯೬॥ ಜ್ಞಾ

ವಾಗಿರುವುದು, ವಾಕಾರವು ವಾಯುವಿಗೆ ಬೀಜವಾಗಿರುವುದು, ಶಿಕಾರವು ಅಗ್ನಿಗೆ ಬೀಜವಾಗಿರುವುದು, ಮಕಾರವು ಜಲಕ್ಕೆ ಬೀಜವಾಗಿರುವುದು, ನಕಾರವು ಪೃಥ್ವಿಗೆ ಬೀಜವಾಗಿರುವುದು, ಆದುದರಿಂದಲೇ ಈಷಡಕ್ಷರೀಮಂತ್ರವು ಜಗದುತ್ಪತ್ತಿಗೆ ಮೂಲಕಾರಣವಾಯಿತು. ॥೧೯೧॥ ಆದಕಾರಣವೇ ಪರಶಿವಾತ್ಮಕವಾದ ಆ ಪ್ರಣವವು ಸರ್ವತತ್ವಮಯವೂ ಆಯಿತು, ಯಕಾರವು ಈಶ್ವರತತ್ವವಾಯಿತು, ವಾಕಾರವು ಸದಾಶಿವತತ್ವವಾಯಿತು, ಶಿಕಾರವು ಶಿವತತ್ವವಾಯಿತು, ಮಕಾರವು ವಿದ್ಯಾತತ್ವವು ಎಂಬದಾಗಿ ಹೇಳಿಸಿಕೊಳ್ಳಲ್ಪಟ್ಟಿತು, ನಕಾರವು ಆತ್ಮತತ್ವವು ಎಂಬದಾಗಿ ಹೇಳಿಸಿಕೊಳ್ಳಲ್ಪಟ್ಟಿತು. ॥೧೯೩॥ ಮತ್ತೂ ಓಂಕಾರವೇ ಕೇವಲಜ್ಞಾನವಾಯಿತು, ಯಕಾರವೇ ಸಹಸ್ರೋಪನಿಷತ್ತಾಯಿತು, ವಾಕಾರವೇ ಅಥರ್ವಣವೇದವಾಯಿತು, ಶಿಕಾರವೇ ಸಾಮವೇದವಾಯಿತು, ಮಕಾರವೇ ಯಜುರ್ವೇದವಾಯಿತು, ನಕಾರವೇ ಋಗ್ವೇದಸಂಜ್ಞೆಯನ್ನು ಪಡೆಯಿತು. ಆದುದರಿಂದಲೇ ಈ ಷಡಕ್ಷರೀ ಮಹಾಮಂತ್ರವು ಆಮ್ನಾಯಜನಕವೇದಕ್ಕೆ ತಂದೆಯೆಂಬದಾಗಿ ಪ್ರಸಿದ್ಧವಾಗಿರುವುದು. ॥೧೯೫॥ ಆದಕಾರಣವೇ ಸಮಸ್ತ ವೇದಗಳೂ ಸಮಸ್ತ ಸ್ವರಗಳೂ ಸಮಸ್ತ ಮಂತ್ರಗಳೂ ಕೂಡ ಈಷಡಕ್ಷರೀ ಮಂತ್ರದ ದೆಸೆಯಿಂದಲೇ ಹುಟ್ಟಿದುವು. ಮತ್ತು ಪೃಥ್ವಿ ಅಪ್ಪು ತೇಜಸ್ಸು ವಾಯು ಆಕಾಶಗಳೆಂಬ ಪಂಚಭೂತಗಳೂ, ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಪಂಚತನ್ಮಾತ್ರೆಗಳು, ತ್ವಕ್ಕುಚಕ್ಷುಶ್ರೋತ್ರಜಿಹ್ವಾ ಘ್ರಾಣಗಳೆಂಬ ಪಂಚಜ್ಞಾನೇಂದ್ರಿಯ

ನೇಂದ್ರಿಯಾಣಿ ಪಂಚಾಪಿ ಪಂಚಕರ್ಮೇಂದ್ರಿಯಾಣಿಚ ।ಪಂಚಬ್ರಹ್ಮಾಣಿ ಪಂಚೈವಕೃತ್ಯಾನಿ ಸಹಕಾರಣೈಃ ॥೧೪೩॥ ಬೋಧ್ಯಾನಿಪಂಚಭಿರ್ವರ್ಣೈಃ ಪಂಚಾಕ್ಷರಮಹಾಮನೋಃ । ಪಂಚಧಾಪಂಚಧಾಯಾಸ ಪ್ರಸಿದ್ಧಾನಿ ವಿಶೇಷತಃ ॥೧೪೪॥ ತಾನಿಸರ್ವಾಣಿ ವಸ್ತೂನಿ ಪಂಚಾಕ್ಷರಮಯಾನಿಹ । ಇತಿಪಂಚಾಕ್ಷರೀಮಂತ್ರಹೇತುತಾ ಪ್ರಣವಸ್ಯತು ॥೧೪೫॥

—ಅಥವರ್ಣೋತ್ಪತ್ತಿರುಪವರ್ಣ್ಯತೆ.—

ಪ್ರಣವಾಂಗೇ ದ್ವಿಪಂಚಾಶತ್ಪ್ರಣವೋತ್ಪತ್ತಿಕಂ ತತಃ । ಅಷ್ಟತ್ರಿಂಶತ್ಕಲೋತ್ಪತ್ತಿಭೇದಂ ವದ ಮಹೇಶ್ವರ॥೧೫೦॥ಯಥಾ ತ್ವಂಸಕಳೋದೇವೋ ನಿಷ್ಕಳೆನಸಮನ್ವಿತಃ। ಕಲಾ ಮುತ್ಪಾದಯಾಮಾಸ ಸರ್ವಮಂತ್ರಪ್ರವರ್ತಕಾಂ ॥೧೫೧॥ ಓಂಕಾರೋ ಮೂರ್ಧ್ನಮಧ್ಯಸ್ಥ ಓಂಕಾರೋ ವ್ಯಾಪಕಸ್ತಥಾ ।ಓಂಕಾರಃಪ್ರಥಮಾಂ ರೇಖಾಮುಕಾರಂ ಸೃಜತಿ ಪ್ರಭುಃ ॥೧೫೨॥ ನಾಮ್ನಾನಾಮಕಲಾವಿದ್ಯಾ ಸರ್ವವರ್ಣೇಷ್ವವಸ್ಥಿತಾ ।

ಗಳು, ವಾಕ್ಕು ಪಾದ ಪಾಣಿ ಪಾಯು ಉಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳು ಶಿವ ಸದಾಶಿವ ಈಶ್ವರ ವಿಷ್ಣು ಬ್ರಹ್ಮರೆಂಬ ಪಂಚಬ್ರಹ್ಮರು, ಸೃಷ್ಟಿ ಸ್ಥಿತಿ ಸಂಹಾರ ತಿರೋಭಾವ ಅನುಗ್ರಹಗಳೆಂಬ ಪಂಚಕೃತ್ಯಗಳು ಕೂಡ ಪಂಚಾಕ್ಷರೀಮಂತ್ರದ ಪಂಚವರ್ಣಗಳಿಂದಲೇ ಆದುವೆಂಬದಾಗಿ ತಿಳಿಯುವುದಕ್ಕೆ ಯೋಗ್ಯವಾದುವುಗಳು. ಮತ್ತೂ ಈಪ್ರಪಂಚದಲ್ಲಿ ಪಂಚಪಂಚ ಸಂಜ್ಞೆಗಳುಳ್ಳವುಗಳಾಗಿ ಯಾವ ವಸ್ತುಗಳು ಪ್ರಸಿದ್ಧಗಳಾಗಿರುವುವೊ ಆ ವಸ್ತುಗಳೆಲ್ಲವೂ ಪಂಚಾಕ್ಷರೀ ಮಂತ್ರವನ್ನೇ ಕಾರಣವನ್ನಾಗಿ ಮಾಡಿಕೊಂಡು ಜನಿಸಿ, ವಿಶೇಷವಾಗಿ ಪಂಚಾಕ್ಷರೀ ಮಂತ್ರಮಯಗಳೇ ಆಗಿರುವುವು. ಎಲೈ ಲಿಂಗಪ್ಪಮಂತ್ರಿಯೆ ! ಇನ್ನು ಪ್ರಣವಸಹಿತವಾದ ಪಂಚಾಕ್ಷರೀ ಮಂತ್ರದದೆಸೆಯಿಂದ ಸಮಸ್ತ ವರ್ಣಗಳು ಯಾವರೀತಿಯಾಗಿ ಜನಿಸಿರುವುವೋ ಆ ಕ್ರಮವನ್ನು ಹೇಳುತ್ತೇನೆ, ಕೇಳು—

—ಅನಂತರ ವರ್ಣೋತ್ಪತ್ತಿಯು—

ಬಳಿಕ ಪಾರ್ವತಿಯು ಪರಶಿವನನ್ನು ಕುರಿತು—ಎಲೈ ಸ್ವಾಮಿಯೆ ! ಅನಂತರ ಪ್ರಣವಾಂಗದಲ್ಲಿ ಐವತ್ತೆರಡು ಪ್ರಣವಾಕ್ಷರಗಳು ಹೇಗೆ ಹುಟ್ಟಿದುವು ? ಅದನ್ನೂ, ಮತ್ತು ಮೂವತ್ತೆಂಟು ಕಲೆಗಳ ಉತ್ಪತ್ತಿ ಭೇದವನ್ನೂ ಹೇಳುವುದಲ್ಲದೆ ನಿಷ್ಕಳಸ್ವರೂಪನಾದ ನೀನು ಹೇಗೆ ಸಕಲ ಮೂರ್ತಿಯೆನಿಸಿಕೊಂಡು ಸರ್ವ ಮಂತ್ರಪ್ರವರ್ತಕವಾದ ಕಲೆಯನ್ನು ಸೃಷ್ಟಿಸಿದೆಯೊ ಆವಿಷಯವನ್ನೂ ಹೇಳಬೇಕೆನಲು,ಆಗಬಂಕಾರಸ್ವರೂಪನೂ ಮಸ್ತಕದ ಮಧ್ಯದಲ್ಲಿ ಓಂಕಾರನಾದವುಳ್ಳವನೂ ಓಂಕಾರವ್ಯಾಪ

ರೇಖಾಂದ್ವಿತೀಯಾ ಮೋಂಕಾರಮುಕಾರಂಚ ತಥಾಽಸೃಜತ್ ॥೧೯೩॥ ಪ್ರತಿಷ್ಠಾ ಪೀತ್ಯನುಜ್ಞೇಯ ಉಕಾರಾಕ್ಷರಸಂಭವಃ । ಮೂರ್ಧ್ನಿತಸ್ಯ ಭವೇದೇಷಾ ಸೂಕ್ಷ್ಮರೇಖಾ ನಿರಂಜನಾ ॥೧೯೪॥ ಮಕಾರಶ್ಚಾ ಭವತ್ತತ್ರ ನಿವೃತ್ತಿರ್ನಾಮತಃಕಲಾ । ತ್ರಿವರ್ಣಮಕ್ಷರೇ ಹ್ಯೇತದೋಂಕಾರೇಣ ಪ್ರಜಾಯತೇ॥೧೯೫॥ ಹಳಕ್ಷಸ್ತು ತ್ರಿವರ್ಣಂಚ ಚಿದಾತ್ಮನಿತು ಜಾಯತೇ। ಅ ಆ ಇ ಈ ಉ ಕಾರಶ್ಚ ಊ ಋ ೠ ಚ ಲೃ ಲೄ ತಥಾ ॥೧೯೬॥ ಏ ಐ ಓ ಔ ಅಂತು ಅಶ್ಚ ಯಕಾರೇಣ ಪ್ರಜಾಯತೆ । ಕ ಖೌ ಗ ಘೌ ಙ ಕಾರಶ್ಚ ಚ ಛೌ ಜ ಝೌ ಞ ಕಾರಕಃ ॥೧೯೭॥ ಟ ಠೌ ವರ್ಣಾತ್ತಥಾಹ್ಯಸ್ಮಿನ್ವಾಕಾರೇಣ ಪ್ರಜಾಯತೇ । ಡಢೌಣಶ್ಚ ತಥಾವರ್ಣಾ ದಧನಾಪಫವರ್ಣಕೌ॥೧೯೮॥ ಏತಾನಿದಶವರ್ಣಾನಿ ಜಾಯಂತೇಽತ್ರ ಶಿಕಾರಕೇ । ಬಭೌಮುಯುರವರ್ಣಾನಿ ಲಕಾರಮಪಿ ವರ್ಣಕಂ ॥೧೯೯॥ ವರ್ಣಷಟ್ಕಂ ತಥಾಹ್ಯಸ್ಮಿನ್ಮಕಾರೇಣ ಪ್ರಜಾಯತೇ। ವಶೌಷಸೌ ಹವರ್ಣಶ್ಚ

ಕನೂ ಪ್ರಭುವೂ ಆದ ಪರಶಿವನು ಪಾರ್ವತಿಗೆ ಪ್ರತ್ಯಕ್ಷವಾಗಿ ತೋರಿಸುವುದಕ್ಕೋಸ್ಕರ ಓಂಕಾರದ ಮೊದಲನೆಯ ರೇಖೆಯಾದ ಅಕಾರವನ್ನು ಸೃಷ್ಟಿಸಿದನು. ॥೧೯೩॥ ಆ ಅಕಾರವೇ ವಿದ್ಯಾಕಲೆಯೆಂಬದಾಗಿ ಪ್ರಸಿದ್ಧವಾಗಿ ಸಮಸ್ತ ವರ್ಣಗಳನ್ನೂ ವ್ಯಾಪಿಸಿಕೊಂಡಿರುವುದು. ಬಳಿಕ ಓಂಕಾರದ ಎರಡನೆಯ ರೇಖೆಯಾದ ಉಕಾರವನ್ನು ಹಾಗೆಯೇ ಸೃಷ್ಟಿಸಿದನು. ಆ ಉಕಾರವೇ ಪ್ರತಿಷ್ಠಾಕಲೆಯು ಎಂಬದಾಗಿ ಪ್ರಸಿದ್ಧವಾಯಿತು. ಬಳಿಕ ಆ ಉಕಾರದ ಮಸ್ತಕದಲ್ಲಿ ನಿರಂಜನೆಯೂ ಸೂಕ್ಷ್ಮರೇಖೆಯೂ ಆದ ಈ ಮಕಾರವು ಉತ್ಪನ್ನವಾಯಿತು, ಈ ಮಕಾರವು ನಿವೃತ್ತಿಕಲೆಯೆಂಬದಾಗಿ ಪ್ರಸಿದ್ಧವಾಯಿತು. ಈರೀತಿಯಾಗಿ ಉತ್ಪನ್ನಗಳಾದ ಅ ಉ ಮಾ ಎಂಬ ಮೂರು ವರ್ಣಗಳೂ ಸೇರಿ ಓಂ ಎಂಬ ಪ್ರಣವಾಕ್ಷರವಾಯಿತು, ಆದುದರಿಂದಲೇ ಓಂ ಎಂಬ ಪ್ರಣವಾಕ್ಷರದ ದೆಸೆಯಿಂದ ಅ ಉ ಮಾ ಎಂಬ ಮೂರುವರ್ಣಗಳು ಜನಿಸಿದುವು. ॥೧೯೫ ಮತ್ತು ಚಿದಾತ್ಮನಾದ ಆ ಪರಬ್ರಹ್ಮದಲ್ಲಿ ಹ ಳ ಕ್ಷ ಎಂಬ ಮೂರುವರ್ಣಗಳು ಜನಿಸಿದುವು. ಅ ಆ ಇ ಈ ಉ ಊ ಋ ೠ ಲೃ ಲೄ ಏ ಐ ಓ ಔ ಅಂ ಅಃ—ಈ ವರ್ಣಗಳು ಯಕಾರ ಪ್ರಣವದಿಂದ ಜನಿಸಿದುವು. ಕ ಖ ಗ ಘ ಙ ಚ ಛ ಜ ಝ ಞ ಟ ಠ—ಎಂಬ ಈ ವರ್ಣಗಳು ವಾಕಾರಪ್ರಣವದಿಂದ ಜನಿಸಿದುವು. ಡ ಢ ಣ ತ ಥ ದ ಧ ನ ಪ ಫ—ಎಂಬ ಈ ಹತ್ತು ವರ್ಣಗಳು ಶಿಕಾರಪ್ರಣವದಿಂದ ಜನಿಸಿದುವು. ಬ ಭ ಮ ಯ ರ ಲ—ಎಂಬ ಈ ಆರುವರ್ಣಗಳು ಮಕಾರ ಪ್ರಣವದಿಂದ ಜನಿಸಿದುವು. ವ ಶ ಷ ಸ ಹ—ಎಂಬ ವರ್ಣಗಳು ನಕಾರಪ್ರಣವದಿಂದ ಜನಿಸಿದುವು.

ನಕಾರೇಚ ಪ್ರಜಾಯತೆ ॥೨೧೦॥ ಇತಿವರ್ಣಾಕ್ಷರನ್ಯಾಸ ಸ್ಸುಸೂಕ್ಷ್ಮಂ ಕಮಲಾನನೇ। ಪ್ರಣವಸ್ಯತರೋರ್ಮೂಲ ಮಕಾರೋ ನಾದರೂಪಕಃ ॥ ಸ್ಕಂಧೋಬಿಂದು ರುಕಾರ ಸ್ಸ್ಯಾತ್ಕಲಾಶಾಖಾಮಕಾರಕಃ । ಸ್ತ್ರೀರೂಪಇಹ ಪುಂರೂಪಾ ಸ್ತಥಾಚೋಭಯರೂಪಕಾಃ ॥೨೦೨॥ ಸರ್ವೇವೈ ದೇವತಾರೂಪಾಃ ಪ್ರತ್ಯೇಕಂವರ್ಣರೂಪಕಾಃ । ಪ್ರಕೃತಿಸ್ಸಪ್ತವರ್ಣಾನಿ ವಿಕೃತಿಸ್ತು ನವಾರ್ಣಕಂ॥೨೧೩॥ ಅಕಾರಶ್ಚ ಇಕಾರಶ್ಚ ಉಕಾರಶ್ಚ ಋಕಾರಕಂ । ಲೃಕಾರಶ್ಚೈವ ಏಕಾರಸ್ತಥಾ ಓಕಾರಏವಚ ॥೨೧೪॥ ಏತೇಸಪ್ತಸ್ವರಾಃ ಪ್ರೋಕ್ತಾ ಸ್ಸ್ವರೇಷುಪ್ರಕೃತಿಸ್ವರಾಃ । ಶೇಷಾಸ್ತು ವಿಕೃತಿಃಪ್ರೋಕ್ತಾ ಸ್ತೇಷಾ ಮುದ್ಭವಉಚ್ಯತೆ ॥೨೧೫॥ ಅಕಾರೇಚೈವ ಆಕಾರ ಇಕಾರೇಈಸಮುದ್ಭವಃ । ಉಕಾರೇಚೈವಊಕಾರ ಋಕಾರೇಋಸಮುದ್ಭವಃ ॥೨೧೬॥ ಲೃಕಾರೇಚೈವಲೄಕಾರ ಏಕಾರೇಐಸಮು

ಎಲೈ ಪಾರ್ವತಿಯೆ ! ಈಗ ಹೇಳಿದ ಕ್ರಮವೇ ವರ್ಣಾಕ್ಷರನ್ಯಾಸವಾಗಿರುವುದು. ಮತ್ತೂ ಹೇಳುತ್ತೇನೆ ಕೇಳು:—ಪ್ರಣವವೆಂಬ ತರುವಿಗೆ (ವೃಕ್ಷಕ್ಕೆ) ಅಕಾರವೇ ಮೂಲವಾಗಿ ನಾದರೂಪನ್ನು ಹೊಂದಿ ಮೆರೆಯುವುದು. ಉಕಾರವೇ ಶಾಖೆಯ ಕೆಳಭಾಗವಾಗಿ ಬಿಂದು ರೂಪನ್ನು ಹೊಂದಿ ಮೆರೆಯುವುದು. ಮಕಾರವೇ ಶಾಖೆಗಳಾಗಿ ಕಲಾರೂಪನ್ನು ಹೊಂದಿ ಮೆರೆಯುವುದು. ಮತ್ತು ಹಿಂದೆ ಹೇಳಿದ ಆಯೆಲ್ಲಾ ವರ್ಣಂಗಳೊಳಗೆ ಕೆಲವು ಸ್ತ್ರೀರೂಪಗಳು, ಕೆಲವು ಪುಂ ರೂಪಗಳು, ಮತ್ತೆ ಕೆಲವು ವರ್ಣಂಗಳು ಪುಃ ಸ್ತ್ರೀರೂಪುಗಳಾಗಿರುವುವು. ಆ ಸಮಸ್ತ ವರ್ಣಂಗಳೂ ದೇವತಾ ರೂಪನ್ನು ಹೊಂದಿ, ಪ್ರತ್ಯೇಕ ಪ್ರತ್ಯೇಕವಾಗಿ ವರ್ಣರೂಪಗಳಾಗಿರುವುವು. ಮತ್ತೂ ಮುಂದೆ ಹೇಳುವ ಹದಿನಾರು ಸ್ವರಾಕ್ಷರಂಗಳಲ್ಲಿ ಏಳು ವರ್ಣಗಳು ಪ್ರಕೃತಿಗಳೆಂತಲೂ, ಉಳಿದ ಒಂಭತ್ತು ಅಕ್ಷರಗಳು ವಿಕೃತಿಗಳೆಂತಲೂ ಹೇಳಿಸಿಕೊಳ್ಳುವವು. ॥೨೧೩॥ ಅಕಾರವು, ಇಕಾರವು, ಉಕಾರವು, ಋಕಾರವು, ಲೃಕಾರವು, ಏಕಾರವು, ಓಕಾರವು —ಈ ಏಳು ಸ್ವರವರ್ಣಂಗಳು ಪ್ರಕೃತಿಸ್ವರಗಳೆಂಬದಾಗಿ ಹೇಳಿಸಿಕೊಳ್ಳುವವು. ಉಳಿದ ಆಕಾರವು, ಈಕಾರವು, ಊಕಾರವು, ೠಕಾರವು, ಲೄಕಾರವು, ಐಕಾರವು, ಔಕಾರವು, ಅನುಸ್ವಾರವು, ವಿಸರ್ಗವು—ಈ ಒಂಭತ್ತು ಸ್ವರವರ್ಣಂಗಳೂ ಕೂಡ ವಿಕೃತಿಸ್ವರವರ್ಣಂಗಳೆಂಬದಾಗಿ ಹೇಳಿಸಿಕೊಳ್ಳುವವು. ಮತ್ತೂ ಈ ಒಂಭತ್ತು ವರ್ಣಂಗಳ ಉತ್ಪತ್ತಿಯನ್ನು ಹೇಳುತ್ತೇನೆ ಕೇಳು ॥೨೧೫॥ ಅಕಾರದಲ್ಲಿ ಆಕಾರವು, ಇಕಾರದಲ್ಲಿ ಈಕಾರವು, ಉಕಾರದಲ್ಲಿ ಊಕಾರವು, ಋಕಾರದಲ್ಲಿ ೠಕಾರವು, ಲೃಕಾರದಲ್ಲಿ ಲೄಕಾರವು, ಏಕಾರದಲ್ಲಿ ಐಕಾರವು, ಓಕಾರದಲ್ಲಿ ಔಕಾರವು, ಓಂಕಾರದಿಂದ ಅಕಾರವನ್ನನುಸರಿಸಿ ಬಿಂದು ವಿಸರ್ಗಗಳೂ ಕೂಡ ಉತ್ಪನ್ನಗಳಾದುವು

ದ್ಭವಃ। ಓಕಾರೇಔತಥಾಜ್ಞೇಯಃ ಕ್ರಮೇಣೈವಂಸಮುದ್ಭವಃ ||೨೦೭|| ಏತೇವೈ ವಿಕೃತಿಃಪ್ರೋಕ್ತಾ ಆಕಾರಾದಿನವಾರ್ಣಕಾಃ । ಅಕಾರಾದಿವಿಸರ್ಗಾಂತಾ ಏತೇವೈ ಷೋಡಶಸ್ವರಾಃ ||೨೦೮|| ಕಲಾಭೇದೋಽಪ್ಯಯಂ ಪ್ರೋಕ್ತಾವಿಕಲಾಭೇದಕಂಶೃಣು। ಕಕಾರಾದಿಕ್ಷಕಾರಾಂತಾವರ್ಣಾಶ್ಚ ವಿಕಲಾ ಸ್ಸಂಸ್ಮೃತಾಃ||೨೦೯||ಕಕಾರಶ್ಚಗಕಾರಶ್ಚ ಚಕಾರಶ್ಚ ಜಕಾರಕಃ। ಟಕಾರಶ್ಚಡಕಾರಶ್ಚ ತಕಾರಶ್ಚದಕಾರಕಃ ||೨೧೦|| ಪಕಾರಶ್ಚ ಬಕಾರಶ್ಚ ಶಕಾರಶ್ಚಕ್ಷಕಾರಕಃ । ಏತೇದ್ವಾದಶವರ್ಣಾಶ್ಚ ಪುಲ್ಲಿಂಗಾಇತಿಕೀರ್ತಿತಾಃ||೨೧೧|| ಖಕಾರಶ್ಚಘಕಾರಶ್ಚ ಛಕಾರಶ್ಚಝಕಾರಕಃ । ಠಕಾರಶ್ಚ ಢಕಾರಶ್ಚ ಥಕಾರಶ್ಚಧಕಾರಕಃ ||೨೧೨|| ಫಕಾರಶ್ಚಭಕಾರಶ್ಚ ಷಕಾರಶ್ಚಸಕಾರಕಃ । ಏತೇವೈಭಾನುಬೀಜಾಶ್ಚ ಜಾಯಾಶ್ಚೇತಿಪ್ರಕೀರ್ತಿತಾಃ ||೨೧೩|| ಶೇಷಂನಪುಂಸಕಂವಿದ್ಯಾ ತ್ತ್ರಯೋಭೇದಾಇತಿಸ್ಮೃತಾಃ । ಏವಮೇವಚವರ್ಣಾನಾ ಮುತ್ಪತ್ತಿಸ್ಸಮುದೀರಿತಾ ||೨೧೪||

—ಅಥಕಲಾಬ್ರಹ್ಮಲಕ್ಷಣಮುಪವರ್ಣ್ಯತೇ—

ಓಂಕಾರಂನಾದರೂಪಂಚ ಓಂಕಾರಂಬಿಂದುರೂಪಕಂ। ಓಂಕಾ

ಆಕಾರಾದಿಗಳಾದ ಈ ಒಂಭತ್ತು ವರ್ಣಂಗಳು ವಿಕೃತಿಯು ಎಂಬದಾಗಿ ಹೇಳಲ್ಪಟ್ಟವು. ಆದುದರಿಂದಲೇ ಅಕಾರಾದಿಯಾಗಿ ವಿಸರ್ಗಾಂತವಾದ ಈ ಹದಿನಾರುವರ್ಣಂಗಳೆಲ್ಲವೂ ಸ್ವರಗಳೆಂಬದಾಗಿ ಹೇಳಿಸಿಕೊಂಡುವು. ||೨೦೮|| ಎಲೈ ಲಿಂಗಪ್ರಮಂತ್ರಿಯೇ ! ಕಲಾಭೇದಂಗಳೆನಿಸಿದ ಈ ವಿಷಯುವು ನಿನಗೆ ಹೇಳಲ್ಪಟ್ಟಿತು. ಇನ್ನು ಮುಂದೆ ವಿಕಲಾ ಭೇದವನ್ನು ಹೇಳುತ್ತೇನೆ ಕೇಳು - ಕಕಾರವೇ ಮೊದಲಾಗಿ ಕ್ಷಕಾರಾಂತಗಳಾದ ವರ್ಣಂಗಳೇ ವಿಕಲಾವರ್ಣಂಗಳೆಂಬದಾಗಿ ಹೇಳಲ್ಪಟ್ಟುವು. ||೨೦೯|| ಕಕಾರವು, ಗಕಾರವು, ಚಕಾರವು, ಜಕಾರವು, ಟಕಾರವು, ಡಕಾರವು, ತಕಾರವು, ದಕಾರವು, ಪಕಾರವು, ಬಕಾರವು, ಶಕಾರವು, ಕ್ಷಕಾರವು— ಈ ಹನ್ನೆರಡು ವರ್ಣಗಳೂ ಕೂಡ ಪುಲ್ಲಿಂಗಗಳೆಂಬದಾಗಿ ಪ್ರಸಿದ್ಧಗಳಾಗಿರುವವು. ||೨೧೧|| ಠಕಾರವು, ಢಕಾರವು, ಥಕಾರವು, ಧಕಾರವು, ಫಕಾರವು, ಭಕಾರವು, ಷಕಾರವು ಸಕಾರವೂ ಕೂಡ ಸ್ತ್ರೀಲಿಂಗಗಳೆಂಬದಾಗಿ ಪ್ರಸಿದ್ಧವಾಗಿರುವವು. ಉಳಿದ ವರ್ಣಂಗಳೆಲ್ಲವೂ ನಪುಂಸಕಲಿಂಗಗಳೆಂಬದಾಗಿ ತಿಳಿದುಕೊ. ಈರೀತಿಯಾಗಿಯೇ ವರ್ಣಂಗಳು ಮೂರು ಭೇದಗಳಾಗಿರುವವು. ಈಪ್ರಕಾರವಾಗಿ ವರ್ಣಗಳ ಉತ್ಪತ್ತಿಯು ಕ್ರಮವು ನಿನಗೆ ಹೇಳಲ್ಪಟ್ಟಿತು ||

— ಅನಂತರಕಲಾಬ್ರಹ್ಮಲಕ್ಷಣವು —

ಓಂಕಾರವೇ ನಾದರೂಪವೂ, ಓಂಕಾರವೇ ಬಿಂದುರೂಪವೂ, ಓಂಕಾರವೇ ಕ

ರಂವ್ಯಾಪಿನಂವಿಂದ್ಯಾ ದೋಂಕಾರೋಗೋಪ್ಯವಮಾನನಂ ||೨೧೫|| ಸದ್ಯೋಜಾತೋನಕಾರಶ್ಚ ವಾಮದೇವೋಮಕಾರಕಃ| ಶಿಕಾರೋಽಘೋರಸಂಯುಕ್ತೋ ವಾಕಾರೋಪುರುಷಸ್ತಥಾ||೨೧೬|| ಸದಾಶಿವೋಯಕಾರಶ್ಚ ಪಂಚವಕ್ತ್ರಂಪ್ರಕೀರ್ತಿತಂ| ಈಶಾನಂಪುರುಷಂಚೈವ ಅಘೋರಂ ವಾಮದೇವಕಂ||೨೧೭|| ಸದ್ಯೋಜಾತಂಚಪಂಚೈತೆ ಕಲಾಬ್ರಹ್ಮಪ್ರಕೀರ್ತಿತಂ| ಈಶಾನಸ್ಯಕಲಾಃಪಂಚ ಪುರುಷಸ್ಯಚತುಃ ಕಲಾ ||೨೧೮|| ಅಘೋರಸ್ಯಕಲಾಶ್ಚಾಷ್ಟೌ ವಾಮದೇವೇತ್ರಯೋದಶ | ಸದ್ಯೋಜಾತಸ್ಯಾಷ್ಟಕಲಾ ಅಷ್ಟತ್ರಿಂಶತ್ಕಲಾಸ್ಸ್ಮೃತಾಃ||೨೧೯||ಈಶಾನಸ್ಸರ್ವವಿದ್ಯಾನಾಂ ಪ್ರಥಮಃಪರಿಕೀರ್ತಿತಃ| ಈಶ್ವರಸ್ಸರ್ವಭೂತಾನಾಂ ದ್ವಿತೀಯಃಪರಿಕೀರ್ತಿತಃ ||೨೨೦|| ಬ್ರಹ್ಮಾಧಿಪತಿರಿತ್ಯೇವಂ ಬ್ರಹ್ಮಣೋಽಧಿಪತಿಸ್ತಥಾ | ಬ್ರಹ್ಮೇತೀದಂತೃತೀಯಂಸ್ಯಾ ಚ್ಛಿವೋಮೇಽಸ್ತು ಚತುರ್ಥಕಃ||೨೨೧|| ಸದಾಶಿವೋಮಿತಿಜ್ಞೇಯಂ ಪಂಚಮಂತ್ವಿತಿಕೀರ್ತಿತಂ|ಏತೇಚೇಶಾನರೂಪಾಶ್ಚ ಪಂಚಸಂಖ್ಯಾಃಪ್ರಕೀರ್ತಿತಾಃ ||೨೨೨|| ತತ್ಪುರುಷಾಯವಿದ್ಮಹೇ ಪ್ರ

ಲಾರೂಪವೂ ಆಗಿ, ಆ ಪರಬ್ರಹ್ಮಕ್ಕೆ ಓಂಕಾರವೇ ಗೋಪ್ಯವಾದ ಮುಖವಾಗಿರುವುದು ||೨೧೫|| ನಕಾರವೇ ಸದ್ಯೋಜಾತಮುಖವು, ಮಕಾರವೇ ವಾಮದೇವಮುಖವು, ಶಿಕಾರವೇ ಅಘೋರಮುಖವು, ವಾಕಾರವೇ ತತ್ಪುರುಷಮುಖವು, ಯಕಾರವೇ ಈಶಾನಮುಖವು, ಆಗಿರುವುದರಿಂದಲೇ ಆ ಪರಬ್ರಹ್ಮವು ಐದು ಮುಖವುಳ್ಳುದೆಂಬದಾಗಿ ಪ್ರಸಿದ್ಧವಾಗಿರುವುದು. ಆದುದರಿಂದಲೇ ಈಶಾನವು, ತತ್ಪುರುಷವು, ಅಘೋರವು, ವಾಮದೇವವು, ಸದ್ಯೋಜಾತವು-ಎಂಬ ಈ ಐದು ಕಲಾಬ್ರಹ್ಮವೆಂಬದಾಗಿ ಪ್ರಖ್ಯಾತವಾಯಿತು. ಆದಕಾರಣವೇ ಈಶಾನ ಬ್ರಹ್ಮಕ್ಕೆ ಐದು ಕಲೆಗಳು, ತತ್ಪುರುಷಬ್ರಹ್ಮಕ್ಕೆ ನಾಲ್ಕು ಕಲೆಗಳು, ಅಘೋರಬ್ರಹ್ಮಕ್ಕೆ ಎಂಟು ಕಲೆಗಳು, ವಾಮದೇವಬ್ರಹ್ಮಕ್ಕೆ ಹದಿಮೂರುಕಲೆಗಳು, ಸದ್ಯೋಜಾತ ಬ್ರಹ್ಮಕ್ಕೆ ಎಂಟು ಕಲೆಗಳು, ಇವೆಲ್ಲಾಕೂಡಿ ಆಪರಬ್ರಹ್ಮವು ಮೂವತ್ತೆಂಟು ಕಲೆಗಳಿಂದ ಕೂಡಿಕೊಂಡಿರುವುದೆಂಬದಾಗಿ ಸಿದ್ಧಾಂತವಾಯಿತು.

—ಈಶಾನ ಬ್ರಹ್ಮದ ಐದುಕಲೆಗಳು—

"ಈಶಾನಸ್ಸರ್ವವಿದ್ಯಾನಾಂ" ಎಂಬುವುದೇ ಮೊದಲನೆಯ ಕಲೆಯು. "ಈಶ್ವರಸ್ಸರ್ವಭೂತಾನಾಂ" ಎಂಬುವುದೇ ಎರಡನೆಯ ಕಲೆಯು. "ಬ್ರಹ್ಮಾಧಿಪತಿಬ್ರಹ್ಮಣೋಽಧಿಪತಿಬ್ರಹ್ಮಾ" ಎಂಬುವುದೇ ಮೂರನೆಯ ಕಲೆಯು. "ಶಿವೋಮೇಽಸ್ತು" ಎಂಬುವುದೇ ನಾಲ್ಕನೆಯ ಕಲೆಯು. "ಸದಾಶಿವೋಂ" ಎಂಬುವುದೇಐದನೆಯ ಕಲೆಯು. ಹೀಗೆ ಈಶಾನ ಬ್ರಹ್ಮದ ಕಲೆಗಳು ಐದುಪ್ರಕಾರಗಳೆಂದು ಪ್ರಸಿದ್ಧವಾದುವು.

ಥಮಂಪರಿಕೀರ್ತಿತಂ । ಮಹಾದೇವಾಯಧೀಮಹಿ ತನ್ನೋಚೇತಿದ್ವಿತೀಯಕಂ ॥೨೩॥ ರುದ್ರಸ್ತೃತೀಯಮಿತ್ಯುಕ್ತಂ ಚತುರ್ಥಂಚಪ್ರಚೋದಯಾತ್ । ಏವಂತತ್ಪುರುಷಕಲಾ ಶ್ಚತಸ್ರಇತಿಕೀರ್ತಿತಾಃ॥೨೪॥ಅಘೋರೇಭ್ಯೋಽಥಪೂರ್ವಂಚ ಘೋರೇಭ್ಯಶ್ಚ ದ್ವಿತೀಯಕಂ।ಘೋರಘೋರಸ್ತೃತೀಯಂಸ್ಯಾ ತ್ತರೇಭ್ಯಶ್ಚ ಚತುರ್ಥಕಂ॥೨೫॥ ಸರ್ವೇಭ್ಯಃಪಂಚಮಂವಿಂದ್ಯಾತ್ ಷಷ್ಠಂಸರ್ವಮುದಾಹೃತಂ । ಶರ್ವೇಭ್ಯಶ್ಚ ನಮಸ್ತೇಽಸ್ತುಸಪ್ತಮಂಚೇತಿಕೀರ್ತಿತಂ ॥೨೬॥ ಅಷ್ಟಮಂರುದ್ರರೂಪೇಭ್ಯೋ ಅಘೋರಸ್ಯಾಷ್ಟಮಂಸ್ಮೃತಂ। ಪ್ರಥಮಂವಾಮದೇವಾಯ ಜ್ಯೇಷ್ಠಾಯೇತಿದ್ವಿತೀಯಕಂ ॥೨೭॥ ತೃತೀಯಂಶ್ರೇಷ್ಠಾಯನಮೋ ರುದ್ರಾಯೇತಿಚತುರ್ಥಕಂ। ಪಂಚಮಂಕಾಲಾಯನಮಃ ಕಲವಿಕರಣಾಯಷಟ್॥೨೮॥ ಬಲವಿಕರಣಾಯನಮೋ ಸಪ್ತಮಂಬಲಮಷ್ಟಕಂ । ಬಲೇತಿನವಮಂ

—ತತ್ಪುರುಷಬ್ರಹ್ಮದ ನಾಲ್ಕು ಕಲೆಗಳು—

"ತತ್ಪುರುಷಾಯವಿದ್ಮಹೇ" ಎಂಬುವುದೇ ಮೊದಲನೆಯ ಕಲೆಯು. "ಮಹಾದೇವಾಯಧೀಮಹಿತನ್ನೋ" ಎಂಬುವುದೇ ಎರಡನೆಯ ಕಲೆಯು. "ರುದ್ರಃ" ಎಂಬುವುದೇ ಮೂರನೆಯ ಕಲೆಯು. "ಪ್ರಚೋದಯಾತ್" ಎಂಬುವುದೇ ನಾಲ್ಕನೆಯ ಕಲೆಯು ಹೀಗೆ ತತ್ಪುರುಷ ಬ್ರಹ್ಮದ ಕಲೆಗಳು ನಾಲ್ಕು ಪ್ರಕಾರಗಳೆಂದು ಪ್ರಸಿದವಾದುವು. ॥೨೪॥

—ಅಘೋರಬ್ರಹ್ಮದ ಎಂಟು ಕಲೆಗಳು—

"ಅಘೋರೇಭ್ಯೋಽಥ" ಎಂಬುವುದೇ ಮೊದಲನೆಯ ಕಲೆಯು. "ಘೋರೇಭ್ಯೋ" ಎಂಬುವುದೇ ಎರಡನೆಯ ಕಲೆಯು. "ಘೋರಘೋರ" ಎಂಬುವುದೇ ಮೂರನೆಯ ಕಲೆಯು. "ತರೇಭ್ಯಃ" ಎಂಬುವುದೇ ನಾಲ್ಕನೆಯ ಕಲೆಯು. "ಸರ್ವೇಭ್ಯಃ" ಎಂಬುವುದೇ ಐದನೆಯ ಕಲೆಯು. "ಸರ್ವ" ಎಂಬುವುದೇ ಆರನೆಯ ಕಲೆಯು. "ಶರ್ವೇಭ್ಯೋನಮಸ್ತೆ ಅಸ್ತು" ಎಂಬುವದೇ ಏಳನೆಯ ಕಲೆಯು. "ರುದ್ರರೂಪೇಭ್ಯಃ" ಎಂಬುವದೇ ಎಂಟನೆಯ ಕಲೆಯು. ಹೀಗೆ ಅಘೋರಬ್ರಹ್ಮದ ಕಲೆಗಳು ಎಂಟು ಪ್ರಕಾರಗಳೆಂದು ಪ್ರಸಿದ್ಧವಾದುವು.

—ವಾಮದೇವಬ್ರಹ್ಮದ ಹದಿಮೂರು ಕಲೆಗಳು—

"ವಾಮದೇವಾಯನಮೋ" ಎಂಬುವದೇ ಮೊದಲನೆಯ ಕಲೆಯು. "ಜ್ಯೇಷ್ಠಾಯನಮೋ" ಎಂಬುವದೇ ಎರಡನೆಯ ಕಲೆಯು. "ಶ್ರೇಷ್ಠಾಯನಮೋ" ಎಂಬುವದೇ ಮೂರನೆಯ ಕಲೆಯು. "ರುದ್ರಾಯನಮಃ" ಎಂಬುವುದೇ ನಾಲ್ಕನೆಯ ಕಲೆಯು, "ಕಾಲಾಯನಮಃ" ಎಂಬುವುದೇ ಐದನೆಯ ಕಲೆಯು, "ಕಲವಿಕರಣಾ

ಪ್ರೋಕ್ತಂ ದಶಪ್ರಮಥನಾಯಕ॥೨೯॥ ಸರ್ವಭೂತದಮನಾಯ ನಮ ಶ್ಚೈಕಾದಶಸ್ಮೃತಾ। ದ್ವಾದಶಂಚಮನಶ್ಚೇತಿ ಉನ್ಮನಾಯತ್ರಯೋದಶ। ॥೩೦॥ ಏತೇತ್ರಯೋದಶಕಲಾ ವಾಮದೇವಸ್ಯಕೀರ್ತಿತಾಃ । ಸದ್ಯೋ ಜಾತಂಪ್ರಪದ್ಯಾಮಿ ಪ್ರಥಮಂಪರಿಕೀರ್ತಿತಂ॥೩೧॥ದ್ವಿತೀಯಂಸದ್ಯೋ ಜಾತಾಯವೈನಮಶ್ಚೇತಿಕೀರ್ತಿತಂ । ತೃತೀಯಂತುಭವೇಚೈವ ಭವೇ ಚೈವಚತುರ್ಥಕಂ ॥೩೨॥ ಪಂಚಮಂಚನಾತಿಭವೇ ಷಷ್ಠಂಚೇತಿಭವ ಸ್ವಮಾಂ । ಸಪ್ತಮಂಚಭವೋವಿಂದ್ಯಾ ದುದ್ಭವಾಯಾಷ್ಟಮಂಭವೇತ್ ॥೩೩॥ ಏವಮಷ್ಟಕಲಾಃಪ್ರೋಕ್ತಾ ಸ್ಸದ್ಯೋಜಾತಉದಾಹೃತಃ । ಈ ಶಾನಾದೀನಿಸದ್ಯಾಂತಾಹ್ಯಷ್ಟತ್ರಿಂಶತ್ಕಲಾಸ್ಸ್ಮೃತಾಃ ॥೩೪॥ ಏವಂತ

ಯನಮೋ " ಎಂಬುವುದೇ ಆರನೆಯ ಕಲೆಯು. " ಬಲವಿಕರಣಾಯನಮೋ " ಎಂಬುವುದೇ ಏಳನೆಯ ಕಲೆಯು. " ಬಲಾಯನಮೋ " ಎಂಬುವುದೇ ಎಂಟನೆಯ ಕಲೆಯು. " ಬಲ " ಎಂಬುವುದೇ ಒಂಭತ್ತನೆಯ ಕಲೆಯು. " ಪ್ರಮಥನಾಯನ ಮಃ " ಎಂಬುವುದೇ ಹತ್ತನೆಯ ಕಲೆಯು. " ಸರ್ವಭೂತದಮನಾಯನಮೋ " ಎಂಬುವುದೇ ಹನ್ನೊಂದನೆಯ ಕಲೆಯು. " ಮನ " ಎಂಬುವುದೇ ಹನ್ನೆರಡನೆಯ ಕಲೆಯು. "ಉನ್ಮನಾಯನಮಃ " ಎಂಬುವುದೇ ಹದಿಮೂರನೆಯ ಕಲೆಯು. ಹೀಗೆ ವಾಮದೇವಬ್ರಹ್ಮದ ಕಲೆಗಳು ಹದಿಮೂರೆಂಬದಾಗಿ ಪ್ರಖ್ಯಾತಗಳಾಗಿರುವವು ॥೩೦

—ಸದ್ಯೋಜಾತ ಬ್ರಹ್ಮದ ಎಂಟು ಕಲೆಗಳು —

" ಸದ್ಯೋಜಾತಂ ಪ್ರಪದ್ಯಾಮಿ " ಎಂಬುವುದೇ ಮೊದಲನೆಯ ಕಲೆಯು. " ಸದ್ಯೋಜಾತಾಯ ವೈನಮೋನಮಃ " ಎಂಬುವುದೇ ಎರಡನೆಯ ಕಲೆಯು. " ಭವೇ " ಎಂಬುವುದೇ ಮೂರನೆಯ ಕಲೆಯು. " ಭವೇ " ಎಂಬುವುದೇ ನಾಲ್ಕನೆಯ ಕಲೆಯು. " ನಾತಿಭವೇ " ಎಂಬುವುದೇ ಐದನೆಯ ಕಲೆಯು. " ಭವಸ್ವಮಾಂ " ಎಂಬುವುದೇ ಆರನೆಯ ಕಲೆಯು. " ಭವ " ಎಂಬುವುದೇ ಏಳನೆಯ ಕಲೆಯು. " ಉದ್ಭವಾಯನಮಃ " ಎಂಬುವುದೇ ಎಂಟನೆಯಕಲೆಯು. ಹೀಗೆ ಸದ್ಯೋಜಾತ ಬ್ರಹ್ಮದ ಕಲೆಗಳು ಎಂಟೆಂಬದಾಗಿ ಪ್ರಸಿದ್ಧವಾಗಿರುವವು. ಆದುದರಿಂದಲೇ ಈಶಾನ ಬ್ರಹ್ಮ, ತತ್ಪುರಷಬ್ರಹ್ಮ, ಅಘೋರಬ್ರಹ್ಮ, ವಾಮದೇವಬ್ರಹ್ಮ, ಸದ್ಯೋಜಾತಬ್ರ ಹ್ಮ—ಎಂಬ ಈ ಪಂಚಬ್ರಹ್ಮಕ್ಕೂ ಕೂಡ ಮೂವತ್ತೆಂಟು ಕಲೆಗಳು ಪ್ರಖ್ಯಾತಗ ಳಾದುವು. ॥೩೪॥ ಈ ಪ್ರಕಾರಂಗಳಾದ ಮೂವತ್ತೆಂಟು ಕಲೆಗಳಿಂದ ಕೂಡಿಕೊಂ ಡಿರುವ ಮೂರ್ತಿಯೇ ಸಕಲತತ್ವವೆನಿಸುವುದು. ಆ ಮೂವತ್ತೆಂಟು ಕಲೆಗಳಿಲ್ಲದೆ

ತ್ಸತ್ಕೃತಿಮಾತ್ರೇಣ ಮೂರ್ತಿಸ್ಸಕಲನಾಮಧೃತ್ । ನಿಷ್ಕಳಂತದಭಾವೇ ತು ತಸ್ಮಾತ್ಸಕಲನಿಷ್ಕಳಂ ||೨೩೫||

—ಅಥನಾದಾದಿಸೃಷ್ಟಿರುಪವರ್ಣ್ಯತೇ—

ನಾದಾದಿಸೃಷ್ಟಿಂತೇವಕ್ಷ್ಮೆ ಶೃಣುತ್ವಂಮಂತ್ರಿಶೇಖರ । ಪಿಂಡಮಧ್ಯಗತಃಪ್ರಾಣಃ ಪ್ರಾಣಮಧ್ಯಗತೋಧ್ವನಿಃ||೨೩೬||ಧ್ವನಿಮಧ್ಯಗತೋ ನಾದೋ ನಾದಮಧ್ಯಗತಶ್ಶಿವಃ । ನಾದೋಲಿಂಗಮಯಃಪ್ರೋಕ್ತಃ ನಾದೋಗುರುಮಯಸ್ತಥಾ ||೨೩೭|| ನಾದಃಪ್ರಣವರೂಪಸ್ಸ್ಯಾನ್ನಾದಸ್ಸಾದಾಖ್ಯರೂಪಕಃ।ನಾದಶ್ಚ ಶಿವಚೈತನ್ಯಂ ನಾದೋನಿರ್ಮಲತತ್ವಕಂ||೨೩೮|| ನಾದಶ್ಚ ಬ್ರಹ್ಮರೂಪಸ್ಸ್ಯಾನ್ನಾದಸ್ಸರ್ವತ್ರತಿಷ್ಠತಿ । ತೃಣಕಾಷ್ಠಾಣುರೇಣ್ವಾದಿಸರ್ವಚೇತನಚೇತನಃ ||೨೩೯|| ಅಕ್ಷರಾನಕ್ಷರಾತ್ಮಾಚ ವೇದಶಾಸ್ತ್ರಾಗಮಸ್ಮೃತಿಃ । ಪುರಾಣಾದಿಮಹಾತಂತ್ರಂ ನಾದಸ್ಸರ್ವಾತ್ಮಕಸ್ಮೃತಃ ||೨೪೦|| ಸಪ್ತಸ್ವರಾದಿವಿದ್ಯಾಶ್ಚ ವಾದ್ಯಂವೀಣಾದಿಭೇದಕಂ ।

ತಾನೇ ತಾನಾಗಿರುವ ಮೂರ್ತಿಯೇ ನಿಷ್ಕಲತತ್ವವೆನಿಸುವುದು. ಆದ ಕಾರಣದಿಂದಲೇ ಸಕಲನಿಷ್ಕಲತತ್ವವು ಪ್ರಸಿದ್ಧವಾಯಿತು.

—ಅನಂತರ ನಾದಾದಿಸೃಷ್ಟಿಯು—

ಎಲೈ ಮಂತ್ರಿಶ್ರೇಷ್ಠನಾದ ಲಿಂಗಪ್ಪಮಂತ್ರಿಯೇ ! ಅನಂತರದಲ್ಲಿ ನಾದಾದಿಸೃಷ್ಟಿಯನ್ನು ಹೇಳುತ್ತೇನೆ ಕೇಳು— ಪಿಂಡಮಧ್ಯವನ್ನು ಹೊಂದಿರತಕ್ಕದ್ದು ಪ್ರಾಣವು,ಆ ಪ್ರಾಣಮಧ್ಯವನ್ನು ಹೊಂದಿರತಕ್ಕದ್ದು ಧ್ವನಿಯು, ಆ ಧ್ವನಿಯ ಮಧ್ಯವನ್ನು ಹೊಂದಿರತಕ್ಕದ್ದು ನಾದವು, ಆನಾದಮಧ್ಯವನ್ನು ಹೊಂದಿರತಕ್ಕದ್ದು ಶಿವತತ್ವವು. ಆದುದರಿಂದಲೇ ನಾದವೇ ಲಿಂಗಮಯವು,ನಾದವೇ ಗುರುಮಯವು, ನಾದವೇ ಪ್ರಣವರೂಪವು, ನಾದವೇ ಸಾದಾಖ್ಯರೂಪವು, ನಾದವೇ ಶಿವಚೈತನ್ಯವು, ನಾದವೇ ನಿರ್ಮಲತತ್ವವನ್ನು ಹೊಂದಿರತಕ್ಕದ್ದು, ನಾದವೇ ಬ್ರಹ್ಮರೂಪವು. ಆಗಿರುವುದು. || ಆದ ಕಾರಣ ನಾದವು ಎಲ್ಲಾ ಕಡೆಯಲ್ಲಿಯೂ ಅಂದರೆ ಅಣುರೇಣು ತೃಣಕಾಷ್ಠಾದಿಗಳಲ್ಲಿ ಸಮಸ್ತ ಚೇತನಕ್ಕೂ ಚೇತನವಾಗಿ ಮೆರೆದಿರುವುದು. ||೨೩೯|| ಮತ್ತೂ ವೇದಗಳು, ಶಾಸ್ತ್ರಗಳು, ಆಗಮಗಳು, ಧರ್ಮಶಾಸ್ತ್ರಗಳು, ಪುರಾಣಗಳು, ಮಹಾತಂತ್ರಗಳು, ಇವುಗಳೆಲ್ಲವೂ ಕೂಡ ಅಕ್ಷರ ರೂಪವಾಗಿಯೂ ಶಬ್ದರೂಪವಾಗಿಯೂ ಇರುವುದರಿಂದಲೇ ನಾದವು ಸರ್ವಾತ್ಮಕವೆಂಬದಾಗಿ ಸ್ಪಷ್ಟವಾಗಿ ಹೇಳಲ್ಪಟ್ಟಿತು.|| ಮತ್ತು " ಸರಿಗಮಪಧನಿ " ಎಂಬ ಸಪ್ತಸ್ವರಾದಿ ವಿದ್ಯೆಗಳು, ವೀಣಾದಿಭೇದವಾದ

ಸರ್ವಂನಾದಮಯಂಪ್ರೋಕ್ತಂ ಸುಸೂಕ್ಷ್ಮಂಗೋಪಯೇತ್ತ್ವನಃ॥೨೪೧॥ ತತಂತಂತ್ರ್ಯಾದಿವಾದ್ಯಂಚ ವಿತತಂಚರ್ಮಯೋಜಿತಂ । ಘನಂಕಾಂಸ್ಯಾದಿತಾಳಂಚ ಸುಷಿರಂವೇಣುಭಾಷಿತಂ ॥೨೪೨॥

— ಅಥ ತತ್ವತ್ರಯಮುಪವರ್ಣ್ಯತೆ —

ಇತಃಪರಂವದಾಮ್ಯದ್ಯ ತತ್ವತ್ರಯಮನಿಂದಿತಂ । ತತ್ವಂತ್ವತ್ರಿವಿಧಂಜ್ಞೇಯಂ ತಸ್ಯಭೇದಂಶೃಣುಷ್ವಚ ॥೨೪೩॥ ಶಿವಂಸದಾಶಿವಂಚೈವ ಮಹೇಶಂತ್ರಿವಿಧಂಸ್ಮೃತಂ । ಶಿವತತ್ವಂಮಹಾಸೇನ ನಿಷ್ಕಲಂಚೇತಿಕೀರ್ತಿತಂ ॥೨೪೪॥ ಸಕಲಂನಿಷ್ಕಲಂಚೈವ ಸದಾಶಿವಮಿಹೋಚ್ಯತೆ। ಮಹೇಶಂಸ್ಸಕಲಂವಿಂದ್ಯಾ ತ್ರಿವಿಧಾಸ್ತೇಭವಂತಿಹಿ ॥೨೪೫॥ ಶಿವಮೇಕಂವಿಜಾನೀಯಾತ್ಸಾದಾಖ್ಯಂಪಂಚಧಾಭವೇತ್ । ಮಹೇಶಂತುಮಹಾಸೇನ ಪಂಚವಿಂಶತಿಭೇದಕಂ ॥೨೪೬॥

ವಾದ್ಯವು ಈ ಸಮಸ್ತವೂ ಕೂಡ ನಾದ ಮಯವೇ ಎಂಬದಾಗಿ ಹೇಳಲ್ಪಟ್ಟಿತು. ಮತ್ತೂ ಈ ನಾದವಿದ್ಯೆಯು ಅತಿ ಸೂಕ್ಷ್ಮವಾದುದು ಅತಿ ಗೋಪ್ಯವಾದುದು ಎಂಬದಾಗಿ ಹೇಳಲ್ಪಟ್ಟಿತು.॥೨೪೧॥ ಆದಕಾರಣದಿಂದಲೇ ವೀಣಾದಿ ವಾದ್ಯಗಳಿಗೆ "ತತ" ಎಂಬದಾಗಿಯೂ, ಮೃದಂಗ ಭೇರ್ಯಾದಿ ವಾದ್ಯಗಳಿಗೆ "ವಿತತ" ಎಂಬದಾಗಿಯೂ, ಕಂಚು ಮೊದಲಾದುವುಗಳಿಂದ ಉತ್ಪನ್ನಗಳಾದ ತಾಳಗಳಿಗೆ "ಘನ" ಎಂಬದಾಗಿಯೂ, ವೇಣುವಾದ್ಯಗಳಿಗೆ "ಸುಷಿರ" ಎಂಬದಾಗಿಯೂ, ಅತಿ ಸೂಕ್ಷ್ಮವಾದ ನಾಮವು ಅತಿಗೋಪ್ಯವಾದ ನಾಮವು ಬಂದಿರುವುದು. ॥೨೪೨॥

—ಅನಂತರ ಮೂರು ತತ್ವಗಳು—

ಎಲೈ ಲಿಂಗಪ್ರಮಂತ್ರಿಯೇ ! ಇನ್ನು ಮುಂದೆ ಆ ನಿರ್ದುಷ್ಟವಾದ ತತ್ವತ್ರಯದ ಸ್ವರೂಪವನ್ನು ಹೇಳುತ್ತೇನೆ ಕೇಳು:—ಪರಶಿವನು ಷಣ್ಮುಖನಿಗೆ ಹೇಳುತ್ತಾನೆ ಹೇಗೆಂದರೆ-ಎಲೈ ಷಣ್ಮುಖನೇ ! ಕೇಳು. ತತ್ವವು ಶಿವತತ್ವವೆಂಬದಾಗಿಯೂ, ಸದಾಶಿವತತ್ವವೆಂಬದಾಗಿಯೂ, ಮಹೇಶತತ್ವವೆಂಬದಾಗಿಯೂ, ಮೂರು ಪ್ರಕಾರವಾಗಿರುವುದು. ಇವುಗಳಲ್ಲಿ ಶಿವತತ್ವವೇ ನಿಷ್ಕಲರೂಪೆಂತಲೂ, ಸದಾ ಶಿವತತ್ವವೇ ಸಕಲನಿಷ್ಕಲರೂಪೆಂತಲೂ, ಮಹೇಶತತ್ವವೇ ಸಕಲರೂಪೆಂತಲೂ, ಪ್ರಸಿದ್ಧವಾಗಿರುವುದು. ಆದುದರಿಂದಲೇ ಎಲೈ ಷಣ್ಮುಖನೇ ! ಶಿವತತ್ವವು ಒಂದೇಭೇದವುಳ್ಳುದಾಗಿಯೂ, ಸದಾಶಿವತತ್ವವು ಐದುಭೇದವುಳ್ಳದಾಗಿಯೂ, ಮಹೇಶತತ್ವವು ಇಪ್ಪತ್ತೈದು ಭೇದವುಳ್ಳುದಾಗಿಯೂ ಇರುವುದು. ॥೨೪೬॥

—ಅಥಶಿವತತ್ವಸ್ವರೂಪಮುಪವರ್ಣ್ಯತೇ—

ಶಿವಂಪರಾತ್ಪರಂಸೂಕ್ಷ್ಮಂ ನಿತ್ಯಂಸರ್ವಗತಾವ್ಯಯಂ । ಅನಿಂದಿತಮನೌಪಮ್ಯ ಮಪ್ರಮಾಣಮನಾಮಯಂ ||೨೪೭|| ಶುದ್ಧತ್ವಾಚ್ಛಿವಮುದ್ದಿಷ್ಟಂ ಪರಾದೂರ್ಧ್ವಂಪರಾತ್ಪರಂ । ವ್ಯೋಮಾತೀತಂಹಿಸೂಕ್ಷ್ಮಂಚ ನಿತ್ಯಂಕಾರಣಕಾರಣಂ ||೨೪೮|| ವ್ಯಾಪ್ತಂಸರ್ವಗತಂಪ್ರೋಕ್ತ ಮಕ್ಷೀಣಂಚಾವ್ಯಯಂಭವೇತ್। ಅನುಲಂಚಾನಿಂದಿತಂಸ್ಯಾ ದನೌಪಮ್ಯಮಸಾಮ್ಯಕಂ||೨೪೯||ಪ್ರಮಾಣಾದ್ವ್ಯತಿರಿಕ್ತತ್ವಾ ದಪ್ರಮಾಣಮಿತಿಸ್ಮೃತಂ । ನಿರ್ಗುಣತ್ವಾದ್ವಿಶೇಷೇಣ ಅನಾಮಯಮಿತಿಸ್ಮೃತಂ ||೨೫೦||

—ಅಥಸದಾಶಿವತತ್ವಸ್ವರೂಪಮುಪವರ್ಣ್ಯತೇ—

ಸಕಲಂನಿಷ್ಕಲಂಚೈವ ಸದಾಶಿವಮಿಹೋಚ್ಯತೇ। ಸದಾಶಿವಸ್ತ್ವಥೇಶ

—ಶಿವತತ್ವ ಸ್ವರೂಪವು—

ನಿಷ್ಕಲರೂಪವನ್ನು ಹೊಂದಿದ ಆ ವೊಂದೇ ಭೇದವಾದ ಶಿವತತ್ವಕ್ಕೆ—ಶಿವ ಎಂತಲೂ, ಪರಾತ್ಪರವೆಂತಲೂ, ಸೂಕ್ಷ್ಮವೆಂತಲೂ, ನಿತ್ಯವೆಂತಲೂ, ಸರ್ವಗತವೆಂತಲೂ, ಅವ್ಯಯುವೆಂತಲೂ, ಅನಾದಿಕವೆಂತಲೂ, ಅನೌಪಮ್ಯವೆಂತಲೂ, ಅಪ್ರಮಾಣವೇತಲೂ, ಅನಾಮಯುವೆಂತಲೂ, ಹೆಸರುಗಳುಂಟಾಗಿರುವುವು. ಏತಕ್ಕೆಂದೊಡೆ||೨೪೭|| ಸಕಲ ಬ್ರಹ್ಮಾಂಡಗಳಲ್ಲಿಯೂ ಶುದ್ಧವಾಗಿರುವುದರ ದೆಸೆಯಿಂದ "ಶಿವ" ಎಂಬ ನಾಮ ವುಂಟಾಯಿತು. ಪರಕ್ಕಿಂತಲೂ ಪರವಾಗಿರುವುದರ ದೆಸೆಯಿಂದ "ಪರಾತ್ಪರ" ಎಂಬ ನಾಮವುಂಟಾಯಿತು. ಆಕಾಶವನ್ನೂ ಅತಿಕ್ರಮಿಸಿರುವುದರಿಂದ "ಸೂಕ್ಷ್ಮ" ಎಂಬ ನಾಮವುಂಟಾಯಿತು. ಸಮಸ್ತ ಕಾರಣಗಳಿಗೂ ಕಾರಣವಾಗಿರುವುದರಿಂದ "ನಿತ್ಯ" ಎಂಬ ನಾಮವುಂಟಾಯಿತು. ಸರ್ವ ವ್ಯಾಪಿಯಾಗಿರುವುದರಿಂದ "ಸರ್ವಗತ" ಎಂಬ ನಾಮವುಂಟಾಯಿತು. ಕ್ಷೀಣತ್ವವನ್ನು ಹೊಂದದೆ ಇರುವುದರಿಂದ "ಅವ್ಯಯು" ಎಂಬ ನಾಮವುಂಟಾಯಿತು. ಆಣವಮಲ, ಮಾಯಾಮಲ, ಕಾರ್ಮಿಕಮಲ, ರೋಧಮಲ, ತಿರೋಮಲಗಳಿಂದಲೂ ಬಿಡಲ್ಪಟ್ಟಿರುವುದರಿಂದ "ಅನಿಂದಿತ" ಎಂಬ ನಾಮವುಂಟಾಯಿತು. ಉಪಮಾನಾತೀತವಾಗಿರುವುದರಿಂದ "ಅನೌಪಮ್ಯ" ಎಂಬ ನಾಮವುಂಟಾಯಿತು. ಪ್ರಮಾಣಾತೀತವಾಗಿರುವುದರ ದೆಸೆಯಿಂದ "ಅಪ್ರಮಾಣ" ಎಂಬ ನಾಮವುಂಟಾಯಿತು. ನಿರ್ಗುಣವಾಗಿರುವುದರ ದೆಸೆಯಿಂದ ವಿಶೇಷವಾಗಿ "ಅನಾಮಯು" ಎಂಬ ನಾಮವುಂಟಾಗಿ ಶಿವತತ್ವವು ಪ್ರಖ್ಯಾತವಾಯಿತು. ||೨೫೦||

—ಸದಾಶಿವತತ್ವ ಸ್ವರೂಪವು—

ಸಕಲ ನಿಷ್ಕಲರೂಪನ್ನು ಹೊಂದಿದ ಆ ಸದಾಶಿವ ತತ್ವವು-ಸದಾಶಿವ, ಈಶ, ಬ್ರ

ಶ್ಚ ಬ್ರಹ್ಮೇಶಶ್ಚೇಶ್ವರಸ್ಸ್ಮೃತಃ ॥೫೧॥ ಈಶಾನಶ್ಚೇತಿಪಂಚೈವಂ ತತ್ವಭೇದಾಃಪ್ರಕೀರ್ತಿತಾಃ। ಶಿವಂಸದಾಶಿವಂಜ್ಞೇಯ ಮಮೂರ್ತಂಚೇಶಉಚ್ಯತೆ ॥೫೨॥ ಮೂರ್ತಂಬ್ರಹ್ಮೇಶವಿಜ್ಞೇಯಂ ಕರ್ತುರ್ವೈಚೇಶ್ವರಸ್ಸ್ಮೃತಃ। ಈಶಾನಃಕರ್ಮಸಾದಾಖ್ಯಂಪಂಚಸಾದಾಖ್ಯಮುಚ್ಯತೆ॥೫೩॥

—ಅಥಶಿವಸಾದಾಖ್ಯಮುಪವರ್ಣ್ಯತೆ—

ಶಾಂತ್ಯತೀತಾಪರಾಶಕ್ತಿ ಸ್ತಸ್ಯಾಃಪರ್ಯಾಯವಾಚಿಕಾ। ಪರಾಶಕ್ತಿದಶಾಂಶೇನ ಶಿವಸಾದಾಖ್ಯಸಂಭವಃ ॥೫೪॥ ಪರಾಶಕ್ತ್ಯುದ್ಭವತ್ವಾಚ್ಚ ಶುದ್ಧತ್ವಾಚ್ಚಿವಉಚ್ಯತೆ । ಪ್ರಸಾದಂಜ್ಯೋತಿರೂಪಂಚ ಸೂಕ್ಷ್ಮರೂಪಮಿತಿಸ್ಮೃತಂ ॥೫೫॥ ವಿದ್ಯಾರೂಪಮಿವಾಕಾಶೆ ಪ್ರತ್ಯಕ್ಷಂಸರ್ವತೋಮುಖಂ । ಶಿವತತ್ವಮಿದಂಪ್ರೋಕ್ತಂ ತತ್ವಾನಾಮಖಿಲಾಲಯಂ ॥೫೬॥

ಹ್ಮೇಶ, ಈಶ್ವರ, ಈಶಾನ ಎಂಬ ಅಯ್ದು ಭೇದ ವುಳ್ಳುದಾಗಿರುವುದು. ಇವುಗಳೊಳಗೆ ಸದಾಶಿವತತ್ವಕ್ಕೆ ಶಿವಸಾದಾಖ್ಯ ವೆಂಬ ಹೆಸರುಂಟಾಯಿತು. ಈಶತತ್ವಕ್ಕೆ ಅಮೂರ್ತಸಾದಾಖ್ಯ ವೆಂಬ ಹೆಸರುಂಟಾಯಿತು. ಬ್ರಹ್ಮೇಶ ತತ್ವಕ್ಕೆ ಮೂರ್ತಸಾದಾಖ್ಯವೆಂಬ ಹೆಸರುಂಟಾಯಿತು. ಈಶ್ವರತತ್ವಕ್ಕೆ ಕರ್ತೃಸಾದಾಖ್ಯವೆಂಬ ಹೆಸರುಂಟಾಯಿತು. ಈಶಾನತತ್ವಕ್ಕೆ ಕರ್ಮಸಾದಾಖ್ಯವೆಂಬ ಹೆಸರುಂಟಾಯಿತು. ಈರೀತಿಯಾಗಿ ಆ ಅಯ್ದು ತತ್ವಗಳೂ ಅಯ್ದು ಸಾದಾಖ್ಯಗಳೆಂದು ಹೇಳಲ್ಪಟ್ಟುವು.॥೫೩॥ ಆ ಅಯ್ದು ಸಾದಾಖ್ಯಗಳ ಸ್ವರೂಪ ವೆಂತೆಂದೊಡೆ;—

—ಶಿವಸಾದಾಖ್ಯಸ್ವರೂಪವು—

ಒಂದನೆಯದಾದ ಆಸದಾಶಿವ ತತ್ವದಲ್ಲಿ—ಪರಾಶಕ್ತಿಯು ಅವಿನಾಭಾವದೊಡನೆ ಕೂಡಿಕೊಂಡು ಮೆರೆಯುವುದು. ಆಪರಾಶಕ್ತಿಗೆ ಶಾಂತ್ಯತೀತಾ ಎಂಬದಾಗಿ ಪರ್ಯಾಯ ನಾಮವು. ಆ ಪರಾಶಕ್ತಿಯ ಹತ್ತನೆಯ ಒಂದುಭಾಗದ ದೆಸೆಯಿಂದ ಶಿವ ಸಾದಾಖ್ಯವು ಉತ್ಪನ್ನವಾಯಿತು. ಅಂದರೆ ಆಸದಾಶಿವ ತತ್ವವು ಜಗನ್ನಿರ್ಮಾಣ ಲೀಲೆಯನ್ನು ಪೂರ್ತಿ ಮಾಡುವುದಕ್ಕೋಸ್ಕರ ತನ್ನಲ್ಲಿ ಗೋಪ್ಯವಾಗಿದ್ದ ಪರಾಶಕ್ತಿಯನ್ನು ಪ್ರಕಾಶಪಡಿಸಲು, ಆಪರಾಶಕ್ತಿಯು ಶುದ್ಧತ್ವ ಸ್ವಭಾವವನ್ನು ಹೊಂದಿ ಮೆರೆಯಲು, ಶುದ್ಧತ್ವಸ್ವಭಾವವನ್ನು ಹೊಂದಿದ ಆಪರಾಶಕ್ತಿಯೊಡನೆ ಕೂಡಿದ ಸದಾಶಿವತತ್ವವೇ ಶಿವಸಾದಾಖ್ಯವೆಂಬದಾಗಿ ಹೇಳಿಸಿ ಕೊಂಡಿತು. ಆದುದರಿಂದ ಆ ಶಿವಸಾದಾಖ್ಯವು-ನಿರ್ಮಲರೂಪವು, ಜ್ಯೋತಿರೂಪವು, ಸೂಕ್ಷ್ಮರೂಪವು-ಎಂದು ಪ್ರಖ್ಯಾತವಾಗಿ, ಮತ್ತೂ ವಿದ್ಯಾರೂಪದೋಪಾದಿಯಲ್ಲಿ ಆಕಾಶದಲ್ಲಿ ಸರ್ವತೋಮುಖವಾಗಿ ಪ್ರತ್ಯಕ್ಷವೆನಿಸಿಕೊಂಡು, ತತ್ವಗಳಿಗೂ ಸಮಸ್ತಕ್ಕೂ ಕೂಡ ಮನೆಯಾಗಿ, ಈ ಶಿವಸಾದಾಖ್ಯವೇ ಶಿವತತ್ವ ವೆಂಬದಾಗಿ ಹೇಳಿಸಿಕೊಳ್ಳಲ್ಪಟ್ಟಿತು.

—ಅಥಅಮೂರ್ತಸಾದಾಖ್ಯಮುಪವರ್ಣ್ಯತೇ—

ಶಿವಸಾದಾಖ್ಯಮಿತ್ಯುಕ್ತಮಮೂರ್ತಂಚತತಶ್ಶೃಣು । ಶಾಂತ್ಯೈವಾದಿಶಕ್ತಿಶ್ಚತಸ್ಯಾಃಪರ್ಯಾಯವಾಚಿಕಾ॥೨೩॥ ಆದಿಶಕ್ತಿದಶಾಂಶೇನ ಅಮೂರ್ತಸ್ಯಸಮುದ್ಭವಃ । ಆದಿಶಕ್ತೇರಮೂರ್ತತ್ವಾದಮೂರ್ತಂಚೇತಿಕೀರ್ತಿತಂ ॥೨೪॥ ಅಮೂರ್ತತ್ವಾತ್ಕಲಾಹೀನಂತದ್ರೂಪಂಲಿಂಗಮುದ್ಭವಂ । ಸೂರ್ಯಕೋಟಿಪ್ರತೀಕಾಶಂಜ್ಯೋತಿಸ್ತಂಭಾಕೃತಿಸ್ಥಿತಂ ॥೨೫॥ ತಸ್ಯಾಭ್ಯಂತರ್ಗತಾಮೂರ್ತಿರಮೂರ್ತತ್ವಾದಗೋಚರಃ । ಏತದ್ದಿವ್ಯಲಿಂಗಂತುಮೂಲಸ್ತಂಭಮಿಹೋಚ್ಯತೇ ॥೨೬॥ ಲಿಂಗಾತ್ಸರ್ವಂಸಮುತ್ಪನ್ನಂಲಯಸ್ತಸ್ಮಿನ್ಪ್ರಕೀರ್ತಿತಃ । ಅಮೂರ್ತಮೇವಮಾಖ್ಯಾತಂಮೂರ್ತಂಚಾಪಿತತಶ್ಶೃಣು॥೨೭॥

—ಅಮೂರ್ತಸಾದಾಖ್ಯಸ್ವರೂಪವು—

ಎಲೈ ಲಿಂಗಪ್ಪ ಮಂತ್ರಿಯೇ ! ಈ ರೀತಿಯಾಗಿ ಶಿವಸಾದಾಖ್ಯಸ್ವರೂಪವು ಹೇಳಲ್ಪಟ್ಟಿತು. ಇನ್ನು ಅಮೂರ್ತಸಾದಾಖ್ಯ ಸ್ವರೂಪವನ್ನು ಹೇಳುತ್ತೇನೆ ಕೇಳು :— ಬಳಿಕ, ಎರಡನೆಯದಾದ ಈಶತತ್ವದಲ್ಲಿ- ಆದಿಶಕ್ತಿಯು ಅವಿನಾಭಾವಸಂಬಂಧದೊಡನೆ ಕೂಡಿಕೊಂಡು ಮೆರೆಯುವುದು. ಆ ಆದಿಶಕ್ತಿಗೆ- ಶಾಂತಿ ಎಂಬದಾಗಿ ಪರ್ಯಾಯ ನಾಮವು. ಆ ಆದಿಶಕ್ತಿಯ ಹತ್ತನೆಯ ಒಂದು ಭಾಗದ ದೆಸೆಯಿಂದ ಅಮೂರ್ತಸಾದಾಖ್ಯವು ಉತ್ಪನ್ನವಾಯಿತು. ಅಂದರೆ ಆ ಈಶತತ್ವವು ಜಗನ್ನಿರ್ಮಾಣಲೀಲೆಯನ್ನು ಸ್ಫೂರ್ತಿ ಮಾಡುವುದಕ್ಕೋಸ್ಕರ ತನ್ನಲ್ಲಿ ಗೋಪ್ಯವಾಗಿದ್ದ ಆದಿಶಕ್ತಿಯನ್ನು ಪ್ರಕಾಶಪಡಿಸಲು, ಆ ಆದಿಶಕ್ತಿಯು ಅಮೂರ್ತತ್ವಸ್ವಭಾವವನ್ನುಹೊಂದಿ ಮೆರೆಯಲು ಅಮೂರ್ತ ಸ್ವಭಾವವನ್ನು ಹೊಂದಿದ ಆದಿಶಕ್ತಿಯೊಡನೆ ಕೂಡಿದ ಈಶತತ್ವವೇ ಅಮೂರ್ತ ಸಾದಾಖ್ಯವೆಂಬದಾಗಿ ಹೇಳಿಸಿಕೊಂಡಿತು. ॥೨೪॥ ಈ ಅಮೂರ್ತಸಾದಾಖ್ಯದ ದೆಸೆಯಿಂದ ಕಲಾಹೀನವೂ ಅಮೂರ್ತರೂಪವೂ ಆದ ಲಿಂಗವು ಉತ್ಪನ್ನವಾಯಿತು. ಆ ಲಿಂಗವೇ ಸೂರ್ಯಕೋಟಿ ಪ್ರತೀಕಾಶವೂ ಜ್ಯೋತಿ ಸ್ತಂಭಾಕೃತಿಯೂ ಆಗಿರುವುದು. ಆ ಲಿಂಗದ ಅಂತರಂಗದಲ್ಲಿ ಅಡಗಿರುವ ಮೂರ್ತಿಯು ಅಮೂರ್ತತ್ವವಾಗಿರುವುದರ ದೆಸೆಯಿಂದ (ಅಂದರೆ ಶರೀರವಿಲ್ಲದೆ ಯಿರುವುದರ ದೆಸೆಯಿಂದ) ಅಗೋಚರವಾಗಿರುವುದು. ಇಂತೊಪ್ಪುವ ಲಿಂಗವು ದಿವ್ಯಲಿಂಗವೆಂದೂ, ಮೂಲಸ್ತಂಭವೆಂದೂ ಹೇಳಿಸಿಕೊಳ್ಳುವುದು. ॥೨೬॥ ಆದುದರಿಂದಲೇ ಈ ಸಮಸ್ತವೂ ಲಿಂಗದ ದೆಸೆಯಿಂದಲೇ ಉತ್ಪನ್ನವಾಗುತ್ತದೆ. ಸಮಸ್ತವೂ ಲಿಂಗದಲ್ಲಿಯೇ ಲಯವಾಗುತ್ತದೆ, ಎಂಬುದಾಗಿ ಸಿದ್ಧಾಂತವಾಗಿರುವುದು. ಈ ರೀತಿಯಾಗಿ ಅಮೂರ್ತಸಾದಾಖ್ಯ ಸ್ವರೂಪವು ಹೇಳಲ್ಪಟ್ಟಿತು. ಅನಂತರ ಮೂರ್ತಸಾದಾಖ್ಯಸ್ವರೂಪವನ್ನು ಹೇಳುತ್ತೇನೆಕೇಳು॥

—ಅಥಮೂರ್ತಸಾದಾಖ್ಯಮುಪವರ್ಣ್ಯತೇ—

ಇಚ್ಛಾಶಕ್ತಿಶ್ಚ ವಿದ್ಯಾಚ ತಸ್ಯಾಃಪರ್ಯಾಯವಾಚಿಕಾ । ತಚ್ಛಕ್ತೇಸ್ತು ದಶಾಂಶೇನ ಮೂರ್ತಸಾದಾಖ್ಯಮುದ್ಭವಂ ॥೨೬೨॥ ಇಚ್ಛಾಶಕ್ತೇರ್ಗುಣತ್ವಾಚ್ಚ ತಸ್ಮಾನ್ಮೂರ್ತಮುದಾಹೃತಂ । ಮೂರ್ತತ್ವಾಚ್ಚ ಕಲಾಯುಕ್ತಂ ರೂಪಂಚೇತಿ ಪ್ರಕೀರ್ತಿತಂ ॥೨೬೩॥ ಜ್ವಾಲಾಗ್ನಿಸದೃಶಪ್ರಖ್ಯಾ ದಿವ್ಯಲಿಂಗಾಕೃತಿರ್ಭವೇತ್ । ತಸ್ಯಾರ್ಧಾರ್ಧೈಕಭಾಗೇತು ಏಕವಕ್ತ್ರಸಮನ್ವಿತಂ ॥೨೬೪॥ ತ್ರಿಣೇತ್ರಂ ಚಾರುವದನಂ ಸರ್ವಾವಯವಸಂಯುತಂ । ಏಕಮೇಕಾನನೋಪೇತಂ ದಿವ್ಯಲಿಂಗಾಕೃತೀರಿತಂ ॥೨೬೫॥

—ಅಥಕರ್ತೃಸಾದಾಖ್ಯಮುಪವರ್ಣ್ಯತೇ—

ಜ್ಞಾನಂಚೇತಿ ಪ್ರತಿಷ್ಠಾ ಚ ತಸ್ಯಾಃಪರ್ಯಾಯವಾಚಿಕಾ । ಜ್ಞಾನಶಕ್ತಿ

— ಮೂರ್ತ ಸಾದಾಖ್ಯ ಸ್ವರೂಪವು —

ಬಳಿಕ ಮೂರನೆಯದಾದ ಬ್ರಹ್ಮೇಶ ತತ್ವದಲ್ಲಿ ಇಚ್ಛಾಶಕ್ತಿಯು ಅವಿನಾಭಾವ ಸಂಬಂಧನೊಡನೆ ಕೂಡಿಕೊಂಡು ಮೆರೆಯುವುದು. ಆ ಇಚ್ಛಾ ಶಕ್ತಿಗೆ ವಿದ್ಯಾ ಎಂಬದಾಗಿ ಪರ್ಯಾಯ ನಾಮವು. ಆ ಇಚ್ಛಾ ಶಕ್ತಿಯ ಹತ್ತನೆಯ ಒಂದು ಭಾಗದ ದೆಸೆಯಿಂದ ಮೂರ್ತಸಾದಾಖ್ಯವು ಉತ್ಪನ್ನವಾಯಿತು. ಅಂದರೆ ಆ ಬ್ರಹ್ಮೇಶತತ್ವವು ಜಗನ್ನಿರ್ಮಾಣಲೀಲೆಯನ್ನು ಪೂರ್ತಿಮಾಡುವುದಕ್ಕೋಸ್ಕರ ತನ್ನಲ್ಲಿ ಗೋಪ್ಯವಾಗಿದ್ದ ಆ ಇಚ್ಛಾಶಕ್ತಿಯನ್ನು ಪ್ರಕಾಶ ಪಡಿಸಲು, ಆ ಇಚ್ಛಾ ಶಕ್ತಿಯು ಗುಣ ವಿಶಿಷ್ಟ ಸ್ವಭಾವವನ್ನು ಹೊಂದಿ ಮೆರೆಯಲು, ಆ ಗುಣವಿಶಿಷ್ಟ ಸ್ವಭಾವವನ್ನು ಹೊಂದಿದ ಇಚ್ಛಾ ಶಕ್ತಿಯೊಡನೆ ಕೂಡಿದ ಬ್ರಹ್ಮೇಶ ತತ್ವವೇ ಮೂರ್ತಸಾದಾಖ್ಯವೆಂಬದಾಗಿ ಹೇಳಿಸಿಕೊಂಡಿತು. ಈ ಮೂರ್ತಸಾದಾಖ್ಯದ ದೆಸೆಯಿಂದ ಕಲಾಯುಕ್ತವೂ ರೂಪವಿಶಿಷ್ಟವೂ ಆದ ಲಿಂಗವು ಉತ್ಪನ್ನವಾಯಿತು. ಆ ದಿವ್ಯಲಿಂಗಾಕಾರವು ವಿಶೇಷವಾದ ಪ್ರಕಾಶವುಳ್ಳ ಅಗ್ನಿಗೆ ಸದೃಶವಾದದ್ದಾಗಿ ಪ್ರಖ್ಯಾತವಾಗಿರುವುದು. ಇಂತೊಪ್ಪುವ ಲಿಂಗವು ನಾಲ್ಕು ಭಾಗವಾಗಿರುವುದು. ಈ ನಾಲ್ಕುಭಾಗಂಗಳೊಳಗೆ ಒಂದುಭಾಗವು ಮೂರುಕಣ್ಣುಳ್ಳ ಒಂದುಮುಖದಿಂದ ಕೂಡಿರುವುದು. ಮತ್ತೊಂದುಭಾಗವು ಸರ್ವಾವಯಗಳಿಂದಲೂ ಕೂಡಿಕೊಂಡು ಮನೋಹರವಾದ ಮುಖದಿಂದ ಶೋಭಿಸುವುದು. ಮತ್ತೊಂದುಭಾಗವು ಒಂದೇಮುಖದಿಂದ ಕೂಡಿ ತಾನೊಂದೇಯಾಗಿರುವುದು. ಮತ್ತೊಂದುಭಾಗವು ದಿವ್ಯಲಿಂಗಾಕಾರವಾಗಿ ಮೆರೆಯುವುದು. ॥೨೬೫॥

— ಕರ್ತೃಸಾದಾಖ್ಯ ಸ್ವರೂಪವು —

ಬಳಿಕ ನಾಲ್ಕನೆಯದಾದ ಈಶ್ವರತತ್ವದಲ್ಲಿ ಜ್ಞಾನಶಕ್ತಿಯು ಅವಿನಾಭಾವಸಂಬಂ

ದಶಾಂಶೇನಕರ್ತೃಸಾದಾಖ್ಯಸಂಭವಃ ‖೨೬೬‖ ಜ್ಞಾನಂಕರ್ತೃಸ್ವಭಾವ ತ್ವಾತ್ಕರ್ತೃನಾಮೇತಿಕೀರ್ತಿತಂ । ಜ್ಞಾನಂಹಿಶುದ್ಧಭಾವತ್ವಾತ್ಸ್ಫಟಿಕಾ ಭಾಸಉಚ್ಯತೇ ‖೨೬೭‖ ದಿವ್ಯಲಿಂಗಂಮಹದ್ದೈರ್ಘ್ಯಂಮಹಾಸ್ಥೂಲತಯಾ ನ್ವಿತಂ।ತಸ್ಯಮಧ್ಯೇಸ್ಥಿತಾಮೂರ್ತಿರೀಶ್ವರಸ್ಸರ್ವಕಾರಣಃ ‖೨೬೮‖ಪಂಚ ಮೂರ್ಧಂಚತುರ್ವಕ್ತ್ರಂನೇತ್ರೈರ್ದ್ವಾದಶಭಿರ್ಯುತಂ । ಚತುರಾಸ್ಯಂಚತು ರ್ವರ್ಣಂವಸುಶ್ರೋತ್ರಸಮನ್ವಿತಂ ‖೨೬೯‖ ಅಷ್ಟಹಸ್ತಂದ್ವಿಪಾದಂಚ ಸರ್ವಲಕ್ಷಣಸಂಯುತಂ । ಶೂಲಂಪರಶುಖಡ್ಗಂಚಅಭಯಂದಕ್ಷಿಣೇಕರೇ ‖೨೭೦‖ ಪಾಶನಾಗೌಚಘಂಟಾಚವರಂವೈವಾಮಹಸ್ತಕೇ । ಸರ್ವಾವಯ ವಸಂಯುಕ್ತಂಸರ್ವಾಭರಣಭೂಷಿತಂ ‖೨೭೧‖ ಏವಂತದೈಶ್ವರಂಪ್ರೋ

ಧದೊಡನೆ ಕೂಡಿಕೊಂಡು ಮೆರೆಯುವುದು. ಆ ಜ್ಞಾನಶಕ್ತಿಗೆ ಪ್ರತಿಷ್ಠಾ ಎಂಬದಾಗಿ ಪರ್ಯಾಯನಾಮವು. ಆ ಜ್ಞಾನಶಕ್ತಿಯ ಹತ್ತನೆಯ ಒಂದುಭಾಗದ ದೆಸೆಯಿಂದ ಕರ್ತೃ ಸಾದಾಖ್ಯವು ಉತ್ಪನ್ನವಾಯಿತು. ಅಂದರೆ ಈಶ್ವರತತ್ವವು ಜಗನ್ನಿರ್ಮಾಣಲೀಲೆಯ ನ್ನು ಪೂರ್ತಿಮಾಡುವುದಕ್ಕೋಸ್ಕರ ತನ್ನಲ್ಲಿ ಗೋಪ್ಯವಾಗಿದ್ದ ಆ ಜ್ಞಾನಶಕ್ತಿಯನ್ನು ಪ್ರಕಾಶಪಡಿಸಲು, ಆ ಜ್ಞಾನಶಕ್ತಿಯು ಕರ್ತೃಸ್ವಭಾವವನ್ನು ಹೊಂದಿ ಮೆರೆಯಲು, ಆ ಕರ್ತೃಸ್ವಭಾವವನ್ನು ಹೊಂದಿದ ಜ್ಞಾನಶಕ್ತಿಯೊಡನೆ ಕೂಡಿದ ಈಶ್ವರ ತತ್ವವೇ ಕರ್ತೃ ಸಾದಾಖ್ಯನೆಂಬದಾಗಿ ಹೇಳಿಸಿಕೊಂಡಿತು. ಮತ್ತೂ ಜ್ಞಾನಶಕ್ತಿಯು ಶುದ್ಧ ಸ್ವಭಾವವನ್ನು ಹೊಂದಿರುವುದರ ದೆಸೆಯಿಂದ ಕರ್ತೃಸಾದಾಖ್ಯವು ಸ್ಫಟಿಕವನ್ನೋಪಾದಿ ಯಲ್ಲಿ ಪ್ರಕಾಶಮಾನವಾದದ್ದೆಂಬದಾಗಿಯೂ ಹೇಳಿಸಿಕೊಳ್ಳುತ್ತದೆ. ಇಂತೊಪ್ಪುವ ಕರ್ತೃಸಾದಾಖ್ಯದ ದೆಸೆಯಿಂದ ಮಹತ್ತಾಗಿಯೂ ದೀರ್ಘವಾಗಿಯೂ, ಸ್ಥೂಲತ್ವ ದೊಡನೆ ಕೂಡಿಕೊಂಡಿರುವುದಾಗಿಯೂ ಇರುವ ದಿವ್ಯಲಿಂಗವು ಉತ್ಪನ್ನವಾಯಿತು. ಇಂತಪ್ಪ ಆ ಲಿಂಗದ ಮಧ್ಯದಲ್ಲಿ ಸರ್ವಕ್ಕೂ ಕಾರಣನಾದ ಈಶ್ವರನು ಮೂರ್ತಿಯ ನ್ನು ಧರಿಸಿಕೊಂಡಿರುತ್ತಾನೆ. ಹೇಗೆಂದೊಡೆ;— ಐದು ಮಸ್ತಕಗಳು, ಹನ್ನೆರಡು ನೇತ್ರಂಗಳಿಂದ ಕೂಡಿಕೊಂಡಿರುವ ನಾಲ್ಕು ಮುಖಗಳು, ಆನಾಲ್ಕುಮುಖಗಳೂ ನಾಲ್ಕು ಬಣ್ಣವುಳ್ಳವುಗಳಾಗಿರುವುವು. ಮತ್ತೂ ಎಂಟುಕಿವಿಗಳಿಂದ ಕೂಡಿಕೊಂಡಿ ರುವುವು. ಮತ್ತೂ ಆಮೂರ್ತಿಯು ಸರ್ವಲಕ್ಷಣವೊಡನೆ ಕೂಡಿಕೊಂಡು ಎಂಟು ಹಸ್ತಗಳನ್ನೂ ಎರಡುಪಾದಗಳನ್ನೂ ಹೊಂದಿರುವುದು. ಆ ಹಸ್ತಗಳಲ್ಲಿ ಶೂಲವ ನ್ನೂ ಪರಶುವನ್ನೂ ಖಡ್ಗವನ್ನೂ ಬಲಗೈಯಲ್ಲಿ ಅಭಯವನ್ನೂ ಪಾಶವನ್ನೂ ನಾಗ ವನ್ನೂ ಘಂಟೆಯನ್ನೂ ಎಡಗೈಯ್ಯಲ್ಲಿ ವರವನ್ನೂ- ಧರಿಸಿಕೊಂಡು, ಸರ್ವಾಂಗಗಳಿಂ ದಲೂ ಕೂಡಿ ಸರ್ವಾಭರಣ ಭೂಷಿತವಾಗಿ ಮೆರೆಯುವುದು. ಈರೀತಿಯಾಗಿ ಶೋಭಿ

—ಅಥಮಹೇಶತತ್ವಸ್ವರೂಪಮುಪವರ್ಣ್ಯತೇ—

ಸಾದಾಖ್ಯಂ ಪಂಚಧೈವೋಕ್ತ ಮೀಶ್ವರಾಷ್ಟಕಮೇವಚ । ಪಂಚವಿಂಶತಿಮಾಹೇಶಾರುದ್ರಾ ಏಕಾದಶಸ್ಮೃತಾ ॥ ೨೧೩ ॥ ತ್ರಿಮೂರ್ತಿರಂಗತ್ರಿತಯಂ ದ್ವಿಪಂಚಾಶಚ್ಚ ಮೂರ್ತಯಃ ॥

— ಈಶ್ವರಾಷ್ಟಕಂ —

ಭೂವ್ಯಾಂಭವೋಜಲೇಶರ್ವ ಶ್ಚಾಗ್ನೌರುದ್ರಸ್ತಥೈವಚ ॥೨೧೪॥ ವಾಯೌಭೀಮೋಮಹಾದೇವ ಸ್ತ್ವಾಕಾಶೇಚದಿವಾಕರೆ । ಉಗ್ರಸ್ಸೋಮಶ್ಚಶಾಂಕೇಚ ಜೀವಾತ್ಮನಿಮಹೇಶ್ವರಃ ॥೨೧೫॥ ಏತಾಃಪಶುಪತೇಶ್ಚಾಷ್ಟಮೂರ್ತಯಸ್ಸ್ಯುರಿತಿಶ್ರುತಿಃ ॥

— ಪಂಚವಿಂಶತಿಲೀಲಾಮೂರ್ತಿಭೇದಃ —

ಪ್ರಥಮಂಸೋಮಧಾರೀಚ ದ್ವಿತೀಯಮುಮಯಾಸಹ ॥ ೨೧೬ ॥ ತೃತೀಯಂತುವೃಷಾರೂಢಂ ಚತುರ್ಥಂನರ್ತಕೋಪಮಂ । ವೈವಾಹಂ ಪಂಚಮಂವಿಂದ್ಯಾತ್ ಷಷ್ಠಂಭಿಕ್ಷಾಟನಂಭವೇತ್ ॥೨೧೭॥ ಕಾಮಾರಿಸ್ಸಪ್ತಮಂವಿಂದ್ಯಾ ತ್ಕಾಲಾರಿಶ್ಚಾಷ್ಟಮಂಭವೇತ್ । ನವಮಂತ್ರಿಪು

—ಮಹೇಶತತ್ವ ಸ್ವರೂಪವು—

ಹಿಂದೆ ಹೇಳಲ್ಪಟ್ಟ ಸಾದಾಖ್ಯಗಳೈದು, ಮುಂದೆ ಹೇಳುವ ಈಶ್ವರಾಷ್ಟಕವು, ಇಪ್ಪತ್ತೈದು ಲೀಲಾಮೂರ್ತಿಗಳು, ಏಕಾದಶರುದ್ರರು, ತ್ರಿಮೂರ್ತಿಗಳು-ಇಂತು ಈ ಐವ್ವತ್ತೆರಡು ಮೂರ್ತಿಗಳೂ ಸೇರಿ ಮಹೇಶ ತತ್ವವೆಂಬದಾಗಿ ಹೇಳಿಸಿಕೊಳ್ಳುವುದು.

—ಈಶ್ವರಾಷ್ಟಕವು—

ಭೂಮಿಯಲ್ಲಿ ಭವೇಶನು, ಜಲದಲ್ಲಿ ಶರ್ವೇಶನು, ಅಗ್ನಿಯಲ್ಲಿ ರುದ್ರೇಶನು,ವಾಯುವಿನಲ್ಲಿ ಭೀಮೇಶನು, ಆಕಾಶದಲ್ಲಿ ಮಹಾ ದೇವೇಶನು, ಸೂರ್ಯನಲ್ಲಿ ಉಗ್ರೇಶನು ಚಂದ್ರನಲ್ಲಿ ಸೋಮೇಶನು, ಜೀವಾತ್ಮನಲ್ಲಿ ಮಹೇಶ್ವರನು ಇವುಗಳೇ ಪಶುಪತಿಯ ಅಷ್ಟಮೂರ್ತಿಗಳೆಂಬದಾಗಿ ವೇದವು ಹೇಳುವುದು.

—ಇಪ್ಪತ್ತೈದು ಲೀಲಾಮೂರ್ತಿಗಳು—

ಒಂದನೆಯದು-ಚಂದ್ರಶೇಖರಲೀಲೆ, ಎರಡನೆಯದು-ಉಮಾಮಹೇಶ್ವರಲೀಲೆ, ಮೂರನೆಯದು-ವೃಷಭವಾಹನಲೀಲೆ, ನಾಲ್ಕನೆಯದು ತಾಂಡವಮೂರ್ತಿಲೀಲೆ, ಐದನೆಯದು-ಗಿರಿಜಾಕಲ್ಯಾಣಲೀಲೆ, ಆರನೆಯದು-ಭಿಕ್ಷಾಟನಲೀಲೆ, ಏಳನೆಯದು-ಕಾಮದಹನಲೀಲೆ, ಎಂಟನೆಯದು ಕಾಲಸಂಹಾರಲೀಲೆ, ಒಂಭತ್ತನೆಯದು-ತ್ರಿಪುರಸಂಹಾರಲೀಲೆಯು, ಹತ್ತನೆಯದು-ಜಲಂಧರ ಸಂಹಾರಲೀಲೆಯು, ಹನ್ನೊಂದನೆಯದು ಬ್ರಹ್ಮಶಿರಶ್ಛೇದನಲೀಲೆಯು, ಹನ್ನೆರಡನೆಯದು-ದಕ್ಷಸಂಹಾರಲೀಲೆ, ಹದಿಮೂರನೆ

ರಾರಿಸ್ಸ್ಯಾಜ್ಜಲಂಧರವಧೋದಶ॥೨೮೮॥ ಏಕಾದಶಮಜಾರಿಸ್ಸ್ಯಾದ್ದ್ವಾದಶಂವೀರಭದ್ರಕಂ । ತ್ರಯೋದಶಹರಿಧ್ವಾಂಸೀಅರ್ಧನಾರೀಚತುರ್ದಶ ॥ ಕಿರಾತಸ್ಸ್ಯಾತ್ಪಂಚದಶಕಂಕಾಳೀಷೋಡಶಂಭವೇತ್ । ಚಂಡೇಶಾನುಗ್ರಹಶ್ಚೈವತಥಾಸಪ್ತದಶಂಭವೇತ್ ॥೨೮೯॥ ವಿಷಾಪಹರಣಂಚೈವಅಷ್ಟಾದಶಮಿತಿಸ್ಮೃತಂ । ಚಕ್ರದಾನಸ್ವರೂಪಂಸ್ಯಾತ್ಸ್ಮೃತಮೇಕೋನವಿಂಶಕಂ ॥೨೯೦॥ ವಿಘ್ನಪ್ರಸಾದೋವಿಂಶಸ್ಸ್ಯಾದುಮಾಸ್ಕಂದ್ಯೈಕವಿಂಶತಿಃ। ದ್ವಾವಿಂಶಮೇಕಪಾದಂಸ್ಸ್ಯಾತ್ತ್ರಯೋವಿಂಶಂಸುಖಾವಹಂ॥೨೯೧॥ ದಕ್ಷಿಣಾಮೂರ್ತಿರೂಪಂಚಚತುರ್ವಿಂಶಮುದಾಹೃತಂ। ಲಿಂಗೋದ್ಭವಸ್ವರೂಪಂತುಪಂಚವಿಂಶತ್ಪ್ರಕೀರ್ತಿತಂ॥೨೯೨॥ ಏತೇಷಾಂತತ್ವಸಂಯುಕ್ತಂಪಂಚವಿಂಶಮಿತಿಸ್ಮೃತಂ । ಇತಿಮಾಹೇಶಲೀಲಾಸ್ತುಪಂಚವಿಂಶತಿರೀರಿತಾಃ ॥೨೯೩॥

— ಏಕಾದಶರುದ್ರಾಃ —

ಶಿವೋಮಹೇಶ್ವರಶ್ಶಂಭುಃಶ್ರೀಕಂಠೋಭವಈಶ್ವರಃ । ಮಹಾದೇವಃಪಶುಪತಿರ್ನೀಲಕಂಠೋವೃಷಧ್ವಜಃ ॥೨೯೪॥ ಪರಮೇಶಇಮೇರುದ್ರಾಏಕಾದಶಸಮೀರಿತಾಃ । ಇತ್ಯೇಕಾದಶರುದ್ರಾಣಾಂವಿಭೇದಾಉಪವರ್ಣಿತಾಃ ॥೨೯೫॥

ಯುದು ನೃಸಿಂಹಹರಲೀಲೆ, ಹದಿನಾಲ್ಕನೆಯುದು ಅರ್ಧನಾರೀಶ್ವರಲೀಲೆ, ಹದಿನೈದನೆಯುದು ಶಬರ ಶಂಕರಲೀಲೆ, ಹದಿನಾರನೆಯುದು ಕಂಕಾಳಧರಲೀಲೆ, ಹದಿನೇಳನೆಯುದು ಚಂಡೇಶಾನುಗ್ರಹಲೀಲೆ, ಹದಿನೆಂಟನೆಯುದು ವಿಷಕಂಠಲೀಲೆ, ಹತ್ತೊಂಭತ್ತನೆಯುದು ಚಕ್ರಪ್ರದಾನಲೀಲೆ, ಇಪ್ಪತ್ತನೆಯುದು ವಿಘ್ನಪ್ರಸಾದಕಲೀಲೆ, ಇಪ್ಪತ್ತೊಂದನೆಯುದು ಕುಮಾರೋತ್ಪತ್ತಿ ಲೀಲೆ, ಇಪ್ಪತ್ತೆರಡನೆಯುದು ಏಕಪಾದಲೀಲೆ, ಇಪ್ಪತ್ತಮೂರನೆಯುದು ಸುಖಾವಹಮೂರ್ತಿಲೀಲೆ, ಇಪ್ಪತ್ತನಾಲ್ಕನೆಯುದು ದಕ್ಷಿಣಾಮೂರ್ತಿಲೀಲೆ, ಇಪ್ಪತ್ತೈದನೆಯುದು ಮಹಾಲಿಂಗೋದ್ಭವಲೀಲೆ ಎಂಬದಾಗಿ ಮಹೇಶ್ವರನ ಇಪ್ಪತ್ತೈದು ಲೀಲೆಗಳು ಹೇಳಲ್ಪಟ್ಟುವು. ॥೨೯೩॥

— ಏಕಾದಶ ರುದ್ರರು —

ಶಿವರುದ್ರನು, ಮಹೇಶ್ವರರುದ್ರನು, ಶಂಭುರುದ್ರನು, ಶ್ರೀಕಂಠರುದ್ರನು, ಭವರುದ್ರನು, ಈಶ್ವರರುದ್ರನು, ಮಹಾದೇವರುದ್ರನು, ಪಶುಪತಿರುದ್ರನು, ನೀಲಕಂಠರುದ್ರನು, ವೃಷಧ್ವಜರುದ್ರನು, ಪರಮೇಶರುದ್ರನು, ಇವರೇ ಏಕಾದಶರುದ್ರರೆಂಬದಾಗಿ ಏಕಾದಶರುದ್ರರ ವಿಭಾಗವು ಹೇಳಲ್ಪಟ್ಟಿತು. ॥೨೯೫॥

— ತ್ರಿಮೂರ್ತಯಃ —

ಸೃಷ್ಟಿಕಾರಣರೂಪೋಽಯಂಭವಾಖ್ಯಇತಿಸಂಸ್ಮೃತಃ । ರಕ್ಷಣಾರ್ಥಂಮೃಡಾಖ್ಯಶ್ಚಹರಸಂಹಾರಕಾರಣಃ ॥೯೭॥ ಇತಿತ್ರಯೋಮೂರ್ತಯಶ್ಚ ಸಮಾಖ್ಯಾತಾಃ ಕ್ರಮಾದಿಹ। ದ್ವಿಪಂಚಾಶನ್ಮೂರ್ತಯೋಹಿಸಾದಾಖ್ಯೇನ ಸಮುದ್ಭವಾಃ ॥೯೮॥ ಇತಿಸಾದಾಖ್ಯಸಂಭೂತಾಸೃಷ್ಟಿಸ್ಸಮುಪವರ್ಣಿತಾ । ಮಹೇಶ್ವರಾಖ್ಯಮೂರ್ತ್ಯಂಶಲೀಲಾಸಂಪ್ರಾಪ್ತಿಸಂಭವಃ॥ ವಿರಾಟ್ಪುರುಷಇತ್ಯುಕ್ತಃಕೀದೃಗ್ಲಕ್ಷಣಸಂಯುತಃ। ತತ್ವಾನಿಚದ್ವಿಪಂಚಾಶತ್ಕೀದೃಶಾನೀತ್ಯುದೀರ್ಯತಾಂ ॥೯೯॥

— ಅಥವಿರಾಟ್ಪುರುಷಸ್ವರೂಪಮುಪವರ್ಣ್ಯತೆ —

ಮಂತ್ರಿವರ್ಯಬ್ರುವೇತುಭ್ಯಂಯದ್ಜ್ಞಾತುಮಭಿಕಾಂಕ್ಷಸಿ। ಮಹೇಶ್ವರಾಂಶಾತ್ಸಂಜಜ್ಞೇ ವಿರಾಟ್ಪುರುಷನಾಮತಃ ॥೧೦೦॥ ಸಹಸ್ರಶೀರ್ಷಾಪು

— ತ್ರಿಮೂರ್ತಿಗಳು —

ಸೃಷ್ಟಿಗೆ ಕಾರಣರೂಪನಾಗಿರತಕ್ಕವನೇ ಭವಾಖ್ಯಮೂರ್ತಿಯೆನಿಸುವನು. ಸ್ಥಿತಿಗೆ ಕಾರಣರೂಪನಾಗಿರತಕ್ಕವನೇ ಮೃಡಾಖ್ಯಮೂರ್ತಿಯೆನಿಸುವನು. ಸಂಹಾರಕ್ಕೆ ಕಾರಣಭೂತನಾಗಿರತಕ್ಕವನೇ ಹರಾಖ್ಯಮೂರ್ತಿಯೆನಿಸುವನು. ಈರೀತಿಯಾಗಿ ತ್ರಿಮೂರ್ತಿಗಳ ಸ್ವರೂಪವು ಕ್ರಮವಾಗಿ ಹೇಳಲ್ಪಟ್ಟಿತು. ಮತ್ತು ಈ ಐವತ್ತೆರಡು ಮೂರ್ತಿಗಳೂ ಕೂಡ ಸಾದಾಖ್ಯತತ್ವದಿಂದಲೇ ಉತ್ಪನ್ನಗಳಾದುವು. ॥೯೮॥ ಎಂಬದಾಗಿ ಮಾನಪ್ಪ ವಿದ್ವಾಂಸನು ಹೇಳಲು, ಲಿಂಗಪ್ಪ ಮಂತ್ರಿಯು ಕೇಳಿ, ಆ ಮಾನಪ್ಪನನ್ನು ನೋಡಿ, ಎಲೈ ವಿದ್ವಾಂಸನೇ! ಸಾದಾಖ್ಯತತ್ವದಿಂದ ಉತ್ಪನ್ನವಾದ ಸೃಷ್ಟಿಯೂ ಮತ್ತೂ ಮಹೇಶ್ವರ ತತ್ವದಿಂದ ಉತ್ಪನ್ನಗಳಾದ ಐವತ್ತೆರಡು ಮೂರ್ತಿಗಳೂ ಕೂಡ ಕ್ರಮವಾಗಿ ವಿವರಿಸಿ ಹೇಳಲ್ಪಟ್ಟುವು. ಇನ್ನು ಮಹೇಶ್ವರನಾಮಕನಾದ ಮೂರ್ತಿಯ ಅಂಶದ ದೆಸೆಯಿಂದ ಜಗನ್ನಿರ್ಮಾಣ ಲೀಲೆಯನ್ನು ಪೂರ್ತಿಮಾಡುವುದಕ್ಕೋಸ್ಕರವೇ ಉತ್ಪನ್ನವಾದ ಯಾವ ವಸ್ತುವುಂಟೋ, ಆ ವಸ್ತುವೇ ವಿರಾಟ್ಪುರುಷನು ಎಂಬದಾಗಿ ಹೇಳಿಸಿಕೊಂಡಿತಲ್ಲಾ, ಆ ಪುರುಷನು ಎಂತಹ ಲಕ್ಷಣದೊಡನೆ ಕೂಡಿಕೊಂಡಿರುವನು ? ಮತ್ತು ಆ ಐವತ್ತೆರಡು ತತ್ವಗಳು ಎಂತಹ ಸ್ವರೂಪುಗಳುಳ್ಳವುಗಳು ? ಈ ವಿಷಯಗಳು ನಿನ್ನಿಂದ ಹೇಳಲ್ಪಡಲಿ ಎನಲು, ಮಾನಪ್ಪ ವಿದ್ವಾಂಸನು:—

— ಅನಂತರ ವಿರಾಟ್ಪುರುಷನ ಸ್ವರೂಪವು —

ಎಲೈ ಮಂತ್ರಿಶ್ರೇಷ್ಠನೆ ! ನೀನು ಯಾವುದನ್ನು ತಿಳಿಯಬೇಕೆಂದು ಅಪೇಕ್ಷಿಸಿದೆಯೋ ಅದನ್ನೇ ಹೇಳುತ್ತೇನೆ ಕೇಳು:— ಆ ಮಹೇಶ್ವರ ತತ್ವದ ಅಂಶದ ದೆಸೆಯಿಂದ

ರುಷಸ್ಸಹಸ್ರಪತಿರೀಶ್ವರಃ । ಸಹಸ್ರನಯನೋದೇವಸ್ಸಹಸ್ರಚರಣಶ್ಶಿವಃ॥
ಸಹಸ್ರಬಾಹುರ್ವಿಶ್ವಾತ್ಮಾತ್ರಿಶೂಲೀದೀಪ್ತಲೋಚನಃ । ದಂಷ್ಟ್ರಾಕರಾಳ
ವದನಃಪರಬ್ರಹ್ಮಾತ್ಮಕಶ್ಶಿವಃ ॥೨೦೩॥ ಬ್ರಾಹ್ಮಣೋಽಸ್ಯಮುಖಮಾಸೀ
ದ್ಬಾಹೂರಾಜನ್ಯಃಕೃತಃ । ಊರೂತದಸ್ಯಯದ್ವೈಶ್ಯಃಪದ್ಭ್ಯಾಗ್ಂಶೂ
ದ್ರೋಅಜಾಯತ ॥೨೦೪॥ ಚಂದ್ರಮಾಮನಸೋಜಾತಶ್ಚಕ್ಷೋಸ್ಸೂ
ರ್ಯೋಅಜಾಯತ । ಮುಖಾದಿಂದ್ರಶ್ಚಾಗ್ನಿಶ್ಚಪ್ರಾಣಾದ್ವಾಯುರಜಾಯ
ತ ॥೨೦೫॥ ನಾಭ್ಯಾಆಸೀದಂತರಿಕ್ಷಂಶೀರ್ಷ್ಣೋದ್ಯೌಸ್ಸಮವರ್ತತ । ಪ
ದ್ಭ್ಯಾಂಭೂಮಿ ರ್ದಿಶಶ್ಶ್ರೋತ್ರಾ ತ್ತಥಾಲೋಕಾಗ್ಂಅಕಲ್ಪಯನ್ ॥
ಜಠರೇಽಸ್ಯತಿಷ್ಠತೆಸರ್ವಂ ಜಗತ್ಸ್ಥಾವರಜಂಗಮಂ। ಪುನರುತ್ಪದ್ಯತೆ ತಸ್ಮಾ
ದ್ಬ್ರಹ್ಮಣಾದ್ಯಂ ಚರಾಚರಂ ॥೨೦೬॥

— ಅಥದ್ವಿಪಂಚಾಶತ್ತತ್ತ್ವಾನಿ —

ಅನಾದಿರುದ್ರಮೂರ್ತಿಸ್ತು ಸೃಷ್ಟಿಸ್ಥಿತಿಲಯಾಧಿಪಃ । ತತ್ವಾನ್ಯನೇ

ಲೇ ವಿರಾಟ್ಪುರುಷನೆಂಬ ಹೆಸರುಳ್ಳವನು ಉತ್ಪನ್ನನಾದನು. ಆ ಪುರುಷನು ಸಹಸ್ರ ಶಿರಸ್ಸುಗಳುಳ್ಳ ಪುರುಷನು, ಸಹಸ್ರಪತಿಯಾದ ಈಶ್ವರನು, ಸಾವಿರ ಕಣ್ಣುಳ್ಳದೇವನು, ಸಹಸ್ರಪಾದಗಳುಳ್ಳ ಶಿವನು, ಸಹಸ್ರ ಭುಜಗಳುಳ್ಳ ವಿಶ್ವಾತ್ಮನು, ತ್ರಿಶೂಲವುಳ್ಳವನು, ಪ್ರಕಾಶಮಾನವಾದ ಕಣ್ಣುಳ್ಳವನು, ಕೋರದಾಡೆಗಳಿಂದ ಕ್ರೂರವಾದ ಮುಖವುಳ್ಳವನು, ಪರಬ್ರಹ್ಮಸ್ವರೂಪನಾದ ಶಿವನು—ಎಂಬದಾಗಿ ಎನಿಸಿಕೊಂಡು ಮೆರೆಯುವನು. ॥೨೦೩॥ ಇಂತಪ್ಪ ಪುರುಷನ ಮುಖವೇ ಬ್ರಾಹ್ಮಣನು ಎಂಬದಾಗಿ ಹೇಳಿಸಿಕೊಂಡಿತು. ಭುಜಗಳೇ ಕ್ಷತ್ರಿಯನು ಎಂಬದಾಗಿ ಹೇಳಿಸಿಕೊಂಡಿತು. ಈ ಪುರುಷನ ತೊಡೆಗಳೇ ವೈಶ್ಯನು ಎಂಬದಾಗಿ ಹೇಳಿಸಿಕೊಂಡಿತು. ಮತ್ತು ಪಾದಗಳಿಂದ ಶೂದ್ರನು ಉತ್ಪನ್ನನಾದನು. ॥೨೦೪॥ ಮನಸ್ಸಿನಿಂದ ಚಂದ್ರನು ಉತ್ಪನ್ನನಾದನು. ಕಣ್ಣಿನಿಂದ ಸೂರ್ಯನು ಉತ್ಪನ್ನನಾದನು. ಮುಖದ ದೆಸೆಯಿಂದ ಇಂದ್ರನು ಅಗ್ನಿಯು ಹುಟ್ಟಿದರು. ಪ್ರಾಣದದೆಸೆಯಿಂದ ವಾಯುವು ಉತ್ಪನ್ನನಾದನು. ನಾಭಿಯಿಂದ ಅಂತರಿಕ್ಷವು ಉತ್ಪನ್ನವಾಯಿತು. ಶಿರಸ್ಸಿನದೆಸೆಯಿಂದ ಸ್ವರ್ಗವುಂಟಾಯಿತು. ಪಾದಗಳಿಂದ ಭೂಮಿಯು, ಕಿವಿಗಳಿಂದ ದಿಕ್ಕುಗಳು ಲೋಕಗಳೂ ಕೂಡ ಉತ್ಪನ್ನಗಳಾದುವು. ॥೨೦೫॥ ಮತ್ತು ಸ್ಥಾವರಜಂಗಮಾತ್ಮಕವಾದ ಈ ಸಮಸ್ತ ಜಗತ್ತು ಆ ಪುರುಷನ ಗರ್ಭದಲ್ಲಿಯೇ ಅಡಗುತ್ತದೆ. ಮತ್ತೆ ಆ ಪುರುಷನ ದೆಸೆಯಿಂದಲೇ ಚರಾಚರಾತ್ಮಕವಾದ ಬ್ರಾಹ್ಮಣನೇ ಮೊದಲಾದದ್ದು ಪ್ರಪಂಚವು ಉತ್ಪನ್ನವಾಗುತ್ತದೆ. ಇದೇ ಆ ವಿರಾಟ್ಪುರುಷನ ಸ್ವರೂಪವು. ॥೨೦೬॥

— ಅನಂತರ ಐವತ್ತೆರಡು ತತ್ವಗಳು. —

ಎಲೈ ಲಿಂಗಪ್ಪಮಂತ್ರಿಯೇ ! ಆ ಅನಾದಿರುದ್ರಮೂರ್ತಿಯಾದನೋ, ಸೃಷ್ಟಿ

ನರುದ್ರೇಣ ಜಾತಾನೀತ್ಯುಚ್ಯತೇಶೃಣು ||೩೦೮|| ಕಲಾವಿದ್ಯಾಚರಾಗಶ್ಚ ಕಾಲೋನಿಯತಿರೇವಚ । ಭಾವಕೋಬೋಧಕಶ್ಚೈವ ಈಶ್ವರಶ್ಚಸದಾಶಿವಃ ||೩೦೯|| ಶಕ್ತಿಶ್ಚ ಶಿವ ಇತ್ಯುಕ್ತಂ ತತ್ವಮೇಕಾದಶಂಸ್ಮೃತಂ । ಪೃಥಗ್ಭಿನ್ನಾನಿತತ್ವಾನಿ ದ್ವಿಪಂಚಾಶತ್ಪ್ರಭೇದತಃ ||೩೧೦|| ಕಲಾಪಂಚವಿಧಾಜಾತಾ ಅವಿದ್ಯಾಪಂಚಧಾಪುನಃ । ರಾಗಶ್ಚ ತ್ರಿವಿಧಃಪ್ರೋಕ್ತಃ ಕಾಲಸ್ತ್ರಿವಿಧನೇವಚ ||೩೧೧|| ನಿಯತಿಷ್ಷಟ್ಪ್ರಕಾರಾಚ ಭಾವಕೋದಶಧಾಸ್ಮೃತಃ । ಬೋಧಕಂದ್ವಿವಿಧಂಚೈವ ಈಶ್ವರಸ್ತ್ರಿವಿಧಸ್ಸ್ಮೃತಃ ||೩೧೨|| ಸದಾಶಿವಃಪಂಚವಿಧಃ ಸಾಶಕ್ತಿಃಪಂಚಧಾಭವೇತ್ । ಶಿವತತ್ವಂಪಂಚವಿಧಂ ದ್ವಿಪಂಚಾಶಚ್ಚ ತತ್ವಕಂ ||೩೧೩||

— ಕಲಾತತ್ವಪಂಚಕಂ —

ಶಾಂತ್ಯತೀತಾಚಶಾಂತಿಶ್ಚ ವಿದ್ಯಾಚೈವಪ್ರತಿಷ್ಠಿತಾ । ನಿವೃತ್ತಿಶ್ಚೇತಿಪಂಚೈವ ಕಲಾಇತ್ಯನುವರ್ಣಿತಾಃ ||೩೧೪||

ಗೂ, ಸ್ಥಿತಿಗೂ, ಸಂಹಾರಕ್ಕೂ ಕೂಡ ಅಧಿಪತಿಯಾಗಿ ಮೆರೆದಿರುವುದು. ಇಂತೊಪ್ಪುವ ಈ ರುದ್ರನಿಂದಲೇ ತತ್ವಗಳೆಲ್ಲವೂ ಉತ್ಪನ್ನಗಳಾದುವು. ಅದನ್ನು ಹೇಳುತ್ತೇನೆ ಕೇಳು :— ಆ ಅನಾದಿರುದ್ರನಿಂದಲೇ ಕಲಾತತ್ವವು, ಅವಿದ್ಯಾತತ್ವವು, ರಾಗತತ್ವವು, ಕಾಲತತ್ವವು, ನಿಯತಿತತ್ವವು, ಭಾವಕ ತತ್ವವು, ಬೋಧಕತತ್ವವು, ಈಶ್ವರತತ್ವವು, ಸದಾಶಿವತತ್ವವು, ಶಕ್ತಿತತ್ವವು, ಶಿವತತ್ವವು— ಎಂಬ ಹನ್ನೊಂದು ತತ್ವಗಳು ಉತ್ಪನ್ನಗಳಾಗಿ ಪ್ರಖ್ಯಾತಗಳಾದುವು. ಮತ್ತೂ ಈ ಹನ್ನೊಂದು ತತ್ವಗಳೂ ಕೂಡ ಬೇರೆ ಬೇರೆ ವಿಭಾಗಗಳಾಗಿ ಐವತ್ತೆರಡು ಪ್ರಭೇದಗಳಾಗಿರುವುವು. ||೩೧|| ಆ ಹನ್ನೊಂದು ತತ್ವಗಳೊಳಗೆ ಕಲಾ ತತ್ವವು ಐದು ಭಾಗವಾಯಿತು. ಅವಿದ್ಯಾತತ್ವವು ಐದು ಪ್ರಕಾರವಾಯಿತು. ರಾಗ ತತ್ವವು ಮೂರು ಪ್ರಕಾರವಾಯಿತು. ಕಾಲ ತತ್ವವು ಮೂರು ವಿಭಾಗವಾಯಿತು. ನಿಯತಿ ತತ್ವವು ಆರು ವಿಧವಾಯಿತು. ಭಾವಕ ತತ್ವವು ಹತ್ತು ಪ್ರಕಾರವಾಯಿತು. ಬೋಧಕತತ್ವವು ಎರಡು ವಿಧವಾಯಿತು. ಈಶ್ವರತತ್ವವು ಮೂರು ಪ್ರಕಾರವಾಗಿ ಪ್ರಖ್ಯಾತವಾಯಿತು. ಸದಾಶಿವತತ್ವವು ಐದು ವಿಧವಾಯಿತು. ಆ ಶಕ್ತಿತತ್ವವು ಐದು ಪ್ರಕಾರವಾಯಿತು, ಶಿವತತ್ವವು ಐದು ಪ್ರಕಾರವಾಯಿತು. ಇದರಿಂದಲೇ ಐವತ್ತೆರಡು ತತ್ವಗಳು ಪ್ರಖ್ಯಾತಗಳಾದುವು. ||೩೧೩

— ಕಲಾತತ್ವದ ಐದು ಭಾಗಗಳು —

ಶಾಂತ್ಯತೀತೆ, ಶಾಂತಿ, ವಿದ್ಯೆ, ಪ್ರತಿಷ್ಠಿತೆ, ನಿವೃತ್ತಿ— ಎಂಬ ಈ ಐದು ಭಾಗಗಳು ಕಲಾತತ್ವದ ಭಾಗಗಳಾಗಿ ವರ್ಣಿಸಲ್ಪಟ್ಟಿರುವುವು.

— ಅವಿದ್ಯಾತತ್ವಪಂಚಕಂ —

ತನುರಜ್ಞಾನಮೋಹೌಚ ಮಾಯಾಚಾನೃತಮೇವಚ । ಏವಂಪಂ
ಚವಿಧಾವಿದ್ಯಾ ಸರ್ವಜೀವಾಶ್ರಿತಾಭವೇತ್ ॥೩೧೫॥

— ರಾಗತತ್ವತ್ರಯಂ —

ರಾಗಶ್ಚೈವವಿರಾಗಶ್ಚ ಸಮರಾಗಸ್ತ್ರಿಧಾಮತಃ । ರಾಗತತ್ವಮಿತಿ
ಪ್ರೋಕ್ತಂ ಕಾಲತತ್ವಂಬ್ರವೀಮ್ಯಹಂ ||೩೧೬||

— ಕಾಲತತ್ವತ್ರಯಂ —

ಭೂತೋಭಾವೀವರ್ತಮಾನ ಇತಿಕಾಲಸ್ತ್ರಿಧಾಮತಃ ।

— ನಿಯತಿತತ್ವಷಟ್ಕಂ —

ಆಯುಃಕರ್ಮಚವಿತ್ತಂಚಾವಿದ್ಯಾನಿಧನಮೇವಚ ||೩೧೭|| ಕಾ
ಲತತ್ವಾತ್ಮಕಂಚೇತಿ ಷಡ್ವಿಧಾನಿಯತಿಸ್ಸ್ಮೃತಾ ॥

— ಭಾವಕತತ್ವದಶಕಂ —

— ಅವಿದ್ಯಾತತ್ವದ ಐದು ಭಾಗಗಳು —

ತನುವು, ಅಜ್ಞಾನವು, ಮೋಹವು, ಮಾಯೆಯು, ಅನೃತವು;—ಎಂಬ ಈ ಐದು ಭಾಗಗಳು ಅವಿದ್ಯಾತತ್ವದ ಭಾಗಗಳಾಗಿ ಸಮಸ್ತ ಜೀವರನ್ನು ಆಶ್ರಯಿಸಿಕೊಂಡು ಮೆರೆದಿರುವುವು. ||೩೧೫||

— ರಾಗತತ್ವದ ಮೂರು ಭಾಗಗಳು —

ರಾಗವು, ವಿರಾಗವು, ಸಮರಾಗವು—ಎಂಬ ಈ ಮೂರು ಭಾಗಗಳು ರಾಗತತ್ವ ವಿಭಾಗಗಳಾಗಿರುವುವು. ಇನ್ನು ಕಾಲತತ್ವ ವಿಭಾಗಗಳನ್ನು ಹೇಳುತ್ತೇನೆ ಕೇಳು;—

— ಕಾಲತತ್ವದ ಮೂರು ಭಾಗಗಳು. —

ಭೂತಕಾಲ, ಭಾವಿಕಾಲ, ವರ್ತಮಾನಕಾಲ;—ಎಂಬದಾಗಿ ಕಾಲತತ್ವವು ಮೂರು ಭಾಗವಾಗಿರುವುದು.

— ನಿಯತಿತತ್ವದ ಆರುಭಾಗಗಳು —

ಆಯುಷ್ಯ, ಕರ್ಮ, ವಿತ್ತ, ವಿದ್ಯೆ, ನಿಧನ, ಕಾಲತತ್ವಾತ್ಮಕ—ಎಂಬುದಾಗಿ ನಿಯತಿತತ್ವವು ಆರು ಭಾಗವಾಗಿರುವುದು.

— ಭಾವಕತತ್ವದ ಹತ್ತು ಭಾಗಗಳು —

ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ, ವಿಸ್ಮಯ, ವೀರ ಕಾರುಣ್ಯ;—ಎಂಬದಾಗಿ ಭಾವಕತತ್ವವು ಹತ್ತು ವಿಭಾಗವಾಗಿ ಮೆರೆದಿರುವುದು. ||೩೧೮

—ಜ್ಞಾನಕತತ್ವದ ಎರಡು ಭಾಗಗಳು—

ಭೂತಾ ದೇವಾದೈತ್ಯಾದಿಶೋದಶ । ತದ್ವಿಷ್ಣೋರ್ಜಠರಾಚ್ಚೈವ ಸರ್ವ ಲೋಕಸಮುದ್ಭವಃ ॥೩೯॥ ಆದಿತ್ಯಾದ್ವಾದಶವಿಧಾ ಇಂದ್ರಶ್ಚಂದ್ರೋ ಮನುಸ್ತಥಾ । ಚರಾಚರಾಣಿಸರ್ವಾಣಿ ಬಭೂವುರ್ಗರುಡಧ್ವಜಾತ್ ॥

— ಬ್ರಹ್ಮತತ್ವಂ —

ಜನಾರ್ದನಸಹಸ್ರಾಂಶಾ ದ್ಬ್ರಹ್ಮಾಲೋಕಪಿತಾಮಹಃ । ಪಿತಾ ಮಹಾಚ್ಚತತ್ಸರ್ವಂ ಜಗತ್ಸ್ಥಾವರಜಂಗಮಂ ॥೪೧॥

— ಪುರುಷತತ್ವಂ —

ಕಾಲಃಕಲಾಚನಿಯತಿ ಸ್ಸಾಕ್ಷಾನ್ಮಾಯೋದ್ಭವಾನಿಚ । ಕಾಲತ ತ್ವಾದ್ರಾಗವಿದ್ಯೇ ದ್ವೇತತ್ವೇಸಂಬಭೂವತುಃ ॥೪೨॥ ಪಂಚಕಂಚುಕ ಸಂಯುಕ್ತಾಂ ಪ್ರಕೃತಿಂಭೋಕ್ತುಮುದ್ಯತಃ । ಅವಿದ್ಯಾದಿಸಮಾಯು ಕ್ತಃ ಪುರುಷಃಪರಿಕೀರ್ತಿತಃ ॥೪೩॥

ಸಮಸ್ತರಾಕ್ಷಸರೂ, ಇಂದ್ರ, ಅಗ್ನಿ, ಯಮ, ನೈಋತ್ಯ, ವರುಣ, ವಾಯವ್ಯ, ಕು ಬೇರ, ಈಶಾನ, ಊರ್ಧ್ವ, ಅಧ-ಗಳೆಂಬ ಹತ್ತು ದಿಕ್ಕುಗಳೂ ಕೂಡ ಉತ್ಪನ್ನಗಳಾ ದುವು. ಮತ್ತೂ ಆ ವಿಷ್ಣುವಿನ ಜಠರದ (ಹೊಟ್ಟೆಯ) ದೆಸೆಯಿಂದಲೇ ಸಮಸ್ತ ಲೋಕಗಳೂ ಉತ್ಪನ್ನಗಳಾದುವು. ಗರುಡಧ್ವಜನಾದ ಆ ನಾರಾಯಣನ ದೆಸೆಯಿಂ ದಲೇ ದ್ವಾದಶಾದಿತ್ಯರು, ಇಂದ್ರನು, ಚಂದ್ರನು, ಮನುವೂ, ಮತ್ತೂ ಚರಾಚರಾತ್ಮ ಕಗಳಾದ ಈ ಸಮಸ್ತಗಳೂ ಕೂಡ ಉತ್ಪನ್ನಗಳಾದುವು. ॥೪೦॥

— ಬ್ರಹ್ಮತತ್ವವು —

ಆಜನಾರ್ದನನಾದ ವಿಷ್ಣುವಿನ ಸಹಸ್ರಾಂಶದ ದೆಸೆಯಿಂದ ಲೋಕಪಿತಾಮ ಹನಾದ ಬ್ರಹ್ಮನು ಉತ್ಪನ್ನನಾದನು. ಆ ಪಿತಾಮಹನಾದ ಬ್ರಹ್ಮನದೆಸೆಯಿಂದ ಸ್ಥಾ ವರ ಜಂಗಮಾತ್ಮಕವಾದ ಈ ಸಮಸ್ತವಾದ ಜಗತ್ತೂ ಉತ್ಪನ್ನವಾಯಿತು. ॥೪೧॥

— ಪುರುಷತತ್ವವು —

ಆಸಾಕ್ಷಾತ್ತಾದ ಮಾಯಾತತ್ವದ ದೆಸೆಯಿಂದ ಕಾಲತತ್ವ, ಕಲಾತತ್ವ, ನಿ ಯತಿತತ್ವ—ಎಂಬ ಈಮೂರು ತತ್ವಗಳು ಉತ್ಪನ್ನಗಳಾದುವು. ಮತ್ತೂ ಆ ಕಾ ಲ ತತ್ವದದೆಸೆಯಿಂದ ರಾಗತತ್ವ, ಅವಿದ್ಯಾತತ್ವ—ಎಂಬ ಈ ಎರಡು ತತ್ವಗಳು ಉ ತ್ಪನ್ನಗಳಾದುವು. ॥೪೨॥ ಕಾಲತತ್ವ, ಕಲಾತತ್ವ, ನಿಯತಿತತ್ವ, ರಾಗತತ್ವ, ಅವಿದ್ಯಾತತ್ವ ಎಂಬ ಈ ಐದುತತ್ವಗಳಿಗೂ ಪಂಚಕಂಚುಕವೆಂದು ಹೆಸರು. ಈ ಪಂಚಕಂಚುಕದಿಂದ ಕೂಡಿಕೊಂಡಿರುವ ಯಾವಪ್ರಕೃತಿತತ್ವವುಂಟೋ: ಆ ಪ್ರಕೃ ತಿತತ್ವವನ್ನು ಅನುಭವಿಸತಕ್ಕವನೂ, ಅವಿದ್ಯಾತತ್ವ, ರಾಗತತ್ವ, ನಿಯತಿತತ್ವ, ಕಲಾ ತತ್ವ, ಕಾಲತತ್ವಗಳಿಂದ ಕೂಡಿಕೊಂಡಿರುವವನೂ ಆದ ಯಾವ ಜೀವನುಂಟೋ ಅ ವನೇ ಪುರುಷತತ್ವವೆಂಬದಾಗಿ ಹೇಳಿಸಿಕೊಳ್ಳಲ್ಪಡುತ್ತಾನೆ. ॥೪೩॥

— ಪ್ರಕೃತಿತತ್ವಂ —

ಅಥಪ್ರಕೃತಿತತ್ವಂತು ಕ್ರಮಪ್ರಾಪ್ತಂನಿರೂಪ್ಯತೇ। ತಚ್ಚ ಮಾಯೋದ್ಭವಂಯಸ್ಮಾತ್ಕಾಲತಸ್ಸ್ಥೂಲತಾಂಗತಃ ||೩೩೪||

— ಗುಣತತ್ವಂ —

ಅಥಪ್ರಕೃತಿತತ್ವಾತ್ತು ಗುಣತತ್ವಮಜಾಯತ । ಸತ್ವಾದೀನಾಂಸಮಾನಸ್ಥಂ ಪ್ರೋಕ್ತಸ್ಸತ್ವಗುಣಾತ್ಮಕಃ ||೩೩೫|| ಕ್ಷೋಭಿತೇಽತಿತ್ರಮಹಾತೇಜಾ ಶ್ರೀಕಂಠೋಽನ್ವಿತವಿಕ್ರಮಃ । ಪ್ರಬುದ್ಧಃಪರಮೇಶಾನಶಕ್ತಿಸಂಪರ್ಕಮಾತ್ರತಃ ||೩೩೬|| ಗುಣತತ್ವಾತ್ಮಿಕಾಬುದ್ಧಿರಭವನ್ಮುನಿಪುಂಗವ । ಸಚತ್ರಿವಿಧಉದ್ದಿಷ್ಟಃ ಪ್ರಥಮಸ್ತತ್ರತೈಜಸಃ ||೩೩೭|| ವೈಕಾರಿಕೋಽದ್ವಿತೀಯಸ್ಸ್ಯಾತ್ತಥಾಭೂತಾಧಿಕೋಽಪರಃ। ಸತ್ವೇನೋತ್ಕ್ರ

— ಪ್ರಕೃತಿತತ್ವವು —

ಅನಂತರ ಕ್ರಮವಾಗಿ ಬಂದ ಪ್ರಕೃತಿ ತತ್ವವನ್ನು ಹೇಳುತ್ತೇನೆ. ಆ ಪ್ರಕೃತಿತತ್ವವು ಮಾಯಾತತ್ವದ ದೆಸೆಯಿಂದ ಉತ್ಪನ್ನವಾಗಿ, ಕಾಲತತ್ವದ ಸಂಯೋಗದ ದೆಸೆಯಿಂದ ಸ್ಥೂಲತ್ವವನ್ನು ಹೊಂದಿ ಮೆರೆದಿರುವುದು. ||೩೩೪||

— ಗುಣತತ್ವವು —

ಅನಂತರ ಪ್ರಕೃತಿತತ್ವದ ದೆಸೆಯಿಂದ ಗುಣತತ್ವವು ಉತ್ಪನ್ನವಾಯಿತು. ಆ ಗುಣತತ್ವವಾದರೂ-ಧರ್ಮ, ಜ್ಞಾನ, ಐಶ್ವರ್ಯ, ವೈರಾಗ್ಯ-ಇವುಗಳ ಸಮಷ್ಟಿಯುಯವೇ ಆಗಿ, ಸತ್ವಗುಣಾತ್ಮಕವು ಎಂದೆನಿಸಿಕೊಂಡು ಮೆರೆಯುವುದು. ಇಂತು ಸತ್ವಗುಣಾತ್ಮಕವೆನಿಸಿಕೊಂಡ ಆಗುಣತತ್ವವು: ಶಿವತತ್ವಸಂಯೋಗದ ದೆಸೆಯಿಂದ ಮಹಾತೇಜಸ್ಸುಳ್ಳದ್ದೂ, ಶಿವತತ್ವವನ್ನೇ ಖಂಡಿತವಾಗಿ ಹೊಂದಿಸತಕ್ಕದ್ದೂ, ಯಾವಾಗಲೂ ಚಲಿಸದೆ ಇರತಕ್ಕದ್ದೂ ಆಗಿ ಮೆರೆಯಿತು. ಮತ್ತೂ ಅದೇ ಗುಣತತ್ವವು ಶಕ್ತಿತತ್ವದ ಸಂಯೋಗದ ದೆಸೆಯಿಂದ ಚಲಿಸುವಂತಹುದಾಗಿ, ಬುದ್ಧಿಯು-ಎನಿಸಿಕೊಂಡು, ಗುಣತತ್ವಮುಯುವೇ ಆಯಿತು. ಆದುದರಿಂದಲೇ ಬುದ್ಧಿಯು ಎನಿಸಿಕೊಂಡ ಆ ಗುಣತತ್ವವು ಮೂರು ಪ್ರಕಾರವಾಯಿತು. ಅವುಗಳೊಳಗೆ—ಮೊದಲನೆಯ ಗುಣವೇ ತೈಜಸವೆಂದೂ, ಎರಡನೆಯ ಗುಣವೇ ವೈಕಾರಿಕವೆಂದೂ, ಮೂರನೆಯ ಗುಣವೇ ಭೂತಾಧಿಯೆಂದೂ ಹೇಳಿಸಿಕೊಂಡು, ಆ ತೈಜಸಗುಣವೇ—ಧರ್ಮ, ಜ್ಞಾನ, ಐಶ್ವರ್ಯ, ವೈರಾಗ್ಯಗಳ ಸಮಷ್ಟಿಯಾದ ಸತ್ವಗುಣವಾಯಿತು. ಆ ವೈಕಾರಿಕಗುಣವೇ ಅಧರ್ಮ, ಅಜ್ಞಾನ, ಅನೈಶ್ವರ್ಯಗಳ ಸಮಷ್ಟಿಯಾದ ರಾಜಸಗುಣವಾಯಿತು. ಆ ಭೂತಾಧಿಗುಣವೇ ಅವೈರಾಗ್ಯಮುಯುವಾದ ತಾಮಸಗುಣವಾಯಿತು. ಇಂತು ಪ್ರಕೃತಿಯಿಂದ ಉತ್ಪನ್ನಗಳಾದ ಈ ತ್ರಿಗುಣಗಳ ದೆಸೆಯಿಂದ ಅಹಂಕಾರತತ್ವವು ಉತ್ಪನ್ನ

ಷ್ಟಭಾವೋಯಃ ಸತೈಜಸಇಹೋಚ್ಯತೇ ॥೪೫॥ ವೈಕೃತೋರಾಜಸೊ ತ್ಕೃಷ್ಟೋ ಭೂತಾಧಿಸ್ತಾಮಸಾಧಿಕಃ । ತೈಜಸಾದಪ್ಯಹಂಕಾರಾ ನ್ಮನೋಬುದ್ಧೀಂದ್ರಿಯಾಣಿಚ ॥೪೬॥ ಪಂಚಕರ್ಮೇಂದ್ರಿಯಾಣಿಸ್ಯು ರಹಂಕಾರಾತ್ತುವೈಕೃತಾತ್ । ಅಹಂಕಾರಾತ್ತುಭೂತಾಧೇ ರ್ಜಾತಾತನ್ಮಾತ್ರಸಂಹತಿಃ ॥೪೭॥

— ಪಂಚಭೂತೋತ್ಪತ್ತಿಃ —

ಮಹಾಭೂತಾನಿಜಾಯಂತೇ ಕ್ರಮಾತ್ತನ್ಮಾತ್ರಪಂಚಕಾತ್ । ಆಕಾಶಂಪವನಸ್ತೇಜ ಸ್ತೋಯಂಭೂರಿತಿಸಂಜ್ಞಯಾ ॥೪೮॥

— ಪಂಚವಿಂಶತಿತತ್ವಾನಿ —

ಏತೇಷಾಂಗಗನಾದೀನಾಂ ಭೂತಾನಾಂಪೃಥಗಂಶಕೈಃ । ಅನ್ಯೋನ್ಯಸಮ್ಮೇಳನಾ ತ್ತತ್ವಾನ್ಯಭೂವ ನ್ಪಂಚವಿಂಶತಿಃ ॥೪೯॥ ಕ್ರಮಸ್ಸಂಕಥ್ಯತೇ ಭೂತವಿಭಾಗೋಽನ್ಯೋನ್ಯಯೋಗಯೋಃ । ಏಕೈಕಂದ್ವಿವಿಧಂಕೃ

ವಾಯಿತು. ಆದಕಾರಣವೇ ತೈಜಸ (ಸಾತ್ವಿಕ) ಅಹಂಕಾರದ ದೆಸೆಯಿಂದ—ಮನಸ್ಸು, ತ್ವಕ್ಕು, ಚಕ್ಷು, ಶ್ರೋತ್ರ, ಜಿಹ್ವೆ, ಘ್ರಾಣಗಳೆಂಬ ಜ್ಞಾನೇಂದ್ರಿಯಪಂಚಕವು ಉತ್ಪನ್ನವಾಯಿತು. ವೈಕಾರಿಕ (ರಾಜಸ) ಅಹಂಕಾರದ ದೆಸೆಯಿಂದ—ವಾಕ್ಕು, ಪಾದ, ಪಾಣಿ, ಪಾಯು, ಉಪಸ್ಥಗಳೆಂಬ ಪಂಚ ಕರ್ಮೇಂದ್ರಿಯಗಳು ಉತ್ಪನ್ನಗಳಾದುವು. ಭೂತಾಧಿ (ತಾಮಸ) ಅಹಂಕಾರದ ದೆಸೆಯಿಂದ-ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರೆಗಳು ಉತ್ಪನ್ನಗಳಾದುವು. ॥೪೭॥

— ಪಂಚಭೂತೋತ್ಪತ್ತಿಯು —

ಇಂತು ಉತ್ಪನ್ನಗಳಾದ-ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಈ ಪಂಚತನ್ಮಾತ್ರೆಗಳ ದೆಸೆಯಿಂದ ಕ್ರಮವಾಗಿ-ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿಗಳೆಂಬ ಪಂಚ ಮಹಾಭೂತಗಳು ಉತ್ಪನ್ನಗಳಾದುವು. ॥೪೮॥

— ಇಪ್ಪತ್ತೈದು ತತ್ವಗಳು —

ಈ ರೀತಿಯಾಗಿ ಉತ್ಪನ್ನಗಳಾದ-ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿಗಳೆಂಬ ಪಂಚ ಮಹಾಭೂತಗಳ ಪ್ರತ್ಯೇಕಪ್ರತ್ಯೇಕಗಳಾದ ಅಂಶಗಳು ಬಂದುಕೂಡಿದು ಸಮ್ಮೇಳನವಾಗಿ ಇಪ್ಪತ್ತೈದು ತತ್ವಗಳಾದುವು. ॥೪೯॥ ಈ ಪಂಚ ಮಹಾಭೂತಂಗಳು ಯಾವ ರೀತಿಯಾಗಿ ವಿಭಾಗಂಗಳಾಗಿ ಆ ವಿಭಾಗಂಗಳು ಯಾವ ರೀತಿಯಾಗಿ ಸಮ್ಮೇಳನಗಳಾಗಿ ಇಪ್ಪತ್ತೈದು ತತ್ವಂಗಳಾದುವೋ ಆ ಕ್ರಮವನ್ನು ಹೇಳುತ್ತೇನೆ ಕೇಳು:—ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿಗಳೆಂಬ ಈ ಪಂಚಮಹಾ

ತ್ವಾ ತತ್ಪ್ರತ್ಯೇಕಂ ಪೃಥಙ್ನ್ಯಸೇತ್॥೩೪೩॥ಶಿಷ್ಟೈರೇಕೃತಂ ಸಮಾದಾ
ಯ ಪುನಶ್ಚ ವಿಭಜೇದ್ದ್ವಿಧಾ । ದ್ವಿಧಾವಿಭಕ್ತೇ ತತ್ರೈಕಂಸಂಸ್ಥಾಪ್ಯಾನ್ಯ
ಚ್ಚತುರ್ವಿಧಂ ॥೩೪೪॥ ಕುರ್ಯಾದೇನಂವಿಭಾಗ ಸ್ಸ್ಯಾದ್ಭೂತಮೇಕಂತು
ಷಡ್ವಿಧಃ । ಸ್ಥೂಲಾಂಶಾನಾಂಚಭೂತಾನಾಂ ಪೃಥಗೇವ ವಿನಿಕ್ಷಿಪೇತ್ ॥
ಪಂಚವಿಂಶತಿತತ್ವಾನಿ ಭೂತಾಂಶೈಃ ಪಂಚಪಂಚಭಿಃ । ವ್ಯೋಮ್ನಿವ್ಯೋ
ಮಾಂಶತೋಜ್ಞಾತಾವ್ಯೋಮ್ನಿವಾಯ್ವಂಶತೋಮನಃ ॥೩೪೬॥ ವ್ಯೋಮ್ನಿ
ತೇಜೋಂಶತೋಬುದ್ಧಿ ರ್ವ್ಯೋಮ್ನಿಚಿತ್ತಂಜಲಾಂಶತಃ । ವ್ಯೋಮ್ನಿ
ಕ್ಷ್ಮಾಂಶಾದಹಂಕಾರ ಇತ್ಯಾಕಾಶಜಪಂಚಕಂ ॥೩೪೭॥ ವಾಯೌವಾ
ಯ್ವಂಶತೋವ್ಯಾನೋ ವಾಯೌವ್ಯೋಮ್ನಸ್ಸಮಾನಕಃ । ವಾಯಾವುದಾ
ನಸ್ತೇಜೋಂಶಾ ದಪಾನೋವಾಯ್ವಬಂಶತಃ ॥೩೪೮॥ ವಾಯೌಭೂ
ಮ್ಯಂಶತೋಪ್ರಾಣ ಇತಿವಾಯುಜಪಂಚಕಂ। ತೇಜಸ್ತೇಜೋಂಶತಶ್ಚ
ಕ್ಷುಸ್ತೇಜೋವ್ಯೋಮಾಂಶತಶ್ಶ್ರುತಿಃ ॥೩೪೯॥ ತೇಜೋವಾಯ್ವಂಶತ

ಭೂತಂಗಳೊಳಗೆ ಒಂದೊಂದನ್ನೂ ಎರಡೆರಡು ಭಾಗಗಳಾಗಿ ಮಾಡಿ, ಆ ಎರಡು ಭಾ
ಗಗಳೊಳಗೆ ಒಂದು ಭಾಗವನ್ನು ಪ್ರತ್ಯೇಕವಾಗಿರಿಸಿ, ಉಳಿದ ಮತ್ತೊಂದು ಭಾಗವ
ನ್ನು ತೆಗೆದುಕೊಂಡು ಎರಡು ಭಾಗವಾಗಿ ಮಾಡಿ, ಆ ಎರಡು ಭಾಗಗಳೊಳಗೆ ಒಂ
ದು ಭಾಗವನ್ನು ಪ್ರತ್ಯೇಕವಾಗಿರಿಸಿ, ಉಳಿದ ಮತ್ತೊಂದು ಭಾಗವನ್ನು ನಾಲ್ಕುವಿಭಾ
ಗವಾಗಿ ಮಾಡುವುದು. ಈ ರೀತಿಯಾಗಿ ಮಾಡುವುದರಿಂದ ಒಂದೊಂದು ಭೂತವು ಆ
ರು ವಿಭಾಗವಾಯಿತು. ಆ ಆರು ವಿಭಾಗಗಳೊಳಗೆ ಸ್ಥೂಲಾಂಶಗಳಾದ ಭೂತವಿಭಾ
ಗಗಳನ್ನು ಪ್ರತ್ಯೇಕವಾಗಿಯೇ ಇರಿಸುವುದು. ಉಳಿದ ಸೂಕ್ಷ್ಮಾಂಶಗಳಾದ ಭೂತಗಳ
ಇದ್ಪೈದು ವಿಭಾಗಗಳನ್ನು ಒಂದಕ್ಕೊಂದು ಸಮ್ಮೇಳನ ಮಾಡಿದ್ದೇ ಆದರೆ ಇಪ್ಪತ್ತೈ
ದು ತತ್ವಗಳಾದುವು. ಹೇಗೆಂದೊಡೆ:—ಆಕಾಶವಲ್ಲಿ ಆಕಾಶಾಂಶವೇ ಸಮ್ಮೇಳನ
ವಾಗುವುದರ ದೆಸೆಯಿಂದ ಜ್ಞಾತೃತತ್ವವಾಯಿತು. ಆಕಾಶವಲ್ಲಿ ವಾಯುವಿನಂಶವು ಸೇ
ರುವುದರಿಂದ ಮನಸ್ತತ್ವವಾಯಿತು. ಆಕಾಶದಲ್ಲಿ ಅಗ್ನಿಯ ಅಂಶವು ಸೇರುವುದರಿಂದ
ಬುದ್ಧಿತತ್ವವಾಯಿತು. ಆಕಾಶದಲ್ಲಿ ಜಲಾಂಶವು ಸೇರುವುದರಿಂದ ಚಿತ್ತತತ್ವವಾಯಿ
ತು, ಆಕಾಶದಲ್ಲಿ ಪೃಥ್ವಿಯ ಅಂಶವು ಸೇರುವುದರಿಂದ ಅಹಂಕಾರ ತತ್ವವಾಯಿತು.
ಆದುದರಿಂದ ಇದೇ ಆಕಾಶಪಂಚೀಕರಣವು. ॥೩೪೭॥ ವಾಯುವಿನಲ್ಲಿ ವಾಯು
ವಿನಂಶವೇ ಸೇರುವುದರಿಂದ ವ್ಯಾನತತ್ವವಾಯಿತು, ವಾಯುವಿನಲ್ಲಿ ಆಕಾಶಾಂಶವು ಸೇ
ರುವುದರಿಂದ ಸಮಾನತತ್ವವಾಯಿತು. ವಾಯುವಿನಲ್ಲಿ ಅಗ್ನಿಯ ಅಂಶವು ಸೇರುವುದರಿಂ
ದ ಉದಾನತತ್ವವಾಯಿತು, ವಾಯುವಿನಲ್ಲಿ ಜಲಾಂಶವು ಸೇರುವುದರಿಂದ ಅಪಾನತತ್ವ
ವಾಯಿತು, ವಾಯುವಿನಲ್ಲಿ ಭೂಮಿಯ ಅಂಶವು ಸೇರುವುದರಿಂದ ಪ್ರಾಣತತ್ವವಾಯಿ

ಸ್ತ್ವಕ್ಸ್ಯಾಜ್ಜಿಹ್ವಾ ತೇಜೋಜಲಾಂಶತಃ । ತೇಜೋಭೂಮ್ಯಂಶತೋ
ಘ್ರಾಣ ಮಿತಿತೈಜಸಪಂಚಕಂ ॥೩೫೦॥ ಅಪ್ಸ್ವಪ್ಸ್ವಂಶಾದ್ರಸೋತ್ಪತ್ತಿಶ್ಶ
ಬ್ದೋಽಪ್ಸುಗಗನಾಂಶತಃ । ಅಪ್ಸುವಾಯ್ವಂಶತಸ್ಸ್ಪರ್ಶೋ ರೂಪಮಪ್ಸುಚ
ತೇಜಸಃ ॥೩೫೧॥ ಅಪ್ಸುಭೂಮ್ಯಂಶತೋಗಂಧ ಇತ್ಯಪ್ಸಂಭೂತಪಂಚ
ಕಂ। ಭೂಮೌಭೂಮ್ಯಂಶತಃಪಾಯುಃ ಭೂಮಾವ್ಯೋಮಾಂಶತಸ್ತುವಾ
ಕ್ ॥೩೫೨॥ ಭೂಮೌವಾಯ್ವಂಶತಃಪಾಣಿಃ ಪಾದಾಭೂಮೌಚತೈಜ
ಸಃ । ಭೂಮೌಜಲಾಂಶತೋಪಸ್ಥ ಮಿತಿಭೂಮಿಜಪಂಚಕಂ ॥೩೫೩॥
ವ್ಯೋಮ್ನೋಜ್ಞಾತಾತಥಾವ್ಯಾನ ಶ್ಚಕ್ಷುಶ್ಚ ರಸಪಾಯುಕೌ । ವಾಯೋರ್ಮ
ನಸ್ಸಮಾನಾಚ ಶ್ರೋತ್ರಂಶಬ್ದಶ್ಚವಾಗಪಿ ॥೩೫೪॥ ತೇಜಸಾಬುದ್ಧ್ಯು
ದಾನಾಚ ತ್ವಕ್ಸ್ಪರ್ಶಃಪಾಣಿರಿತ್ಯಪಿ । ಅದ್ಭಿಶ್ಚಿತ್ತಮಪಾನಶ್ಚ ಜಿಹ್ವಾರೂ

ತು. ಆದುದರಿಂದ ಇದೇ ವಾಯುಪಂಚೀಕರಣವು. ॥ ಅಗ್ನಿಯಲ್ಲಿ ಅಗ್ನಿಯ ಅಂಶವೇ ಸೇರುವುದರಿಂದ ನೇತ್ರತತ್ವವಾಯಿತು, ಅಗ್ನಿಯಲ್ಲಿ ಆಕಾಶಾಂಶವು ಸೇರುವುದರಿಂದ ಶ್ರೋತ್ರತತ್ವವಾಯಿತು, ಅಗ್ನಿಯಲ್ಲಿ ವಾಯುವಿನಂಶವು ಸೇರುವುದರಿಂದ ತ್ವಕ್ತತ್ವವಾಯಿತು. ಅಗ್ನಿಯಲ್ಲಿ ಜಲಾಂಶವು ಸೇರುವುದರಿಂದ ಜಿಹ್ವಾತತ್ವವಾಯಿತು. ಅಗ್ನಿಯಲ್ಲಿ ಭೂಮಿಯ ಅಂಶವು ಸೇರುವುದರಿಂದ ಘ್ರಾಣತತ್ವವಾಯಿತು. ಆದುದರಿಂದ ಇದೇ ಅಗ್ನಿಪಂಚೀಕರಣವು. ॥೩೫೦॥ ಜಲದಲ್ಲಿ ಜಲಾಂಶವು ಸೇರುವುದರಿಂದ ರಸತತ್ವವುತ್ಪನ್ನವಾಯಿತು, ಜಲದಲ್ಲಿ ಆಕಾಶಾಂಶವು ಸೇರುವುದರಿಂದ ಶಬ್ದತತ್ವವಾಯಿತು, ಜಲದಲ್ಲಿ ವಾಯುವಿನಂಶವು ಸೇರುವುದರಿಂದ ಸ್ಪರ್ಶತತ್ವವಾಯಿತು, ಜಲದಲ್ಲಿ ಅಗ್ನಿಯ ಅಂಶವು ಸೇರುವುದರಿಂದ ರೂಪತತ್ವವಾಯಿತು. ಜಲದಲ್ಲಿ ಭೂಮಿಯ ಅಂಶವು ಸೇರುವುದರಿಂದ ಗಂಧತತ್ವವಾಯಿತು. ಆದುದರಿಂದ ಇದೇ ಜಲಪಂಚೀಕರಣವು. ॥ ಭೂಮಿಯಲ್ಲಿ ಭೂಮಿಯ ಅಂಶವೇ ಸೇರುವುದರಿಂದ ಪಾಯುತತ್ವವಾಯಿತು. ಭೂಮಿಯಲ್ಲಿ ಆಕಾಶಾಂಶವು ಸೇರುವುದರಿಂದ ವಾಕ್ತತ್ವವಾಯಿತು. ಭೂಮಿಯಲ್ಲಿ ವಾಯುವಿನಂಶವು ಸೇರುವುದರಿಂದ ಪಾಣಿತತ್ವವಾಯಿತು, ಭೂಮಿಯಲ್ಲಿ ಅಗ್ನಿಯ ಅಂಶವು ಸೇರುವುದರಿಂದ ಪಾದತತ್ವವಾಯಿತು. ಭೂಮಿಯಲ್ಲಿ ಜಲಾಂಶವು ಸೇರುವುದರಿಂದ ಉಪಸ್ಥತತ್ವವಾಯಿತು. ಆದುದರಿಂದ ಇದೇ ಭೂಮಿಪಂಚೀಕರಣವು. ॥೩೫೩॥ ಈ ರೀತಿಯಾಗಿ ಆದುದರಿಂದಲೇ ಆಕಾಶಭೂತದ ದೆಸೆಯಿಂದ—ಜ್ಞಾತೃ, ವ್ಯಾನ, ಚಕ್ಷು, ರಸ, ಪಾಯುಗಳೆಂಬ ಐದು ತತ್ವಂಗಳುತ್ಪನ್ನಗಳಾದವು. ॥ ವಾಯುಭೂತದ ದೆಸೆಯಿಂದ—ಮನಸ್ಸು, ಸಮಾನ, ಶ್ರೋತ್ರ, ಶಬ್ದ, ವಾಕ್ಕುಗಳೆಂಬ ಐದು ತತ್ವಂಗಳುತ್ಪನ್ನಗಳಾದುವು. ॥ ಅಗ್ನಿಭೂತದ ದೆಸೆಯಿಂದ—ಬುದ್ಧಿ, ಉದಾನ, ತ್ವಕ್ಕು, ಸ್ಪರ್ಶ, ಪಾಣಿಗಳೆಂಬ ಐದು ತತ್ವಂಗಳುತ್ಪನ್ನಗಳಾದುವು. ॥ ಜಲಭೂತದ ದೆಸೆಯಿಂದ—ಚಿತ್ತವು, ಅಪಾನವು, ಜಿಹ್ವೆ, ರೂಪ, ಪಾದಂಗಳೆಂಬ ಐದು ತತ್ವಂಗ

ಪಂಚಪಾವಕಃ ॥೩೫॥ ಭೂಮೇರಹಂಕೃತಿಪ್ರಾಣಾ ಘ್ರಾಣೋಗಂಧ ಉಪಸ್ಥಕಂ । ಪಂಚವಿಂಶತಿತತ್ವಾನಿ ಭೂತೈರೇವಂತುಜಜ್ಞಿರೆ ॥೩೬॥ ಸ್ಥೂಲಾಂಶತ್ವಂಚಭೂತಾನಾಂ ಬ್ರಹ್ಮಾಂಡಂಪರಿಕೀರ್ತಿತಂ। ಸೂಕ್ಷ್ಮಾಂಶಏವಪಿಂಡಾಂಡ ಮಿತಿಶಾಸ್ತ್ರೇಷುನಿಶ್ಚಯಃ ॥೩೭॥ ಉದೀರಿತೋಯಮ ರ್ಥಃ ಪಾರ್ವತ್ಯೈಶಂಭುನಾಪುರಾ । ಸಏವಾರ್ಥೋಮಯಾಪ್ರೋಕ್ತ ಸ್ತತ್ಸಂವಾದಾತ್ಮನಾಸ್ಥಿತಃ ॥೩೮॥ ತಸ್ಮಾದುಕ್ತಕ್ರಮೇಣಾಪಿಶಿವಃಪ ರತರಾತ್ಪರಃ।ತದಾಶ್ರಿತಂಮತಂಶೈವ ಮಿತಿಜಾನೀಹಿಸತ್ಪ್ರಭೋ ॥೩೯॥

ಇತಿ ಶ್ರೀಮದನಾದಿಪ್ರಮಥ ಪರಂಪರಾಗತ ಷಟ್ಸ್ಥಲಜ್ಞಾನಬೋಧಕಾ ಚಾರ್ಯವರ್ಯ ವರಗುರುಬಸವಯತಿವರ್ಯಲಬ್ಧಬುದ್ಧಿವಿಕಾಸೇನ ವೀ. ರಶೈವದೀಕ್ಷಾಗುರುಚೆನ್ನವೀರಸ್ವಾಮಿಕರಕಮಲ ಸಂಜಾ ತೇನ ಮಾನಪ್ಪವಿದುಷಾ ಕೃತೆ ವೀರಶೈವಾಚಾರಕೌ ಸ್ತುಭೆ ಕ್ರಿಯಾಕಾಂಡೆ ಅನಾದಿಭಕ್ತ ಪ್ರಭೃ ತಿಸೃಷ್ಟಿನಿರೂಪಣಂನಾಮ ತೃತೀಯ ಪ್ರಕರಣಂ ಸಮಾಪ್ತಂ.

ಉತ್ಪನ್ನಗಳಾದುವು. ॥ ಭೂಭೂತದ ವೆಸೆಯಿಂದ,—ಅಹಂಕಾರ, ಪ್ರಾಣ, ಘ್ರಾಣ, ಗಂಧ, ಉಪಸ್ಥ-ಗಳೆಂಬ ಐದು ತತ್ವಂಗಳುತ್ಪನ್ನಗಳಾದುವು. ॥ ಈರೀತಿಯಾಗಿ ಪಂಚಭೂತಗಳಿಂದ ಇಪ್ಪತ್ತೈದು ತತ್ವಂಗಳುತ್ಪನ್ನಗಳಾದುವು ॥೩೬॥ ಮತ್ತೂ ಈ ಪಂಚಮಹಾಭೂತಂಗಳ-ಸ್ಥೂಲಾಂಶವೇ ಬ್ರಹ್ಮಾಂಡವಾಗಿರುವುದು, ಸೂಕ್ಷ್ಮಾಂಶವೇ ಪಿಂಡಾಂಡವಾಗಿರುವುದು, ಎಂದು ಪ್ರಖ್ಯಾತವಾಗಿ ಶಾಸ್ತ್ರಗಳಿಂದ ನಿಶ್ಚಯಿಸಲ್ಪಟ್ಟಿರುವುದು. ॥೩೭॥ ಇದೇ ಅರ್ಥವನ್ನು ಪರಶಿವನು ಪಾರ್ವತಿಗೆ ಬೋಧಿಸಿರುವನು. ಅದೇ ಅರ್ಥವು ಈಗ ನಿನಗೋಸ್ಕರ ಸತ್ಸಂವಾದ ರೂಪವಾಗಿ ನನ್ನಿಂದ ಹೇಳಲ್ಪಟ್ಟಿತು. ॥೩೮॥ ಎಲೈ ಪ್ರಭುವಾದ ಲಿಂಗಪ್ಪಮಂತ್ರಿಯೆ! ಮೊದಲಿನಿಂದಲೂ ನಿನಗೆ ಕ್ರಮವಾಗಿ ಹೇಳಲ್ಪಟ್ಟಿರುವ ಪ್ರಕಾರವಾಗಿ ಈ ಪರಶಿವನು ಪರತರಕ್ಕಿಂತಲೂ ಪರನಾಗಿ ಮೆರೆಯುವನು. ಆದುದರಿಂದ ಅಂತೊಪ್ಪುವ ಆ ಪರಶಿವನನ್ನು ಆಶ್ರಯಿಸಿಕೊಂಡಿರುವ ಮತವೇ ಶೈವಮತವೆಂಬುದಾಗಿ ತಿಳಿದುಕೊ. ॥೩೯॥

ಎಂಬಲ್ಲಿಗೆ ಶ್ರೀಮಾನಪ್ಪ ವಿದ್ವತ್ಕೃತ ವೀರಶೈವಾಚಾರಕೌಸ್ತುಭಕ್ಕೆ ಎಂ. ಬಸವಲಿಂಗಶಾಸ್ತ್ರಿ ರಚಿತವಾದ "ಆಚಾರಪ್ರಕಾಶಿಕೆ" ಎಂಬ ಕನ್ನಡಟಿಪ್ಪಣದಲ್ಲಿ ಅನಾದಿ ಭಕ್ತನೇ ಮೊದಲಾದ ಸೃಷ್ಟಿಯನ್ನು ನಿರೂಪಣಮಾಡುವ ೩ ನೆಯಪ್ರಕರಣವು ಮುಗಿದುದು.

ಚತುರ್ಥ ಪ್ರಕರಣಂ.

— (ಶೈವವೀರಶೈವಭೇದನಿರೂಪಣಂ) —

ವಿದಿತಾಶೇಷಸಿದ್ಧಾಂತ ತತ್ವನಿಷ್ಕರ್ಷಕೌಶಲ । ವಿದ್ವನ್ಕತಿವಿಧಂಶೈವಂ ತನ್ಮೇವಿಸ್ತರತೋವದ ॥೧॥ ಪ್ರಭೋಲಿಂಗಪ್ಪಮಂತ್ರೀಶ ಸರ್ವಲೋಕಹಿತಂಕರ । ಪ್ರಶ್ನಸ್ತ್ವಯೈಷಶಾಸ್ತ್ರೀಯಃ ಕೃತೋದೇವ್ಯಾಶಿವಂ ಪ್ರತಿ ॥೨॥ ಪುರಾತನೋವ್ಯೋತ್ತರಂತೆ ಸಂಗ್ರಹೇಣೋಪವರ್ಣ್ಯಯೆ । ಭವಿಷ್ಯತಿವಿಶೇಷೇಣ ಪ್ರಸನ್ನಹೃದಯಂತವ ॥೩॥

ಪಾರ್ವತೀಕೃತಪ್ರಶ್ನಃ—ಶೈವಾಃಕತಿಕಥಂತೇಷು ವೀರಶೈವಸ್ತುಮೋಕ್ಷದಃ।ಮೋಕ್ಷೋಪಾದಾನಮಾಚಾರಂ ತತ್ಸರ್ವಂಬ್ರೂಹಿಶಂಕರ॥ ತ್ವದನ್ಯಸ್ಸಂಶಯಸ್ಯಾಸ್ಯ ಛೇತ್ತಾನೈವೋಪಪದ್ಯತೆ ॥

---

೪ ನೆಯ ಪ್ರಕರಣವು.

ಶೈವಮತ-ಭೇದವನ್ನೂ ವೀರಶೈವಮತಭೇದವನ್ನೂ —ನಿರೂಪಿಸುವಿಕೆಯು—

ಎಲೈ ಸಮಸ್ತಸಿದ್ಧಾಂತ ತತ್ವವನ್ನು ನಿಷ್ಕರ್ಷೆಮಾಡಿ ಹೇಳುವುದರಲ್ಲಿ ಮಹಾಪ್ರವೀಣನಾದ ಮೌನಪ್ಪ ವಿದ್ವಾಂಸನೇ ! ಹಾಗಾದರೆ ಶೈವಮತವು ಎಷ್ಟು ವಿಧವಾಗಿರುವುದು ? ಅದನ್ನು ವಿಸ್ತಾರವಾಗಿ ನನಗೆ ಹೇಳು. ॥೧॥ ಎಂದು ಲಿಂಗಪ್ಪಮಂತ್ರಿಯು ಕೇಳಲು ಆಗ ಮೌನಪ್ಪ ವಿಧ್ವಾಂಸನು, ಎಲೈ ಪ್ರಭುವಾದ ಲಿಂಗಪ್ಪಮಂತ್ರೀಶನೇ ! ಈಗ ನೀನು ಕೇಳಿದ ಪ್ರಶ್ನೆಯು ಸಮಸ್ತ ಲೋಕಕ್ಕೂ ಹಿತವನ್ನು ಮಾಡತಕ್ಕದ್ದಾಗಿಯೂ, ಶಾಸ್ತ್ರೀಯವಾದದ್ದಾಗಿಯೂ, ಮತ್ತು ಪರಶಿವನನ್ನು ಕುರಿತು ಪಾರ್ವತಿಯಿಂದ ಪ್ರಶ್ನೆಮಾಡಲ್ಪಟ್ಟದ್ದಾಗಿಯೂ ಇರುವುದು. ಆದುದರಿಂದ ಈ ಪ್ರಶ್ನೆಗೆ ಪೂರ್ವದಲ್ಲಿ ಪರಶಿವನಿಂದ ಹೇಳಲ್ಪಟ್ಟ ಉತ್ತರವನ್ನೇ ಈಗ ನಿನಗೆಸಂಕ್ಷೇಪವಾಗಿ ವರ್ಣಿಸಿ ಹೇಳುತ್ತೇನೆ ಕೇಳು:—ಇದನ್ನು ನೀನು ಕೇಳುವುದರಿಂದ ನಿನ್ನ ಹೃದಯವು ವಿಶೇಷವಾಗಿ ನಿರ್ಮಲವಾಗುತ್ತದೆ. ಎಂದು ಮೌನಪ್ಪ ವಿದ್ವಾಂಸನು ಹೇಳುತ್ತಾನೆ.॥೩॥

ಪಾರ್ವತಿಯಿಂದ ಮಾಡಲ್ಪಟ್ಟ ಪ್ರಶ್ನೆಯು— ಎಲೈ ಪರಶಿವಮೂರ್ತಿಯೇ ! ಶೈವಮತವು ಎಷ್ಟು ಭೇದವುಳ್ಳುದು ? ಆ ಶೈವಮತಗಳಲ್ಲಿ ವೀರಶೈವಮತವು ಹೇಗೆ ಮೋಕ್ಷವನ್ನು ಕೊಡತಕ್ಕದಾಗಿರುವುದು? ಮತ್ತೂ ಆ ಮೋಕ್ಷಕ್ಕೆ ಉಪಾದಾನಕಾರಣವಾದ ಆಚಾರವಾವುದು? ಆ ಸಮಸ್ತವನ್ನೂ ನನಗೆ ಹೇಳು. ಈಗ ನನಗುಂಟಾಗಿರುವ ಈ ಸಂಶಯವನ್ನು ಹೋಗಲಾಡಿಸತಕ್ಕವನು ನೀನಲ್ಲದೆ ಮತ್ತಾರು? ಎಂದು ಪಾರ್ವತಿಯು ಪ್ರಶ್ನೆಮಾಡಲು,

ಪರಶಿವಃ—ಸಾಧುಸಾಧುಮಹಾಭಾಗೇ ಸಮ್ಯಕ್ಪೃಷ್ಟಮಿದಂತ್ವಯಾ॥೫॥ ವಿಸ್ತರಾತ್ಕಥಿತುಂಶ್ರೋತುಂ ನಾಲಂವರ್ಷಾಯುತಂಶಿವೇ। ತಸ್ಮಾತ್ಸಂಕ್ಷೇಪತಸ್ಸರ್ವಂ ವಕ್ಷ್ಯಾಮಿಶೃಣುಪಾರ್ವತಿ ॥೬॥

ಜಾತ್ಯನುಕ್ರಮೋತ್ಪನ್ನಶೈವಭೇದಾಃ--ಶೈವಾಸ್ಸಪ್ತವಿಧಾಜ್ಞೇಯಾಸ್ತೇಷಾಂಭೇದಂಶೃಣುಕ್ರಮಾತ್ । ಅನಾದಿಶೈವಃಪ್ರಥಮ ಆದಿಶೈವಸ್ತತಃಪರಂ॥೭॥ಮಹಾಶೈವಸ್ತತೋಜ್ಞೇಯ ಅನುಶೈವಸ್ತತಃಪರಃ। ಅವಾಂತರಸ್ತತೋಜ್ಞೇಯಃ ಪ್ರವರಸ್ತದನಂತರಂ ॥೮॥ ಅಂತ್ಯಶೈವಸ್ತತೋಜ್ಞೇಯ ಸ್ತೇಷಾಂಲಕ್ಷಣಮುಚ್ಯತೇ । ಅನಾದಿಶೈವೋಮತ್ತೋಽನ್ಯೋನಾಸ್ತಿಲೋಕೇಷುಕಶ್ಚನ॥೯॥ ಆದಿಶೈವಾಸ್ತುವಿಜ್ಞೇಯಾಃ ಕೌಶಿಕಾದ್ಯಾನಗಾತ್ಮಜೇ। ಕೌಶಿಕಃಕಾಶ್ಯಪಶ್ಚೈವಭಾರದ್ವಾಜಾತ್ರಿಗೌತಮಾಃ ॥೧೦॥ ಆದಾವೇತೇಮಹಾದೇವಿ ಪಂಚವಕ್ತ್ರೇಷುದೀಕ್ಷಿತಾಃ। ತದ್ವಂಶ್ಯಾನಾಂ ಪುನರ್ದೀಕ್ಷಾ ನಾಸ್ತಿಸಾದೇವಿನಿಷ್ಫಲಾ॥೧೧॥ ಕಿಂತೂಪನಯನಾದೂರ್ಧ್ವಂ

ಪರಶಿವನು ಹೇಳುತ್ತಾನೆ— ಮಹಾಸ್ಥಾನಾಪನ್ನಳಾದ ಎಲೈ ಪಾರ್ವತಿಯೇ! ನಿನ್ನಿಂದ ಕೇಳಲ್ಪಟ್ಟ ಈ ಪ್ರಶ್ನೆಯು ಉತ್ತಮವಾದುದು. ॥೫॥ ಆದರ ನಿನ್ನ ಪ್ರಶ್ನೆಗೆ ಉತ್ತರವನ್ನು ವಿಸ್ತಾರವಾಗಿ ಹೇಳುವುದಕ್ಕೂ ವಿಸ್ತಾರವಾಗಿ ಕೇಳುವುದಕ್ಕೂ ಕೂಡ ಹತ್ತುಸಾವಿರ ವರ್ಷಗಳಾದರೂ ಸಾಲುವುದಿಲ್ಲ. ಆದುದರಿಂದ ಆ ನಿನ್ನ ಸಮಸ್ತ ಪ್ರಶ್ನೆಗೂ ಸರಿಯಾದ ಉತ್ತರವನ್ನು ಸಂಕ್ಷೇಪವಾಗಿಯೇ ಹೇಳುತ್ತೇನೆ. ಎಲೈ ಪಾರ್ವತಿಯೇ! ಕೇಳು:— ॥೬॥

ಜಾತಿ ಭೇದಕ್ರಮದಿಂದ ಉತ್ಪನ್ನಗಳಾದ ಶೈವಭೇದಗಳು — ಎಲೈ ಪಾರ್ವತಿಯೇ! ಶೈವಗಳು ಏಳುವಿಧಗಳೆಂಬುದಾಗಿ ತಿಳಿಯಬೇಕು. ಅವುಗಳ ಭೇದವನ್ನು ಕ್ರಮವಾಗಿ ಹೇಳುತ್ತೇನೆ ಕೇಳು--ಒಂದನೆಯದೇ ಅನಾದಿಶೈವವು, ಎರಡನೆಯದೇ ಆದಿಶೈವವು, ಮೂರನೆಯದೇ ಮಹಾಶೈವವು, ನಾಲ್ಕನೆಯದೇ ಅನುಶೈವವು, ಐದನೆಯದೇ ಅವಾಂತರ ಶೈವವು, ಆರನೆಯದೇ ಪ್ರವರಶೈವವು, ಅನಂತರ ಏಳನೆಯದೇ ಅಂತ್ಯಶೈವವೆಂಬುದಾಗಿ ತಿಳಿದುಕೋ. ಬಳಿಕ ಆ ಏಳು ಶೈವಗಳ ಲಕ್ಷಣವನ್ನು ಹೇಳುತ್ತೇನೆ ಕೇಳು:—ಅನಾದಿಶೈವನೇ ನಾನು; ನನ್ನಹೊರತು ಈ ಮೂರು ಲೋಕಗಳಲ್ಲಿಯೂ ಕೂಡ ಮತ್ತೊಬ್ಬನಿಲ್ಲ. ॥೯॥ ಎಲೈ ಗಿರಿರಾಜಪುತ್ರಿಯಾದ ಮಹಾದೇವಿಯೆ! ಕೌಶಿಕನು, ಕಾಶ್ಯಪನು, ಭಾರದ್ವಾಜನು, ಅತ್ರಿಯು, ಗೌತಮನು, ಎಂಬ ಈ ಋಷಿಗಳು ಆದಿಯಲ್ಲಿ ನನ್ನ ಐದು ಮುಖಗಳಿಂದ ಶಿವದೀಕ್ಷಾಸಂಸ್ಕಾರವನ್ನು ಹೊಂದಿದರು, ಇವರುಗಳೇ ಆದಿಶೈವರು. ಮತ್ತು ಇವರ ವಂಶಸ್ಥರಿಗೆ ಪುನಃ ಶಿವದೀಕ್ಷಾಸಂಸ್ಕಾರವಿಲ್ಲವಾದುದರಿಂದ ಆ ದೀಕ್ಷೆಯು ನಿಷ್ಫಲವಾದುದು. ॥೧೧॥ ಆದರೆ ಆ ಋಷಿಗಳ ವಂಶಸ್ಥರು ಉಪನ

ಮಂಡಲೇಪೂಜ್ಯಶಂಕರಂ । ಪಿತ್ರಾದಿಭಿಶ್ಚೋಪದೇಶ್ಯಾ ಮಮಮಂತ್ರಾದಿಕಾಃಕ್ರಿಯಾಃ ||೧೨|| ದತ್ವಾತುಭಸ್ಮತಾಂಬೂಲಂ ಮದ್ಭಕ್ತಾನಾಂತುಭೋಜನಂ । ದಕ್ಷಿಣಾಂಚತತೋದದ್ಯಾ ದ್ವಿತ್ತಶಾಠ್ಯಂನಕಾರಯೇತ್ ||೧೩|| ಏತೇಶಿವದ್ವಿಜಾಃಪ್ರೋಕ್ತಾ ಲೋಕೇಪೂಜ್ಯಾಭವಂತಿಹಿ । ಏಭಿರೇವಪ್ರಕರ್ತವ್ಯಾ ಯಜನಾಸ್ವಪರಾರ್ಥಿಕಾ ||೧೪|| ಶೈವದೀಕ್ಷೋಕ್ತಮಾರ್ಗೇಣ ದೀಕ್ಷಿತಾಬ್ರಾಹ್ಮಣಾಶ್ಶಿವೆ । ಮಹಾಶೈವಾಸ್ತುವಿಜ್ಞೇಯಾ ಮಹಾಂತೋಲೋಕಪೂಜಿತಾಃ ||೧೫|| ಅನುಶೈವಾಇತಿಪ್ರೋಕ್ತಾನೃಪಾವೈಶ್ಯಾಶ್ಚ ದೀಕ್ಷಿತಾಃ। ಅವಾಂತರಾಖ್ಯಶೈವಾಸ್ತುಶೂದ್ರಾಸ್ತೇದೀಕ್ಷಿತಾಯದಿ ||೧೬|| ಕುಲಾಲಪಾರ್ಶ್ವಿಕಾದ್ಯಾಶ್ಚ ಪ್ರವರಶ್ಶೈವಉಚ್ಯತೆ । ಅನ್ಯೇಷಾಮಂತ್ಯಜಾತಾನಾ ಮಂತ್ಯಶೈವಂವಿಧೀಯತೆ ||೧೭|| ಏವಂಪ್ರೋಕ್ತಾಶ್ಶೈವಭೇದಾ ಜಾತ್ಯನುಕ್ರಮಶೋಮಯಾ ||

ಯನ ಸಂಸ್ಕಾರವನ್ನು ಮಾಡಿಕೊಂಡು ತಮ್ಮ ತಮ್ಮ ಪಿತೃಗಳಿಂದ ನನ್ನ ಮಂತ್ರವೇ ಮೊದಲಾದ ಕ್ರಿಯೆಗಳನ್ನು ಉಪದೇಶಮಾಡಿಕೊಂಡು, ಅನಂತರ ನನ್ನ ಭಕ್ತರುಗಳಿಗೆ ಭಸ್ಮತಾಂಬೂಲವನ್ನು ಕೊಟ್ಟು ಕರೆದುಕೊಂಡುಬಂದು ಭೋಜನವನ್ನುಮಾಡಿಸಿ ತೃಪ್ತಿಪಡಿಸಿ, ಬಳಿಕ ದಕ್ಷಿಣೆಯನ್ನು ಕೊಟ್ಟು ವಿತ್ತಶಾಠ್ಯವನ್ನು (ನಮ್ಮಲ್ಲಿ ಹಣವಿದೆಯೆಂಬ ಗರ್ವವನ್ನು) ಮಾಡದೆ ಮೆರೆದಿದ್ದರೆ ಅವರೇ ಶಿವದ್ವಿಜರೆಂಬದಾಗಿ ಹೇಳಿಸಿಕೊಂಡು ಲೋಕಪೂಜ್ಯರಾಗುತ್ತಾರೆ. ಮತ್ತು ಇಂತೊಪ್ಪುವ ಶಿವದ್ವಿಜರಿಂದಲೇ, ಆ ವಂಶದವರೆಲ್ಲರು ತಮ್ಮ ತಮ್ಮ ಸಂಪ್ರದಾಯಕ್ಕೆ ಸಲ್ಲುವ ಅರ್ಚನಾದಿ ಕ್ರಿಯೆಗಳನ್ನು ಮಾಡಿಸಿಕೊಳ್ಳಬೇಕು. ಈ ರೀತಿಯಾಗಿ ಮೆರೆದಿರುವವರೇ ಆದಿಶೈವರೆಂಬದಾಗಿ ಹೇಳಿಸಿಕೊಳ್ಳುವರು. ||೧೪|| ಮತ್ತು ಎಲೈ ಶಿವೆಯೇ ಶೈವ ಸಿದ್ಧಾಂತೋಕ್ತ ಮಾರ್ಗ ಕ್ರಮದಿಂದ ಶಿವದೀಕ್ಷಾ ಸಂಸ್ಕಾರವನ್ನು ಹೊಂದಿರತಕ್ಕ ಬ್ರಾಹ್ಮಣರೇ ಮಹಾಶೈವರಾಗಿರುವರು. ಮತ್ತು ಇವರೇ ಮಹಾಂತರು ಲೋಕಪೂಜಿತರು ಎನಿಸಿಕೊಳ್ಳುವರು. ||೧೫|| ಮತ್ತು ಶಿವದೀಕ್ಷಾಸಂಸ್ಕಾರವನ್ನು ಹೊಂದಿದ ಕ್ಷತ್ರಿಯರು ವೈಶ್ಯರೇ ಅನುಶೈವರೆಂಬದಾಗಿ ಹೇಳಿಸಿಕೊಳ್ಳುವರು. ಮತ್ತು ಶೂದ್ರರು ಶಿವದೀಕ್ಷಾಸಂಸ್ಕಾರವನ್ನು ಹೊಂದಿದ್ದೇ ಆದರೆ ಅವರೇ ಅವಾಂತರಶೈವರೆಂಬದಾಗಿ ಹೇಳಿಸಿಕೊಳ್ಳುವರು. ||೧೬|| ಮತ್ತೂ ಕುಂಬಾರರು, ಗಾರುಡಿಗರು ಮೊದಲಾದವರು ಶಿವದೀಕ್ಷಾಸಂಸ್ಕಾರವನ್ನು ಪಡೆದದ್ದೇ ಆದರೆ ಅವರೇ ಪ್ರವರ ಶೈವರೆಂಬದಾಗಿ ಹೇಳಿಸಿಕೊಳ್ಳುವರು. ಮತ್ತು ಉಳಿದ ಅಂತ್ಯಜಾತಿಯವರೆಲ್ಲರೂ ಕೂಡ ಶಿವದೀಕ್ಷಾಸಂಸ್ಕಾರವನ್ನು ಹೊಂದಿದ್ದೇ ಆದರೆ ಅವರೆಲ್ಲರು ಅಂತ್ಯಶೈವರೆಂಬದಾಗಿ ಹೇಳಿಸಿಕೊಳ್ಳುತ್ತಾರೆ ||೧೭|| ಈ ರೀತಿಯಾಗಿ ನನ್ನಿಂದ ಜಾತಿಭೇದಕ್ರಮವನ್ನು ಅನುಸರಿಸಿ ಶೈವಭೇದಗಳು ಹೇಳಲ್ಪಟ್ಟುವು.

ಆಚಾರಭೇದಕ್ರಮೋತ್ಪನ್ನಶೈವಭೇದಾಃ—ಆಚಾರಭೇದಾಚ್ಛೈವ ಪ್ರಭೇದವಸ್ಸಾಂ ಕಥ್ಯತೇಧುನಾ||೧೮||ಸಾಮಾನ್ಯಶೈವಂಪ್ರಥಮಂಮಿಶ್ರಶೈವಂತತಃಪರಂ।ಶುದ್ಧಶೈವಂತತೋಜ್ಞೇಯಂವೀರಶೈವಂತತಃಪರಂ ||೧೯|| ಏತೇಷಾಂಲಕ್ಷಣಂವಕ್ಷ್ಯೇ ಶೃಣುದೇವಿಯಥಾಕ್ರಮಂ ||

ಸಾಮಾನ್ಯಶೈವಲಕ್ಷಣಂ—ಸಾಮಾನ್ಯಭೇದಃಪೂಜಾದಿಶ್ಶಿವಸ್ಯಪರಮಾತ್ಮನಃ ||೨೦|| ಸರ್ವತ್ರಶಿವಭಾವಶ್ಚ ಸಾಮಾನ್ಯಮಿತಿಗೀಯತೆ। ಯದಾಯದಾ ಶಿವಂಪಶ್ಯೇ ತ್ತದಾ ಕುರ್ಯಾಚ್ಛಿವಾರ್ಚನಂ ||೨೧|| ಪ್ರದಕ್ಷಿಣನಮಸ್ಕಾರಾ ದರ್ಶನಂವಾಸಮಾಚರೇತ್ । ನಾಸ್ತಿಚೈಷಾಂಚನಿಯಮೋ. ಯಥಾಸಂಭವಮಾಚರೇತ್॥೨೨॥ ಶಿವಚಿಹ್ನೇಷುಭಕ್ತೇಷು ಶಿವಕಾರ್ಯೇಷುಪಾರ್ವತಿ । ಭಕ್ತಿಂಕುರ್ವೀತಸತತಂ ಮನೋವಾಕ್ಕಾಯಕರ್ಮಭಿಃ ॥೨೩॥ ಸಾಮಾನ್ಯಶೈವ ಮಾಖ್ಯಾತಂ ಮಿಶ್ರಶೈವಮಥಶೃಣು ||

—ಆಚಾರಭೇದದಿಂದ ಕ್ರಮವಾಗಿ ಉತ್ಪನ್ನಗಳಾದ ಶೈವಭೇದಗಳು.—

ಎಲೈ ಪಾರ್ವತಿಯೇ! ಆಚಾರಭೇದದಿಂದ ಉತ್ಪನ್ನವಾದ ಶೈವಭೇದವನ್ನು ಈಗಹೇಳುತ್ತೇನೆ ಕೇಳು. ||೧೮|| ಸಾಮಾನ್ಯಶೈವವೇ ಮೊದಲನೆಯದು, ಮಿಶ್ರಶೈವವೇ ಎರಡನೆಯದು, ಶುದ್ಧಶೈವವೇ ಮೂರನೆಯದು, ಬಳಿಕ ವೀರಶೈವವೇ ನಾಲ್ಕನೆಯದು. ಎಲೈ—ದೇವಿಯೇ! ಕ್ರಮವಾಗಿ ಇವುಗಳ ಲಕ್ಷಣವನ್ನು ಹೇಳುತ್ತೇನೆ ಕೇಳು

—ಸಾಮಾನ್ಯಶೈವ ಲಕ್ಷಣವು.—

ಪರಮಾತ್ಮನಾದ ಶಿವನಿಗೆ ಸಾಮಾನ್ಯಭಾವದಿಂದ ಪೂಜೆಯು ಮೊದಲಾದ ಕ್ರಿಯೆಯನ್ನು ಮಾಡುವಿಕೆಯೇ ಸಾಮಾನ್ಯಶೈವಕ್ಕೆ ಲಕ್ಷಣವಾಗಿರುವುದು. ||೨೦|| ಇದೂ ಅಲ್ಲದೆ ಈ ಜಗತ್ತಿನಲ್ಲಿರುವ ಸಮಸ್ತವೂ ಕೂಡ ಶಿವಮಯವಾದದ್ದೆಂಬದಾಗಿ ತಿಳಿಯುವ ಭಾವವೇ ಈ ಶೈವಕ್ಕೆ ಸಾಮಾನ್ಯ ಲಕ್ಷಣವೆಂಬದಾಗಿ ಹೇಳಲ್ಪಟ್ಟಿರುವುದು. ಮತ್ತೂ ಈ ಸಾಮಾನ್ಯ ಶೈವಮತಸ್ಥನು ಯಾವ ಯಾವಾಗ ಶಿವನನ್ನುನೋಡುತ್ತಾನೋ ಆಗಾಗಲೇ ಶಿವನ ದರ್ಶನವನ್ನೂ ಶಿವನ ಪೂಜೆಯನ್ನೂ ಪ್ರದಕ್ಷಿಣ ನಮಸ್ಕಾರಗಳನ್ನೂ ಆಚರಿಸಬೇಕು. ಈ ಶೈವನಿಗೆ ಹೀಗೆಯೇ ಮಾಡಬೇಕೆಂಬ ವಿಧನಿಯಮವಿಲ್ಲ. ತನಗೆ ಶಿವನ ಸನ್ನಿಧಿಯು ಲಭಿಸಿದರೆ ಪೂಜಾದಿಕ್ರಿಯೆಗಳನ್ನು ಆಚರಿಸುವುದು, ಲಭಿಸದಿದ್ದರೆ ಇಲ್ಲ. ||೨೨|| ಮತ್ತೂ ಎಲೈ ಪಾರ್ವತಿಯೆ! ಶಿವಲಾಂಛನಧಾರಕರಾದ ಭಕ್ತರುಗಳಲ್ಲಿಯೂ, ಶಿವಕಾರ್ಯಗಳಲ್ಲಿಯೂ ಕೂಡ ಯಾವಾಗಲೂ ಮನಸ್ಸಿನಿಂದಲೂ ವಾಕ್ಕಿನಿಂದಲೂ ಕಾಯದಿಂದಲೂ ಕರ್ಮಗಳಿಂದಲೂ ಕೂಡ ಈ ಶೈವನು ಭಕ್ತಿಯನ್ನು ಮಾಡಬೇಕು. ||೨೩|| ಇದೇ ಸಾಮಾನ್ಯ ಶೈವರ ಲಕ್ಷಣವಾಗಿರುವುದು. ಎಲೈ ಪಾರ್ವತಿಯೇ! ಬಳಿಕ ಮಿಶ್ರಶೈವ ಲಕ್ಷಣವನ್ನು ಹೇಳುತ್ತೇನೆ ಕೇಳು.

ಮಿಶ್ರಶೈವಲಕ್ಷಣಂ—ಶಿವಂವಿಷ್ಣುಂಚಬ್ರಹ್ಮಾಣಂ ಕುಮಾರಂಗಣನಾಯಕಂ॥೨೪॥ಆದಿತ್ಯಮಂಬಿಕಾಂಚೈವ ಮಿಶ್ರೀಕೃತ್ಯಸಮರ್ಚನಂ। ಸರ್ವತ್ರದೇವತಾಬುದ್ಧಿರ್ಮಾಹಾತ್ಮ್ಯಂಶಿವಸ್ಯವಾ ॥೨೫॥ ಶಿವಧರ್ಮಾಸ್ಯಧರ್ಮಾಣಾಂ ಸಮಾಚರಣಮಾದರಾತ್ । ಅನ್ಯಪೂಜಾಮಿಶ್ರಿತತ್ವಾತ್ಸ್ಮಿಶ್ರಶೈವಮುದಾಹೃತಂ ॥೨೬॥

ಶುದ್ಧಶೈವ ಲಕ್ಷಣಂ—ಅತಃಪರಂಶುದ್ಧಶೈವಂವಕ್ಷ್ಯಾಮಿಶೃಣುಪಾರ್ವತಿ।ಶುದ್ಧಶೈವಮಿತಿಪ್ರೋಕ್ತಂತಸ್ಮಿಂಶೈವಮುಚ್ಯತೇ॥೨೭॥ ಉಭಯೋಸ್ಸಂಪುಟೀಭಾವಾಚ್ಛುದ್ಧಶೈವಮಿತಿಸ್ಮೃತಂ। ಏಕಏವಮಹಾದೇವಸ್ಸಾಂಬಸ್ಸತ್ಯಾದಿಲಕ್ಷಣಃ ॥೨೮॥ ತದನ್ಯದೇವಾಸ್ತದ್ಭಕ್ತಾಸ್ತದುದ್ಭೂತಾಸ್ತದಾಶ್ರಿತಾಃ। ಶಿವಪೂಜಾವೇಳಾಯಾಮನ್ಯೇದೇವಸತ್ತಮಾಃ ॥೨೯॥

—ಮಿಶ್ರಶೈವರ ಲಕ್ಷಣವು.—

ಶಿವನನ್ನೂ, ವಿಷ್ಣುವನ್ನೂ, ಬ್ರಹ್ಮನನ್ನೂ, ಷಣ್ಮುಖನನ್ನೂ, ಗಣಪತಿಯನ್ನೂ, ಸೂರ್ಯನನ್ನೂ, ಅಂಬಿಕೆಯನ್ನೂ ಕೂಡ ಮಿಶ್ರವಾಗಿ ಪೂಜಿಸುವಿಕೆಯೂ ಸರ್ವತ್ರ ದೇವತಾಬುದ್ಧಿಯೂ, ಎಲ್ಲಾ ದೇವತೆಗಳೊಳಗೂ ಶಿವನೇ ಮಹಿಮಾಶಾಲಿಯೆಂಬ ಭಾವವೂ, ಶಿವಧರ್ಮಗಳನ್ನೂ ಅನ್ಯಧರ್ಮಗಳನ್ನೂ ಆದರದಿಂದ ಆಚರಿಸುವಿಕೆಯೂ ಕೂಡ ಮಿಶ್ರಶೈವರ ಲಕ್ಷಣವಾಗಿರುವುವು. ಆದುದರಿಂದ ಮುಖ್ಯವಾಗಿ ಶಿವಾರ್ಚನೆಯ ಜೊತೆಯಲ್ಲಿ ಇತರ ದೇವತಾರ್ಚನೆಗಳನ್ನೂ, ಶಿವಧರ್ಮಾಚರಣೆಯ ಜೊತೆಯಲ್ಲಿ ಇತರ ಧರ್ಮಾಚರಣೆಗಳನ್ನೂ ಮಾಡುವವರು ಆರೋ ಅವರೇ ಮಿಶ್ರಶೈವರೆಂಬದಾಗಿ ಹೇಳಿಸಿಕೊಳ್ಳುವರು. ॥೨೬॥

—ಶುದ್ಧಶೈವರ ಲಕ್ಷಣವು.—

ಅನಂತರ ಎಲೈ ಪಾರ್ವತಿಯೇ ! ಇನ್ನು ಶುದ್ಧಶೈವ ಲಕ್ಷಣವನ್ನು ಹೇಳುತ್ತೇನೆ ಕೇಳು:—ಪರಶಿವನೊರ್ವನಲ್ಲಿಯೇ ಆವನಿಗೆ ಶುದ್ಧವಾದ ಭಾವನೆ ಇರುವುದೋ ಅವನೇ ಶುದ್ಧ ಶೈವನೆನಿಸುವನು. ಆ ಶುದ್ಧ ಶೈವದಿಂದಲೇ ಶೈವವು ಉತ್ಪನ್ನವಾಯಿತು. ಮತ್ತೂ ಈ ಶುದ್ಧ ಶೈವವು ಸಾಮಾನ್ಯ ಶೈವವನ್ನೂ ಮಿಶ್ರಶೈವವನ್ನೂ ಆವರಣವಾ ಮಾಡಿಕೊಂಡು ತಾನು ಪ್ರತ್ಯೇಕವಾಗಿ ಶುದ್ಧವಾಗಿರುವುದರ ದೆಸೆಯಿಂದ ಶುದ್ಧಶೈವವೆಂಬದಾಗಿ ಹೇಳಿಸಿಕೊಂಡಿತು. ಮಹಾದೇವನು ಒಬ್ಬನೇ ಉಪಾಸ್ಯನು, ಆತನು ಸಾಂಬನೂ ಸಚ್ಚಿದಾನಂದಾದಿ ಲಕ್ಷಣ ಲಕ್ಷಿತನೂ ಆಗಿರುವನು. ಮತ್ತೂ ಆ ಪರಶಿವನಿಗಿಂತಲೂ ಇತರರಾದ ವಿಷ್ಣು ಬ್ರಹ್ಮಾದಿ ದೇವತೆಗಳೆಲ್ಲರೂ ಆ ಶಿವನ ಭಕ್ತರು, ಆ ಪರಶಿವನಿಂದ ಉತ್ಪನ್ನರಾದವರು ಆ ಪರಶಿವನನ್ನು ಆಶ್ರಯಿಸಿಕೊಂಡಿರುವವರೇ ಆಗಿರುವರು ಎಂಬ ಭಾವನೆಯಿರಬೇಕು. ಮತ್ತೂ ಶುದ್ಧ ಶೈವನು ತಾನು ಶಿವಾರ್ಚನೆಯನ್ನು ಮಾಡುವಾಗ ಇತರ ದೇವತೆಗಳನ್ನೆಲ್ಲಾ ಆವ

ತೇಷಾಮಾವರಣತ್ವೇನಪೂಜಾಂಕುರ್ಯಾನ್ನಚಾನ್ಯಥಾ। ಗುರುಣಾವತ್ತಲಿಂಗಂತುಕರಪೀಠೇಪಿವಾಯಜೇತ್ ॥೩೦॥ ಗುರೂಪದಿಷ್ಟನಿಯಮಂಸಾವಧಾನಂಸಮಾಚರೇತ್ । ಪ್ರಮಾದಾತ್ಪತಿತೇಲಿಂಗೇನಷ್ಟೇದಗ್ಧೇಹೃತೇಪಿವಾ॥ವಿನಿರ್ಗತೇತಥಾಪೀಠಾತ್ಯೇನಕೇನಚದೂಷಿತೆ।ಗುರುಪಾದಾಂಬುಜಂಸ್ಮೃತ್ವಾಜಪತ್ವಘೋರಂತದಾಜ್ಞಯಾ ॥೩೧॥ ತಲ್ಲಿಂಗಮೇವವಾನ್ಯದ್ವಾಧಾರಯೇತ್ಪೂಜಯೇತ್ಪುನಃ। ಪ್ರಮಾದಾನ್ನಿಯಮೇಲುಪ್ತೇಮೂಲಪಂಚಾಕ್ಷರಿಂಜಪೇತ್ ॥೩೨॥ ಪ್ರಾಯಶ್ಚಿತ್ತಮಿದಂದೇವಿವ್ರತಜಾತಾದಿಲೋಪನೆ। ಶುದ್ಧಶೈವಮಿತಿಪ್ರೋಕ್ತಂಪುನಶ್ಶೈವಂಚತುರ್ವಿಧಂ॥೩೩॥ವಾಮಂಚದಕ್ಷಿಣಂಚೈವಮಿಶ್ರಂಸಿದ್ಧಾಂತಸಂಜ್ಞಿತಂ । ಶಕ್ತಿಪ್ರಧಾನಂವಾಮಾಖ್ಯಂದಕ್ಷಿಣಂಭೈರವಾತ್ಮಕಂ ॥೩೪॥ ಸಪ್ತಮಾತೃಪರಂಮಿಶ್ರಂಸಿದ್ಧಾಂತಂವೇದಸಂಮತಂ। ವೇದಧರ್ಮಾಭಿಧಾಯಿತ್ವಾತ್ಸಿದ್ಧಾಂತಾಖ್ಯಶ್ರಿ

ರಣ ದೇವತೆಗಳನ್ನಾಗಿಯೂ ಮಾಡಿಕೊಂಡು ಪೂಜಿಸಕೂಡದು. ಹಾಗಾಗದಿದ್ದ ಪಕ್ಷದಲ್ಲಿ ತನ್ನ ಗುರುವಿನಿಂದ ಕೊಡಲ್ಪಟ್ಟ ಲಿಂಗವನ್ನು ಕರಪೀಠದಲ್ಲಾ ದರೂ ಪೂಜಿಸಬೇಕು ॥೩೦॥ ತನ್ನ ಗುರುವಿನಿಂದ ಉಪದೇಶಿಸಲ್ಪಟ್ಟ ನಿಯಮವನ್ನು ಸಾವಧಾನಚಿತ್ತನಾಗಿ ಆಚರಿಸಬೇಕು. ಒಂದು ವೇಳೆ ಗುರುವಿನಿಂದ ಕೊಡಲ್ಪಟ್ಟ ಲಿಂಗವು ಪ್ರಮಾದವಶದಿಂದ ಬಿದ್ದು ಹೋದರೂ ನಾಶವಾದರೂ ಸುಟ್ಟುಹೋದರೂ ಮತ್ತೊಬ್ಬರಿಂದ ಅಪಹರಿಸಲ್ಪಟ್ಟರೂ ಮತ್ತು ಲಿಂಗವು ತನ್ನ ಪೀಠದಿಂದ ಕಳೆದು ಬಿದ್ದರೂ ಮತ್ತಾವ ಕಾರಣದಿಂದದೂಷಿತವಾದರೂ ಕೂಡ ಆ ಕಾಲದಲ್ಲಿ ಗುರುಪಾದ ಕಮಲವನ್ನು ಸ್ಮರಿಸಿ, ಆ ಶ್ರೀಗುರುವಿನ ಆಜ್ಞೆಯಿಂದ ಅಘೋರಮಂತ್ರವನ್ನು ಜಪಿಸಬೇಕು. ಆತನ್ನಲಿಂಗವನ್ನೇ ಆದರೂ, ಅಥವಾ ಮತ್ತೊಂದನ್ನಾದರೂಕೂಡ ಧರಿಸಬೇಕು. ಮತ್ತೆ ಪೂರ್ವದ ಹಾಗೆಯೇ ಪೂಜಿಸಬೇಕು. ಏನಾದರೂ ಪ್ರಮಾದವಶದಿಂದ ತಾನು ಆಚರಿಸತಕ್ಕ ನಿಯಮವೇನಾದರೂ ಲೋಪವಾದ ಪಕ್ಷದಲ್ಲಿ ಆ ಕ್ಷಣದಲ್ಲಿಯೇ ಮೂಲ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು. ॥೩೨॥ ಎಲೈ ಪಾರ್ವತಿಯೇ! ಪೂಜಾವ್ರತಗಳೇನಾದರೂ ಲೋಪವಾದರೆ ಇದೇ ಶುದ್ಧ ಶೈವನಿಗೆ ಪ್ರಾಯಶ್ಚಿತ್ತವು. ಇದೇ ಶುದ್ಧ ಶೈವವೆಂಬದಾಗಿ ಹೇಳಲ್ಪಟ್ಟಿತು. ಬಳಿಕ ನನ್ನಿಂದ ಹೇಳಲ್ಪಟ್ಟ ಶಾಸ್ತ್ರಗಳು ನಾಲ್ಕು ವಿಭಾಗವಾದ ವರ್ಣನವನ್ನು ಹೇಳುತ್ತೇನೆ ಕೇಳು:-॥೩೩॥ ನನ್ನಿಂದ ಹೇಳಲ್ಪಟ್ಟ ಶಾಸ್ತ್ರವು ವಾಮವೆಂತಲೂ, ದಕ್ಷಿಣವೆಂತಲೂ, ಮಿಶ್ರವೆಂತಲೂ, ಸಿದ್ಧಾಂತವೆಂತಲೂ ನಾಲ್ಕು ವಿಭಾಗವಾಗಿರುವುದು. ಇವುಗಳೊಳಗೆ ಶಕ್ತಿಯನ್ನು ಪ್ರಧಾನವಾಗಿ ಮಾಡಿಕೊಂಡು ಹೇಳತಕ್ಕದ್ದೇ ವಾಮ ಎಂಬದಾಗಿ ಹೇಳಿಸಿಕೊಂಡಿತು, ಭೈರವನನ್ನು ಪ್ರಧಾನವಾಗಿ ಮಾಡಿಕೊಂಡು ಹೇಳತಕ್ಕದ್ದೇ ದಕ್ಷಿಣ ಎಂಬದಾಗಿ ಹೇಳಿಸಿ

ಮಿಶ್ರಶೈವಲಕ್ಷಣಂ—ಶಿವಂವಿಷ್ಣುಂಚಬ್ರಹ್ಮಾಣಂ ಕುಮಾರಂಗಣನಾಯಕಂ॥೨೪॥ಆದಿತ್ಯಮಂಬಿಕಾಂಚೈವ ಮಿಶ್ರೀಕೃತ್ಯಸಮರ್ಚನಂ। ಸರ್ವತ್ರದೇವತಾಬುದ್ಧಿರ್ಮಾಹಾತ್ಮ್ಯಂಶಿವಸಿವಾ ॥೨೫॥ ಶಿವಧರ್ಮಾನ್ಯಧರ್ಮಾಣಾಂಸಮಾಚರಣಸಾದರಾತ್ । ಅನ್ಯಪೂಜಾಮಿಶ್ರಿತತ್ವಾನ್ಮಿಶ್ರಶೈವಮುದಾಹೃತಂ ॥೨೬॥

ಶುದ್ಧಶೈವ ಲಕ್ಷಣಂ—ಅತಃಪರಂಶುದ್ಧಶೈವಂವಕ್ಷ್ಯಾಮಿಶೃಣುಪಾರ್ವತಿ। ಶುದ್ಧಶೈವಮಿತಿಪ್ರೋಕ್ತಂತಚ್ಛೈವಂಶೈವಮುಚ್ಯತೇ॥೨೭॥ ಉಭಯೋಸ್ಸಂಪುಟೀಭಾವಾಚ್ಛುದ್ಧಶೈವಮಿತಿಸ್ಮೃತಂ। ಏಕಏವಮಹಾದೇವಸ್ಸಾಂಬಸ್ಸತ್ಯಾದಿಲಕ್ಷಣಃ ॥೨೮॥ ತದನ್ಯದೇವಾಸ್ತದ್ಭಕ್ತಾಸ್ತದುದ್ಭೂತಾಸ್ತದಾಶ್ರಿತಾಃ। ಶಿವಸ್ಯಪೂಜಾವೇಳಾಯಾಮಿಯೇಚಾನ್ಯೇದೇವಸತ್ತಮಾಃ ॥೨೯॥

—ಮಿಶ್ರಶೈವರ ಲಕ್ಷಣವು.—

ಶಿವನನ್ನೂ, ವಿಷ್ಣುವನ್ನೂ, ಬ್ರಹ್ಮನನ್ನೂ, ಷಣ್ಮುಖನನ್ನೂ, ಗಣಪತಿಯನ್ನೂ, ಸೂರ್ಯನನ್ನೂ, ಅಂಬಿಕೆಯನ್ನೂ ಕೂಡ ಮಿಶ್ರವಾಗಿ ಪೂಜಿಸುವಿಕೆಯೂ ಸರ್ವತ್ರ ದೇವತಾಬುದ್ಧಿಯೂ, ಎಲ್ಲಾ ದೇವತೆಗಳೊಳಗೂ ಶಿವನೇ ಮಹಿಮಾಶಾಲಿಯೆಂಬ ಭಾವವೂ, ಶಿವಧರ್ಮಗಳನ್ನೂ ಅನ್ಯಧರ್ಮಗಳನ್ನೂ ಆದರದಿಂದ ಆಚರಿಸುವಿಕೆಯೂ ಕೂಡ ಮಿಶ್ರಶೈವರ ಲಕ್ಷಣವಾಗಿರುವುವು. ಆದುದರಿಂದ ಮುಖ್ಯವಾಗಿ ಶಿವಾರ್ಚನೆಯ ಜೊತೆಯಲ್ಲಿ ಇತರ ದೇವತಾರ್ಚನೆಗಳನ್ನೂ, ಶಿವಧರ್ಮಾಚರಣೆಯ ಜೊತೆಯಲ್ಲಿ ಇತರ ಧರ್ಮಾಚರಣೆಗಳನ್ನೂ ಮಾಡುವವರು ಆರೋ ಅವರೇ ಮಿಶ್ರಶೈವರೆಂಬದಾಗಿ ಹೇಳಿಸಿಕೊಳ್ಳುವರು. ॥೨೬॥

—ಶುದ್ಧಶೈವರ ಲಕ್ಷಣವು.—

ಅನಂತರ ಎಲೈ ಪಾರ್ವತಿಯೇ ! ಇನ್ನು ಶುದ್ಧಶೈವ ಲಕ್ಷಣವನ್ನು ಹೇಳುತ್ತೇನೆ ಕೇಳು:—ಪರಶಿವನೊಡನೆ ಯಾವನಿಗೆ ಶುದ್ಧವಾದ ಭಾವನೆ ಇರುವುದೋ ಅವನೇ ಶುದ್ಧ ಶೈವನೆನಿಸುವನು. ಆ ಶುದ್ಧ ಶೈವದಿಂದಲೇ ಶೈವವು ಉತ್ಪನ್ನವಾಯಿತು. ಮತ್ತೂ ಈ ಶುದ್ಧ ಶೈವವು ಸಾಮಾನ್ಯ ಶೈವವನ್ನೂ ಮಿಶ್ರಶೈವನ್ನೂ ಆವರಣವಾ ಮಾಡಿಕೊಂಡು ತಾನು ಪ್ರತ್ಯೇಕವಾಗಿ ಶುದ್ಧವಾಗಿರುವುದರ ದೆಸೆಯಿಂದ ಶುದ್ಧಶೈವವೆಂಬದಾಗಿ ಹೇಳಿಸಿಕೊಂಡಿತು. ಮಹಾದೇವನು ಒಬ್ಬನೇ ಉಪಾಸ್ಯನು. ಆತನು ಸಾಂಬನೂ ಸಚ್ಚಿದಾನಂದಾದಿ ಲಕ್ಷಣ ಲಕ್ಷಿತನೂ ಆಗಿರುವನು. ಮತ್ತೂ ಆ ಪರಶಿವನಿಗಿಂತಲೂ ಇತರರಾದ ವಿಷ್ಣು ಬ್ರಹ್ಮಾದಿ ದೇವತೆಗಳೆಲ್ಲರೂ ಆ ಶಿವನ ಭಕ್ತರು, ಆ ಪರಶಿವನಿಂದ ಉತ್ಪನ್ನರಾದವರು ಆ ಪರಶಿವನನ್ನು ಆಶ್ರಯಿಸಿಕೊಂಡಿರುವವರೇ ಆಗಿರುವರು ಎಂಬ ಭಾವನೆಯಿರಬೇಕು. ಮತ್ತೂ ಶುದ್ಧ ಶೈವನು ತಾನು ಶಿವಾರ್ಚನೆಯನ್ನು ಮಾಡುವಾಗ ಇತರ ದೇವತೆಗಳನ್ನೆಲ್ಲಾ ಆವ

ತೇಷಾಮಾವರಣತ್ವೇನಪೂಜಾಂಕುರ್ಯಾನ್ನಚಾನ್ಯಥಾ। ಗುರುಣಾದತ್ತಲಿಂಗಂತು ಕರಪೀಠೇಪಿವಾಯಜೇತ್ ॥೩೧॥ ಗುರೂಪದಿಷ್ಟನಿಯಮಂಸಾವಧಾನಂಸಮಾಚರೇತ್ । ಪ್ರಮಾದಾತ್ಪತಿತೇಲಿಂಗೇನಷ್ಟೇದಗ್ಧೇಹೃತೇಪಿವಾ॥ವಿನಿರ್ಗತೇತಥಾಪೀಠಾನ್ಯೇನಕೇನಚದೂಷಿತೇ।ಗುರುಪಾದಾಂಬುಜಂಸ್ಮೃತ್ವಾಜಪ್ತ್ವಾಽಘೋರಂತದಾಜ್ಞಯಾ ॥೩೨॥ ತಲ್ಲಿಂಗಮೇವವಾನ್ಯದ್ವಾಧಾರಯೇತ್ಪೂಜಯೇತ್ಪುನಃ। ಪ್ರಮಾದಾನ್ನಿಯಮೇಲುಪ್ತೇಮೂಲಪಂಚಾಕ್ಷರೀಂಜಪೇತ್ ॥೩೩॥ ಪ್ರಾಯಶ್ಚಿತ್ತಮಿದಂದೇವಿವ್ರತಜಾತಾದಿಲೋಪನೇ। ಶುದ್ಧಶೈವಮಿತಿಪ್ರೋಕ್ತಂಪುನಶ್ಶೈವಂಚತುರ್ವಿಧಂ॥೩೪॥ವಾಮಂಚದಕ್ಷಿಣಂಚೈವಮಿಶ್ರಂಸಿದ್ಧಾಂತಸಂಜ್ಞಿತಂ। ಶಕ್ತಿಪ್ರಧಾನಂವಾಮಾಖ್ಯಂದಕ್ಷಿಣಂಭೈರವಾತ್ಮಕಂ ॥೩೫॥ ಸಪ್ತಮಾತೃಪರಂಮಿಶ್ರಂಸಿದ್ಧಾಂತಂವೇದಸಂಮತಂ। ವೇದಧರ್ಮಾಭಿಧಾಯಿತ್ವಾತ್ಸಿದ್ಧಾಂತಾಖ್ಯಶಿ

ರಣ ದೇವತೆಗಳನ್ನಾಗಿಯೂ ಮಾಡಿಕೊಂಡು ಪೂಜಿಸಕೂಡದು. ಹಾಗಾಗದಿದ್ದ ಪಕ್ಷದಲ್ಲಿ ತನ್ನ ಗುರುವಿನಿಂದ ಕೊಡಲ್ಪಟ್ಟ ಲಿಂಗವನ್ನು ಕರಪೀಠದಲ್ಲಾದರೂ ಪೂಜಿಸಬೇಕು ॥೩೧॥ ತನ್ನ ಗುರುವಿನಿಂದ ಉಪದೇಶಿಸಲ್ಪಟ್ಟ ನಿಯಮವನ್ನು ಸಾವಧಾನಚಿತ್ತನಾಗಿ ಆಚರಿಸಬೇಕು. ಒಂದು ವೇಳೆ ಗುರುವಿನಿಂದ ಕೊಡಲ್ಪಟ್ಟ ಲಿಂಗವು ಪ್ರಮಾದವಶದಿಂದ ಬಿದ್ದು ಹೋದರೂ ನಾಶವಾದರೂ ಸುಟ್ಟುಹೋದರೂ ಮತ್ತೊಬ್ಬರಿಂದ ಅಪಹರಿಸಲ್ಪಟ್ಟರೂ ಮತ್ತು ಲಿಂಗವು ತನ್ನ ಪೀಠದಿಂದ ಕಳೆದು ಬಿದ್ದರೂ ಮತ್ತಾವ ಕಾರಣದಿಂದದೂಷಿತವಾದರೂ ಕೂಡ ಆ ಕಾಲದಲ್ಲಿ ಗುರುಪಾದ ಕಮಲವನ್ನು ಸ್ಮರಿಸಿ, ಆ ಶ್ರೀಗುರುವಿನ ಆಜ್ಞೆಯಿಂದ ಅಘೋರಮಂತ್ರವನ್ನು ಜಪಿಸಬೇಕು. ಆತನ್ನಲಿಂಗವನ್ನೇ ಆದರೂ, ಅಥವಾ ಮತ್ತೊಂದನ್ನಾದರೂಕೂಡ ಧರಿಸಬೇಕು. ಮತ್ತೂ ಪೂರ್ವದ ಹಾಗೆಯೇ ಪೂಜಿಸಬೇಕು. ಏನಾದರೂ ಪ್ರಮಾದವಶದಿಂದ ತಾನು ಆಚರಿಸತಕ್ಕ ನಿಯಮವೇನಾದರೂ ಲೋಪವಾದ ಪಕ್ಷದಲ್ಲಿ ಆ ಕ್ಷಣದಲ್ಲಿಯೇ ಮೂಲ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು. ॥೩೩॥ ಎಲೈ ಪಾರ್ವತಿಯೇ! ಪೂಜಾವ್ರತಗಳೇನಾದರೂ ಲೋಪವಾದರೆ ಇದೇ ಶುದ್ಧ ಶೈವನಿಗೆ ಪ್ರಾಯಶ್ಚಿತ್ತವು. ಇದೇ ಶುದ್ಧ ಶೈವವೆಂಬುದಾಗಿ ಹೇಳಲ್ಪಟ್ಟಿತು. ಬಳಿಕ ನನ್ನಿಂದ ಹೇಳಲ್ಪಟ್ಟ ಶಾಸ್ತ್ರಗಳು ನಾಲ್ಕು ವಿಭಾಗವಾದ ಮರ್ಮವನ್ನು ಹೇಳುತ್ತೇನೆ ಕೇಳು:-॥೩೪॥ ನನ್ನಿಂದ ಹೇಳಲ್ಪಟ್ಟ ಶಾಸ್ತ್ರವು ವಾಮವೆಂತಲೂ, ದಕ್ಷಿಣವೆಂತಲೂ, ಮಿಶ್ರವೆಂತಲೂ, ಸಿದ್ಧಾಂತವೆಂತಲೂ ನಾಲ್ಕು ವಿಭಾಗವಾಗಿರುವುವು. ಇವುಗಳೊಳಗೆ ಶಕ್ತಿಯನ್ನು ಪ್ರಧಾನವಾಗಿ ಮಾಡಿಕೊಂಡು ಹೇಳತಕ್ಕದ್ದೇ ವಾಮ ಎಂಬುದಾಗಿ ಹೇಳಿಸಿಕೊಂಡಿತು, ಭೈರವನನ್ನು ಪ್ರಧಾನವಾಗಿ ಮಾಡಿಕೊಂಡು ಹೇಳತಕ್ಕದ್ದೇ ದಕ್ಷಿಣ ಎಂಬುದಾಗಿ ಹೇಳಿಸಿ

ವಾಗಮಃ ॥೩೬॥ ವೇದಬಾಹ್ಯವಿರೋಧಿತ್ವಾದ್ವೇದಸಂಮತಉಚ್ಯತೇ ।
ಸಿದ್ಧಾಂತಾಖ್ಯೇಮಹಾತಂತ್ರೇಕಾಮಿಕಾದ್ಯೇಶಿವೋದಿತೇ ॥೩೭॥ ನಿರ್ದಿ
ಷ್ಟಮುತ್ತರೇಭಾಗೇವೀರಶೈವಮತಂಪರಂ ॥

—ವೀರಶೈವ ಮತಲಕ್ಷಣಂ.—

ವಿದ್ಯಾಯಾಂಶಿವರೂಪಾಯಾಂ ವಿಶೇಷಾದ್ರಮಣಂಯತಃ ॥೩೮॥
ತಸ್ಮಾದೇತೇಮಹಾಭಾಗಾವೀರಶೈವಾಇತಿಸ್ಮೃತಾಃ । ವಿಶಬ್ದೇನೋಚ್ಯ
ತೇವಿದ್ಯಾಶಿವಜೀವೈಕ್ಯಬೋಧಿನೀ ॥೩೯॥ ತಸ್ಯಾಂರಮಂತೇಯೇಶೈವಾ

ಕೊಂಡಿತು. ಸಪ್ತಮಾತೃಪರವಾದದ್ದೇ ಮಿಶ್ರವೆಂಬದಾಗಿ ಹೇಳಿಸಿಕೊಂಡಿತು. ವೇದಸಮ್ಮತವಾದದ್ದೇ ಸಿದ್ಧಾಂತವೆಂಬದಾಗಿ ಹೇಳಿಸಿಕೊಂಡಿತು. ಇವುಗಳೊಳಗೆ ವೇದಮರ್ಮಗಳನ್ನು ಅನುಸರಿಸಿಕೊಂಡಿರುವ ಸಿದ್ಧಾಂತ ನಾಮಕವಾದ ಶಿವಾಗಮವು. ವೇದಗಳಿಗೆ ಬಾಹ್ಯಗಳಾಗಿರತಕ್ಕವುಗಳನ್ನು ವಿರೋಧಿಸುವುದರಿಂದ ವೇದಸಮ್ಮತವಾದದ್ದೆಂಬದಾಗಿ ಹೇಳಿಸಿಕೊಳ್ಳಲ್ಪಡುತ್ತದೆ. ಇಂತು ಶಿವನಿಂದ ಹೇಳಲ್ಪಟ್ಟ ಸಿದ್ಧಾಂತ ನಾಮಕವಾಗಿ ಮಹಾ ತಂತ್ರವೆನಿಸಿದ ಕಾಮಿಕಾಗಮವೇ ಮೊದಲಾದ ಆಗಮಗಳ ಉತ್ತರಭಾಗದಲ್ಲಿ ವೀರಶೈವಮತವು ಹೇಳಲ್ಪಟ್ಟಿರುವುದು. ಆ ವೀರಶೈವಮತಲಕ್ಷಣವನ್ನು ಹೇಳುತ್ತೇನೆ ಕೇಳು.

—ವೀರಶೈವಮತ ಲಕ್ಷಣವು.—

ಪರಶಿವನು ಪಾರ್ವತಿಗೆ ಹೇಳುತ್ತಾನೆ, ಎಲೈ ದೇವಿಯೆ ! ವೀರಶೈವ ಶಬ್ದಾರ್ಥವನ್ನು ಹೇಳುತ್ತೇನೆ ಕೇಳು. ಯಾವ ಕಾರಣದ ದೆಸೆಯಿಂದ (ಅಂದರೆ—" ಏಕೋರುದ್ರೋಽದ್ವಿತೀಯೋಽಯುತಸ್ತದ್ಬ್ರಹ್ಮೈವೈಕಂ " ಎಂಬ ಶ್ರುತ್ಯರ್ಥಾನುಸಾರವಾಗಿ ಶಿವನೋರ್ವನೇ ಬ್ರಹ್ಮವೆನಿಸಿ, ಈ ಸಕಲ ಬ್ರಹ್ಮಾಂಡದಲ್ಲಿರುವ ಸಕಲ ಪ್ರಾಣಿಗಳನ್ನು ತನ್ನಲ್ಲಿಯೇ ಐಕ್ಯಮಾಡಿಕೊಳ್ಳುವುದಕ್ಕೋಸ್ಕರ ಯಾವ ಸಿದ್ಧಾಂತವನ್ನು ಹೇಳಿರುವನೋ ಅದರಿಂದ ಎಂದರ್ಥ.) ನನ್ನ ಭಕ್ತರಾದ ಶೈವರು ಶಿವರೂಪವನ್ನೇ ಹೊಂದಿಸುವ ಯಾವ ಸಿದ್ಧಾಂತ ವಿದ್ಯೆಯಲ್ಲಿಯೇ ವಿಶೇಷವಾಗಿ ಪ್ರಾಪಂಚಿಕ ಸುಖವನ್ನು ಬಿಟ್ಟು ರಮಿಸುವರೋ ಅವರೇ ವೀರಶೈವರೆನಿಸುವರು. ಆದಕಾರಣದ ದೆಸೆಯಿಂದಲೇ ಅವರು ಸರ್ವೋತ್ತಮರೆಂಬದಾಗಿ ಪ್ರಖ್ಯಾತರಾಗಿರುವರು. ಆ ವಿದ್ಯೆಯು ಎಂಥಾದ್ದೆಂದೊಡೆ:—ಶಿವನೆನಿಸಿದ ಲಿಂಗಕ್ಕೂ ಜೀವನೆನಿಸಿದ ಅಂಗಕ್ಕೂ ಕೂಡ ಲವಣೋದಕ ಸಂಯೋಗದಂತೊಪ್ಪುವ ಸಕಲ ಸಾಮರಸ್ಯವನ್ನೂ, ಶಿಖಿಕರ್ಪೂರಸಂಯೋಗದಂತೊಪ್ಪುವ ಸಕಲ ನಿಷ್ಕಲ ಸಾಮರಸ್ಯವನ್ನೂ ಹರಿದ್ರಾಚೂರ್ಣಸಂಯೋಗದಂತೊಪ್ಪುವ ನಿಷ್ಕಲ ಸಾಮರಸ್ಯವನ್ನೂ ಕೂಡ ಹೊಂದಿಸತಕ್ಕದು (ಅಂದರೆ ಲಿಂಗಾಂಗಸಾಮರಸ್ಯ ಬೋಧಕವಾದದ್ದು ಎಂದರ್ಥ.) ಇಂತು ಯಾವ ಶೈವರು ಶಿವಜೀವೈಕ್ಯಬೋಧಕವಾದ ಯಾವ ವಿದ್ಯೆಯಲ್ಲಿಯೇ ರಮಿಸುವರೋ ಅವರೇ ವೀರಶೈವಮ

ವೀರಶೈವಾಸ್ತು ತೇ ಮತಾಃ । ವೇದಾಂತಜನ್ಯಂ ಯದ್ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ ॥೪೧॥ ವಿದ್ಯಾಯಾಂ ರಮತೇ ತಸ್ಯಾಂ ವೀರ ಇತ್ಯಭಿಧೀಯತೇ । ನ ವೀರಶೈವಸದೃಶಂ ಮತಮಸ್ತಿ ಜಗತ್ತ್ರಯೇ ॥೪೦॥ ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಂ । ಯಥಾ ಮತ್ಸದೃಶೋ ನಾಸ್ತಿ ಪುರುಷಾಣಾಂ ತ್ವಯಾ ಶಿವೇ ॥೪೩॥ ಸ್ತ್ರೀಣಾಂ ತಥಾ ವೀರಶೈವಸದೃಶಂ ನಾಸ್ತಿ ನೈವ ಮತಂ । ಅಪಿ ಪಾಪಶತಂ ಕೃತ್ವಾ ಜ್ಞಾನತೋಽಜ್ಞಾನತೋಽಪಿ ವಾ ॥ ವೀರಶೈವಮತಂ ಪ್ರಾಪ್ಯ ಸ ನಿಷ್ಪಾಪೋ ನ ಸಂಶಯಃ । ಲಿಂಗಧಾರಣಮಾತ್ರೇಣ ಶಿವತ್ವಪ್ರಾಪ್ತಿಕಾರಣಾತ್ ॥ ೪೪ ॥ ಶೈವಂ ಮಮ ಮತಂ ವೀರಂ ಸದ್ಯೋ ಮುಕ್ತಿಪ್ರದಾಯಕಂ । ಯಥಾ ನದೀನಾಂ ಸರ್ವಾಸಾಂ ಪುಣ್ಯಾ

ತಸ್ಥರೆಂಬದಾಗಿ ಪ್ರಖ್ಯಾತರಾಗಿರುವರು. ಮತ್ತು ಆ ಶಿವ ಜೀವೈಕ್ಯಬೋಧಕವಾದ ವಿದ್ಯೆಯು ಸಾಮಾನ್ಯವಾದದ್ದೆ? ಎಂದೊಡೆ, ಉಪನಿಷದ್ವಾಕ್ಯಗಳಿಂದಲೇ ಉತ್ಪನ್ನವಾಗಿ ಈ ಜಗತ್ತಿಗೆಲ್ಲಾ ತಿಳುವಳಿಕೆಯನ್ನುಂಟು ಮಾಡಿಕೊಟ್ಟಿರುವುದು. ಇಂತು ಆ ಉಪನಿಷದ್ವಾಕ್ಯಗಳಿಂದಲೇ ಉತ್ಪನ್ನವಾದ ಆ ಶಿವಜೀವೈಕ್ಯಬೋಧಕವಾದ ವಿದ್ಯೆಯಲ್ಲಿಯೇ ಯಾವಾಗಲೂ ರಮಿಸತಕ್ಕವರು ಯಾರೋ ಅವರೇ ವೀರರು ವೀರರು ಎಂಬದಾಗಿ ಹೇಳಿಸಿಕೊಳ್ಳುವರು. ಇಂತೊಪ್ಪುವ ವೀರತ್ವವುಳ್ಳವರು ಯಾವ ಶೈವರೋ (ಯಾವ ಶಿವಭಕ್ತರೋ) ಅವರೇ ವೀರಶೈವ ಮತಸ್ಥರೆಂಬದಾಗಿ ಹೇಳಿಸಿಕೊಳ್ಳುವರು ಆದುದರಿಂದಲೇ ಈ ಮೂರು ಲೋಕದಲ್ಲಿಯೂ ಕೂಡ ವೀರಶೈವಕ್ಕೆ ಸಮಾನವಾದ ಮತವು ಇಲ್ಲವೇ ಇಲ್ಲ. ॥೪೦॥ ಆದಕಾರಣವೇ ಈ ವೀರಶೈವ ಮತವು ಸಮಸ್ತ ಭೋಗಗಳನ್ನು ಕೊಡತಕ್ಕದ್ದೂ, ಪುಣ್ಯರೂಪವಾದದ್ದೂ, ಶಿವಸಾಯುಜ್ಯವನ್ನು ಕೊಡತಕ್ಕದ್ದೂ ಆಗಿ ಮೆರೆದಿರುವುದು. ಮತ್ತೂ ಎಲೈ ಪಾರ್ವತಿಯೆ! ಕೇಳು. ಹೇಗೆ ಪುರುಷರೊಳಗೆ ನನಗೆ ಸಮಾನರಾದ ಪುರುಷರಿಲ್ಲವೋ ಹೇಗೆ ಸ್ತ್ರೀಯರೊಳಗೆ ನಿನಗೆ ಸಮಾನರಾದ ಸ್ತ್ರೀಯರಿಲ್ಲವೋ ಹಾಗೆ ವೀರಶೈವಮತಕ್ಕೆ ಸದೃಶವಾದ ಮತವು ಇಲ್ಲ. ಇಂತು ಅಸದೃಶವಾದ ವೀರಶೈವ ಮತವನ್ನು ಮಹಾಪಾಪಂಗಳನ್ನು ಮಾಡಿ ಮಹಾಪಾಪಿಯೆನಿಸಿರುವಾತನು ಜ್ಞಾನದಿಂದಲೇ ಆಗಲಿ ಅಜ್ಞಾನದಿಂದಲೇ ಆಗಲಿ ಹೊಂದಿದ್ದೇ ಆದರೆ ಅವನೇ ನಾನಾಗುತ್ತೇನೆ. ಈ ವಿಷಯದಲ್ಲಿ ಸಂಶಯವಿಲ್ಲ, ಸಂಶಯವಿಲ್ಲ. ಈ ರೀತಿಯಾಗಿರುವುದರಿಂದಲೇ ಇಪ್ಪತ್ತೈದು ತತ್ವಾತ್ಮಕನಾದ ಜೀವನು ಸಂಸ್ಕಾರಪೂರ್ವಕವಾಗಿ ಹನ್ನೊಂದು ತತ್ವಾತ್ಮಕವಾದ ಲಿಂಗವನ್ನು ಧರಿಸಿ, ಮುವ್ವತ್ತಾರು ತತ್ವಾತ್ಮಕವಾದ ವೀರಶೈವ ಮತವನ್ನು ಹೊಂದಿದ್ದೇ ಆದರೆ ಅವನು ಶಿವತತ್ವವನ್ನೇ ಸತ್ಯವಾಗಿ ಹೊಂದುವನು. ॥೪೪॥ ಆದಕಾರಣವೇ ಯಾವ ನನ್ನ ಶೈವಮತವುಂಟೋ ಅದು ಶಿವಭಕ್ತಿಯು, ಅಷ್ಟಾವರಣವು, ಪಂಚಾಚಾರವು, ಷಟ್ಸ್ಥಲವು, ಲಿಂಗಾಂಗ

ಭಾಗೀರಥೀ ಶಿವೇ ||೪೫|| ಯಥೈವ ಭಗವತೀ ಸರ್ವಯೋಷಿತಾಂ ಪುರುಷೇಷ್ವಹಂ | ಯಥೈವ ಕಾಶೀ ಕ್ಷೇತ್ರಾಣಾಂ ತೀರ್ಥೇಷು ಮಣಿಕರ್ಣಿಕಾ ||೪೬|| ಮಮ ಪಂಚಾಕ್ಷರೀ ಮಂತ್ರಸ್ಸರ್ವಮಂತ್ರೇಷು ವೈ ಯಥಾ | ಯಥೈವ ಸರ್ವಲೋಕೇಷು ಕೈಲಾಸಸ್ಥಾನಮಾವಯೋಃ ||೪೭|| ತಥಾ ಶೈವಮತಂ ವೀರಂ ಮಮ ಸರ್ವೋತ್ತಮೋತ್ತಮಂ | ಆದೌ ತ್ರಿಧಾ ಮಯಾ ಪ್ರೋಕ್ತಂ ವೀರಶೈವಂ ಮಹೇಶ್ವರಿ ||೪೮|| ಸಾಮಾನ್ಯಂ ಪ್ರಥಮಂ ಪ್ರೋಕ್ತಂ ವಿಶೇಷಂ ಚ ದ್ವಿತೀಯಕಂ | ನಿರಾಭಾರಂ ತೃತೀಯಂ ಸ್ಯಾತ್ಕ್ರಮಾಲ್ಲಕ್ಷಣಮುಚ್ಯತೇ ||೪೯||

—ಸಾಮಾನ್ಯ ವೀರಶೈವಲಕ್ಷಣಂ—

ಗುರೂಕ್ತೇನೈವ ಮಾರ್ಗೇಣ ಭೂತಿರುದ್ರಾಕ್ಷಧಾರಣಂ | ಪಂಚಾಕ್ಷರಜಪಂ ದೇವಿ ಕುರ್ಯಾನ್ನಿತ್ಯಮತಂದ್ರಿತಃ ||೫೦|| ಗುರುಣಾ ದತ್ತಲಿಂಗಂ

ಸಾಮರಸ್ಯವು ಎಂಬ ಯಾವ ನನ್ನ ಧರ್ಮಗಳಲ್ಲಿ ಯಾವುದಾದರೊಂದು ಲೋಪವಾದದ್ದೇ ಆದರೆ ಆ ಕ್ಷಣದಲ್ಲಿಯೇ ಪ್ರಾಣತ್ಯಾಗವನ್ನು ಮಾಡತಕ್ಕ ವೀರವ್ರತವನ್ನು ಆಚರಿಸುವುದೋ ಅದೇ ವೀರಶೈವ ವ್ರತವೆನಿಸುವುದು. ಮತ್ತು ಆ ಕ್ಷಣದಲ್ಲಿಯೇ ಮುಕ್ತಿಯನ್ನು ಕೊಡತಕ್ಕದ್ದಾಗಿ ಶೋಭಾಯಮಾನವಾಗಿರುವುದು. ಆದಕಾರಣದ ದೆಸೆಯಿಂದಲೇ ಎಲೈ ಪಾರ್ವತಿಯೇ! ಸಮಸ್ತ ಪಾವನನದಿಗಳೊಳಗೂ ಗಂಗಾನದಿಯು ಹೇಗೆ ಪುಣ್ಯಮಯವಾದುದೋ ಸಮಸ್ತ ಸ್ತ್ರೀಯರೊಳಗೂ ನೀನು ಹೇಗೋ ಸಮಸ್ತ ಪುರುಷರೊಗಳಗೂ ನಾನು ಹೇಗೋ ಸಮಸ್ತ ಕ್ಷೇತ್ರಗಳೊಳಗೂ ಕಾಶಿಯು ಹೇಗೋ ಸಮಸ್ತ ತೀರ್ಥಗಳೊಳಗೂ ಮಣಿಕರ್ಣಿಕಾತೀರ್ಥವು ಹೇಗೋ ಸಮಸ್ತ ಮಂತ್ರಗಳೊಳಗೂ ನನ್ನ ಪಂಚಾಕ್ಷರೀ ಮಂತ್ರವು ಹೇಗೋ ಸಮಸ್ತ ಲೋಕಗಳಲ್ಲಿಯೂ ಕೂಡ ನಮ್ಮಗಳಿಗೆ ಕೈಲಾಸಸ್ಥಾನವು ಹೇಗೋ ಹಾಗೆ ವೀರಶೈವ ಮತವು ನನಗೆ ಸರ್ವೋತ್ತಮವಾಗಿ ಮೆರೆದಿರುವುದು. ಎಲೈ ಮಹೇಶ್ವರಿಯೇ! ಇಂತೊಪ್ಪುವ ವೀರಶೈವ ಮತವು ಪೂರ್ವದಲ್ಲಿ ನನ್ನಿಂದ ಮೂರು ವಿಭಾಗವಾಗಿ ಮಾಡಲ್ಪಟ್ಟಿತು. ||೪೮|| ಅವುಗಳೊಳಗೆ ಮೊದಲನೆಯದೇ ಸಾಮಾನ್ಯ ವೀರಶೈವವು, ಎರಡನೆಯದೇ ವಿಶೇಷ ವೀರಶೈವವು. ಮೂರನೆಯದೇ ನಿರಾಭಾರ ವೀರಶೈವವು ಎಂಬದಾಗಿ ಹೇಳಲ್ಪಟ್ಟಿತು. ಇನ್ನು ಅವುಗಳ ಲಕ್ಷಣವನ್ನು ಕ್ರಮವಾಗಿ ಹೇಳುತ್ತೇನೆ ಕೇಳು:- ||೪೯||

—ಸಾಮಾನ್ಯ ವೀರಶೈವ ಲಕ್ಷಣವು.—

ಎಲೈ ದೇವಿಯೇ! ಗುರುಬೋಧಿತವಾದ ಮಾರ್ಗದಿಂದ ನಿತ್ಯದಲ್ಲಿಯೂ ಚಾಪಲ್ಯವಿಲ್ಲದವನಾಗಿ ಭಸ್ಮಧಾರಣವನ್ನೂ ರುದ್ರಾಕ್ಷಧಾರಣವನ್ನೂ ಪಂಚಾಕ್ಷರೀ ಮಂತ್ರಜಪವನ್ನೂ ಮಾಡಬೇಕು. ||೫೦|| ಮತ್ತು ಗುರುವು ಕೊಟ್ಟ ಲಿಂಗವನ್ನು ಸಾವಧಾನ

ತು ಸಾವಧಾನೇನಧಾರಯೇತ್ । ಇಷ್ಟಲಿಂಗಂಪ್ರಾಣಲಿಂಗಂ ಭಾವಲಿಂಗಂಚಪಾರ್ವತಿ ॥೫೧॥ ಏಕೀಕೃತ್ಯಾರ್ಚನಾಂಕುರ್ಯಾ ದ್ವೀರಶೈವೋನಭೇದತಃ । ಜಂಗಮೇನಿಜಲಿಂಗೈಕ್ಯೇ ನಿರ್ಭಾವೇನಿರ್ಮಲೇಪರೆ ॥೫೨॥ ಭಕ್ತಿಂಕುರ್ಯಾನ್ಮಹಾದೇವಿ ಸ್ವಯಂದಾರಸುತಾದಿಭಿಃ । ಮಮಲಿಂಗಾಂಗಸಂಗಾನಾಂವಂಚನಾನ್ನರಕಂಧ್ರುವಂ ॥೫೩॥ ತಸ್ಮಾದೇತೇನಮದ್ಭಕ್ತೈರ್ವೀರಮಾಹೇಶ್ವರಾತ್ಮನಾಂ । ಸೇವಾಕಾರ್ಯಾಮಹಾದೇವಿ ಮನೋವಾಕ್ಕಾಯಕರ್ಮಭಿಃ ॥೫೪॥ ಗೋತ್ರಂಚಶಿವಗೋತ್ರಂಚನಾಮಾಪಿಶಿವನಾಮಚ । ಸದಾಶಿವೌಚಪಿತರೌ ಬಾಂಧವಾಶ್ಶಿವಕಿಂಕರಾಃ ॥೫೫॥ ಶಿವಾಯಾ

ದಿಂದ (ಎಚ್ಚರಿಕೆಯಾಗಿ) ಧರಿಸಬೇಕು. ಎಲೈ ಪಾರ್ವತಿಯೆ! ಇದೂ ಅಲ್ಲದೆ ಇಷ್ಟಲಿಂಗವನ್ನೂ ಪ್ರಾಣಲಿಂಗವನ್ನೂ ಭಾವಲಿಂಗವನ್ನೂ ಕೂಡ ಒಂದನ್ನಾಗಿಯೇ ಮಾಡಿಕೊಂಡು ಶಿವಾರ್ಚನೆಯನ್ನು ಮಾಡಬೇಕು. ಈ ರೀತಿಯಾಗಿ ಮಾಡದೆ ಯಾವನು ಭಿನ್ನಭಾವದಿಂದ ಇಷ್ಟಲಿಂಗ ಪೂಜೆಯನ್ನೂ ಪ್ರಾಣಲಿಂಗ ಪೂಜೆಯನ್ನೂ ಭಾವಲಿಂಗ ಪೂಜೆಯನ್ನೂ ಮಾಡುತ್ತಾನೋ ಅವನು ವೀರಶೈವನಲ್ಲ. (ಅಂದರೆ ವೀರಶೈವಮತದ ಸೋಪಾನಗಳೆನಿಸಿದ ಅನಾದಿಶೈವ, ಆದಿಶೈವ, ಅನುಶೈವ, ಯೋಗಶೈವ, ಜ್ಞಾನಶೈವ, ಮಹಾಶೈವಗಳ ಸೋಪಾನದವನೆನಿಸುವನಲ್ಲದೆ ಏಳನೆಯ ಸೋಪಾನವಾದ ವೀರಶೈವನಾಗುವುದಿಲ್ಲವೆಂದರ್ಥ.) ಆದಕಾರಣವೇ ವೀರಶೈವನಾದವನು ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಗಳನ್ನು ಏಕವಾಗಿಯೇ ಮಾಡಿಕೊಂಡು ಪೂಜಿಸಬೇಕು. ಮತ್ತೂ ಎಲೈ ಮಹಾದೇವಿಯೆ! ವೀರಶೈವನಾದವನು ತಾನು ಪತ್ನೀ ಪುತ್ರಾದಿಗಳೊಡನೆ ಕೂಡಿಕೊಂಡು ನಿರ್ಭಾವನೂ, ನಿರ್ಮಲನೂ, ಉತ್ಕೃಷ್ಟನೂ, ನಿಜಲಿಂಗೈಕ್ಯನೂ ಆದ ಜಂಗಮನಲ್ಲಿ ಭಕ್ತಿಯನ್ನು ಮಾಡಬೇಕು. ಮತ್ತೂ ಲಿಂಗಾಂಗ ಸಂಗಿಗಳಾದ ಜಂಗಮರಲ್ಲಿ ವಂಚನೆಯನ್ನು ಮಾಡಕೂಡದು. ಹಾಗೆ ವಂಚನೆಯನ್ನು ಮಾಡಿದ್ದೇ ಆದರೆ ನಿಶ್ಚಯವಾಗಿಯೂ ನರಕವಾಗುವುದು ತಪ್ಪುವುದಿಲ್ಲ. ಆದಕಾರಣದ ದೆಸೆಯಿಂದ ವೀರಶೈವ ಸೋಪಾನವನ್ನು ಹೊಂದಿದ ಭಕ್ತರುಗಳು ನಿರ್ವಂಚನೆಯಾಗಿ ವೀರಮಾಹೇಶ್ವರರೆನಿಸಿದ ಜಂಗಮರುಗಳನ್ನು ತನುವಿನಿಂದ ನಮಸ್ಕರಿಸಿ, ಮನಸ್ಸಿನಿಂದ ಧ್ಯಾನಿಸಿ, ವಾಕ್ಕಿನಿಂದ ಸ್ತುತಿಸಿ ಸೇವೆಯನ್ನು ಮಾಡಬೇಕು. ॥೫೪॥ ಮತ್ತೂ ವೀರಶೈವನಿಗೆ ಗೋತ್ರವು ಶಿವಗೋತ್ರವಲ್ಲದೆ ಪಿತೃಪಿತಾಮಹಪ್ರಪಿತಾಮಹರುಗಳ ಗೋತ್ರವು ಗೋತ್ರವಲ್ಲ. ಶಿವನ ಹೆಸರೇ ತನಗೆ ಸಲ್ಲತಕ್ಕದ್ದಲ್ಲದೆ ಇತರ ದೇವತೆಗಳ ಹೆಸರು ತನಗೆ ಸಲ್ಲತಕ್ಕದ್ದಲ್ಲ. ಪಾರ್ವತೀ ಪರಮೇಶ್ವರರೇ ತನ್ನ ತಾಯಿ ತಂದೆಗಳಲ್ಲದೆ ಹುಟ್ಟಿಸಿ ಹೆತ್ತವರುಗಳು ತಂದೆ ತಾಯಿಗಳಲ್ಲ. ಶಿವಕಿಂಕರರೇ ತನ್ನ ಬಂಧು ಬಳಗವಲ್ಲದೆ ಒಡಹುಟ್ಟಿದವರೇ ಮೊದಲಾದವರು ಬಂಧು ಬಳಗವಲ್ಲ. ॥೫೫॥ ಮತ್ತೂ ಶಿವನಿಗೋಸ್ಕರ

ಶಿ ಗತದೇಹಾದ್ಯಾ ಸ್ಸ್ವಹೃದಃಪರಿಕೀರ್ತಿತಾಃ । ಶಿವಕಾರ್ಯಾಭಿಮಾನಶ್ಚ ಸ್ವದೇಶೋಭುವನತ್ರಯಂ ॥೫೬॥ ಕರಾಬ್ಜಪೀಠೇಯಜನಂ ಧಾರಣಂಸಜ್ಜಿಕಾಂತರೇ। ಯದ್ವಾಕರಾಬ್ಜೇವಕ್ತ್ರೇವಾ ಧಾರಣಂಮೋಕ್ಷಕಾರಣಂ ॥೫೭॥ ಏಕಕಾಲಂದ್ವಿಕಾಲಂವಾ ತ್ರಿಕಾಲಂವಾಪಿಶಂಕರಿ । ಲಿಂಗಸ್ಯ ಯಜನಂಕುರ್ಯಾ ಲ್ಲಿಂಗಾರ್ಚನಪರಾಯಣಃ ॥೫೮॥ ಇತ್ಯೇವಮಾಚರೇದ್ಧರ್ಮಾನ್ ಸಾಮಾನ್ಯೋವೀರಶೈವಕಃ ॥

—ವಿಶೇಷವೀರಶೈವಲಕ್ಷಣಂ—

ವಿಶೇಷಧರ್ಮಾನುಷ್ಠಾನಾ ದ್ವಿಶೇಷ ಇತಿಕಥ್ಯತೇ ॥೫೯॥ ಏಕಂವಾಮಹೇಶ್ವರಂವಾಪಿ ದ್ವೌವಾತ್ರೀನ್ವಾಮಹೇಶ್ವರಾನ್। ಭೋಜಯಿಷ್ಯೇತತ್ಪ್ರಸಾದಂ ಭೋಕ್ಷ್ಯಾಮಿಪ್ರತಿವಾಸರಂ ॥೬೦॥ ದ್ರೋಣಪುಷ್ಪಂಬಿಲ್ವಪತ್ರಂ ಕರವೀರಮಥಾಪಿವಾ । ಮಲ್ಲಿಕೋತ್ಪಲಪುನ್ನಾಗಜಾತ್ಯಾದಿಕುಸುಮಾನಿ

ವಾಗಿಯೇ ಸಮರ್ಪಿಸಲ್ಪಟ್ಟ ಸಮಸ್ತಗಳಾದ ಇಂದ್ರಿಯಗಳೇ ತನ್ನ ಸ್ನೇಹಿತರಲ್ಲದೆ ಇತರರಲ್ಲವೆಂಬುದಾಗಿ ಪ್ರಸಿದ್ಧನಾಗಿರುವುದು. ಶಿವಕಾರ್ಯಾಭಿಮಾನವೇ ತನ್ನ ಅಭಿಮಾನವಲ್ಲದೆ ಮತ್ತೊಂದಲ್ಲ. ಮೂರು ಲೋಕವೂ ತನ್ನ ದೇಶವಲ್ಲದೆ ಮತ್ತೊಂದಲ್ಲ ಮತ್ತೂ ಹಸ್ತ ಪೀಠದಲ್ಲಿ ಲಿಂಗವನ್ನು ಪೂಜಿಸುವಿಕೆಯು, ಸಜ್ಜಿಕಾಂತರದಲ್ಲಿ (ಕರಡಿಗೆಯಲ್ಲಿ) ಲಿಂಗವನ್ನು ಇರಿಸುವಿಕೆಯು, ಮೋಕ್ಷಕಾರಣವಾದ ಲಿಂಗವನ್ನು ಹಸ್ತದಲ್ಲಿಯಾಗಲಿ ಮುಖದಲ್ಲಿಯಾಗಲಿ ಧರಿಸುವಿಕೆಯು ಶಾಸ್ತ್ರೀಯವಾದದ್ದು. ॥೫೭॥ ಮತ್ತೂ ಲಿಂಗ ಪೂಜಾಪರಾಯಣನಾಗಿ ಎಲೈ ಶಂಕರಿಯೆ ! ಒಂದು ಕಾಲವಾಗಲಿ, ಎರಡು ಕಾಲವಾಗಲಿ, ಮೂರು ಕಾಲವಾಗಲಿ, ಶಿವಲಿಂಗಾರ್ಚನೆಯನ್ನು ಮಾಡಬೇಕು ಈ ರೀತಿಯಾಗಿ ಹೇಳಲ್ಪಟ್ಟ ಧರ್ಮಗಳನ್ನು ಯಾವನು ಆಚರಿಸುತ್ತಾನೋ ಅವನೇ ಸಾಮಾನ್ಯ ವೀರಶೈವನೆನಿಸುವನು.

—ವಿಶೇಷ ವೀರಶೈವ ಲಕ್ಷಣವು.—

ಎಲೈ ಪಾರ್ವತಿಯೆ ! ಕೇಳು, ವೀರಶೈವನು ವಿಶೇಷ ಧರ್ಮಗಳನ್ನು ಅನುಷ್ಠಾನಮಾಡುವುದರ ದೆಸೆಯಿಂದ ವಿಶೇಷ ವೀರಶೈವನು ಎಂಬದಾಗಿ ಹೇಳಿಸಿಕೊಳ್ಳುತ್ತಾನೆ. ॥೫೯॥ ಹೇಗೆಂದರೆ:—ಪ್ರತಿದಿನದಲ್ಲಿಯೂ ಒಬ್ಬ ಮಾಹೇಶ್ವರನನ್ನಾದರೂ, ಇಬ್ಬರು ಮಾಹೇಶ್ವರರನ್ನಾದರೂ, ಮೂರುಜನ ಮಾಹೇಶ್ವರರನ್ನಾದರೂ ಕೂಡಭೋಜನ ಮಾಡಿಸುತ್ತೇನೆ, ನಾನು ಅವರ ಪ್ರಸಾದವನ್ನೇ ಸ್ವೀಕರಿಸುತ್ತೇನೆ. ॥೬೦॥ ಮತ್ತೂ ಲಿಂಗಾರ್ಚನೆಗೆ ನಿಸ್ಯವಲ್ಲಿಯೂ, ತುಂಬೆಯ ಹೂವನ್ನೂ, ಬಿಲ್ವಪತ್ರವನ್ನೂ, ಕಣಿಗಿಲೆಯ ಪುಷ್ಪವನ್ನೂ, ಮಲ್ಲಿಕಾ ಪುಷ್ಪವನ್ನೂ, ಕನ್ನೈದಿಲೆಯನ್ನೂ, ಸು

ಚ ||೬೧|| ಏಷ್ವೇಕಂ ಕುಸುಮಂ ನಿತ್ಯಮರ್ಪಯನ್ನಿಯಮಾನ್ವಿತಃ । ನೈವೇದ್ಯಧೂಪದೀಪಾದ್ಯೈ ಸ್ತಥಾನಿತ್ಯಂಸಮರ್ಚಯೇತ್ ||೬೨|| ಏವಮಾಚರಿಷ್ಯನ್ನಿರ್ನಿಯಮಾ ನಹವಾಪ್ರಾಣಸಂಚರಾತ್ । ಪ್ರಾಣಾನಸ್ಯನ್ಯಥಾ ಕಾಂಕ್ಷೈಃ ಭಾವ್ಯೋಽಯಂ ಪ್ರಾಣಲಿಂಗಿನಾಂ ||೬೩|| ಇತ್ಯಾದಿನಿಯಮಾನ್ಯಸ್ತು ನಿರ್ವಹೇಜ್ಜೀವಿತಾವಧಿ । ಸಏವಹಂ ಮಹಾದೇವಿ ವಿಶಿಷ್ಟ ಶಿವಪೂಜಕಃ ||೬೪|| ಆತ್ಮಾನಂ ಸುತಾನ್ವಾಪಿ ಭಾರ್ಯಾಮಪಿಧನಾನಿವಾ। ಭೂಷಣಾನಿ ಸಮಸ್ತಾನಿ ವಾಹನಾನಿ ಪಶೂನಪಿ ||೬೫|| ಯಸ್ಸ್ವಕೀಯಮಭಿಪ್ರೇತಂ ತತ್ಕುರ್ಯಾಜ್ಜಂಗಮಾರ್ಪಿತಂ । ಅನುಭೂತಂತುತೈಃಪಶ್ಚಾ ದ್ದ್ರವ್ಯಂಸ್ವಾಯಮಾತ್ಮಸಾತ್ ||೬೬|| ಕುರ್ಯಾತ್ಪ್ರಸಾದಬುದ್ಧ್ಯಾಯಸ್ಸ ವಿಶಿಷ್ಟ ಇತಿಸ್ಮೃತಃ । ಅಭ್ಯಂಗಂಭೋಜನಂವಾಪಿ ಸಂಗಮಂವಾವರಾನನೆ ||೬೭|| ಜಂಗಮೇನವಿನಾ ಕುರ್ಯಾ ನ್ನವಿಶಿಷ್ಟೋನಸೋಽಪಿ ಪ್ರಯಃ।ತಮು

ರಹೊನ್ನೆಯ ಪುಷ್ಪವನ್ನೂ, ಜಾತೀಕುಸುಮವನ್ನು ಕೂಡ ಸಮರ್ಪಿಸುತ್ತೇನೆ. ಅಥವಾ ಇವುಗಳೊಳಗೆ ಬಂದನ್ನಾದರೂ ಕೂಡ ನಿಯಮನೊಡನೆ ಕೂಡಿ ನಿತ್ಯವೂ ಸಮರ್ಪಿಸುತ್ತೇನೆ. ಮತ್ತೂ-ನೈವೇದ್ಯ, ಧೂಪ, ದೀಪವೇ ಮೊದಲಾದುವುಗಳಿಂದ ಶಿವನನ್ನು ನಿತ್ಯವೂ ಪೂಜಿಸುತ್ತೇನೆ. ಈ ರೀತಿಯಾದ ನಿಯಮವನ್ನು ನಾನು ನನ್ನ ಪ್ರಾಣವಿರುವಪರ್ಯಂತವೂ ಬಿಡದೆ ಆಚರಿಸುತ್ತೇನೆ ತಪ್ಪುವುದಿಲ್ಲ. ಮತ್ತೂ ಪ್ರಾಣಲಿಂಗಿಗಳಾದ ಮಾಹೇಶ್ವರರನ್ನು ನನ್ನ ಪ್ರಾಣವೇ ಎಂಬುದಾಗಿ ಭಾವಿಸುತ್ತೇನೆ ಹೊರತು ಮತ್ತೆ ಬೇರೆ ಭಾವಿಸುವುದಿಲ್ಲ. ||೬೩|| ಎಂಬ ಇವೇ ಮೊದಲಾದ ನಿಯಮವನ್ನು ಯಾವನು ತಾನು ಬದುಕಿರುವ ಪರ್ಯಂತವೂ ಬಿಡದೆ ಆಚರಿಸುತ್ತಾನೋ, ಎಲೈ ಮಹಾದೇವಿಯೆ ! ಅವನೇ ವಿಶಿಷ್ಟ ಶಿವಪೂಜಕನು ಎನಿಸುತ್ತಾನೆ. ಮತ್ತೂ ಅವನೇ ನಾನೆಂಬವಾಗಿ ತಿಳಿದುಕೊ ||೬೪|| ಮತ್ತೂ--ತನ್ನನ್ನೂ, ತನ್ನ ಮಕ್ಕಳುಗಳನ್ನೂ, ತನ್ನ ಪತ್ನಿಯನ್ನೂ ಧನಗಳನ್ನೂ ಸಮಸ್ತವಾದ ಆಭರಣವನ್ನೂ, ವಾಹನಗಳನ್ನೂ, ಪಶುಗಳನ್ನೂ ತಾನು ಆವುದನ್ನು ಬಯಸುತ್ತಾನೋ ಅವೆಲ್ಲವನ್ನೂ ಕೂಡ ಜಂಗಮಾರ್ಪಿತವಾಗಿ ಮಾಡಿ, ಜಂಗಮರಿಂದ ಅನುಭವಿಸಲ್ಪಟ್ಟನಂತರ ಸಮಸ್ತ ದ್ರವ್ಯವನ್ನೂ ತನ್ನ ಪ್ರಾಣಕ್ಕೆ ಸಮಾನವೆಂಬುದಾಗಿ ತಿಳಿದು, ಪ್ರಸಾದಬುದ್ಧಿಯಿಂದ ಯಾವನು ಸ್ವೀಕರಿಸುತ್ತಾನೋ ? ಅವನೇ ವಿಶಿಷ್ಟನು, ಎಂಬುದಾಗಿ ಪ್ರಖ್ಯಾತನಾಗುವನು. ಮತ್ತೂ ಅಭ್ಯಂಗವನ್ನೂ (ಸ್ನಾನಮಾಡಿಕೊಳ್ಳುವಿಕೆಯನ್ನೂ) ಭೋಜನವನ್ನೂ ಸಂಗಮವನ್ನೂ ಕೂಡ ಎಲೈ ಪಾರ್ವತಿಯೇ ಯಾವನು ಜಂಗಮಾರ್ಪಿತವಾಗಿಮಾಡದೆ ತಾನೇ ಅನುಭವಿಸುತ್ತಾನೋ ಅವನು ವಿಶಿಷ್ಟನೆನಿಸಿಕೊಳ್ಳುವುದಿಲ್ಲ. ನನಗೆ ಪ್ರೀತಿಪಾತ್ರನೂ ಅಲ್ಲ. ಆದಕಾರಣ ಯಾವನು, ಮಾ

ನೇಷ್ವಾಸನೇಯಾನೇ ದೇವನಾದಿಷುಸರ್ವದಾ ॥೬೮॥ ಚರಾರ್ಪಿತಂವಿನಾ ದೇವಿಯೋಭುಂಜೀಯಾತ್ಸನಾರಕೀ। ಭಕ್ಷ್ಯಭೋಜ್ಯಾದಿವಸ್ತೂನಿ ಯೋ ಭುಂಕ್ತೇಚರವರ್ಜಿತಃ ॥೬೯॥ ಸಭುಂಕ್ತೇಮಲಮಾಂಸಾದಿಶ್ವಪಚಾಗಾರ ಸಂಭವಂ । ಶಿವಕಾರ್ಯವಿರುದ್ಧಾಶ್ಚೇ ಭ್ರಾತೃಭಾರ್ಯಾತ್ಮಜಾದಯಃ॥೭೦॥ ಪರಿತ್ಯಜ್ಯಾಸ್ತೇ ವಿಶೇಷವೀರಶೈವಪರಾಯಣೈಃ । ಲಿಂಗಭಕ್ತಿರ್ಲಿಂಗ ಪೂಜಾ ಲಿಂಗಸೇವಾಪರ ಸ್ತಥಾ ॥೭೧॥ ಲಿಂಗಧ್ಯಾನಂ ಲಿಂಗಮನೋ ಲಿಂಗಚರ್ಯಾಪರೌಕರೌ। ಲಿಂಗಶ್ರುತಿಪರೇಶ್ರೋತ್ರೇ ಲಿಂಗಾರ್ಪಿತರಸಾದರಃ ॥೭೨॥ ಲಿಂಗನಿರ್ಮಾಲ್ಯಸುರಭಿಶೋಭೋ ಘ್ರಾಣಶ್ಚ ಪಾರ್ವತಿ। ಲಿಂಗಾಲಂಕಾರಸಂದರ್ಶನಾಸಕ್ತೇ ಲೋಚನೇಪಿಚ ॥೭೩॥ ಲಿಂಗಪ್ರದಕ್ಷಿಣಪರೌ ಪಾದೌಚಗಿರಿಸಂಭವೇ । ಲಿಂಗಸ್ಯಪುರತೋನಿತ್ಯಂ ತದರ್ಥಂಚಾಂ

ವಾಗಲೂ ಶಯನಗಳನ್ನು, ಆಸನಗಳನ್ನು, ವಾಹನಗಳನ್ನು, ವಿಹಾರವೇ ಮೊದಲಾದವುಗಳನ್ನೂ ಕೂಡ—ಜಂಗಮಕ್ಕೆ ಸಮರ್ಪಿಸದೆ ತಾನೇ ಅನುಭವಿಸುತ್ತಾನೋ ಅವನೇ ನಾರಕಿಯು(ಪಾಪಿಯು) ಮತ್ತೂ ಭಕ್ಷ್ಯಭೋಜ್ಯಂಗಳೇ ಮೊದಲಾದ ವಸ್ತುಗಳನ್ನು ಯಾವನು ಜಂಗಮಾರ್ಪಿತವಾಗಿ ಮಾಡದೆ ತಾನೇ ಅನುಭವಿಸುತ್ತಾನೋ ಅವನು ಶ್ವಪಚನಮನೆಯಲ್ಲಿ ಉತ್ಪನ್ನಗಳಾದ ಮಲಮಾಂಸಾದಿಗಳನ್ನು ಭಕ್ಷಿಸಿದವನಾಗುತ್ತಾನೆ. ಮತ್ತೂ ವಿಶೇಷವೀರಶೈವ ಪರಾಯಣರುಗಳು ಶಿವಕಾರ್ಯಕ್ಕೆ ವಿರುದ್ಧರಾದ ಅಣ್ಣತಮ್ಮಂದಿರುಗಳನ್ನೂ ಪತ್ನಿಯರುಗಳನ್ನೂ ಪುತ್ರರುಗಳನ್ನೂ ಖಂಡಿತವಾಗಿಯೂ ಬಿಡಬೇಕು. ಆದುದರಿಂದಲೇ ವಿಶೇಷವೀರಶೈವರುಗಳಿಗೆ ಲಿಂಗಭಕ್ತಿಯೂ, ಲಿಂಗಪೂಜೆಯೂ, ಲಿಂಗಸೇವೆಯಲ್ಲಿಯೇ ಆಸಕ್ತಿಯೂ, ಲಿಂಗಧ್ಯಾನವೂ, ಲಿಂಗದಲ್ಲಿಯೇ ಲೀನವಾದಮನವೂ, ಲಿಂಗವ್ಯಾಪಾರದಲ್ಲಿ ಪ್ರವರ್ತಿಸಿದ ಹಸ್ತಗಳೂ ಲಿಂಗಸ್ತೋತ್ರಗಳನ್ನು ಕೇಳುವುದರಲ್ಲಿಯೇ ಆಸಕ್ತಗಳಾದ ಕಿವಿಗಳೂ, ಲಿಂಗಾರ್ಪಿತವಾದ ರಸದಲ್ಲಿಯೇ ಆದರವುಳ್ಳ ನಾಲಿಗೆಯೂ, ಲಿಂಗನಿರ್ಮಾಲ್ಯಪುಷ್ಪದ ಪರಿಮಳವನ್ನು ಮೂಸುವುದರಲ್ಲಿಯೇ ಆಸಕ್ತಿಯುಳ್ಳ ಮೂಗೂ, ಎಲೈ ಪಾರ್ವತಿಯೆ ! ಲಿಂಗಾಲಂಕಾರವನ್ನು ನೋಡುವುದರಲ್ಲಿಯೇ ಆಸಕ್ತಗಳಾದ ಕಣ್ಣುಗಳೂ, ಲಿಂಗಪ್ರದಕ್ಷಿಣವನ್ನು ಮಾಡುವುದರಲ್ಲಿಯೇ ಆಸಕ್ತಗಳಾದ ಪಾದಗಳೂ, ಮತ್ತು ಎಲೈ ಪಾರ್ವತಿಯೆ ! ನಿತ್ಯದಲ್ಲಿಯೂ ಲಿಂಗದ ಮುಂಭಾಗದಲ್ಲಿಯೇ ಲಿಂಗಾರ್ಥವಾಗಿಯೇ ತನ್ನ ಅಂಗಚೇಷ್ಟೆಯೂ, ಲಿಂಗಾರ್ಥವಾಗಿಯೇ ಕೊಡಲ್ಪಟ್ಟ ಸಮಸ್ತವೂ ಕೂಡ—ಲಿಂಗನಿಷ್ಠೆಯೆಂಬುದಾಗಿ ಹೇಳಿಸಿಕೊಳ್ಳುತ್ತದೆ. ಮತ್ತೂ ಈ ವಿಶೇಷವೀರಶೈವರಿಗೆ ಲಿಂಗವೇಪತಿಯು, ತಾನೇಸತಿಯು—ಎನಿಸಿ ಸತಿಪತಿಗಳ ಸಮರಸಭಾವದಿಂದೊಪ್ಪುವ ಭೋಗವನ್ನು ಶರಣ

ಗಚ್ಛೇಷ್ಟನಂ ||೩೩|| ಲಿಂಗಾರ್ಥದತ್ತಸರ್ವಸ್ವಂ ಲಿಂಗನಿಷ್ಠೇತಿಗೀಯತೇ। ಲಿಂಗಂಪತಿಸ್ಸತೀಚಾಹಂ ಭೋಗೋಽಯಂವೀರಶೈವಿನಾಂ||೩೪|| ತಸ್ಮಾ ಲ್ಲಿಂಗಾತ್ಯಯೇದೇವಿ ಸದ್ಯಃಪ್ರಾಣಾನ್ಪರಿತ್ಯಜೇತ್। ದೀಕ್ಷಯಾಗುರುಣಾ ಲಿಂಗಂ ಧಾರಿತಂತುಯಥೇಚ್ಛಯಾ ||೩೬|| ತದಾಪ್ರಭೃತಿಲಿಂಗಾಂಗಸಂಬಂಧೀಚನಿರಂತರಂ । ಇಷ್ಟಲಿಂಗೇಪರೇಲುಪ್ತೇ ಲಿಂಗಮನ್ಯಂನಧಾರಯೇತ್ ||೩೭|| ಪುನಸ್ತದೇವಲಬ್ಧಂಚೇ ದ್ಧಾರಯೇದ್ದೇವ್ಯಶಂಕಿತಃ । ಜಲೇ ನಿಪತಿತೇಲಿಂಗಂ ಪುನರ್ನ್ಯಷ್ಟಂತದೇವಹಿ ||೩೮|| ಧಾರಯೇದವಧಾನೇನ ವೀರಶೈವೋನದೂಷ್ಯತೇ । ಲಿಂಗಲೋಪಾದಿದೋಷೇಷು ವ್ರತಚರ್ಯಾತಿಲೋಪನೇ || ಪ್ರಾಣಾನ್ಧತ್ತೇಪ್ರಾಣಲಿಂಗೀ ಸೋಽಂಧೇತಮಸಿಮಜ್ಜತಿ।ತಸ್ಮಾತ್ತತ್ಪ್ರಾಣಲಿಂಗಂಹಿ ಸಾವಧಾನೇನಧಾರಯೇತ್||೪೦|| ಲಿಂಗಾರ್ಥಮೇವಯಃಪ್ರಾಣಾಂ ಸ್ತ್ಯಜೇದೈಕ್ಯಂದೃಢಂಮಯಿ । ಸಪ್ರಾಪ್ನೋತಿನಸಂದೇಹಃ ಸತ್ಯಂಸತ್ಯಂವರಾನನೇ ||೪೧|| ಲಿಂಗಾರ್ಥಂವಾಪಿಗುರ್ವ

ನೆಂಬ ಸತಿಯು ಲಿಂಗವೆಂಬ ಪತಿಯೊಡನೆ ನಿತ್ಯವೂ ಅನುಭವಿಸತಕ್ಕುದೇ ಸ್ವಾಭಾವಿಕವಾದದ್ದು. ||೩೪|| ಆದುದರಿಂದಲೇ ಈ ವಿಶೇಷವೀರಶೈವರು ಲಿಂಗವೇನಾದರೂ ಲೋಪವಾದದ್ದೇ ಆದರೆ ಆಕ್ಷಣದಲ್ಲಿಯೇ ಪ್ರಾಣವನ್ನು ಬಿಡಬೇಕು. ಆದರೆ ಸ್ವೇಚ್ಛಾವಿಹಾರಿಯಾದ ಶ್ರೀಗುರುವಿನಿಂದ ದೀಕ್ಷಾಕಾಲದಲ್ಲಿ ಈ ಲಿಂಗವು ಅಂಗವನ್ನು ಯಾವಾಗಲೂ ಬಿಟ್ಟಿರಕೂಡದೆಂದು ಆಜ್ಞಾಪಿಸಲ್ಪಡಲು, ಅದುಮೊದಲು ಧಾರಣೆಮಾಡಿಕೊಂಡ ಲಿಂಗವು ಅಂಗಸಂಬಂಧವನ್ನು ಯಾವಾಗಲೂ ಬಿಟ್ಟಿರಕೂಡದು. ಒಂದುವೇಳೆ ಉತ್ಕೃಷ್ಟವಾದ ಇಷ್ಟಲಿಂಗವು ಲೋಪವಾದದ್ದೇ ಆದರೆ ಮತ್ತೊಂದುಲಿಂಗವನ್ನು ಧರಿಸಕೂಡದು. ||೩೭|| ಎಲೈಪಾರ್ವತಿಯೆ ! ಮತ್ತೆ ಆ ಲೋಪಗೊಂಡಲಿಂಗವೇ ಸಿಕ್ಕಿದ್ದೇ ಆದರೆ ಯಾವಭಯವೂ ಇಲ್ಲದೆ ಆ ಲಿಂಗವನ್ನೇ ಧರಿಸಬಹುದು. ಒಂದುವೇಳೆ ಲಿಂಗವೇನಾದರೂ ಜಲದಲ್ಲಿ ಬಿದ್ದು ಮತ್ತೆ ಸಿಕ್ಕಿದ್ದೇ ಆದರೆ ಎಚ್ಚರಿಕೆಯಾಗಿ ಧರಿಸಬಹುದು. ಇದೂ ವಿಶೇಷವೀರಶೈವನಿಗೆ ದೂಷಣೀಯವಾದದ್ದಲ್ಲ. ಎಲೈ ಪಾರ್ವತಿಯೆ ! ಮುಖ್ಯವಾಗಿ ಯಾವ ಪ್ರಾಣಲಿಂಗಿಯು ಲಿಂಗಲೋಪವು ವ್ರತಲೋಪವು ಆದರೂ ಕೂಡ ಪ್ರಾಣವನ್ನು ಧರಿಸಿಕೊಂಡಿರುತ್ತಾನೋ ಅವನು ಅಜ್ಞಾನಸಮುದ್ರದಲ್ಲಿ ಮುಳುಗಿ ಮಹಾ ಪಾಪಿಯೆನಿಸುತ್ತಾನೆ. ಆದಕಾರಣದ ದೆಸೆಯಿಂದ ವಿಶೇಷವೀರಶೈವನು ಆಪ್ರಾಣಲಿಂಗವನ್ನು ಎಚ್ಚರಿಕೆಯಿಂದ ಧರಿಸಬೇಕು. ||೪೦|| ಎಲೈ ಶ್ರೇಷ್ಠವಾದ ಮುಖವುಳ್ಳ ದೇವಿಯೆ ! ಲಿಂಗಾರ್ಥವಾಗಿಯೇ ಯಾವನು ಪ್ರಾಣವನ್ನು ಬಿಡುತ್ತಾನೋ ಅವನು ನನ್ನಲ್ಲಿ ಐಕ್ಯವನ್ನು ಹೊಂದುತ್ತಾನೆ, ಸಂಶಯವಿಲ್ಲ, ಸತ್ಯವು ಸತ್ಯವು. ||೪೧|| ಮತ್ತೂ ಲಿಂಗಕ್ಕೋಸ್ಕರವಾಗಿಯೂ ಗುರುವಿಗೋಸ್ಕರವಾಗಿ,

ರ್ಥ ಮಾಚಾರಾರ್ಥಂತಥೈವಚ । ಚರಾರ್ಥಂವಾಪ್ರಸಾದಾರ್ಥಂ ತನು
ತ್ಯಾಗೋವಿಧೀಯತೇ ||೮೨|| ಏವಂನಿಷ್ಠಾತುಯಸ್ಯಾಸ್ತಿ ಗೃಹಸ್ಥೋಪಿವಿ
ಮುಚ್ಯತೇ । ಇತಿಪ್ರೋಕ್ತಂಮಹಾದೇವಿ ವಿಶೇಷವೀರಶೈವಕಂ ||೮೩||

— ನಿರಾಭಾರವೀರಶೈವಲಕ್ಷಣಂ —

ನಿರಾಭಾರಮತೋವಕ್ಷ್ಯೇ ಸಮಾಹಿತಮನಾಶ್ಶೃಣು । ಜಂ
ತೋಃಪುಣ್ಯಂ ಪಾಪಮಿತಿ ಕರ್ಮದ್ವಿವಿಧಮುಚ್ಯತೇ ||೮೪|| ನಿವೃತ್ತಕರ್ಮ
ಭಾರತ್ವಾನ್ನಿರಾಭಾರ ಇತಿಸ್ಮೃತಃ। ಜಟೀಮುಂಡೀಶಿಖೀವಾಪಿ ಕಾಷಾ
ಯವಸನಾನ್ವಿತಃ ||೮೫|| ನಿಸ್ಪೃಹೋನಿಜಲಿಂಗೈಕ್ಯೋ ಭಿಕ್ಷಾಶೀಭಯವ
ರ್ಜಿತಃ । ಮೌನೀಭೂತದಯಾಯುಕ್ತೋ ನಿರಾಭಾರಇತಿಸ್ಮೃತಃ ||೮೬||
ಕಂಥಾಕಮಂಡುಲಧರೋ ಭೂತಿರುದ್ರಾಕ್ಷಸಂಯುತಃ । ದಂಡಕೌಪೀ
ನಧಾರೀಚ ನಿರಾಭಾರಇತಿಸ್ಮೃತಃ ||೮೭|| ಮಾಸಾತ್ಪ್ರಂಜಟಿನಾಂಯ

ಯೂ ಆಚಾರಕ್ಕೋಸ್ಕರವಾಗಿಯೂ, ಹಾಗೆಯೇ ಜಂಗಮಕ್ಕೋಸ್ಕರವಾಗಿಯೂ, ಪ್ರಸಾದಕ್ಕೋಸ್ಕರವಾಗಿಯೂ ಕೂಡ ಶರೀರವನ್ನು ಬಿಡುವಿಕೆಯು ವಿಧಿಸಲ್ಪಟ್ಟಿರುವುದು. ||೮೨|| ಈ ಪ್ರಕಾರವಾದ ನಿಷ್ಠೆಯು ಯಾವನಿಗೆ ಇರುವುದೋ ಅವನು ಗೃಹಸ್ಥಾಶ್ರಮಿಯಾದರೂ ಕೂಡ ಮೋಕ್ಷವನ್ನು ಹೊಂದುತ್ತಾನೆ. ಎಲೈ ಮಹಾದೇವಿಯೆ! ಈ ರೀತಿಯಾಗಿ ನನ್ನಿಂದ ವಿಶೇಷ ವೀರಶೈವಲಕ್ಷಣವು ಹೇಳಲ್ಪಟ್ಟಿತು. ||

— ನಿರಾಭಾರವೀರಶೈವಲಕ್ಷಣವು —

ಎಲೈ ಪಾರ್ವತಿಯೆ! ಇನ್ನು ನಿರಾಭಾರ ವೀರಶೈವ ಲಕ್ಷಣವನ್ನು ಹೇಳುತ್ತೇನೆ ಕೇಳು:-ಲೋಕದಲ್ಲಿರುವ ಪ್ರಾಣಿಯು ಸಂಬಂಧವಾದ ಕರ್ಮವು ಪುಣ್ಯಕರ್ಮವೆಂದು, ಪಾಪಕರ್ಮವೆಂದು ಎರಡು ವಿಧವಾಗಿರುವುವು. ಇಂತೊಪ್ಪುವ ಎರಡು ವಿಧವಾದ ಕರ್ಮವನ್ನು ಯಾವನು ಬಿಟ್ಟಿರುವನೋ ಆತನೇ ನಿರಾಭಾರನೆಂಬದಾಗಿ ಹೇಳಿಸಿಕೊಳ್ಳುವನು. ಮತ್ತೂ ಜಡೆಯುಳ್ಳವನಾದರೂ ಸರಿಯೆ, ಬೋಳಾಗಿರುವವನಾದರೂ ಸರಿಯೆ, ಶಿಖೆಯುಳ್ಳವನು (ಜುಟ್ಟನ್ನು ಬಿಟ್ಟಿರುವವನು ಆದರೂ ಸರಿಯೆ, ಕಾಷಾಯ (ಕಾವಿಯ) ವಸ್ತ್ರದಿಂದ ಕೂಡಿಕೊಂಡಿರುವವನೂ, ಯಾವ ಅಭಿಲಾಷೆಯೂ ಇಲ್ಲದಾತನೂ, ನಿಜಲಿಂಗೈಕ್ಯನೂ, ಭಿಕ್ಷಾನ್ನವನ್ನೇ ತಿನ್ನತಕ್ಕವನೂ, ಯಾವ ಭಯವೂ ಇಲ್ಲದಾತನೂ, ಮೌನವಾಗಿರತಕ್ಕವನೂ, ಸಮಸ್ತ ಪ್ರಾಣಿಗಳಲ್ಲಿಯೂ ದಯೆಯುಳ್ಳಾತನೂ, ಆಗಿರುವವನೇ ನಿರಾಭಾರವೀರಶೈವನೆನಿಸುವನು. ||೮೬|| ಮತ್ತೂ ಕಂಥೆಯನ್ನೂ, ಕಮಂಡುಲವನ್ನೂ ಧರಿಸಿದಾತನೂ, ಭಸ್ಮರುದ್ರಾಕ್ಷೆಗಳಿಂದ ಕೂಡಿಕೊಂಡಿರುವಾತನೂ, ದಂಡವನ್ನೂ ಕೌಪೀನವನ್ನೂ ಧರಿಸಿಕೊಂಡಿರುವಾತನೂ ಯಾವನೋ ಅವನೇ ನಿರಾಭಾರವೀರಶೈವನೆನಿಸುವನು, ||೮೭||

ತ್ಯಾಸ್ಯೆ ನ್ಮುಂಡಿನಾಂ ಚ ತದೇವ ಹಿ । ವನ್ಯೈಃ ಪತ್ರೈಶ್ಚ ಪುಷ್ಪೈಶ್ಚ ಫಲೈ
ರ್ಲಿಂಗಂ ಪ್ರಪೂಜಯೇತ್ ॥೮೮॥ ಕಾಮಕ್ರೋಧಾದಿರಹಿತ ಶ್ಶಿವಧ್ಯಾನೀ
ಜಿತೇಂದ್ರಿಯಃ। ಜಂಗಮಸ್ತು ಚರೇದ್ಭಿಕ್ಷಾಂ ಯಾವತ್ಸ್ವೋದರಪೂರಣಂ
ಚರೇನ್ಮಾಧುಕರೀಂ ಭಿಕ್ಷಾಂ ಚರಸ್ಥಾನೋ ದಯಾಪರಃ । ಏಕಾನ್ನಂ ತು
ನಚಾಶ್ನೀಯಾದ್ದೇವಿ ತದ್ದೋಷಕೃದ್ಯತಃ ॥೯೦॥ ಯಥಾ ಮಧುಕರಃ ಪು
ಷ್ಪಾನ್ಮಧು ಗೃಹ್ಣಾತಿ ಪಾರ್ವತಿ । ತಥಾ ಗೃಹಸ್ಥಾದ್ಭಿಕ್ಷೇತ ಚೋಪವಾಸಸ
ಮೋ ವಿಧಿಃ ॥೯೧॥ ಏಕಾನ್ನಂ ಚಾಪಿ ಭುಂಜೀಯಾತ್ಪ್ರಾರ್ಥಿತಸ್ಸದ್ಭಿ
ರಾದರಾತ್। ನ ವಸ್ತುಸಂಗ್ರಹಂ ಕುರ್ಯಾದ್ಯತ್ರ ಕುತ್ರಾಪಿ ಜಂಗಮಃ ॥೯೨॥
ತಥಾ ದದ್ಯಾಚ್ಚ ಭಕ್ತೇಭ್ಯೋ ದರಿದ್ರೇಭ್ಯೋ ದಯಾನ್ವಿತಃ । ಸುವರ್ಣ
ರತ್ನಧಾನ್ಯಾದಿವಸ್ತು ವೃದ್ಧ್ಯುಪಜೀವನಾತ್ ॥೯೩॥ ಅತ್ಯಾಶ್ರಮಿ ಯದಿ

ಮತ್ತೂ ಜಡೆಯುಳ್ಳ ನಿರಾಭಾರವೀರಶೈವನಿಗೆ ಯಾವ ಮಹಿಮೆಯಿರುವುದೋ ಮುಂ
ಡನವುಳ್ಳ (ಬೋಳಾಗಿರುವ) ನಿರಾಭಾರವೀರಶೈವನಿಗೂ ಅದೇ ಮಹಿಮೆಯಿರುವುದು.
ಮತ್ತೂ ನಿರಾಭಾರ ವೀರಶೈವನು ಕಾಡುಪತ್ರೆಗಳಿಂದಲೂ, ಕಾಡುಹೂವುಗಳಿಂದ
ಲೂ, ಕಾಡುಹಣ್ಣುಗಳಿಂದಲೂ ಕೂಡ ಲಿಂಗವನ್ನು ಪೂಜಿಸಬೇಕು. ॥೮೮॥ ಕಾಮ,
ಕ್ರೋಧ, ಲೋಭ, ಮೋಹ, ಮದ, ಮತ್ಸರ-ಗಳೆಂಬ ಷಡ್ವರ್ಗದಿಂದ ಬಿಡಲ್ಪಟ್ಟವ
ನೂ, ಶಿವಧ್ಯಾನತತ್ಪರನೂ, ಜಿತೇಂದ್ರಿಯನೂ ಎನಿಸಿ ಯಾವ ನಿರಾಭಾರವೀರಶೈವನು
ಮೆರೆದಿರುವನೋ ಅವನೇ ಜಂಗಮನೆನಿಸುವನು. ಇಂತೊಪ್ಪುವ ಜಂಗಮನು ತನ್ನ
ಹೊಟ್ಟೆಯು ತುಂಬುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಯಾಚಿಸಬೇ
ಕು. ॥೮೯॥ ಚರಸ್ಥಾನವನ್ನು ಹೊಂದಿರತಕ್ಕವನೂ ಸಮಸ್ತ ಪ್ರಾಣಿಗಳಲ್ಲಿಯೂ ದ
ಯಾಪರನೂ ಆದ ಜಂಗಮನು ಭ್ರಮರದ (ತುಂಬಿಯ) ಹಾಗೆ ಭಿಕ್ಷೆಯನ್ನು ಯಾ
ಚಿಸಬೇಕು. ಎಲೈ ಪಾರ್ವತಿಯೆ! ಜಂಗಮನು ಯಾವಾಗಲೂ ಒಬ್ಬನ ಅನ್ನವನ್ನೇ
ಬುಂಜಿಸಕೂಡದು. ಒಂದುವೇಳೆ ಹಾಗೆ ಮಾಡಿದ್ದೇ ಆದರೆ ಅದರಿಂದ ಅವನಿಗೆ ಪಾ
ಪಸಂಘಟನೆಯಾಗುವುದು. ॥೯೦॥ ಆದಕಾರಣ ಲೋಕದಲ್ಲಿ ಹೇಗೆ ಭ್ರಮರವು
(ತುಂಬಿಯು) ಪ್ರತಿಯೊಂದು ಪುಷ್ಪದಿಂದಲೂ ಮಕರಂದರಸವನ್ನು ಗ್ರಹಿಸುತ್ತದೆಯೊ
ಹಾಗೆ ಜಂಗಮನು ಗೃಹಸ್ಥನಿಂದ ಭಿಕ್ಷೆಯನ್ನು ಗ್ರಹಿಸಬೇಕು. ಆದುದರಿಂದಲೇ ಜಂ
ಗಮನ ಭಿಕ್ಷಾವಿಧಿಯು ಉಪವಾಸಕ್ಕೆ ಸಮಾನವಾದದ್ದು. ॥೯೧॥ ಒಂದುವೇಳೆ ಏ
ನಾದರೂ ಆದರ ಪೂರ್ವಕವಾಗಿ ಸತ್ಪುರುಷರು ಎಲೈ ಶ್ರೀಗುರುವೆ! ನಮಗೆ ಕ್ರಿಯಾ
ಮೂರ್ತಿಯಾಗಿರಬೇಕೆಂದು ಪ್ರಾರ್ಥಿಸಿದ್ದೇ ಆದರೆ ಆ ಕಾಲದಲ್ಲಿ ಮಾತ್ರವೇ ಒಬ್ಬನ ಅ
ನ್ನವನ್ನು ಬುಂಜಿಸಿಕೊಂಡಿರಬಹುದು, ಮತ್ತೂ ಜಂಗಮನು ಪದಾರ್ಥಗಳನ್ನು

ಚರೇತ್ಸೋಯಂ ಪಾತಕಿನಾಂವರಃ । ಜಟಾಧಾರೀಶಿಖೀಮುಂಡೀ ಮು ಧ್ರಾಪಂಚಕಸಂಯುತಃ ॥೯೪॥ ಸ್ತ್ರೀಸಂಗಂಕುರುತೇಯಸ್ತು ಸಮ ದ್ರೋಹೀ ನಸಂಶಯಃ । ಅತಿವರ್ಣಾಶ್ರಮೋ ಮುಂಡೀ ಪ್ರಾಣಲಿಂ ಗಾಂಗಯೋಗಭಾಕ್ ॥೯೫॥ ನಧಾರಯೇಚ್ಛಿರೋವಸ್ತ್ರ ಮುಷ್ಣೀಷಂ ವಾ ನಕಾರಯೇತ್ । ಅನ್ಯೋನ್ಯಮೇತೇವಂದ್ಯಾಸ್ಸ್ಯು ಶ್ಶಿವಭಾವೇನ ಚೇ ತಸಾ ॥೯೬॥ ಜಂಗಮೋಜಂಗಮಂದೃಷ್ಟ್ವಾ ನಪ್ರಣಾಮಂ ಕರೋತಿ ಯಃ । ಸಏವಜಂಗಮದ್ರೋಹೀ ಮದ್ರೋಹೀಚ ನಸಂಶಯಃ ॥೯೭॥ ಜಂಗಮಂದ್ವೇಷ್ಟಿಯೋ ಮೋಹಾತ್ಸತು ಮಾಂದ್ವೇಷ್ಟಿ ಶಾಂಕರಿ । ತ ಸ್ಮಾದನ್ಯೋನ್ಯಮಪಿಚ ಪೂಜ್ಯಾಸ್ಸ್ಯು ರ್ಜಂಗಮಸ್ಥಲೇ ॥೯೮॥ ಶಿವಭಕ್ತಿ

ಸಂಗ್ರಹಮಾಡಿಡಕೂಡದು. ಒಂದುವೇಳೆ ಹಾಗೆ ಪದಾರ್ಥಗಳನ್ನು ಸಂಗ್ರಹಮಾಡಿ ದರೂ ಕೂಡ ಆಯಾಯ ಕಾಲಗಳಲ್ಲಿಯೇ ಅತ್ಯಂತ ದಯಾವಿಶಿಷ್ಟನಾಗಿ ದರಿದ್ರರಾದ ಭಕ್ತರುಗಳಿಗೆ ಕೊಡಬೇಕು. ಮತ್ತೂ ಅತ್ಯಾಶ್ರಮಿ ಎನಿಸಿದ ಜಂಗಮನು ಸುವ ರ್ಣಗಳನ್ನೂ ರತ್ನಗಳನ್ನೂ ಧಾನ್ಯವೇ ಮೊದಲಾದ ವಸ್ತುಗಳನ್ನೂ ವಿಕ್ರಯಿ ಸಿ ಅದರಿಂದ ದ್ರವ್ಯವನ್ನು ಸಂಪಾದಿಸಿ ಜೀವಿಸಕೂಡದು, ಒಂದುವೇಳೆ ಏನಾದರೂ ಹಾಗೆ ಮಾಡಿದ್ದೇ ಆದರೆ ಅವನೇ ಪಾಪಿಗಳೊಳಗೆ ಮಹಾಪಾಪಿಯೆನಿಸುವನು. ಮ ತ್ತೂ ಜಡೆಯನ್ನು ಧರಿಸಿರುವವನಾದರೂ ಸರಿಯೆ, ಶಿಖೆಯನ್ನು ಬಿಟ್ಟಿರುವವನಾದ ರೂ ಸರಿಯೆ, ಮುಂಡಿಯಾಗಿರುವವನಾದರೂ ಸರಿಯೆ, ಯಾವನು ಕಂತೆ ಕಮಂಡಲ ಕಾಷಾಯವಸ್ತ್ರ, ಭಿಕ್ಷಾಪಾತ್ರೆ, ದಂಡಗಳೆಂಬ ಪಂಚಮುದ್ರೆಗಳನ್ನು ಧರಿಸಿಕೊಂಡು ಸ್ತ್ರೀಸಂಪರ್ಕವನ್ನು ಮಾಡುತ್ತಾನೋ ಅವನೇ ನನಗೆ ದ್ರೋಹಿಯೆನಿಸುವನು. ಈ ವಿಷಯದಲ್ಲಿ ಸಂಶಯವಿಲ್ಲ. ಇದೂ ಅಲ್ಲದೆ ಪ್ರಾಣಲಿಂಗಾಂಗಸಾಮರಸ್ಯವನ್ನು ಹೊಂದಿ ಕೊಂಡು ಅತ್ಯಾಶ್ರಮಿಯಾಗಿ ಮುಂಡಿಯೆನಿಸಿರುವವರು ಯಾರೋ ಅವರು ತಲೆಗೆ ವಸ್ತ್ರವನ್ನು ಧರಿಸಕೂಡದು. ಮತ್ತೂ ಪಾಗನ್ನು ಸುತ್ತಕೂಡದು. ನಿರ್ಮಲಾಂ ತಃಕರಣರಾದ ಈ ಜಂಗಮರೆಲ್ಲರೂ ಅನ್ಯೋನ್ಯವಾಗಿ (ಒಬ್ಬರನ್ನೊಬ್ಬರು) ಶಿವಭಾವ ದಿಂದ ನಮಸ್ಕರಿಸಬೇಕು. ॥೯೬॥ ಯಾವ ಜಂಗಮನು ಮತ್ತೊಬ್ಬ ಜಂಗಮನನ್ನು ನೋಡಿ ನಮಸ್ಕಾರವನ್ನು ಮಾಡುವುದಿಲ್ಲವೋ ಅವನೇ ಜಂಗಮದ್ರೋಹಿಯೂ ಶಿವ ದ್ರೋಹಿಯೂ ಆಗುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ. ಎಲೈ ಪಾರ್ವತಿಯೆ ! ಯಾವನು ಮೋಹದಿಂದ ಜಂಗಮವಿಷಯವಾಗಿ ದ್ವೇಷಿಸುತ್ತಾನೋ ಅವನು ಶಿವದ್ವೇ ಷಿಯಾಗುತ್ತಾನೆ ಸಂಶಯವಿಲ್ಲ. ಆದುದರಿಂದಲೇ ಜಂಗಮಸ್ಥಲವನ್ನು ಹೊಂದಿರುವವ ರೆಲ್ಲರೂಕೂಡ (ನಿರಾಭಾರವೀರಶೈವರೆಲ್ಲರೂ ಕೂಡ) ಅನ್ಯೋನ್ಯವಾಗಿ ಒಬ್ಬರಿಂದೊ ಬ್ಬರು ಪೂಜಿಸಿಕೊಳ್ಳುವುದಕ್ಕೆ ಯೋಗ್ಯರಾಗಿರುವರು, ॥೯೮॥ ಶಿವಭಕ್ತಿಯೂ, ಶಿವಜ್ಞಾ

ಶ್ಶಿವಜ್ಞಾನಂ ಶಿವಮುದ್ರಾ ಶಿವವ್ರತಂ । ಶಿವಲಿಂಗಾರ್ಚನಶ್ರದ್ಧಾ ವೃತ್ತ್ಯಂತರನಿರೋಧನಂ||೯೯||ಏತೇಧರ್ಮಾಯತ್ರಸಂತಿ ಸಭಾರಾಭಾರವರ್ಜಿತಃ । ಷಟ್ಸ್ಥಲಜ್ಞಾನಸಂಪನ್ನ ಷ್ಷಡ್ಲಿಂಗಾಂಗಸಮಾಧಿಮಾ ||೧೦೦|| ಆತ್ಮವತ್ಪರಿತೋ ದೃಷ್ಟ್ವಾ ಸಏವಾಹಂನಸಂಶಯಃ । ಯತ್ರಾನ್ಯದೇವತಾಪೂಜಾ ತತ್ಸ್ಥಾನಂ ಪರಿವರ್ಜಯೇತ್ ||೧೦೧|| ಶಿವಭಕ್ತಿವಿಹೀನಂಚ ಜನಂನೈವಸಮಾಶ್ರಯೇತ್ । ನತಿಥಿ ರ್ನಚನಕ್ಷತ್ರಂ ನವಾರಕರಣಾದಿಕಂ||೧೦೨|| ಸಾಮುದ್ರಿಕಂಚಭಕ್ತಾನಾಂ ನಾಸ್ತಿಲಿಂಗಾಂಗಸಂಗಿನಾಂ। ಸರ್ವಂಶಿವಮಯಂಪಶ್ಯೇ ದನ್ಯಭಾವೋ ನವಿದ್ಯತೇ ||೧೦೩|| ಇದಂರಹಸ್ಯಂ ಪರಮಂಸಾರಾತ್ಸಾರತರಂಪರಂ । ತಸ್ಮಾನ್ನೋಕ್ತಂ ಮಯಾಪೂರ್ವಂ ತವಪ್ರೀತ್ಯಾಪ್ರಕೀರ್ತಿತಂ ||೧೦೪|| ನವಕ್ತವ್ಯಮಭಕ್ತಾಯ ಕೃತಘ್ನಾಯಚ ಮಾಯಿನೇ। ವಕ್ತವ್ಯಂಹಿಪ್ರಯತ್ನೇನ ಶ್ರದ್ಧಾಭಕ್ತಿಯುತಾಯಚ ||೧೦೫|| ಇತ್ಯೇವಂತ್ರಿವಿಧಂಪ್ರೋಕ್ತಂ ವೀರಶೈವಂಸಮಾಸತಃ ।

ನವೂ,ಶಿವಮುದ್ರೆಯೂ, ಶಿವವ್ರತವೂ, ಶಿವಲಿಂಗಾರ್ಚನಶ್ರದ್ಧೆಯೂ, ಶಿವವ್ಯಾಪಾರವಲ್ಲದೆ ಮತ್ತೊಂದು ವ್ಯಾಪಾರವಿಲ್ಲದಿರುವಿಕೆಯೂ—ಈ ಧರ್ಮಗಳು ಯಾವನಲ್ಲಿ ನೆಲಸಿರುವುವೋ ಅವನೇ ಪ್ರಪಂಚದ ಸಕಲ ಭಾರಗಳಿಂದಲೂಕೂಡ ನಿಶ್ಶೇಷವಾಗಿ ಬಿಡಲ್ಪಟ್ಟವನೂ, ಷಟ್ಸ್ಥಲಜ್ಞಾನಸಂಪನ್ನನೂ, ಷಡ್ಲಿಂಗಾಂಗಸಾಮರಸ್ಯಲೋಲನೂ ಆಗಿ, ತನ್ನಂತೆಯೇ ಈಜಗತ್ತೆಲ್ಲವನ್ನೂ ನೋಡಿ ಮೆರೆಯುತ್ತಾನೆ. ಎಲೈ ಪಾರ್ವತಿಯೆ! ಆಗ ಅವನೇ ನಾನೆಂಬದಾಗಿ ತಿಳಿದುಕೊ. ಈ ವಿಷಯದಲ್ಲಿ ಸಂಶಯವಿಲ್ಲ. ಮತ್ತೂ ಲಿಂಗಾಂಗಸಾಮರಸ್ಯಲೋಲರಾದ ಭಕ್ತರುಗಳು ಯಾವ ಸ್ಥಾನದಲ್ಲಿ ಮತ್ತೊಂದು ದೇವತಾಪೂಜೆಯು ನಡೆಯುವುದೋ ಆಸ್ಥಾನದ ಪ್ರವೇಶವನ್ನೇ ಮಾಡಕೂಡದು. || ಶಿವಭಕ್ತಿಯಿಲ್ಲದಿರುವ ಜನವನ್ನೇ ಆಶ್ರಯಿಸಕೂಡದು. ಮತ್ತೂ ಆ ಜಂಗಮರಿಗೆ ತಿಥಿಯೂ ವಾರವೂ ನಕ್ಷತ್ರವೂ ಕರಣವೂ ಯೋಗವೂ ಇಲ್ಲ. ಸಾಮುದ್ರಿಕವೂ ಇಲ್ಲ. ಅವರೆಲ್ಲರೂ ಈ ಸಮಸ್ತವಾದ ಜಗತ್ತನ್ನೂ ಶಿವಮಯವೆಂಬದಾಗಿಯೇ ನೋಡಬೇಕಲ್ಲದೆ ಮತ್ತೊಂದು ಭಾವದಿಂದ ನೋಡಕೂಡದು. ||೧೦೩|| ಎಲೈ ಪಾರ್ವತಿಯೆ! ಈ ರಹಸ್ಯವು ಸಾರಕ್ಕಿಂತಲೂ ಸಾರವೂ, ಪರವೂ, ಪರಮವೂ ಆದದ್ದು ಆದ ಕಾರಣದಿಂದಲೇ ಪೂರ್ವದಲ್ಲಿ ನನ್ನಿಂದ ಯಾರಿಗೂ ಹೇಳಲ್ಪಡಲಿಲ್ಲ. ಈಗ ನಿನ್ನ ಮೇಲಣ ಪ್ರೀತಿಯಿಂದ ವಿಸ್ತಾರವಾಗಿ ಹೇಳಿದೆನು. ||೧೦೪|| ಆದರೆ ಈ ರಹಸ್ಯವು ಭಕ್ತಿಯುಕ್ತನಲ್ಲದವನಿಗೂ, ಕೃತಘ್ನನಾದವನಿಗೂ, ಮಾಯಾಪಾಶಬದ್ಧನಾದವನಿಗೂ ಹೇಳಲ್ಪಡತಕ್ಕದಲ್ಲ. ಭಕ್ತರಿಗೆ ಪ್ರಯತ್ನಪೂರ್ವಕವಾಗಿ ಹೇಳಬೇಕಂ

ವೀರಶೈವಸ್ಯ ಗರ್ಭಾದಿಸಂಸ್ಕಾರವಿಧಯಃ ಕ್ರಮಾತ್ ॥೧೦೬॥ ಸಮಾಧ್ಯಂತಾಃಪ್ರವಕ್ಷ್ಯಂತೇ ಜ್ಞಾನಯೋಗಾನುಕೂಲತಃ ॥

ಇತಿಶ್ರೀಮದನಾದಿಪ್ರಮಥಪರಂಪರಾಗತಷಟ್ಸ್ಥಲಜ್ಞಾನಬೋಧಕಾಚಾರ್ಯವರ್ಯವರಗುರುಬಸವಯತಿವರ್ಯಲಬ್ಧಬುದ್ಧಿವಿಕಾಸೇನ ವೀರಶೈವದೀಕ್ಷಾಗುರುಚೆನ್ನವೀರಸ್ವಾಮಿಕರಕಮಲಸುಜಾತೇನ ಮೌನಪ್ಪವಿದುಷಾ ಕೃತೇ ವೀರಶೈವಾಚಾರಕೌಸ್ತುಭೇ ಕ್ರಿಯಾಕಾಂಡೇ ಶೈವವೀರಶೈವಭೇದ ನಿರೂಪಣಂನಾಮ ಚತುರ್ಥಂಪ್ರಕರಣಂಸಮಾಪ್ತಂ

ದೊಡೆ—ಶಮ, ದಮ, ಶಾಂತಿ, ತಿತಿಕ್ಷೆ, ಶ್ರದ್ಧೆ, ಸಮಾಧಿಗಳೆಂಬ ಷಡ್ಗುಣಸಂಪನ್ನನೂ ಸದ್ಭಕ್ತಿಯುಕ್ತನೂ ಆಗಿರುವವನು ಯಾರೋ ಅವನಿಗೆ ಮಾತ್ರವೇ ಹೇಳಬೇಕು. ಎಲೈ ದೇವಿಯೇ, ಈ ರೀತಿಯಾಗಿ ಮೂರು ಪ್ರಕಾರವಾದ ವೀರಶೈವಸೋಪಾನವು ನಿನಗೋಸ್ಕರ ಕ್ರಮವಾಗಿ ಹೇಳಲ್ಪಟ್ಟಿತು. ಎಂದು ಪರಶಿವನು ಪಾರ್ವತಿಗೆ ಹೇಳಿದನು. ಅನಂತರ ಎಲೈ ಲಿಂಗಪ್ಪಮೂರ್ತಿಯೆ ! ಕೇಳು—ವೀರಶೈವ ಮತಸ್ಥನ ಗರ್ಭಾಧಾನ ಮೊದಲಾದ ಸಮಾಧಿಯೇ ಕಡೆಯಾದ ಸಂಸ್ಕಾರವಿಧಾನಗಳೆಲ್ಲವೂ ಕೂಡ ಜ್ಞಾನಯೋಗಕ್ಕೆ ಅನುಕೂಲವಾಗಿಯೇ ಮೆರೆದಿರುವುವು. ಇನ್ನು ಕ್ರಮವಾಗಿ ಹೇಳುತ್ತೇನೆ ಕೇಳು ಎಂದು ಮೌನಪ್ಪವಿದ್ವಾಂಸನು ಹೇಳಿದನು.

ಎಂಬಲ್ಲಿಗೆ ಶ್ರೀಮೌನಪ್ಪವಿದ್ವತ್ಕೃತ ವೀರಶೈವಾಚಾರಕೌಸ್ತುಭಕ್ಕೆ ಎಂ. ಬಸವಲಿಂಗಶಾಸ್ತ್ರಿ ರಚಿತವಾದ " ಆಚಾರಪ್ರಕಾಶಿಕೆ " ಎಂಬ ಕನ್ನಡಟಿಪ್ಪಣಿದಲ್ಲಿ ಶೈವಭೇದಗಳನ್ನೂ ವೀರಶೈವಭೇದಗಳನ್ನೂ ನಿರೂಪಣಮಾಡುವ ೪ ನೆಯ ಪ್ರಕರಣವು ಮುಗಿದುದು.

ಪಂಚಮಪ್ರಕರಣಂ.




—(ಗರ್ಭಾಧಾನಾದಿಕರ್ಮತ್ರಯಸ್ವರೂಪನಿರೂಪಣಂ)—

ವಿದ್ವನ್ಕಲ್ಪತರೋಚೇತ ಶ್ರೋತುಮುತ್ಕಂಠತೇಮಮ। ಗರ್ಭಾಧಾನಾದಿಸಂಸ್ಕಾರಾ ನ್ವೀರಶೈವೋಪಜೀವಿನಾಂ ॥೧॥ ಶೃಣುಮಂತ್ರಿಕುಲೋತ್ತಂಸ ವೀರಶೈವೋಚಿತಕ್ರಿಯಾಃ ॥ ಪ್ರಥಮರ್ತೌತ್ರ್ಯಹಾದೂರ್ಧ್ವಮಾಷೋಡಶದಿನಾವಧಿ ॥೨॥ ಯುಗ್ಮೇಜ್ಯೋತಿಶ್ಶಾಸ್ತ್ರಸಿದ್ಧೇ ಶೋಭನೇ ದಿವಸೇ ಬುಧಃ । ಕುರ್ವೀತ ಗರ್ಭಾಧಾನಾಖ್ಯಂ ಸಂಸ್ಕಾರಮಿತಿ ತದ್ವಿದುಃ ॥೩॥

೫ನೆಯ ಪ್ರಕರಣವು



ಗರ್ಭಾಧಾನವೇ ಮೊದಲಾದ ಮೂರುಕರ್ಮಗಳ ಸ್ವರೂಪವನ್ನು ನಿರೂಪಿಸುವಿಕೆಯು.



ಅನಂತರ ಲಿಂಗಪ್ಪಮಂತ್ರಿಯು ಮೌನಪ್ಪವಿದ್ವಾಂಸನನ್ನು ನೋಡಿ, ಎಲೈ ವಿದ್ವಾಂಸರುಗಳಿಗೆ ಕಲ್ಪವೃಕ್ಷಪ್ರಾಯನಾದವನೇ! ನನ್ನ ಮನಸ್ಸು ವೀರಶೈವಮತಸ್ಥರಿಗೆ ಅನುಕೂಲಗಳಾದ ಗರ್ಭಾಧಾನವೇ ಮೊದಲಾದ ಸಂಸ್ಕಾರಗಳ ವಿಧಿಗಳನ್ನು ಕೇಳಬೇಕೆಂದು ಅಪೇಕ್ಷಿಸುವುದು ಎನಲು, ಮೌನಪ್ಪವಿದ್ವಾಂಸನು ಮಂತ್ರಿಯನ್ನು ನೋಡಿ, ಎಲೈ ಮಂತ್ರಿಕುಲೋತ್ತಂಸನಾದ ಲಿಂಗಪ್ಪಮಂತ್ರಿಯೇ! ವೀರಶೈವೋಚಿತಂಗಳಾದ ಕ್ರಿಯೆಗಳನ್ನು ಹೇಳುತ್ತೇನೆ ಕೇಳು:—ವೀರಶೈವಮತಸ್ಥರಾದ ಸ್ತ್ರೀಯರ ಪ್ರಥಮ ಋತುವಿನಲ್ಲಿ ಮೂರು ದಿನಗಳು ಕಳೆದನಂತರ ಹದಿನಾರುದಿನಗಳ ಪರ್ಯಂತವಾಗಿ ಸಮವಾದ ಯಾವದಿನವು ಜ್ಯೋತಿಶ್ಶಾಸ್ತ್ರಸಿದ್ಧವೂ ಮಂಗಳಕರವೂ ಆಗಿರುವುದೋ ಆ ದಿವಸದಲ್ಲಿ ಬುದ್ಧಿವಂತನಾದವನು ಗರ್ಭಾಧಾನನಾಮಕವಾದ ಸಂಸ್ಕಾರವನ್ನು ಮಾಡಬೇಕು. ಅದರ ವಿವರವನ್ನು ಹೇಳುತ್ತೇನೆ ಕೇಳು—॥೩॥

ನಾರದೀಯೆ;—" ಯಾವಂತೋಋತವಸ್ತಸ್ಯಾ ಸ್ಸಮತೀಯುಃ ಪತಿಂವಿನಾ । ತಾವತ್ಯೋಃಭ್ರೂಣಹತ್ಯಾಸ್ತು ತಸ್ಯಾಯೋನದದಾತಿತಂ॥ (ಭ್ರೂಣಹತ್ಯೇತಿಗರ್ಭಹತಿಃ)

ಯಾಜ್ಞವಲ್ಕ್ಯಃ;—" ಷೋಡಶರ್ತೋರ್ನಿಶಾ ಸ್ತ್ರೀಣಾಂತಸ್ಮಿನ್ ಯುಗ್ಮಾಸುಸಂವಿಶೇತ್"

ತತ್ರಮನುಃ;—" ಯುಗ್ಮಾಸು ಪುತ್ರಾಜಾಯಂತೇಸ್ತ್ರಿಯೊ ಯುಗ್ಮಾಸುರಾತ್ರಿಷು । ತಸ್ಮಾದ್ಯುಗ್ಮಾಸು ಪುತ್ರಾರ್ಥೀ ಸಂವಿಶೇದಾರ್ತವೇಸ್ತ್ರಿಯಂ"—

ವ್ಯಾಸಃ;—"ರಾತ್ರಿಚತುರ್ಥ್ಯಾಂ ಪುತ್ರಸ್ಸ್ಯಾ ದಲ್ಪಾಯುರ್ಧನವರ್ಜಿತಃ।ಪಂಚಮ್ಯಾಂಪುತ್ರಿಣೀನಾರೀ ಷಷ್ಠ್ಯಾಂ ಪುತ್ರಸ್ತುಮಧ್ಯಮಃ॥ ಸಪ್ತಮ್ಯಾಂಸುಭಗಾಯೋಷಿ ದಷ್ಟಮ್ಯಾವಿಾಶ್ವರಸ್ಸುತಃ। ನವಮ್ಯಾಂಸುಖಸಾದಾರಾ ದಶಮ್ಯಾಂತುವರಃಪುಮಾನ್॥೨॥ ಏಕಾದಶ್ಯಾಮಧರ್ಮಾ

ನಾರದೀಯಸ್ಮೃತಿಯಲ್ಲಿ—ಪ್ರಥಮ ಋತುಮತಿಯಾದ ಯಾವ ಸ್ತ್ರೀಗೆ ತನ್ನ ಪತಿಯ (ಗಂಡನ) ಸಂಯೋಗಪ್ರಾಪ್ತಿಯಿಲ್ಲದೆ ಎಷ್ಟುಋತುದಿವಸಗಳು ಕಳೆಯುತ್ತವೆಯೋ ಅಷ್ಟು ಗರ್ಭಹತ್ಯೆಗಳು, ಆ ಪತಿಗೆ ಲಭಿಸುತ್ತವೆ. ॥೧॥ ಭ್ರೂಣಹತ್ಯವೆಂದರೆ ಗರ್ಭವನ್ನು ನಾಶಗೊಳಿಸುವಿಕೆ.

ಯಜ್ಞವಲ್ಕ್ಯಸ್ಮೃತಿಯಲ್ಲಿ— ಸ್ತ್ರೀಯರುಗಳ ಹದಿನಾರು ಋತುದಿವಸಗಳಲ್ಲಿ ಮೊದಲ ಮೂರು ದಿವಸಗಳಂ ಬಿಟ್ಟು ಉಳಿದ ದಿವಸಗಳೊಳಗೆ ಸಮನಾದ ದಿವಸಗಳ ರಾತ್ರಿಗಳೊಳಗ ಪುರುಷನು ಸ್ತ್ರೀಯನ್ನು ಸೇರಬೇಕು.

ಮನುಸ್ಮೃತಿಯಲ್ಲಿ—ಋತುಕಾಲದ ಸಮದಿವಸಗಳಲ್ಲಿ ಸ್ತ್ರೀಯ ಸಂಯೋಗವನ್ನು ಮಾಡಿದ್ದೇ ಆದರೆ ಪುತ್ರನು ಜನಿಸುತ್ತಾನೆ. ವಿಷಮದಿವಸಗಳಲ್ಲಿ ಸ್ತ್ರೀಯು ಜನಿಸುತ್ತಾಳೆ. ಆದುದರಿಂದ ಪುತ್ರಾರ್ಥಿಯಾದವನು ಋತುಕಾಲದ ಸಮದಿವಸಗಳಲ್ಲಿ ಸ್ತ್ರೀಯನ್ನು ಸೇರಬೇಕು.

ವ್ಯಾಸಸ್ಮೃತಿಯಲ್ಲಿ—ಸ್ತ್ರೀಯ ಋತುಕಾಲದ ನಾಲ್ಕನೆಯ ರಾತ್ರಿಯಲ್ಲಿ ಪುರುಷನು (ಪತಿಯು) ಪತ್ನಿಯ ಸಂಯೋಗವನ್ನು ಮಾಡಿದ್ದೇಆದರೆ ಆ ದಿವಸ ಅಲ್ಪಾಯುಷ್ಯವುಳ್ಳವನೂ, ಧನವರ್ಜಿತನೂ (ದರಿದ್ರನೂ) ಆದ ಪುತ್ರನು ಹುಟ್ಟುತ್ತಾನೆ. ಐದನೆಯ ರಾತ್ರಿಯಲ್ಲಿ—ಜನವನ್ನು ತನ್ನ ವಶಮಾಡಿಕೊಳ್ಳುವ ಸ್ತ್ರೀಯು ಹುಟುವಳು. ಆರನೆಯ ರಾತ್ರಿಯಲ್ಲಿ-ಮಧ್ಯಮಗುಣದ ಪುತ್ರನುದಿಸುವನು. ಏಳನೆಯ ರಾತ್ರಿ

ಸ್ತ್ರೀ ದ್ವಾದಶ್ಯಾಂಪುರುಷೋತ್ತಮಃ । ತ್ರಯೋದಶ್ಯಾಂಸುತಾಚಸ್ಯಾ ದ್ವರ್ಣಸಂಕರಕಾರಿಣೀ ||೩|| ಧರ್ಮಜ್ಞಶ್ಚ ಕೃತಜ್ಞಶ್ಚ ಹ್ಯಾತ್ಮವೇದೀ ದೃಢವ್ರತಃ । ಪ್ರಜಾಯತೆಚತುರ್ದಶ್ಯಾಂ ಗುಣಾಢ್ಯೋ ಜಗತೀಪತಿಃ ||೪|| ರಾಜಪತ್ನೀಮಹಾಭಾಗಾ ರಾಜವಂಶಗತಾಥವಾ । ಜಾಯತೇ ಪಂಚದಶ್ಯಾಂತು ಬಹುಪುತ್ರಾಪತಿವ್ರತಾ ||೫|| ವಿದ್ಯಾಲಕ್ಷಣಸಂಪೂರ್ಣ ಸ್ಸತ್ಯವಾದೀ ಜಿತೇಂದ್ರಿಯಃ । ಆಶ್ರಯಸ್ಸರ್ವಭೂತಾನಾಂ ಷೋಡಶ್ಯಾಂ ಜಾಯತೇ ಪುಮಾನ್ ||೬|| "—

ತತ್ರನಿಷಿದ್ಧದಿನಾನ್ಯಾಹಮನುಃ;—" ಅಮಾವಸ್ಯಾಷ್ಟಮೀಚೈವ ಪೌರ್ಣಮಾಸೀಚತುರ್ದಶೀ। ಬ್ರಹ್ಮಚಾರೀ ಭವೇನ್ನಿತ್ಯ ಮಪ್ಯೃತೌಸಾ

ಯಲ್ಲಿ—ಸುಂದರಿಯಾದ ಸ್ತ್ರೀಯು ಜನಿಸುವಳು. ಎಂಟನೆಯ ರಾತ್ರಿಯಲ್ಲಿ ಈಶ್ವರನಂತಿಪ್ಪ ಸುತನು ಜನಿಸುವನು. ಒಂಭತ್ತನೆಯ ರಾತ್ರಿಯಲ್ಲಿ— ಪತಿಗೆ ಸುಖವನ್ನುಂಟುಮಾಡತಕ್ಕ ಸ್ತ್ರೀಯಳು ಜನಿಸುವಳು. ಹತ್ತನೆಯ ರಾತ್ರಿಯಲ್ಲಿ ಶ್ರೇಷ್ಠನಾದ ಪುರುಷನು ಜನಿಸುವನು. ಹನ್ನೊಂದನೆಯ ರಾತ್ರಿಯಲ್ಲಿ—ಧರ್ಮವನ್ನು ಮಾಡದಿರುವ ಸ್ತ್ರೀಯಳು ಜನಿಸುವಳು. ಹನ್ನೆರಡನೆಯ ರಾತ್ರಿಯಲ್ಲಿ—ವಿಷ್ಣುವಿನಂತಹ ಮಗನು ಉದಿಸುವನು. ಹದಿಮೂರನೆಯ ರಾತ್ರಿಯಲ್ಲಿ ಜಾತಿಯನ್ನು ಕೆಡಿಸತಕ್ಕ ಸ್ತ್ರೀಯಳು ಹುಟ್ಟುವಳು. ಹದಿನಾಲ್ಕನೆಯ ರಾತ್ರಿಯಲ್ಲಿ—ಸರ್ವಜ್ಞನೂ, ಕೃತಜ್ಞನೂ, (ಮಾಡಿದ ಉಪಕಾರವನ್ನು ಸ್ಮರಿಸುವವನು) ನಿಜಬ್ರಹ್ಮನನ್ನು ತಿಳಿದವನೂ, ಹಿಡಿದ ವ್ರತಂಗಳನ್ನು ಬಿಡದಿರತಕ್ಕವನೂ, ಶಮ, ದಮ, ಶಾಂತಿ, ತಿತಿಕ್ಷೆ, ಶ್ರದ್ಧೆ ಸಮಾಧಿಗಳೆಂಬ ಷಡ್ಗುಣಸಂಪನ್ನನೂ ಜಗತ್ತಿಗೆ ರಾಜನೂ ಆಗುವವನು ಹುಟ್ಟುವನು. ಹದಿನೈದನೆಯ ರಾತ್ರಿಯಲ್ಲಿ—ರಾಜಪತ್ನಿಯೂ, ಮಹಾಭಾಗ್ಯೆಯೂ, ರಾಜವಂಶವನ್ನೇ ಹೊಂದಿರತಕ್ಕವಳೂ, ಬಹು ಪುತ್ರವತಿಯೂ, ಪತಿವ್ರತೆಯೂ ಆದವಳು ಜನಿಸುವಳು. ||೪|| ಮತ್ತೂ ಹದಿನಾರನೆಯ ದಿವಸದಲ್ಲಿ—ವಿದ್ಯಾಲಕ್ಷಣಸಂಪೂರ್ಣನೂ, ಸತ್ಯವಾದಿಯೂ, ಜಿತೇಂದ್ರಿಯನೂ. ಸಮಸ್ತ ಭೂತಗಳಿಗೂ ಆಶ್ರಯನಾದವನೂ ಆದ ಪುರುಷನು ಹುಟ್ಟುತ್ತಾನೆ. ||೬||

ಆ ಹದಿನಾರು ದಿನಗಳೊಳಗೆ ನಿಷಿದ್ಧ ದಿವಸಗಳನ್ನು ಮನುವು ಹೇಳುತ್ತಾನೆ—ಅಮಾವಾಸ್ಯೆಯೂ, ಅಷ್ಟಮಿಯೂ, ಹುಣ್ಣಿಮೆಯೂ, ಚತುರ್ದಶಿಯೂ ಈ ನಾಲ್ಕು ದಿವಸಗಳಲ್ಲಿಯೂ ಕೂಡ ಪ್ರಸವ ಋತುಸ್ನಾನವನ್ನು ಮಾಡಿರತಕ್ಕ ಬ್ರಾಹ್ಮಣನು ಯಾವಾಗಲೂ ಬ್ರಹ್ಮಚಾರಿಯಾಗಿಯೇ ಇರಬೇಕು. ಮತ್ತೂ ಪ್ರಥಮಋತುವಿನಲ್ಲಿ ಮೊದಲನೆಯ ನಾಲ್ಕು ದಿವಸಗಳೂ, ಮತ್ತು ದ್ವಾದಶಿಯೂ, ತ್ರಯೋದಶಿಯೂ

ತರ್ಕೋದ್ವಿಜಃ॥೧॥ ತಾಸಾಮಾದ್ಯಾಶ್ಚತಸ್ರಸ್ತು ನಿಂದಿತಾದ್ವಾದಶೀತಥಾ। ತ್ರಯೋದಶೀಚ ಶೇಷಾಸ್ಸ್ಯುಃ ಪ್ರಶಸ್ತಾದಶರಾತ್ರಯಃ ॥೨॥ ಏವಂಗ ಚ್ಛೇತ್ಸ್ತ್ರಿಯಂಜ್ಞಾತ್ವಾಮಘಾಮೂಲಂಚ ವರ್ಜಯೇತ್ । ಸ್ತ್ರೀಯೋರ ಕ್ತಾಧಿಕೇ ಸ್ತ್ರೀಸ್ಯಾತ್ಪುಂಸಶ್ಶುಕ್ಲಾಧಿಕೇಪುಮಾನ್ ॥೩॥ ತಸ್ಮಾಚ್ಛುಕ್ಲವಿ ವೃದ್ಧ್ಯರ್ಥಂ ಭಕ್ಷ್ಯಂಸ್ನಿಗ್ಧಂಚ ಭಕ್ಷಯೇತ್ ”—

—ಅಥ ಗರ್ಭಾಧಾನಾದಿಕ್ರಿಯಾಣಾಂ ಕರ್ತೃನಿರ್ಣಯಃ—

ಶುದ್ಧಂಮಿಶ್ರಂತುಮಲಿನಂ ಪಿಂಡಂ ತ್ರೇಧಾಽಗಮೋದಿತಂ ॥ ಸಿದ್ಧಾಂತಶಿಖಾಮಣೌ;—“ ವಿಶುದ್ಧಾಃಪ್ರಾಕೃತಾಶ್ಚೇತಿದ್ವಿವಿಧಾಮಾನುಷಾಸ್ಸ್ಮೃತಾಃ । ಶಿವಸಂಸ್ಕಾರಿಣಶ್ಶುದ್ಧಾಃ ಪ್ರಾಕೃತಾಇತರೇಜನಾಃ॥೧॥ ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾಹಿದ್ವಿಧಾಮತಾ । ಏಕಾಶಿವೇನ ನಿರ್ದಿಷ್ಟಾ ಬ್ರಹ್ಮಣಾಕಥಿತಾಪರಾ॥೨॥ಶಿವಧರ್ಮೋಹಿಕಥಿತ ಶ್ಶಿವಾಶ್ರಮ

ಕೂಡ ನಿಂದಿತವಾದುವುಗಳು. ಉಳಿದ ಹತ್ತು ರಾತ್ರಿಗಳು ಪ್ರಶಸ್ತವಾದವುಗಳಾಗಿರುವುವು. ॥೨॥ ಈ ಪ್ರಕಾರವಾದ ರಾತ್ರಿಗಳಲ್ಲಿಯೂ ಕೂಡ, ಮಘೆಯನಕ್ಷತ್ರವನ್ನೂ ಮೂಲಾನಕ್ಷತ್ರವನ್ನೂ ಬಿಟ್ಟು ಶುಭನಕ್ಷತ್ರವನ್ನು ತಿಳಿದು ಸ್ವಸ್ತ್ರೀಯನ್ನುಹೊಂದುವವನಾಗಬೇಕು. ಈ ರೀತಿಯಾಗಿ ಸ್ತ್ರೀಪುರುಷರ ಸಂಯೋಗವುಂಟಾದನ್ನೇ ಅವರ ಸ್ತ್ರೀಯ ರಕ್ತವು ಹೆಚ್ಚಿದರೆ ಹೆಣ್ಣು ಶಿಶುವು ಜನಿಸುತ್ತದೆ. ಪುರುಷನ ಶುಕ್ಲವು (ರಜಸ್ಸು) ಹೆಚ್ಚಿದರೆ ಗಂಡು ಶಿಶುವು ಜನಿಸುತ್ತದೆ. ಆವಕಾರಣ ಗಂಡು ಶಿಶುವೇ ಹುಟ್ಟಬೇಕೆಂಬ ಅಪೇಕ್ಷೆಯುಳ್ಳ ಪುರುಷನು ತನ್ನಲ್ಲಿ ಶುಕ್ಲವು ಹೆಚ್ಚುವುದಕ್ಕೋಸ್ಕರವಾಗಿಯೇ ಸಾರವತ್ತಾದ ಆಹಾರವನ್ನು ಸ್ವೀಕರಿಸಬೇಕು.

ಅನಂತರ ಗರ್ಭಾಧಾನಾದಿಕ್ರಿಯೆಗಳನ್ನು ಮಾಡತಕ್ಕ

— ಕರ್ತೃಗಳ ನಿರ್ಣಯವು. —

ಪಿಂಡವು ಶುದ್ಧವೆಂತಲೂ, ಮಿಶ್ರವೆಂತಲೂ, ಮಲಿನವೆಂತಲೂ, ಆಗಮಗಳಲ್ಲಿ ಮೂರುಪ್ರಕಾರವಾಗಿ ಹೇಳಲ್ಪಟ್ಟಿರುವುದು.

ಸಿದ್ಧಾಂತಶಿಖಾಮಣಿಯಲ್ಲಿ—ಈ ಲೋಕದಲ್ಲಿರುವ ಮನುಷ್ಯರು ವಿಶುದ್ಧರೆಂತಲೂ, ಪ್ರಾಕೃತರೆಂತಲೂ ಎರಡು ಪ್ರಕಾರವಾಗಿ ಹೇಳಲ್ಪಟ್ಟಿರುವರು. ಇವರೊಳಗೆ ಶಿವಸಂಸ್ಕಾರವುಳ್ಳವರಾರೋ ಅವರೇ ಶುದ್ಧರು. ಶಿವಸಂಸ್ಕಾರವಿಲ್ಲದಿದ್ದವರಾರೋ ಅವರೇ ಪ್ರಾಕೃತಜನರೆಂಬದಾಗಿ ತಿಳಿದುಕೊ. ॥೧॥ ಮತ್ತು ವರ್ಣಾಶ್ರಮಾದಿ ಧರ್ಮಗಳ ವ್ಯವಸ್ಥೆಯು ಎರಡು ಪ್ರಕಾರವಾಗಿ ಹೇಳಲ್ಪಟ್ಟಿತು. ಒಂದು ವ್ಯವಸ್ಥೆಯು ಶಿವನಿಂದ ತೋರಿಸಲ್ಪಟ್ಟದ್ದು, ಮತ್ತೊಂದು ಬ್ರಹ್ಮನಿಂದ ಹೇಳಲ್ಪಟ್ಟ ವ್ಯವಸ್ಥೆಯು. ॥

ನಿಷೇವಿಣಾಂ। ಶಿವಸಂಸ್ಕಾರಹೀನಾನಾಂ ಧರ್ಮಃಪೈತಾಮಹಸ್ಸ್ಮೃತಃ॥

ಏತೇನವರ್ಣಾಶ್ರಮಧರ್ಮವತಾಂ ಮಲಿನಾನಾಂ ವೇದವಿರುದ್ಧತಂತ್ರೋದಿತಪಾಂಚರಾತ್ರಾದಿಮಲಿನಧರ್ಮಃ। ಮಿಶ್ರಾಣಾಂವರ್ಣಾಶ್ರಮಧರ್ಮವತಾಂ ಪೈತಾಮಹಪುರಾಣಾದ್ಯುದೀರಿತವ್ರತನಿಯಮೋಪವಾಸಕಾಮ್ಯಕರ್ಮಾಣಿ ನಿತ್ಯಕರ್ಮಾಣಿಚ ।ಶಿವಾಶ್ರಮಿಣಾಂವರ್ಣಾಶ್ರಮಧರ್ಮವತಾಂ ಶುದ್ಧಾನಾಂತು ಕಾಮ್ಯಫಲಾಭಿಸಂಧಿರಹಿತವೇದಾಗಮೋದಿತಪರಮೇಶ್ವರಾರಾಧನರೂಪಾಣಿ ಕರ್ಮಾಣಿ । ಇತಿಸಿದ್ಧಾಂತಶಿಖಾಮಣಿವಚನಪರ್ಯಾಲೋಚನಯಾಗರ್ಭಾಧಾನಾದಿಷು ಮಂತ್ರಲಿಂಗಾ ತ್ಫಲಾಭಿಸಂಧಿಮತಾಂಕರ್ಮಣಾಂತ್ಯಾಗಇತಿ । ತತ್ರತಾವನ್ನಾಂದೀಪುಣ್ಯಾಹವಾಚನಾದೀನಾಂ ಪಿತೃದೇವತಾಪ್ರೀತಿಕರಾಣಾಂ ಪ್ರಾಕೃತಾನಾಂತ್ಯಾಗಃ ॥ ವೀರಶೈವಪಿತೄಣಾಂಮುಕ್ತಾನಾಂ ತೃಪ್ತಿಕಾರಣಾಯೋಗೇನ ವೈ

ಈ ಎರಡರೊಳಗೆ ಶಿವಾಶ್ರಮಸಂಪನ್ನರಾದವರಿಗೆ ಶಿವಧರ್ಮವು ಅನುಸರಣೀಯವೆಂದೂ ಶಿವಸಂಸ್ಕಾರ ಹೀನರಾದವರುಗಳಿಗೆ ಬ್ರಹ್ಮಸಂಬಂಧವಾದ ಧರ್ಮವೆಂಬದಾಗಿಯೂ ಹೇಳಲ್ಪಟ್ಟಿತು. ॥೩॥

ಈ ರೀತಿಯಾಗಿ ಹೇಳಿರುವುದರಿಂದ ವರ್ಣಾಶ್ರಮ ಧರ್ಮಗಳುಳ್ಳ ಮಲಿನ ಪಿಂಡರುಗಳಿಗೆ ವೇದವಿರುದ್ಧಗಳಾದ ಪಾಂಚರಾತ್ರಾದಿ ತಂತ್ರಗಳಲ್ಲಿ ಹೇಳಲ್ಪಟ್ಟ ಮಲಿನಧರ್ಮವು. ॥ ವರ್ಣಾಶ್ರಮ ಧರ್ಮಗಳುಳ್ಳ ಮಿಶ್ರಪಿಂಡರುಗಳಿಗೆ ಬ್ರಹ್ಮಪುರಾಣವೇ ಮೊದಲಾದ ಪುರಾಣಗಳಲ್ಲಿ ಹೇಳಲ್ಪಟ್ಟ ವ್ರತಗಳೂ ನಿಯಮಗಳೂ ಉಪವಾಸಗಳೂ ಕಾಮ್ಯಕರ್ಮಗಳೂ ನಿತ್ಯಕರ್ಮಗಳೂ ಕೂಡ ಹೇಳಲ್ಪಟ್ಟುವು. ಅಪ್ರಾಕೃತ ವರ್ಣಾಶ್ರಮ ಧರ್ಮಗಳುಳ್ಳ ಶಿವಾಶ್ರಮಿಗಳಾದ ವಿಶುದ್ಧಪಿಂಡರುಗಳಿಗಾದರೋ ಕಾಮ್ಯ ಫಲವನ್ನುಂಟುಮಾಡದೆ ನಿತ್ಯಫಲವನ್ನುಂಟುಮಾಡತಕ್ಕವುಗಳಾಗಿಯೂ, ವೇದಗಳಲ್ಲಿಯೂ ಆಗವ ಗಳಲ್ಲಿಯೂ,ಹೇಳಲ್ಪಟ್ಟವುಗಳಾಗಿಯೂ ಇರುವ ಪರಮೇಶ್ವರನ ಆರಾಧನರೂಪಂಗಳಾದ ಕರ್ಮಂಗಳು ಹೇಳಲ್ಪಟ್ಟಿರುವುವು॥ ಎಂಬದಾಗಿ ಸಿದ್ಧಾಂತಶಿಖಾಮಣಿಯಲ್ಲಿ ಹೇಳಲ್ಪಟ್ಟಿರುವ ವಚನವನ್ನಾಲೋಚಿಸಿ, ಈ ವೀರಶೈವಮತಸ್ಥರಿಗೆ ಗರ್ಭಾಧಾನವೇ ಮೊದಲಾದ ಸಂಸ್ಕಾರಗಳಲ್ಲಿ ಫಲಾಭಿಸಂಧಿಯುಳ್ಳ ಕರ್ಮಗಳು ಬಿಡಲ್ಪಟ್ಟಿರುವುವು. ಮತ್ತೂ ಆ ಸಂಸ್ಕಾರಗಳಲ್ಲಿ ಪ್ರಾಕೃತಗಳಾಗಿಯೂ, ಪಿತೃದೇವತೆಗಳಿಗೆ ಪ್ರೀತಿಕರಂಗಳಾಗಿಯೂ ಇರುವ ನಾಂದೀಪುಣ್ಯಾಹವಾಚನಾದಿಗಳೂ ಸಹ ಬಿಡಲ್ಪಟ್ಟಿರುವುವು. ಏತಕ್ಕೆಂದರೆ—ನಿತ್ಯಮುಕ್ತರೂ ನಿತ್ಯತೃಪ್ತರೂ ಆದ ವೀರಶೈವಪಿತೃಗಳಿಗೆ ಪುನಃ ತೃಪ್ತಿ

ಯಥ್ಯಾರ್ಥತ್, ಶಿವಪ್ರಸಾದೇನ ನಿತ್ಯಪುಣ್ಯಾಹವತಾಂ ಕರ್ಮಾಂಗಪುಣ್ಯಾಹನ್ಯೈಯರ್ಥ್ಯಾಚ್ಚ || ಅಪ್ರಾಕೃತವಕ್ಷ್ಯಮಾಣಪುಣ್ಯಾಹಪ್ರಕಾರಾಣಾಂ ಸಂಗ್ರಹಃ || ಕಾಲನಿಯಮಾದಿಕರ್ಮಾನುಷ್ಠೇಯಂ। ಅನಿಯಮಸ್ಯನಿತ್ಯಫಲನಿವರ್ತಕತ್ವಾತ್, ನಿತ್ಯಫಲಂಶಿವಪ್ರಸಾದರೂಪೋಮೋಕ್ಷ ಇತಿ.

—ಅಥ ಗರ್ಭಾಧಾನವಿಧಿಃ—

ರಜೋದರ್ಶನಾತ್ಷೋಡಶಾಹೋರಾತ್ರಾಣಿ ಋತುಸ್ತತ್ರಾಧ್ಯೇ ಆದ್ಯಂರಾತ್ರಿಚತುಷ್ಕಂ ಪರ್ವಾದಿನಿಷಿದ್ಧದಿನಾನಿಚ ವರ್ಜಯಿತ್ವಾ ಮಖಾಮೂಲಾದಿವ್ಯತಿರಿಕ್ತೆ ದೈವಜ್ಞೋಕ್ತೆ ಶುಭೇಕಾಲೇ ದಂಪತ್ಯೋಶ್ಚಂದ್ರಾನುಕೂಲ್ಯೇ ಗರ್ಭಾಧಾನಂಕಾರ್ಯಂ ॥ ತತ್ರಾಪಿಯುಗ್ಮಾಸುರಾತ್ರಿಷು ಪುತ್ರಾಃ, ಅಯುಗ್ಮಾಸು ಕನ್ಯಾಜಾಯಂತೆ ಇತ್ಯಾದಿಜ್ಞೇಯಂ || ಅತ್ರಾಯಂಕ್ರಮಃ—ಕರ್ತಾ ಪೂರ್ವೇದ್ಯುಃ ಸ್ವಗೃಹಮುಪಲಿಪ್ಯ ರಂಗವಾಲಿ

ಯನ್ನು ಮಾಡುವುದು ವ್ಯರ್ಥವಾದುದರಿಂದಲೂ, ಮತ್ತೂ ಆ ಪಿತೃಗಳು ಪರಶಿವಪ್ರಸಾದದಿಂದ ನಿತ್ಯಪುಣ್ಯಾಹವುಳ್ಳವರಾಗಿರುವುದರಿಂದ ಕರ್ಮಾಂಗರೂಪವಾದ ಪುಣ್ಯಾಹವು ಅವರಿಗೆ ವ್ಯರ್ಥವಾಗುವುದರಿಂದಲೂ ಕೂಡ ಆ ಮುಷ್ಮಿಕ ಫಲವನ್ನು ಕೊಡತಕ್ಕ ಪ್ರಾಕೃತಕರ್ಮಗಳನ್ನು ಬಿಟ್ಟಿರುವುದು. ॥ ಆದಕಾರಣವೇ ಈ ವೀರಶೈವಮತಸ್ಥರಿಗೆ ಇನ್ನು ಮುಂದೆ ಅಪ್ರಾಕೃತಪುಣ್ಯಾಹಪ್ರಕಾರವೂ, ಅಪ್ರಾಕೃತನಾಂದೀಪ್ರಕಾರವೂ ಕೂಡ ಸಂಗ್ರಹಿಸಿ ಹೇಳಲ್ಪಡುವುದು. ಕಾಲನಿಯಮವೇ ಮೊದಲಾದುವುಗಳನ್ನು ಮಾತ್ರ ಅನುಸರಿಸಿ ಕರ್ತವ್ಯವು ಕರ್ಮವನ್ನು ಆಚರಿಸಬೇಕು. ನಿಯಮವಿಲ್ಲದ ಕರ್ಮಗಳನ್ನು ಆಚರಿಸಿದ ಪಕ್ಷದಲ್ಲಿ ಆ ಅನಿಯಮವು ನಿತ್ಯಫಲವನ್ನು ನಾಶಮಾಡುವುದು. ನಿತ್ಯಫಲವಾವುದೆಂದೊಡೆ ಶಿವಪ್ರಸಾದ ರೂಪವಾದ ನಿತ್ಯಮೋಕ್ಷವು ಎಂದರ್ಥ.

— ಅನಂತರ ಗರ್ಭಾಧಾನವಿಧಿಯು —

ಪ್ರಥಮಋತುದರ್ಶನ ದಿನವೇ ಮೊದಲು ಮಾಡಿಕೊಂಡು ಹದಿನಾರು ಹಗಲು ರಾತ್ರಿಗಳಿಗೂ ಕೂಡ ಋತು-ಎಂಬದಾಗಿ ಹೆಸರು. ಅವುಗಳೊಳಗೆ ಮೊದಲನೆಯವುಗಳಾದ ನಾಲ್ಕು ರಾತ್ರಿಗಳನ್ನೂ ಪರ್ವಕಾಲಗಳನ್ನೂ ನಿಷಿದ್ಧದಿನಗಳನ್ನೂ ಬಿಟ್ಟು ಮಖೆ ಮೂಲ ಇವೇ ಮೊದಲಾದ ದುಷ್ಟನಕ್ಷತ್ರಗಳಿಂದ ಬಿಡಲ್ಪಟ್ಟದಾಗಿಯೂ, ದಂಪತಿಗಳಿಗೆ ಶುಭಫಲದಾಯಕನಾಗಿರುವ ಚಂದ್ರನ ಬಲವುಳ್ಳುದಾಗಿಯೂ, ಜೋಯಿಸನಿಂದ ನಿಶ್ಚೈಸಲ್ಪಟ್ಟದಾಗಿಯೂ ಇರುವ ಶುಭಕಾಲದಲ್ಲಿ ಗರ್ಭಾಧಾನಕರ್ಮವನ್ನು ಮಾಡಬೇಕು. ॥ ಮತ್ತೂ ಆ ಶುಭಕಾಲಗಳಲ್ಲಿಯೂ ಕೂಡ ಗರ್ಭಾಧಾನಕರ್ಮವ

ಕಯಾಅಲಂಕೃತ್ಯ ಪ್ರಾತರಭ್ಯಂಗಸ್ನಾನಂಕೃತ್ವಾ, ಪತ್ನೀಮಪಿನವೋದ ಕುಂಭೆಸಲಿಲೈಃ ಸಪ್ತಮೃತ್ತಿಕಾಪಂಚಪಲ್ಲವ ಪಂಚತ್ವಕ್ಸಹಿತೈಃ ಸ್ನಾಪಯಿತ್ವಾ, ತಯಾಸಹ ಮಂಗಲವಸ್ತ್ರಾಭರಣಾದಿ ಧೃತ್ವಾಚಮ್ಯ "ಅಸ್ಯಾಃ ಮಮಭಾರ್ಯಾಯಾಃ ಪ್ರತಿಗರ್ಭಸಂಸ್ಕಾರಾತಿಶಯದ್ವಾರಾಶಿಸ್ಯಾಂ ಜನಿಷ್ಯಮಾಣಸರ್ವಗರ್ಭಾಣಾಂ ಬೀಜಗರ್ಭ ಸಮುದ್ಭವೈನೋನಿಬರ್ಹಣದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಗರ್ಭಾಧಾನಾಖ್ಯಂ ಕರ್ಮ ಕರಿಷ್ಯೆ" ಇತಿಸಂಕಲ್ಪ್ಯ ಸ್ವಸ್ತಿವಾಚನಾದಿಕಂಕೃತ್ವಾ ॥ ಅಪರೇದ್ಯು ರ್ಯಥಾಶಕ್ತಿ ಶತಂವಾ ದಶವಾ ಮಾಹೇಶ್ವರಾನ್ ಭೋಜಯಿತ್ವಾ, ತೇಭ್ಯಃ ಸ್ವಸ್ತ್ಯಯನಪೂರ್ವಕಯಾಶಿಶಿಷೋಗೃಹೀತ್ವಾ ಭುಂಜೀತ॥ ತತಃ ಸಾಯಂ ಕಾಲೇ ನಿತ್ಯಕರ್ಮಕೃತ್ವೋಭೌ ಶುಕ್ಲಾಂಬರಾನುಲೇಪನಮಾಲ್ಯಾಭರಣಾದಿಭಿರಲಂಕೃತೌ ಸ್ವಲಂಕೃತಂ ಸುಧೂಪಿತಂ ಗಂಧಮಾಲ್ಯಾಮಲ

ಸ್ನು ಸಮರಾತ್ರಿಗಳಲ್ಲಿ ಮಾಡಿದರೆ ಪುತ್ರರೂ, ವಿಷಮರಾತ್ರಿಗಳಲ್ಲಿಮಾಡಿದರ ಕನ್ಯೆಯು ಊ ಜನಿಸುತ್ತಾರೆಂದು ತಿಳಿಯತಕ್ಕದ್ದು. ಇಲ್ಲಿ ಆಗರ್ಭಾಧಾನಕರ್ಮದ ಕ್ರಮವು ಹೇಳಲ್ಪಡುತ್ತದೆ. ಮೊದಲನೆಯ ದಿವಸದಲ್ಲಿ ಕರ್ತನು ತನ್ನಮನೆಯನ್ನು ಸಾರಣೆಕಾರಣೆಗಳಿಂದ ಅಲಂಕಾರಮಾಡಿಕೊಂಡು, ತಾನು ಪ್ರಾತಃಕಾಲದಲ್ಲಿಯೇ ಅಭ್ಯಂಗಸ್ನಾನವನ್ನು ಮಾಡಿ, ಅನಂತರ ನೂತನ ಪಾತ್ರೆಯನ್ನಿರಿಸಿ ಆ ಪಾತ್ರೆಯಲ್ಲಿ ಜಲವನ್ನು ತುಂಬಿ ಆ ಜಲದಲ್ಲಿ ಆನೆ, ಕುದುರೆ, ರಥ, ಹುತ್ತ, ಕೊಟ್ಟಿಗೆ, ರಾಜಮಾರ್ಗ, ರಾಜಗೃಹ, ತುಲಸೀಮೂಲ, ಬಿಲ್ವಮೂಲ, ದೇವಾಲಯ, ಪರ್ವತ ಈ ಸ್ಥಾನಂಗಳೊಳಗೆ ಏಳು ಸ್ಥಾನದ ಮೃತ್ತಿಕೆಯನ್ನೂ ಮತ್ತು-ಮುತ್ತುಗ, ಹತ್ತಿ, ಅರಳಿ, ಆಲ, ಬಸರಿ, ಬನ್ನಿ, ನೇರಿಲೆ, ಬಿಲ್ವ, ಬೇಲ, ಮಾವು, ಬಾಗೆ ಈ ಮರಗಳೊಳಗೆ ಐದು ಮರಗಳ ಚಿಗುರನ್ನೂ ಅವುಗಳ ತೊಕ್ಕನ್ನೂ ಹಾಕಿ ಮಿಶ್ರಮಾಡಿ ಆ ಪತ್ನಿಯನ್ನೂ ಸ್ನಾನಮಾಡಿಸಿ, ಮಂಗಳವಸ್ತ್ರಾಭರಣಾದಿಗಳನ್ನುಧರಿಸಿ ಆ ಪತ್ನಿಯೊಡನೆಯೇ ಕುಳಿತುಕೊಂಡು ಆಚಮನವನ್ನು ಮಾಡಿ, ಈ ನನ್ನಪತ್ನಿಯ ಪ್ರತಿಗರ್ಭಕ್ಕೂ ಮೂಲಭೂತವಾದ ಈ ಅತಿಶಯವಾದ ಸಂಸ್ಕಾರಮೂಲಕವಾಗಿಯೂ, ಮತ್ತು ಈ ನನ್ನ ಪತ್ನಿಯಲ್ಲಿ ಉತ್ಪನ್ನವಾಗತಕ್ಕ ಸಮಸ್ತ ಗರ್ಭಗಳ ಬೀಜಸಂಬಂಧವಾದ ಪಾಪವನ್ನೂ ಗರ್ಭಸಂಬಂಧವಾದ ಪಾಪವನ್ನೂ ಹೋಗಲಾಡಿಸುವುದರ ಮೂಲಕವಾಗಿಯೂ ಶ್ರೀಪರಮೇಶ್ವರನಿಗೆ ಪ್ರೀತಿಯನ್ನುಂಟುಮಾಡುವುದಕ್ಕೋಸ್ಕರ ಗರ್ಭಾಧಾನನಾಮಕವಾದ ಕರ್ಮವನ್ನು ಮಾಡುತ್ತೇನೆ, ಈ ಕರ್ಮಕ್ಕೆ ಅಂಗವಾಗಿ ಮೊದಲಲ್ಲಿ ಪುಣ್ಯಾಹವಾಚನವನ್ನೂ ನಾಂದೀಸಮಾರಾಧನೆಯನ್ನೂ ಮಾಡುತ್ತೇನೆಂದು ಸಂಕಲ್ಪಿಸಿ, ಸ್ವಸ್ತಿವಾಚನಾದಿಗಳನ್ನು

ದೀಪಯುಕ್ತಂ ಗೃಹಂಪ್ರವಿಶೇತ್ ॥ ತತೋ ಭರ್ತಾ ಅಭಗ್ನಂ ಜಂತುವ ರ್ಜಿತಂ ಸುಖಸ್ಪರ್ಶಂ ವಿತಾನಪರಿಮಂಡಿತಂ ಮಂಚಕಮಾರುಹ್ಯ, ಪ್ರಾ ಗುಕ್ತಶೋಭನೇಮುಹೂರ್ತೇ ಸ್ತ್ರಿಯಮಾರೋಪ್ಯ ಆಸನಪ್ರಾಣಾಯಾ ಮೌಕೃತ್ವಾ ತಿಥ್ಯಾದ್ಯುಚ್ಚಾರ್ಯ, "ಆವಾಭ್ಯಾಂ ಸಮಸ್ತವಿದ್ಯಾಶಿವಭಕ್ತಿ ಲಕ್ಷಣಸಂಪೂರ್ಣಾಯುಷ್ಮತ್ಪುತ್ರಜನನಾರ್ಥಂ ಗರ್ಭಾಧಾನಂಕರಿಷ್ಯೇ" ಇತಿಸಂಕಲ್ಪ್ಯ, ಅಶ್ವಗಂಧಾಕಲ್ಕಂ ದೂರ್ವಾಕಲ್ಕಂವಾ ಸೂಕ್ಷ್ಮವಸ್ತ್ರೇ ನಿಕ್ಷಿಪ್ಯ, ಉದೀರ್ಷ್ವೇತಿದ್ವಯೋಃ ಸೂರ್ಯಾಸಾವಿತ್ರೀ ಸೂರ್ಯಾಸಾವಿತ್ರೀ ಆದ್ಯಾತ್ರಿಷ್ಟುಬಂತ್ಯಾ ಅನುಷ್ಟುಪ್, ಭಾರ್ಯಾಯಾ ದಕ್ಷಿಣನಾಸಾಪುಟೇ ಅ ಶ್ವಗಂಧಾ ದೂರ್ವಾಗಸಸೇಚನೇ ವಿನಿಯೋಗಃ— "ಓಂ ಉದೀರ್ಷ್ವಾ ತಃಪತಿವತೀಹ್ಯೇಷಾ ವಿಶ್ವಾವಸುಂ ನಮಸಾಗೀರ್ಭಿರೀಳೆ ॥ ಅನ್ಯಾಮಿಚ್ಛ ಪಿತೃಷದಂವ್ಯಕ್ತಾಂ ಸತೇಭಾಗೋಜನುಷಾತಸ್ಯವಿದ್ಧಿ ॥೧॥ ಉದೀರ್ಷ್ವಾ ತೋವಿಶ್ವಾವಸೋ ನಮಸೇಳಾಮಹೇತ್ವಾ । ಅನ್ಯಾಮಿಚ್ಛಪ್ರಫರ್ವ್ಯಂ ಸಂಜಾಯಾಂಪತ್ಯಾಸೃಜಃಸ್ವಾಹಾ ॥೨॥ ಇತಿವಾಮಭಾಗೋಪವಿಷ್ಟಾ

ಮಾಡುವುದು. ॥ ಅನಂತರ ಎರಡನೆಯ ದಿವಸದಲ್ಲಿ ನೂರುಮಂದಿ ಮಾಹೇಶ್ವರರಿಗಾದ ರೂ ಹತ್ತುಮಂದಿಗಾದರೂ ಯಥಾಶಕ್ತಿಯಾದರೂ ಸರಿಯೆ ಮಾಹೇಶ್ವರರಿಗೆ ಭೋಜನ ವನ್ನು ಮಾಡಿಸಿ, ಅವರುಗಳಿಂದ ಮಂಗಳಸೂಕ್ತಪೂರ್ವಕವಾದ ಆಶೀರ್ವಾದವನ್ನು ಹೊಂದಿ, ಬಳಿಕ ತಾನೂ ಪತ್ನಿಯೂ ಭೋಜನವನ್ನು ಮಾಡಬೇಕು. ॥ ಅನಂತರ ಪತಿಯು ಮುರಿದುದೆ ಇರತಕ್ಕದ್ದಾಗಿಯೂ, ಕ್ರಿಮಿಕೀಟಗಳಿಲ್ಲದುದಾಗಿಯೂ, ಸುಖ ವಾಗಿ ಮಲಗಿಕೊಳ್ಳುವುದಕ್ಕೆ ಯೋಗ್ಯವಾಗಿಯೂ, ಮೇಲ್ಕಟ್ಟುಗಳಿಂದ ಅಲಂಕರಿಸ ಲ್ಪಟ್ಟುದಾಗಿಯೂ ಇರುವ ಮಂಚವನ್ನು ಹತ್ತಬೇಕು. ॥ ಬಳಿಕ ಪೂರ್ವೋಕ್ತವಾದ ಶುಭಮುಹೂರ್ತದಲ್ಲಿ ತನ್ನ ಸ್ತ್ರೀಯನ್ನು ಆ ಮಂಚಕ್ಕೆ ಹತ್ತಿಸಿ, ಕ್ರಮವಾದ ಆಸ ನವನ್ನು ಹಾಕಿ ಕುಳಿತುಕೊಂಡು, ಪ್ರಾಣಾಯಾಮವನ್ನು ಮಾಡಿ, ತಿಥಿಯೇ ಮೊದ ಲಾದುವುಗಳನ್ನುಚ್ಚರಿಸಿ, ಈಗ ನಮ್ಮಿರ್ವರಿಂದಲೂ ಕೂಡ ಸಮಸ್ತ ವಿದ್ಯಾವಂತನೂ ಶಿವಭಕ್ತಿಲಕ್ಷಿತನೂ, ಸಂಪೂರ್ಣವಾದ ಆಯುಷ್ಯವುಳ್ಳವನೂ ಆದ ಪುತ್ರನು ಹುಟ್ಟು ವುದಕ್ಕೋಸ್ಕರ ಗರ್ಭಾಧಾನಕರ್ಮವು ಮಾಡಲ್ಪಡುತ್ತದೆ, ಎಂದು ಈ ರೀತಿಯಾಗಿ ಸಂಕಲ್ಪಿಸಿ, ॥ ಅಶ್ವಗಂಧಿಯುಕಲ್ಕವನ್ನಾದರೂ ಸರಿಯೆ ಅಥವಾ ಬಿಳೀಗರಿಕೆಯ ಕಲ್ಕ ವನ್ನಾದರೂ ಸರಿಯೆ ಸೂಕ್ಷ್ಮವಾದ ಬಟ್ಟೆಯಲ್ಲಿ ಇರಿಸಿ, ಬಳಿಕ ಉದೀರ್ಷ್ವೇತಿ...... ವಿನಿಯೋಗಃ ॥ ಎಂದು ಹೇಳಿ "ಓಂ ಉದೀರ್ಷ್ವಾತಃ...........ಜನುಷಾತಸ್ಯವಿ ದ್ಧಿ ॥೧॥ ಉದೀರ್ಷ್ವಾತೋ.... ....ಸೃಜಃಸ್ವಾಹಾ" ॥೨॥ ಎಂಬ ಈ ಎರಡು

ಯಾ ಭಾರ್ಯಾಯಾ ದಕ್ಷಿಣನಾಸಾಬಿಲೇ ಅಶ್ವಗಂಧಾದಿಗಸಂಸಿಕ್ತ್ವಾ, ತದ್ರಸೇ ಉದರಂಗತೆ, ತಾವನಾಚಮುಯ್ಯೋಪೇಯಾತ್, ಅನೇನ ಗರ್ಭದೋಷನಿಬರ್ಹಣಂಭವತಿ–ಇತಿಗರ್ಭಾಧಾನವಿಧಿಃ.

ಅಥ ಪುಂಸವನಾನವಲೋಭನಯೋಃ ಪ್ರಯೋಗಃ.

ಗರ್ಭಮಾಸಪ್ರಭೃತಿ ತೃತೀಯಮಾಸೆ, ಗರ್ಭಾಭಿವ್ಯಕ್ತೌ ತತ್ರಾನಭಿವ್ಯಕ್ತೌತು, ಚತುರ್ಥೇಷಷ್ಠೆ ಅಷ್ಟಮೇವಾಮಾಸಿ, ಅರಿಕ್ತಾದಿತಿಥೌ, ಪುಷ್ಯಾದಿಪುನ್ನಕ್ಷತ್ರೆ, ಶುಕ್ರಸೋಮ ಬುಧಗುರುವಾರೇಷು, ವಿಷ್ಟ್ಯಾದಿದೋಷರಹಿತೇ, ದೈವಜ್ಞೋಕ್ತೆ, ಕಾಲೇಪುಂಸವನಾನವಲೋಭನೇ ಕುರ್ಯಾತ್ ‖ ಅತ್ರನಿಯತಕಾಲತ್ವಾದ್ಗುರು ಶುಕ್ರಾಸ್ತಬಾಲ್ಯವಾರ್ಧಕಮಲಮಾಸಾದಿಷ್ವಪಿನದೋಷೋ ದೋಷರಹಿತಕಾಲಾಲಾಭೇ ತದ್ರಹಿತವಿಹಿತಕಾಲಲಾಭೇಶುಕ್ರಾಸ್ತಾದೌ ನಕಾರ್ಯೇ, ಸೀಮಂತದಿನೇವಾಕಾರ್ಯೇ,

ಏತತ್ಕರಿಷ್ಯಮಾಣಃಪತಿಃ ಪೂರ್ವೇದ್ಯುಃ ಪುಂಸವನಾರ್ಥಂ ಸಮಾನರೂಪವತ್ಸಾಯಾ ಗೋಸ್ತದಲಾಭೇ, ಅನ್ಯಸ್ಯಾವಾ ಕ್ಷೀರಂದಧ್ಯರ್ಥಂ,

---

ಮಂತ್ರಗಳನ್ನು ಉಚ್ಚರಿಸುತ್ತಾ ತನ್ನ ಎಡಭಾಗದಲ್ಲಿ ಕುಳಿತಿರುವ ಪತ್ನಿಯ ಬಲಮೂಗಿನ ಹೊಳ್ಳೆಯಲ್ಲಿ ಅಶ್ವಗಂಧಾದಿರಸವನ್ನು ಸೇಚನೆ ಮಾಡಬೇಕು. ಆರಸವು ಆಕೆಯ ಉದರವನ್ನು ಹೊಂದಿದನಂತರ ಆಕೆಯನ್ನು ಆಚಮನಮಾಡಿಸಿ, ಬಳಿಕ ಈರ್ವರೂ ಲಜ್ಜಾರಹಿತರಾಗಿ ಸುಖವಾಗಿ ರಮಿಸುವುದು. ಇದರಿಂದ ಗರ್ಭದೋಷ ನಿವಾರಣೆಯಾಗುತ್ತದೆ. ಈ ಪ್ರಕಾರವಾಗಿ ಗರ್ಭಾಧಾನವಿಧಿಯು ಮುಗಿದುದು.

—ಅನಂತರ ಪುಂಸವನಾನವಲೋಭನ ಕರ್ಮಗಳ ವಿಧಿಯು:—

ಗರ್ಭಧಾರಣೆಯಾದ ದಿವಸವೇ ಮೊದಲುಮಾಡಿಕೊಂಡು ಮೂರುತಿಂಗಳಲ್ಲಿಯೇ ಗರ್ಭವು ಸ್ಪಷ್ಟವಾಗಿ ಪ್ರಕಾಶಮಾನವಾದದ್ದೇ ಆದರೆ ಆಕಾಲದಲ್ಲಿಯೇ ಈ ಕರ್ಮವನ್ನು ಮಾಡಬೇಕು. ಅಥವಾ ಹಾಗೆ ಬಂದುವೇಳೆ ಗರ್ಭವು ಸ್ಪಷ್ಟವಾಗಿ ಪ್ರಕಾಶವಾಗದೆ ಹೋದಪಕ್ಷದಲ್ಲಿ- ನಾಲ್ಕನೆಯ ತಿಂಗಳಲ್ಲಿಯಾದರೂ ಸರಿಯೆ ಆರನೆಯ ತಿಂಗಳಲ್ಲಿಯಾದರೂ ಸರಿಯೆ, ಎಂಟನೆಯ ತಿಂಗಳಲ್ಲಿಯಾದರೂ ಸರಿಯೆ ಶುಭತಿಥಿಗಳಲ್ಲಿ, ಪುಷ್ಯನಕ್ಷತ್ರವೇ ಮೊದಲಾದ ಪುರುಷನಕ್ಷತ್ರಗಳಲ್ಲಿ, ಶುಕ್ರವಾರ ಸೋಮವಾರ ಬುಧವಾರ ಗುರುವಾರಂಗಳಲ್ಲಿ, ವಿಷ್ಟಿದೋಷವೇ ಮೊದಲಾದ ದೋಷಂಗಳಿಲ್ಲದಿರುವ ಕಾಲದಲ್ಲಿ, ದೈವಜ್ಞನಿಂದ ನಿಶ್ಚೈಸಲ್ಪಟ್ಟ ಶುಭಲಗ್ನದಲ್ಲಿ ಈ ಪುಂಸವನ ಕರ್ಮವನ್ನೂ ಅನವಲೋಭನ ಕರ್ಮವನ್ನೂ ಮಾಡಬೇಕು. ‖ ಈರೀತಿಯಾಗಿ ಈ ಕರ್ಮಗಳನ್ನು ಮಾಡುವುದಕ್ಕೆ ಶುಭಕಾಲಂಗಳನ್ನು ನಿಶ್ಚೈಸಿರುವುದರಿಂದ ಗುರು ಶುಕ್ರರು

ಪುಷ್ಪಂಮಾಷಷಟ್ಕಂ, ಯವತ್ರಯಂಚಸಂಪಾದ್ಯ, ವೃತ್ತಾಕಾರಮವಿರಳಭಾಯ ಮಚ್ಛಾವಕಾಶಂ ಗೃಹೈಕದೇಶಂಕೃತ್ವಾ, ವಿಧಿವತ್ಸ್ವಸ್ತಿವಾಚನಂ ವಕ್ಷ್ಯಮಾಣನಾಂದೀಂಚಕೃತ್ವಾ, ಗರ್ಭಾಭಿವೃದ್ಧ್ಯವಿರೋಧಿಹವಿಷಾಕೃತ್ಯೈಕಭುಕ್ತಾಂ ಭಾರ್ಯಾಂಕೃತ್ವಾ, ಸ್ವಯಂಬ್ರಹ್ಮಚಾರೀಸ್ತಿಷ್ಠೇತ್॥ಅಪರೇದ್ಯುಃ ಶುಭದಿನೇ ಪುಂನಕ್ಷತ್ರೇ ನಿತ್ಯಕರ್ಮಾನಂತರಮುಪಲೇಪನಾದಿಕೃತ್ವಾ, ಮಂಗಲಸ್ನಾತಾಂ ಪರಿಹಿತಾಹತವಾಸಸಂ ಪ್ರಾವೃತಪ್ರಾವರಣೀಯಾಂ ಭೂಷಣಭೂಷಿತಾಂ ಭಾರ್ಯಾಮಾತ್ಮನೋ ದಕ್ಷಿಣಪಾರ್ಶ್ವೇ ಉಪವೇಶ್ಯ, ಸದ್ಯೋವಾಕೃತಸ್ವಸ್ತಿವಾಚನಾದಿ ರ್ದೇಶಕಾಲೌಸ್ಮೃತ್ವಾ "ಸಂಸ್ಕಾರಕಸ್ತುಸರ್ವತ್ರ ವಿಶೇದುತ್ತರತಸ್ಸದಾ । ಸಂಸ್ಕಾರ್ಯಃಪುರುಷೋವಾಪಿ ಸ್ತ್ರೀವಾದಕ್ಷಿಣತಸ್ಸದಾ ॥" ಅಸ್ಯಾಂಭಾರ್ಯಾಯಾ ಮುತ್ಪತ್ಸ್ಯಮಾನಸ್ಯ ಗರ್ಭಸ್ಯ ಬೈಜಿಕಗಾರ್ಭಿಕದೋಷಪರಿಹಾರಪುಂರೂಪತಾ ಜ್ಞಾನೋದಯಪ್ರತಿರೋಧಿ ಪರಿಹಾರದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಪುಂಸವನಮನವಲೋಭನಂಚ(ತಂತ್ರೇಣ) ಕರಿಷ್ಯೇ—

ಅಸ್ತಂಗತರಾಗಿರುವ ಕಾಲದಲ್ಲಿಯೂ ಮತ್ತು ಗುರು ಶುಕ್ರರು ಬಾಲ್ಯವನ್ನೂ ವಾರ್ಧಕವನ್ನೂ ಹೊಂದಿರುವ ಕೆಟ್ಟಮಾಸಂಗಳಲ್ಲಿಯೂ, ಈ ಕರ್ಮಗಳನ್ನು ಮಾಡಿದುದೇ ಆದರೆ ದೋಷಪ್ರಾಪ್ತಿಯಾಗುವುದು. ಒಂದುವೇಳೆ ದೋಷರಹಿತವಾದ ಶುಭಕಾಲ ಸಿಕ್ಕದೆಹೋಗಿ, ಮಂಗಳಕರವಾದ ಲಗ್ನವು ಸಿಕ್ಕಿದಾಗ್ಯೂ ಶುಕ್ರಾಸ್ತ ಮುಂತಾದವುಗಳಲ್ಲಿ ಈ ಕರ್ಮವನ್ನು ಮಾಡಕೂಡದು. ಇಂತಹ ಸಂದರ್ಭವು ಪ್ರಾಪ್ತವಾದಕಾಲದಲ್ಲಿ ಈ ಕರ್ಮಗಳನ್ನು ಸೀಮಂತಕರ್ಮವನ್ನು ಮಾಡುವಾಗಲೇ ಮಾಡಿಕೊಳ್ಳಬಹುದು.

. ಈ ವಿಷಯವನ್ನೆಲ್ಲಾ ಯೋಚಿಸಿ ಕರ್ಮವನ್ನು ಮಾಡತಕ್ಕ ಪತಿಯು ಮೊದಲನೆಯ ದಿವಸದಲ್ಲಿಯೇ ಪುಂಸವನ ಸಂಸ್ಕಾರವನ್ನು ಮಾಡುವುದಕ್ಕೋಸ್ಕರವಾಗಿಯೇ ಸಮಾನರೂಪುಳ್ಳ ಕರುವನ್ನು ಪಡೆದಿರತಕ್ಕ ಹಸುವಿನ ಹಾಲಿನಿಂದಲಾಗಲಿ,ಅದು ದೊರೆಯದಿದ್ದ ಪಕ್ಷದಲ್ಲಿ ಮತ್ತೊಂದು ಹಸುವಿನ ಹಾಲಿನಿಂದಲಾಗಲಿ,ಮೊಸರನ್ನು ಮಾಡಿಕೊಂಡು ಹುಳುಕಿಲ್ಲದೆ ಗಟ್ಟಿಯಾಗಿರತಕ್ಕ ಆರು ಉದ್ದಿನಕಾಳನ್ನೂ, ಮೂರು ಜವೆಯಕಾಳನ್ನು ಅಥವಾ ಮೂರು ಗೋದುವೆಯಕಾಳನ್ನಾದರೂಸರಿ ಸಂಪಾದಿಸಿಕೊಂಡು ತನ್ನ ಮನೆಯ ಒಂದು ಭಾಗವನ್ನು ಮಂಡಲಾಕಾರವಾಗಿಯೂ,ಸ್ವಲ್ಪ ನೆರಳುಳ್ಳುದನ್ನಾಗಿಯೂ, ಸ್ವಲ್ಪ ಅವಕಾಶವುಳ್ಳುದನ್ನಾಗಿಯೂ ಮಾಡಿಕೊಂಡು, ವಿಧಿಪೂರ್ವ

ಇತಿಸಂಕಲ್ಪ್ಯ, ವಿಧಿವತ್ಕೌತುಕ ಸೂತ್ರಮಾಬಧ್ಯ, ಪ್ರಕ್ಷಾಲಿತೇಪ್ರಸೃತೀಕೃತೇ ದಕ್ಷಿಣೆ ಪತ್ನೀಪಾಣೌ ಪ್ರಸೃತಿಮಿತಂ ತದ್ಗೋದಧಿನಿಕ್ಷಿಪ್ಯ, ತದುಪರಿ ಲಿಂಗವದ್ಯವಂ ಗೋಧೂಮಂವಾ, ತತ್ಪಾರ್ಶ್ವಯೋರಂಡದ್ವಯವನ್ಮಾಷದ್ವಯಂನಿಧಾಯ, ಕಿಂಪಿಬಸಿ, ಕಿಂಪಿಬಸಿ, ಕಿಂಪಿಬಸಿ-ಇತಿ ತ್ರಿಃಪತಿಃಪೃಚ್ಛೇತ್ ॥ ಸಾಚ-ಪುಂಸವನಂ-ಇತಿತ್ರಿರುಕ್ತ್ವಾ ವಸಯವಮಾಷಂತದ್ದಧಿ ನಿಶ್ಶೇಷಂಪೀತ್ವಾ ಜಲಮಾಚಮ್ಯ, ಪುನರೇವಂದ್ವಿಃ (ಕಿಂಪಿಬಸಿ) ಪ್ರಶ್ನಪ್ರತಿವಚನಪೂರ್ವಕಂಪ್ರಾಶ್ಯಾಚಮೇತ್ ಏತತ್ಪುಂಸವನಂ

ಅನವಲೋಭನಂತು—ದೂರ್ವಾಪುಂಜಂ ಕನ್ಯಕಯಾ ದೃಷದ್ಯುಪಲೆನಪೇಷಯಿತ್ವಾ ತತ್ಪಾಣಿನಾಪಿಂಡೀಕೃತ್ಯ, ಶುದ್ಧವಸನಾಂಚಲೇಸಂಗೃಹ್ಯ, ಪ್ರಜಾವದಾಖ್ಯಂ ಜೀವಪುತ್ರಸಂಜ್ಞಕಂಚ ಸೂಕ್ತಂಜಪಿತ್ವಾ, ಮಂಡಲಾಗಾರಛಾಯಾಯಾ ಮುಪವಿಷ್ಟಾಯಾಃ ಪ್ರಾಙ್ಮುಖ್ಯಾಃ ಪತ್ನ್ಯಾಃಪಶ್ಚಿಮತಸ್ತಿಷ್ಠನ್, ಪತಿಃ ತದಾನನಮುನ್ನಮಯ್ಯ, ದಕ್ಷಿಣೇನಾಸಾಬಿಲೆಸ್ವಾಂಗುಷ್ಠಾಗ್ರೇಣ ದೂರ್ವಾರಸಮಾಸಿಂಚೇತ್. ತತ್ರಪ್ರಜಾ

ಕವಾಗಿ ಸ್ವಸ್ತಿವಾಚನವನ್ನು ಮಾಡಿಕೊಂಡು, ತನ್ನ ಪತ್ನಿಯ ಗರ್ಭದಲ್ಲಿ ಅಭಿವೃದ್ಧಿಗೆ ವಿರೋಧವಿಲ್ಲದಿರುವಹಾಗೆ ತನ್ನ ಪತ್ನಿಗೆ ಏಕಭುಕ್ತ (ಒಂದು ಹೊತ್ತಿನೂಟ) ವನ್ನುಮಾಡಿಸಿ, ತಾನು ಆ ದಿವಸದಲ್ಲಿ ಬ್ರಹ್ಮಚಾರಿಯಾಗಿರಬೇಕು. ಬಳಿಕ ಪುರುಷ ನಕ್ಷತ್ರವುಳ್ಳುದಾಗಿ ಶುಭದಿನವಾಗಿರುವ ಎರಡನೆಯ ದಿವಸದಲ್ಲಿ ತಾನು ನಿತ್ಯಕರ್ಮವನ್ನು ನೆರವೇರಿಸಿಕೊಂಡು ಅನಂತರ ಆ ಮಂಡಪಾಗಾರಸ್ಥಾನಕ್ಕೆ ಸಾರಣೆ ಕಾರಣೆಗಳನ್ನು ಮಾಡಿಸಿ, ಅಲ್ಲಿ ತಾನು ಕುಳಿತುಕೊಂಡು. ಬಳಿಕ ಮಂಗಳಸ್ನಾನವನ್ನು ಮಾಡಿಕೊಂಡು ನೂತನವಸ್ತ್ರವನ್ನುಟ್ಟು ನೂತನಕಂಚುಕವನ್ನು ತೊಟ್ಟು ಒಡವೆಗಳನ್ನಿಟ್ಟುಕೊಂಡಿರುವ ಪತ್ನಿಯನ್ನು (ಸಂಸ್ಕಾರವನ್ನು ಮಾಡತಕ್ಕವನು ಯಾವಾಗಲೂ ಉತ್ತರಭಾಗದಲ್ಲಿಯೇ ಕುಳಿತುಕೊಳ್ಳಬೇಕು. ಸಂಸ್ಕಾರವನ್ನು ಮಾಡಿಸಿಕೊಳ್ಳತಕ್ಕ ಪುರುಷನಾಗಲಿ ಸ್ತ್ರೀಯಾಗಲಿ ಕರ್ತೃವಿನ ದಕ್ಷಿಣಭಾಗದಲ್ಲಿಯೇ ಯಾವಾಗಲೂ ಕುಳಿತುಕೊಳ್ಳಬೇಕೆಂಬದಾಗಿ ಪ್ರಮಾಣವಚನವಿರುವುದರಿಂದ) ತನ್ನ ಬಲದ ಪಾರ್ಶ್ವದಲ್ಲಿಯೇ ಕುಳ್ಳಿರಿಸಿಕೊಂಡು, ಸ್ವಸ್ತಿವಾಚನವನ್ನೂ ನಾಂದೀಸಮಾರಾಧನೆಯನ್ನೂ ಮಾಡಿಕೊಂಡು, ದೇಶಕಾಲಂಗಳನ್ನು ಸ್ಮರಿಸಿ, ಈ ನನ್ನ ಪತ್ನಿಯಲ್ಲಿ ಉತ್ಪನ್ನವಾಗತಕ್ಕ ಗರ್ಭಕ್ಕೆ ಬೀಜಸಂಬಂಧವಾದ ದೋಷವೂ, ಗರ್ಭಸಂಬಂಧವಾದ ದೋಷವೂ ಪರಿಹಾರವಾಗಿ, ಪುರುಷ ರೂಪತ್ವಕ್ಕೂ ಜ್ಞಾನೋತ್ಪತ್ತಿಗೂ ಪ್ರತಿಬಂಧಿಯಾಗಿರುವುದರ ಪರಿಹಾರ ಮೂಲಕವಾಗಿಯೇ ಶ್ರೀಪರಮೇಶ್ವರನನ್ನು ಪ್ರೀತಿಪ

ವದಾಖ್ಯಂಸೂಕ್ತಂ-" ಆತೇಗರ್ಭೋಯೋನಿಮೇತು ಪುಮಾನ್ಬಾಣಇವೇ ಷುಧಿಂ। ಆವೀರೋಜಾಯತಾಂ ಪುತ್ರಸ್ತೇದಶಮಾಸ್ಯಃ। ಕರೋಮಿತೇಪ್ರಾಜಾಪತ್ಯ ಮಾಗರ್ಭೋಯೋನಿಮೇತುತೇ । ಅನೂನಃಪೂರ್ಣೋ ಜಾಯತಾ ಮಶ್ಲೋಣೋಪಿಶಾಚಧೀತಃ । ಪುಮಾಂಸ್ತೇಪುತ್ರೋನಾರೀ ತಂಪುಮಾನನುಜಾಯತಾಂ।ಯಾನಿಭದ್ರಾಣಿಬೀಜಾನ್ಯೃಷಭಾಜನಯಂತುನೌ। ತಾನಿಭದ್ರಾಣಿಬೀಜಾನ್ಯೃಷಭಾ ಜನಯಂತಿನಃ। ತೈಸ್ತ್ವಂಪುತ್ರಾನ್ವಿಂದಸ್ವ ಸಾಪ್ರಸೂರ್ಧೇನುಕಾಭವ। ಕಾಮಸ್ಸಮೃಧ್ಯತಾಂಮಹ್ಯ ಮಪರಾಜಿತಮೇವಮೇ । ಯಂಕಾಮಂಕಾಮಯೇದೇವಂ ತಂಮೇವಾಯೋಸಮರ್ಧಯ " ಇತಿ. ಅಥಜೀವಪುತ್ರಾಖ್ಯಂಸೂಕ್ತಂ—" ಅಗ್ನಿರೈತುಪ್ರಥಮೋ ದೇವತಾನಾಂಸೋಸ್ಯೈಪ್ರಜಾಂಮುಂಚತು ಮೃತ್ಯುಪಾಶಾತ್ । ತದಯಂರಾಜಾವರುಣೋನುಮನ್ಯತಾಂ ಯಥೇಯಂಸ್ತ್ರೀಪೌತ್ರಮಘಂನರೋದಾತ್ । ಇಮಾಮಗ್ನಿಸ್ತ್ರಾಯತಾಂ ಗಾರ್ಹಪತ್ಯಃ ಪ್ರಜಾಮಸ್ಯೈನಯತುದೀರ್ಘಮಾಯುಃ। ಅಶೂನ್ಯೋಪಸ್ಥಾಜೀವತಾಮಸ್ತು ಮಾ

ಡಿಸುವುದಕ್ಕೋಸ್ಕರ ಈ ಪುಂಸವನ ಸಂಸ್ಕಾರವನ್ನು ಮಂತ್ರದಿಂದಲೂ, ಅನವಲೋಭನಸಂಸ್ಕಾರವನ್ನು ತಂತ್ರದಿಂದಲೂ ಮಾಡುತ್ತೇನೆಂಬದಾಗಿ ಸಂಕಲ್ಪಿಸಿ, ಪತ್ನಿಗೆ ವಿಧಿಪೂರ್ವಕವಾಗಿ ಕಂಕಣಧಾರಣೆಯಂ ಮಾಡಿ, ಅನಂತರ ಆ ಪತ್ನಿಯ ದಕ್ಷಿಣಹಸ್ತವನ್ನು(ಬಲಗೈಯನ್ನು) ಶುದ್ಧೋದಕದಿಂದ ತೊಳೆಯಿಸಿ, ಆ ಪೊಂದುಕೈಯನ್ನೇ ಸೆರೆಯ ಆಕಾರವಾಗಿ ಮಾಡಿಸಿ, ಆ ಸೆರೆಯತುಂಬಾ ಆ ಹಸುವಿನ ಮೊಸರನ್ನು ತುಂಬಿ, ಆ ಮೊಸರಿನ ಮೇಲುಭಾಗದಲ್ಲಿ ಒಂದು ಜವೆಯನ್ನಾಗಲಿ ಅಥವಾ ಒಂದು ಗೋದುವೆಯನ್ನಾಗಲಿ ಇಟ್ಟು, ಅದರ ಎರಡು ಪಾರ್ಶ್ವಗಳಲ್ಲಿಯೂ ಒಂದೊಂದು ಆವುದ್ದಿನಕಾಳನ್ನು ಇರಿಸಿ, ತಾನು ಪತ್ನಿಯ ಮುಖವನ್ನು ನೋಡುತ್ತಾ —"ಕಿಂಪಿಬಸಿ, ಕಿಂಪಿಬಸಿ, ಕಿಂಪಿಬಸಿ"— ಎಂದು ಮೂರುವೇಳೆ ಕೇಳಬೇಕು. ಆಗ ಆ ಪತ್ನಿಯು— "ಪುಂಸವನಂ, ಪುಂಸವನಂ, ಪುಂಸವನಂ"— ಎಂದು ಮೂರುವೇಳೆ ಹೇಳುತ್ತಾ ಆ ತನ್ನಕೈಯ ಸೆರೆಯ ಜವೆಯಿಂದಲೂ ಉದ್ದುಗಳಿಂದಲೂ ಕೂಡಿಕೊಂಡಿರುವ ಆ ಮೊಸರನ್ನು ನಿಶ್ಶೇಷವಾಗಿ ಪಾನಮಾಡಿ ಬಳಿಕ ಜಲದಿಂದ ಆ ಚಮನವನ್ನು ಮಾಡಬೇಕು. ಇದು ಒಂದುಬಾರಿಯಾಯಿತು. ಇದೇರೀತಿಯಾಗಿ ಇನ್ನೂ ಎರಡುವೇಳೆ ಮಾಡಬೇಕು. ಈ ರೀತಿಯಾಗಿ ಮಾಡಿದರೆ ಇದೇ ಪುಂಸವನವಿಧಿಯು.

ಅನಂತರ ಅನವ ಲೋಭನವಿಧಿಯು-ಬಳ್ಳಿಯಗರುಕೆಯ ಕಂತೆಯನ್ನು ತಂದಿರಿಸಿಕೊಂಡಿದ್ದು ಆಗ ಓರ್ವಕನ್ನಿಕೆಯಿಂದ ಒಂದು ಕಲ್ಲಪತ್ತಿನಲ್ಲಿ ಆ ಗರುಕೆಯನ್ನು ಅರೆಯಿಸಿ, ಆ ಕನ್ನಿಕೆಯಿಂದಲೇ ಅದನ್ನು ಉಂಡೆಯಾಗಿ ಮಾಡಿಸಿ, ಅನಂತರ ಪತಿಯು

ತಾ ಪೌತ್ರಮಾನಂದಮಭಿಪ್ರಬುಧ್ಯತಾಮಿಯಂ । ಮಾತೇಗೃಹೇನಿಶಿಘೋಷ ಉತ್ಥಾದನ್ಯತ್ರತ್ವದ್ರುದಂತ್ಯಃ ಸಂವಿಶಂತು ಮಾತ್ವಂವಿಕೇಶ್ಯುರ ಆವಧಿಷ್ಠಾ ಜೀವಪತ್ನೀಪತಿಲೋಕೇ ವಿರಾಜಪಶ್ಯಂತೀ ಪ್ರಜಾಂಸುಮನಸ್ಯಮಾನಾ । ಅಪ್ರಜಸ್ತಾಂಪೌತ್ರಮೃತ್ಯುಂ ಪಾಪ್ಮಾನಮುತವಾಘಂ । ಶೀರ್ಷ್ಣಃಸ್ರಜಮಿವೋನ್ಮುಚ್ಯದ್ವಿಷದ್ಭ್ಯಃ ಪ್ರತಿಮುಂಚಾಮಿಪಾಶಂ। ದೇವಕೃತಂಬ್ರಾಹ್ಮಣಂ ಕಲ್ಪಮಾನಂ ತೇನಹನ್ಮಿಯೋನಿಪದಃ ಪಿಶಾಚಾನ್। ಕ್ರವ್ಯಾದೋಮೃತ್ಯೂ ನಧರಾನ್ಪಾತಯಾಮಿ ದೀರ್ಘಮಾಯು ಸ್ತವಜೀವಂತುಪುತ್ರಾಃ" ಇತಿ. ಏವಮೃಗ್ಭ್ಯಾಂಸೂಕ್ತಾಭ್ಯಾಂವಾ ನಿನಯೇತ್. ಅಥಶತಂವಾ ದಶವಾ ಮಾಹೇಶ್ವರಾಭೋಜ್ಯಾಃ ಇದಂಕರ್ಮಗರ್ಭಸಂಸ್ಕಾರತ್ವಾತ್ಪ್ರತಿಗರ್ಭಂಕಾರ್ಯಂ. ಪ್ರಥಮಗರ್ಭಏವೇತಿಕೇಚಿತ್. ಅಸ್ಯಕರ್ತಾಪತಿಸ್ತದಸಂಭವೇ ದೇವರೋವಾಕುರ್ಯಾತ್. ದೇವರಇತಿತಸ್ಯಾನುಜಃ ॥ ಇತಿಪುಂಸವನಾನವಲೋಭನೇಕರ್ಮಣೀ ॥

ಒಂದು ಶುಭ್ರವಾದ ವಸ್ತ್ರದಲ್ಲಿ ಅವನ್ನು ಹಾಕಿಸಿಕೊಂಡು ಪ್ರಜಾವದಾಖ್ಯ ಸೂಕ್ತವನ್ನೂ, ಜೀವಪುತ್ರ ಸಂಜ್ಞಕಸೂಕ್ತವನ್ನೂ ಜಪಿಸುತ್ತಾ, ಆ ಮಂಡಲಾಗಾರಭಾಗದಲ್ಲಿ ಪತ್ನಿಯನ್ನು ಪೂರ್ವಮುಖವಾಗಿ ಕುಳ್ಳಿರಿಸಿ ತಾನು ಪಶ್ಚಿಮಮುಖವಾಗಿ ಕುಳಿತುಕೊಂಡು, ಆ ಪತ್ನಿಯ ಮುಖವನ್ನು ತನ್ನ ಕೈಯಿಂದ ಮೇಲಕ್ಕೆತ್ತಿ ಆಕೆಯ ಬಲಮೂಗಿನ ಹೊಳ್ಳೆಯಲ್ಲಿ ತನ್ನ ಕೈ ಬೆರಲುಗಳಿಂದಲೇ ಆ ಗರುಕೆಯ ರಸವನ್ನು ಆಸೇಚನೆಮಾಡುತ್ತಾ— "ಓಂ ಆತೇಗರ್ಭೋಯೋನಿಮೇತು ....ಸಮರ್ಥಯ"—ಎಂಬ ಪ್ರಜಾವದಾಖ್ಯ ಸೂಕ್ತವನ್ನೂ, ಮತ್ತು—"ಅಗ್ನಿರೈತು ಪ್ರಥಮೋ ದೇವತಾನಾಂ...............ತವಜೀವಂತು ಪುತ್ರಾಃ"—ಎಂಬ ಈ ಜೀವಪುತ್ರಾಖ್ಯ ಸೂಕ್ತವನ್ನೂ ಹೇಳುತ್ತಾ ಕರ್ಮವನ್ನು ಪೂರ್ತಿಮಾಡಬೇಕು. ಅನಂತರ ನೂರು ಜನ ಮಾಹೇಶ್ವರರಿಗಾದರೂ ಸರಿಯೆ, ಹತ್ತು ಜನ ಮಾಹೇಶ್ವರರಿಗಾದರೂ ಸರಿಯೆ, ಭೋಜನವನ್ನು ಮಾಡಿಸಿ ತೃಪ್ತಿಪಡಿಸಬೇಕು. ಈ ಕರ್ಮವು ಗರ್ಭದ ಸಂಸ್ಕಾರವಾಗಿರುವುದರ ದೆಸೆಯಿಂದ ಪ್ರತಿಯೊಂದು ಗರ್ಭಧಾರಣೆಯ ಕಾಲದಲ್ಲಿಯೂ ಮಾಡಬೇಕು. ಕೆಲವರು ಪ್ರಥಮ ಗರ್ಭಧಾರಣೆಯ ಕಾಲದಲ್ಲಿ ಮಾಡಿದರೆ ಸಾಕೆಂಬುದಾಗಿ ಹೇಳುತ್ತಾರೆ. ಈ ಸಂಸ್ಕಾರವನ್ನು ಪತಿಯೇ ಮಾಡಬೇಕು, ಒಂದು ವೇಳೆ ಅವನಿಲ್ಲದ ಕಾಲದಲ್ಲಿ ಗರ್ಭಿಣಿಯ ಮೈದುನನು ಮಾಡಬಹುದು. ಮೈದುನನೆಂದರೆ ಗಂಡನತಮ್ಮನು. ಈ ರೀತಿಯಾಗಿ ಪುಂಸವನ ಕರ್ಮವು, ಅನವಲೋಭನಕರ್ಮವೂ ಕೂಡ ಪೂರ್ತಿಯಾದುವು.

—ಅಥ ಸೀಮಂತೋನ್ನಯನ ಮುಚ್ಯತೇ—

ತಚ್ಚ ಗರ್ಭಮಾಸಾಪೇಕ್ಷಯಾ ಚತುರ್ಥೇಷಷ್ಠೇ ಅಷ್ಟಮೇವಾ ಮಾಸಿ, ಅಸಂಭವೇಯಾವತ್ಪ್ರಸವಂ ಶುಕ್ಲಪಕ್ಷೇ ಪುನರ್ವಸು ಪುಷ್ಯಾ ಭಿಜಿದ್ಧಸ್ತಪೂರ್ವಾಪ್ರೋಷ್ಠಪದಾನೂರಾಧಾಶ್ವಿನೀಮೂಲಶ್ರವಣರೇವತೀರೋಹಿ ಣೀಮೃಗಶಿರಸ್ಸಂಜ್ಞಕಾನಾಂ ಪುನ್ನಕ್ಷತ್ರಾಣಾಂ ಚತುರ್ಥಾವಿಭಕ್ತಾ ನಾಂ ಮಧ್ಯಮಪಾದದ್ವಯೇ ಷಷ್ಠ್ಯಷ್ಟಮೀದ್ವಾದಶೀ ಚತುರ್ಥೀನವಮೀ ಚತುರ್ದಶ್ಯಮಾವಾಸ್ಯಾವ್ಯತಿರಿಕ್ತತಿಥೌ, ಸೋಮಬುಧಬೃಹಸ್ಪತಿಶುಕ್ರ ವಾಗೇಷು ಚಂದ್ರಾನುಕೂಲ್ಯೇ, ವಿಷ್ಟ್ಯಾದಿದೋಷಾಭಾವೇ, ಶುಭಲ ಗ್ನಾದೌಕಾರ್ಯಂ.ಅತ್ರಾಪ್ಯಧಿಕಮಾಸಗುರುಶುಕ್ರಾಸ್ತಾದೀನಾಂತು ದೋ ಷಃ, ಕಾಲಾಂತರಸಂಭವೇ ಪೂರ್ವವನ್ನಿಯತಕಾಲತ್ವಾತ್. ಅಥಪ್ರ ಯೋಗಃ—ಸೀಮಂತಕರ್ಮಕರಿಷ್ಯನ್ ಪತಿಃ ಪೂರ್ವೇದ್ಯುಃ ಅಪಕ್ವಫಲ ಯುಗ್ಮಯುತಾ ಮೌದುಂಬರಸ್ತಬಕೈಕಾಂ ತದಭಾವೇ ಅನ್ಯಸ್ತಬಕಾಂ ವಾ,ತ್ರಿಶುಕ್ಲವರ್ಣಾಂಶಲಲೀಂ ತ್ರೀಣಿಕುಶ ಪಿಂಜೂಲಾನಿಚ ಸಂಪಾದ್ಯ,

---

ಅನಂತರಸೀಮಂತೋನ್ನಯನವಿಧಿಯು ಹೇಳಲ್ಪಡುತ್ತದೆ.

ಆಸೀಮಂತೋನ್ನಯನ ಸಂಸ್ಕಾರವನ್ನು ಗರ್ಭಧಾರಣೆಯಾದ ತಿಂಗಳಾರಭ್ಯ ನಾ ಲ್ಕನೆಯ ತಿಂಗಳಲ್ಲಿಯಾಗಲಿ, ಆರನೆಯ ತಿಂಗ ಳ್ಳಿಯಾಗಲಿ, ಎಂಟನೆಯ ತಿಂಗಳಲ್ಲಿಯಾ ಗಲಿ, ಅದಕ್ಕೂ ಅನನುಕೂಲವಾದ ಪಕ್ಷದಲ್ಲಿ ಹೆರುವುದರೊಳಗಾಗಲಿ, ಮಾಡಬೇಕು. ಯಾವಾಗ ಮಾಡಬೇಕಾದರೂ ಶುಕ್ಲಪಕ್ಷದಲ್ಲಿಯೇ ಮಾಡಬೇಕು. ಆ ಶುಕ್ಲಪಕ್ಷದೊ ಳಗೂ ನಾಲ್ಕು ಪಾದಂಗಳುಳ್ಳ ಪುನರ್ವಸು, ಪುಷ್ಯ ಶತಭಿಷ, ಹಸ್ತ, ಪೂರ್ವಾಭಾದ್ರ, ಅನೂರಾಧ, ಅಶ್ವಿನಿ, ಮೂಲ, ಶ್ರವಣ, ರೇವತಿ,ರೋಹಿಣಿ, ಮೃಗಶಿರ ಯೆಂಬ ಸಂಜ್ಞೆ ಗಳುಳ್ಳ ಪುರುಷ ನಕ್ಷತ್ರಗಳ ಮೊದಲನೆಯ ಪಾದವನ್ನೂ ನಾಲ್ಕನೆಯ ಪಾದವನ್ನೂ ಬಿಟ್ಟು, ಮಧ್ಯಮವುಗಳಾದ ಎರಡನೆಯ ಮೂರನೆಯ ಪಾದಗಳಲ್ಲಿಯೇ ಮಾಡಬೇಕು. ಮತ್ತೂ ಷಷ್ಠಿ, ಅಷ್ಟಮಿ, ದ್ವಾದಶಿ, ಚತುರ್ಥಿ, ನವಮಿ, ಚತುರ್ದಶಿ, ಅಮಾವಾಸ್ಯೆ ಇವುಗಳಲ್ಲದ ತಿಥಿಗಳಲ್ಲಿಯೂ, ಸೋಮ, ಬುಧ, ಬೃಹಸ್ಪತಿ, ಶುಕ್ರ, ವಾರಗಳಲ್ಲಿಯೂ, ಚಂದ್ರ ಬಲವಿರುವ ವಿಷ್ಟ್ಯಾದಿದೋಷಂಗಳಿಲ್ಲದೆ ಇರುವ ಶುಭಲಗ್ನದಲ್ಲಿಯೇ ಮಾಡಬೇ ಕು. ಈರೀತಿಯಾಗಿ ಸಂಸ್ಕಾರವನ್ನು ಮಾಡುವುದಕ್ಕೂ ಪೂರ್ವದಂತೆಯೇ ಕಾಲವ ನ್ನು ನಿಶ್ಚಯಿಸಿ ಇರುವುದರಿಂದ ಈಕಾಲವನ್ನು ಬಿಟ್ಟು ಬೇರೆಕಾಲಗಳಲ್ಲಿಯೂ ಅಧಿ ಕಮಾಸದಲ್ಲಿಯೂ,ಗುರು ಶುಕ್ರರು ಅಸ್ತಂಗತರಾಗಿರುವ ಕಾಲದಲ್ಲಿಯೂ ಮಾಡಿದರೆ ದೋಷಪ್ರಾಪ್ತಿಯಾಗುವುದು. ಅನಂತರ ಪ್ರಯೋಗವು—ಸೀಮಂತಕರ್ಮವನ್ನು

ಗೃಹಂಪೂರ್ವವದಲಂಕೃತ್ಯ, ಸ್ವಸ್ತಿವಾಚನಂನಾಂದೀಂಚ ವಕ್ಷ್ಯಮಾಣಪ್ರಕಾರೇಣ ಕುರ್ಯಾತ್ ॥ ಅಪರೇದ್ಯುಃ ನಿತ್ಯಕೃತ್ಯಾನಂತರಂ ಶುದ್ಧದೇಶೇಗೋಮಯೇನೋಪಲಿಪ್ಯ, ಸ್ವಾಸನೇಉಪವಿಶ್ಯ, ಮಂಗಲಸ್ನಾತಾಂ ಪರಿಹಿತಪ್ರಾವೃತಾಹತವಾಸೋಯುಗಲಾ ಮಲಂಕೃತಾಂ ಪತ್ನೀಂ ಸ್ವದಕ್ಷಿಣತಉಪವೇಶ್ಯ ದೇಶಕಾಲೌ ಸ್ಮೃತ್ವಾ, ಮಮಪತ್ನ್ಯಾಃ ಬೈಜಿಕಗಾರ್ಭಿಕದೋಷಪರಿಹಾರಾರ್ಥಂ ಕ್ಷೇತ್ರಸಂಸ್ಕಾರಾರ್ಥಂಚ ಸ್ತ್ರೀಸಂಸ್ಕಾರರೂಪಂ ಸೀಮಂತೋನ್ನಯನಾಖ್ಯಂಕರ್ಮಕರಿಷ್ಯೇ ಇತಿಸಂಕಲ್ಪ್ಯ ವಧೂಂಕೃತಕೌತುಕಬಂಧಾಂ ಅರ್ಚಿತೇಷ್ಟದೇವತಾಂ ಕೃತ್ವಾ, ಶುಭೇ ಮುಹೂರ್ತೇ ಪ್ರಾಙ್ಮುಖಸ್ತಿಷ್ಠನ್ ಅಪಕ್ವಫಲಯುಗ್ಮಾನ್ವಿತಮೌದುಂಬರಸ್ತಬಕದ್ವಯಂ ತ್ರಿಶುಕ್ಲಾಂಶಲಲೀಂ ಕುಶಾಂಕುರತ್ರಯಂ ಚೈಕೀಕೃತಂ ಪಾಣಿನಾಗೃಹೀತ್ವಾ, ತನ್ಮೂಲೇನಪತ್ನ್ಯಾಃ ಕೇಶಲಲಾಟಯೋಸ್ಸಂಧಿಮಾರಭ್ಯ ಮೂರ್ಧಪ್ರದೇಶಾತ್—" ಓಂಭೂರ್ಭುವಃಸ್ವರೋಂ"— ಇತಿಮಂತ್ರೇಣ ತ್ರಿಶ್ಚತುರ್ವಾ ಪ್ರತ್ಯುನ್ನಯನಂ ಮಂತ್ರಮಾವರ್ತಯನ್

ಮಾಡತಕ್ಕ ಪತಿಯು ಮೊದಲನೆಯ ದಿವಸದಲ್ಲಿ ಎಳೆಯದಾದ ಎರಡು ಹತ್ತಿಯಕಾಯಿಗಳ ಗೊಂಚಲನ್ನೂ, ಅದು ದೊರೆಯದಿದ್ದ ಪಕ್ಷದಲ್ಲಿ ಬೇರೆಕಾಯಿಗಳ ಗೊಂಚಲನ್ನೂ, ಬಿಳಿಯಬಣ್ಣದಿಂ ಕೂಡಿರುವ ಮೂರು ಹಂದಿಮುಳ್ಳುಗಳನ್ನೂ, ದರ್ಭೆಯ ಕಂತೆಗಳನ್ನೂ ಸಂಪಾದಿಸಿಕೊಂಡು, ಮನೆಯನ್ನು ಪೂರ್ವದಂತೆಯೇ ಸಾರಣೆ ಕಾರಣೆಗಳಿಂದ ಅಲಂಕರಿಸಿ, ಮುಂದೆ ಹೇಳುವ ಕ್ರಮದಂತೆಯೇ ಸ್ವಸ್ತಿವಾಚನವನ್ನೂ ನಾಂದೀಸಮಾರಾಧನೆಯನ್ನೂ ಮಾಡಬೇಕು. ಅನಂತರ ಎರಡನೆಯ ದಿನದಲ್ಲಿ ಪತಿಯು ನಿತ್ಯಕರ್ಮವನ್ನು ಮಾಡಿಕೊಂಡು ಶುದ್ಧದೇಶವನ್ನು ಗೋಮಯದಿಂದ ಸಾರಣೆಮಾಡಿಸಿ, ಕಾರಣೆಗಳಿಂದಲಂಕರಿಸಿ, ಸಮೀಚೀನಾಸನದಲ್ಲಿ ತಾನು ಕುಳಿತುಕೊಂಡು. ಬಳಿಕ, ಮಂಗಳಸ್ನಾನವನ್ನು ಮಾಡಿ ನೂತನವಸ್ತ್ರವನ್ನುಟ್ಟು ನೂತನಕಂಚುಕವಂ ತೊಟ್ಟು ನೂತನವಸ್ತ್ರವನ್ನೇಹೊದೆದು ಆಭರಣ ಭೂಷಿತೆಯಾಗಿರುವ ಪತ್ನಿಯನ್ನು ತನ್ನ ಬಲಭಾಗದಲ್ಲಿ ಕುಳ್ಳಿರಿಸಿಕೊಂಡು, ದೇಶಕಾಲಂಗಳನ್ನು ಸ್ಮರಿಸಿ, ಈ ಕ್ರೈಯ್ಯಲ್ಲಿ ನನ್ನ ಬೀಜಸಂಬಂಧವಾದ ದೋಷವೂ ಗರ್ಭಸಂಬಂಧವಾದ ದೋಷವೂ ಪರಿಹಾರವಾಗುವುದಕ್ಕೋಸ್ಕರವಾಗಿಯೂ, ಕ್ಷೇತ್ರಸಂಸ್ಕಾರವನ್ನು ಮಾಡುವುದಕ್ಕೋಸ್ಕರವಾಗಿಯೂ, ಸ್ತ್ರೀಸಂಸ್ಕಾರ ರೂಪವಾದ ಸೀಮಂತೋನ್ನಯನ ನಾಮಕವಾದ ಕರ್ಮವನ್ನು ಮಾಡುತ್ತೇನೆ „ಎಂದು ಸಂಕಲ್ಪಿಸಿವಿಧಿವತ್ತಾಗಿ ಪತ್ನಿಯ ಕೈಗೆ ಕಂಕಣವಂ ಕಟ್ಟಿ, ಆಕೆಯಿಂದ ಅವಳ ಇಷ್ಟದೈವಪೂಜೆಯಂ ಮಾಡಿಸಿ, ಶುಭಮು

ಸೀಮಂತಮುನ್ನಯೇತ್॥— ಓಂಭೂರ್ಭುವಃಸ್ವರಿತಿಮಂತ್ರಸ್ಯಪ್ರಜಾಪತಿಃ, ಪ್ರಜಾಪತಿರ್ಬೃಹತೀ, ಸೀಮಂತವ್ಯೂಹನೇವಿನಿಯೋಗಃ—"ಓಂ ಭೂರ್ಭುವಸ್ಸ್ವರೋಂ"—ಏವಂತ್ರಿಪ್ರಕಾರೇಣ್ಚಕುರ್ಯಾತ್॥ ತತೋಯಥಾಚಾರಂಸಗೋಧೂಮಾ ಮೌದುಂಬರಫಲಮಾಲಾಂತತ್ಕಂಠೇನಿಧಾಯ, ವೀಣಾಗಾಥಿನೌ ಮಾಹೇಶ್ವರೌ,—"ಸೋಮಂರಾಜಾನಂ ಸಗಾಯೇತಾಂ ಇತಿಪ್ರೇಷಯೇತ್—ತೌಚ—"ಓಂಸೋಮೋನೋರಾಜಾವತುಮಾನುಷೀಃ ಪ್ರಜಾನಿವಿಷ್ಟಚಕ್ರಾಸೌ" ಇತಿಮಂತ್ರಂ ಅಸಾವಿತಿಸ್ಥಾನೆ ಗಂಗಾಗೋದಾವರೀಸರಸ್ವತೀತ್ಯಾದಿಸಮೀಪಸ್ಥನದ್ಯಾಃ ಸಂಬುದ್ಧ್ಯಂತಂನಾಮ ನಿರ್ದಿಶಂತೌ ವೀಣಯಾಗಾಯೇತಾಂ ॥ ಸಾಮಗಾನಪರಿಜ್ಞಾನೆ ಮಂತ್ರಮಾತ್ರಂ ತ್ರಿಃಪಠೇತಾಂ ॥ಪತಿಪುತ್ರವತೀಭಿರ್ವೃದ್ಧಸುವಾಸಿನೀಭಿ ರುಪದಿಷ್ಟಂವಂ

ಹೂರ್ತದಲ್ಲಿ ಪೂರ್ವಮುಖನಾಗಿ ಕುಳಿತುಕೊಂಡು, ಆಹತ್ತಿಯಕಾಯಿನ ಗೊಂಚಲನ್ನೂ ಆಮೂರು ಹಂದಿಮುಳ್ಳುಗಳನ್ನೂ ಮೂರು ದರ್ಭೆಯ ಕಂತೆಗಳನ್ನೂ ಕೂಡಿಸಿ ಬಲಗೈಯಲ್ಲಿ ಹಿಡಿದುಕೊಂಡು, ಅದರ ಬುಡದಿಂದ ಆಪತ್ನಿಯ ಮುಂದಲೆಯಿಂದ ಬೈತಲೆಯಮೇಲೆ ಮಸ್ತಕಪರ್ಯಂತರವಾಗಿ ಓಂ ಭೂರ್ಭುವಸ್ಸ್ವಇತಿಮಂತ್ರಸ್ಯ ಪ್ರಜಾಪತಿಃ ಪ್ರಜಾಪತಿರ್ಬೃಹತೀ ಸೀಮಂತವ್ಯೂಹನೆವಿನಿಯೋಗಃ "ಓಂ ಭೂರ್ಭುವಸ್ಸುವರೋಂ" ಎಂಬ ಮಂತ್ರವನ್ನುಚ್ಚರಿಸುತ್ತ ಮೂರುವೇಳೆಯಾಗಲಿ ನಾಲ್ಕುವೇಳೆಯಾಗಲಿ ಬೈತಲೆಯನ್ನು ತಿದ್ದಬೇಕು. ಅನಂತರ ಯಥಾಚಾರವಾಗಿ ಬಂವ ಗೋದುವೆಯ ಸರವನ್ನೂ ಬೇರೆಹತ್ತಿಯಕಾಯಿಯ ಮಾಲಿಕೆಯನ್ನೂ ಕೂಡೆ ಆಪತ್ನಿಯ ಕಂಠದಲ್ಲಿ ಹಾಕಿ, ಆಗ ಆಕೆಯಿಂದ ವೀಣೆಯನ್ನು ನುಡಿಯಿಸತಕ್ಕ ಮಾಹೇಶ್ವರರನ್ನು ಕುರಿತು "ಸೋಮಂರಾಜಾನಂ ಗಾಯೇತಾಂ" ಎಂಬುದಾಗಿ ಕೇಳಿಸಬೇಕು. ಆಗ ಆ ಮಾಹೇಶ್ವರರುಗಳು—" ಓಂ ಸೋಮೋನೋರಾಜಾವತುಮಾನುಷಃ ಪ್ರಜಾನಿವಿಷ್ಟಚಕ್ರಾಸೌ, ಎಂಬುವ ಸಾಮವೇದದಮಂತ್ರದ ಕೊನೆಯಲ್ಲಿರುವ ಅಸೌ ಎಂಬುವ ಪದಕ್ಕೆ ಬದಲಾಗಿ ಸಂಸ್ಕಾರವನ್ನು ಮಾಡಿಸತಕ್ಕ ಆ ಗ್ರಾಮದ ಸಮೀಪದಲ್ಲಿ ಗಂಗೆ ಗೋದಾವರಿ ಸರಸ್ವತಿಯೇ ಮೊದಲಾದ ನದಿಗಳೊಳಗೆ ಯಾವನದಿ ಇರುವುದೋ ಆ ನದಿಯ ಹೆಸರನ್ನು ತೆಗೆದುಕೊಂಡು ಆ ಶಬ್ದವನ್ನು ಸಂಬುದ್ಧ್ಯೇಕ ವಚನಾಂತವಾಗಿ ಮಾಡಿಕೊಂಡು ಆ ಪದವನ್ನು ಅಲ್ಲಿಗೆ ಸೇರಿಸಿಕೊಳ್ಳಬೇಕು. ಎಂದರೆ—" ಓಂ ಸೋಮೋನೋರಾಜಾವತುಮಾನುಷಃ ಪ್ರಜಾನಿವಿಷ್ಟ ಚಕ್ರಗಂಗೇ"—ಎಂಬದಾಗಿ ಸೇರಿಸಿಕೊಂಡು ಆ ಮಂತ್ರವನ್ನು ವೀಣೆಯಿಂದ ಹಾಡಿಸಬೇಕು. ಆ ಮಾಹೇಶ್ವರರು ಸಾಮವೇದವನ್ನು ಬಲ್ಲವರಾಗಿದ್ದ ಪಕ್ಷದಲ್ಲಿ ಆ ಮಂತ್ರವನ್ನು ಮಾತ್ರವೇ ಮೂರುವೇಳೆ ಅವರಿಂದ ಹೇಳಿಸುವುದು. ಬಳಿಕ ಪತಿಯಿಂದಲೂ ಪುತ್ರರುಗಳಿಂದಲೂ ಕೂ

ಗಲಾಚಾರಂ ಯತ್ತತ್ತಥಾಕುರ್ಯಾತ್, ಏವಂಪ್ರತಿಗರ್ಭೇನಕುರ್ಯಾತ್.
ಕೃತಕರ್ಮಸಿದ್ಧ್ಯರ್ಥಂ ಯಥಾಶಕ್ತಿಮಾಹೇಶ್ವರಾನ್ ಭೋಜಯೇತ್.
ಇತಿಸೀಮಂತೋನ್ನಯನವಿಧಿಃ||

ಏವಂಮಂತ್ರಿಕುಲೋತ್ತಂಸ ಗರ್ಭಾಧಾನಂಚಪುಂಸವಂ ।
ಸೀಮಂತೋನ್ನಯನಾಕರ್ಮ ವೀರಶೈವಾವಿರೋಧಕಂ||
ಕೃತ್ವಾಜಾತಸ್ಯಸಂಸ್ಕಾರಂ ಕುರ್ಯಾದ್ಬಾಲಸ್ಯತತ್ಕ್ರಮಾತ್||

ಇತಿ ಶ್ರೀಮದನಾದಿಪ್ರಮಥಪರಂಪರಾಗತಪಟ್ಟಲಬ್ಧಜ್ಞಾನಬೋಧ
ಕಾಚಾರ್ಯವರ್ಯವರಗುರುಬಸವಯತಿವರ್ಯಲಬ್ಧಬುದ್ಧಿವಿಕಾಸೇನ ವೀ
ರಶೈವದೀಕ್ಷಾಗುರು ಚೆನ್ನವೀರಸ್ವಾಮಿಕರಕಮಲಸಂಜಾತೇನ
ಮಾನಪ್ಪವಿದುಷಾಕೃತೆ, ವೀರಶೈವಾಚಾರಕೌ
ಸ್ತುಭೆ ಕ್ರಿಯಾಕಾಂಡೆ ಗರ್ಭಾಧಾನಾದಿಕ
ರ್ಮತ್ರಯಸ್ವರೂಪನಿರೂಪಣಂನಾಮ
ಪಂಚಮಪ್ರಕರಣಂ.

ಹಿರುವ ವೃದ್ಧಸುವಾಸಿನಿಯರು ಯಾವಯಾವ ಮಂಗಲಾಚಾರವನ್ನು ಬೋಧಿಸುತ್ತಾರೆ ಯೋ ಆಯಾಯ ಮಂಗಲಾಚಾರವನ್ನೆಲ್ಲಾ ಹಾಗೆಯೇ ಮಾಡಬೇಕು. ಈಪ್ರಕಾರ ವಾಗಿ ಪ್ರತಿಯೊಂದು ಸಲದ ಗರ್ಭದಲ್ಲಿಯೂ ಮಾಡಬೇಕಾಗಿಲ್ಲ. ಈರೀತಿಯಾಗಿ ಮಾ ಡಿದ ಕರ್ಮವು ಸಿದ್ಧಿಸುವುದಕ್ಕೋಸ್ಕರವಾಗಿ ಯಥಾಶಕ್ತಿ ಮಾಹೇಶ್ವರರಿಗೆ ಭೋ ಜನವಂ ಮಾಡಿಸಿ ತೃಪ್ತಿಯಂ ಪಡಿಸಬೇಕು. ॥ ಈ ಪ್ರಕಾರವಾಗಿ ಸೀಮಂತೋನ್ನ ಯನವಿಧಿಯು ಮುಗಿದುದು. ॥

ಎಲೈ ಮಂತ್ರಿಕುಲಶ್ರೇಷ್ಠನಾದ ಲಿಂಗಪ್ಪಮಂತ್ರಿಯೇ! ಈಪ್ರಕಾರವಾಗಿ ವೀರ ಶೈವಮತಕ್ಕೆ ವಿರೋಧವಿಲ್ಲದೆಯಿರುವ ಗರ್ಭಾಧಾನಕರ್ಮವೂ, ಪುಂಸವನಕರ್ಮವೂ, ಸೀಮಂತೋನ್ನಯನಕರ್ಮವೂ ಮೆರೆದಿಪ್ಪವು. ಇನ್ನು ಮುಂದೆ ಹುಟ್ಟುವ ಬಾಲ ಕನ ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ಕ್ರಮವಾಗಿ ಹೇಳುತ್ತೇನೆ ಕೇ ಳು- ಎಂಬುದಾಗಿ ಮಾನಪ್ಪವಿದ್ವಾಂಸನು ಹೇಳಿದನು.

ಎಂಬಲ್ಲಿಗೆ ಶ್ರೀಮಾನಪ್ಪವಿದ್ವತ್ಕೃತವೀರಶೈವಾಚಾರಕೌಸ್ತುಭಕ್ಕೆ ಎಂ. ಬಸವ
ಲಿಂಗಶಾಸ್ತ್ರಿ ರಚಿತವಾದ "ಆಚಾರಪ್ರಕಾಶಿಕೆ" ಎಂಬ ಕನ್ನಡ ಟಿಪ್ಪ
ಣದಲ್ಲಿ ಗರ್ಭಾಧಾನವೇ ಮೊದಲಾದ ಮೂರು ಕರ್ಮಗಳ ಸ್ವರೂ
ಪನಿರೂಪಣವನ್ನು ಮಾಡುವ ೫ನೆಯ ಪ್ರಕರಣವು,
ಮುಗಿದುದು.

ಅಥಷಷ್ಠಪ್ರಕರಣಂ.

ಶಿಲಾಶೋಧನಶಿಲಾನಯನಪ್ರಕಾರಃ.

ವಿದ್ವನ್ವಿಧತ್ತೇ ಕುತುಕಂ ಚೇತೋಮೇನಿಗಪೋದಿತೆ । ಶಿಶೋರ್ಜಾತಸ್ಯ ಕರ್ತವ್ಯೈ ವೀರಶೈವಾನುರೋಧತಃ॥೧॥ ಜಸಿಷ್ಯೈೃತಜ್ಞಿಶೋಃ ಪ್ರಾಣಲಿಂಗ ಮಾಸೀಯುಸಪ್ತಮೆ । ಶೋಧಯೇದಧಿವಾಸ್ಯಂಚ ಕೃತ್ವಾ ಮಂತ್ರಶಿಖಾಮಣೆ ॥೨॥ ಚತುರಶ್ರ್ಯೋಧಯೇದಾದೌ ಲಿಂಗಾರ್ಹಾಂತು ಶಿಲಾಂಬುಧಃ । ತತ್ಪ್ರಕಾರಂಸಂಗ್ರಹೇಣ ಪ್ರಥಮಂಸಂಪ್ರದರ್ಶಯೆ ॥

ಸಿದ್ಧಾಂತಶೇಖರ್;—ಶಿಲಾಯಾಲಕ್ಷಣಂವಕ್ಷ್ಯೆಸರ್ವಶೈವಾಗಮೋದಿತಂ । ಶ್ವೇತಾ ರಕ್ತಾಚ ಪೀತಾಚ ಕೃಷ್ಣಾಚೇತಿ ಚತುರ್ವಿಧಾ ॥೧॥ ವರ್ಣಾನಾಂಬ್ರಾಹ್ಮಣಾದೀನಾಂ ಶಿಲಾಪ್ರೋಕ್ತಾಯಥಾಕ್ರಮಂ । ಮುಕ್ತಿಪ್ರದಾಶಿಲಾಶ್ವೇತಾ ರಕ್ತಾತುವಿಜಯಪ್ರದಾ ॥೨॥ ಪೀತಾಚಾರ್ಥಪ್ರ

---

೬ ನೆಯ ಪ್ರಕರಣವು.

ಶಿಲೆಯು ಶೋಧಿಸುವ ಪ್ರಕಾರವನ್ನೂ ಮತ್ತೂ
ಶಿಲೆಯು ತರುವ ಪ್ರಕಾರವನ್ನೂ
— ನಿರೂಪಿಸುವಿಕೆಯು —



ಎಲೈ ಮೌನಪ್ಪವಿದ್ವಾಂಸನೆ ! ಇನ್ನು ಮುಂದೆ ಹುಟ್ಟತಕ್ಕ ಶಿಶುವಿಗೆ ವೀರಶೈವಧರ್ಮಾಚಾರಪ್ರಕಾರವಾಗಿ ವೇದೋಕ್ತವಾದ ಯಾವ ಸಂಸ್ಕಾರವನ್ನು ಮಾಡಬೇಕೋ ಅದನ್ನು ಕೇಳಬೇಕೆಂಬುದಾಗಿ ನನ್ನ ಮನಸ್ಸು ಕುತೂಹಲಗೊಂಡಿದೆ. ಆದುದರಿಂದ ಹೇಳಬೇಕು ಎನಲು ॥೧॥ ಆಗ ಮೌನಪ್ಪವಿದ್ವಾಂಸನು ಲಿಂಗಪ್ಪಮಂತ್ರಿಯನ್ನು ನೋಡಿ, ಎಲೈ ಮಂತ್ರಿಶಿಖಾಮಣಿಯೆ ! ಕೇಳು:— ಇನ್ನುಮುಂದೆ ಹುಟ್ಟತಕ್ಕ ಶಿಶುವಿಗೆ ಏಳನೆಯ ತಿಂಗಳ ಗರ್ಭದಲ್ಲಿಯೇ ಪ್ರಾಣರೂಪವಾದ ಲಿಂಗ (ಇಷ್ಟಲಿಂಗ) ವನ್ನು ಶ್ರೀಗುರುವು ತೆಗೆದುಕೊಂಡುಬಂದು, ಆ ಲಿಂಗಕ್ಕೆ ಜಲಾಧಿವಾಸವನ್ನೂ ಧಾನ್ಯಾಧಿವಾಸವನ್ನೂ ಮಾಡಿ ಪರಿಶೋಧಿಸಿ ಇಟ್ಟಿರಬೇಕು. ॥೨॥ ಆದರೆ ಪ್ರವೀಣನೂ ವಿದ್ವಾಂಸನೂ ಆದಗುರುವು ಮೊದಲಲ್ಲಿಯೇ ಲಿಂಗವನ್ನು ಮಾಡುವುದಕ್ಕೆ

ದಾ ಜ್ಞೇಯಾ ಕೃಷ್ಣಾಸಂತಾನದಾಶಿಲಾ । ದೂರ್ವಾರೇಣುಕುಶಚ್ಛಾಯಾ ಶಿಲಾಮರಕತಚ್ಛವಿಃ ॥೩॥ ಸಾಶಿಲಾಸರ್ವವರ್ಣಾನಾಂ ಯೋಗ್ಯಾಸರ್ವಾರ್ಥಸಿದ್ಧಿದಾ । ಸಾಶಿಲಾತ್ರಿವಿಧಾಜ್ಞೇಯಾ ಸ್ತ್ರೀಪುಮಾಂಶ್ಚನಪುಂಸಕಂ ॥೪॥ ಸಾಪುನಸ್ತ್ರಿವಿಧಾ ಬಾಲಾ ವೃದ್ಧಾ ಚ ಯುವತೀಶಿಲಾ । ಅಷ್ಟಾಶ್ರಾಚತುರಶ್ರಾವಾ ಸ್ತ್ರೀಶಿಲಾಸಾಸ್ಮೃತಾಬುಧೈಃ ॥೫॥ ದ್ವಾದಶಾಶ್ರಾದಶಾಶ್ರಾವಾ ವೃತ್ತಾವಾಷಂಡಸಂಜ್ಞಿಕಾ । ವೃತ್ತಾಶ್ರಾವಾಯತಾಶ್ರಾವಾ ಪುಂಶಿಲಾಪರಿಕೀರ್ತಿತಾ ॥೬॥ ಘಂಟಾನಾದಾತುಪುಲ್ಲಿಂಗಾ ಧ್ವನಿಹೀ

ಯೋಗ್ಯವಾದ ಶಿಲೆಯನ್ನು ಪರೀಕ್ಷಿಸಿ ಶೋಧಿಸಿ ತಂದಿಟ್ಟುಕೊಳ್ಳಬೇಕು. ಆ ಶಿಲಾಶೋಧನಪ್ರಕಾರವನ್ನು ಮೊದಲಲ್ಲಿಯೇ ಸಂಕ್ಷೇಪವಾಗಿ ವಿವರಿಸಿ ಹೇಳುತ್ತೇನೆ ಕೇಳು ॥೩॥

ಸಿದ್ಧಾಂತಶೇಖರದಲ್ಲಿ:—ಸಮಸ್ತಾಗಮಗಳಲ್ಲಿಯೂ ಹೇಳಲ್ಪಟ್ಟ ಶಿಲೆಯ ಲಕ್ಷಣವನ್ನು ಹೇಳುತ್ತೇನೆ ಕೇಳು:-ಬ್ರಾಹ್ಮಣಜಾತಿಯೇ ಮೊದಲಾದ ಶಿಲೆಗಳ ಜಾತಿಗಳ ಕ್ರಮ ವೆಂತೆಂದರೆ-ಬಿಳುಪಾದದ್ದು ಬ್ರಾಹ್ಮಣಜಾತಿಯ ಶಿಲೆಯು, ಕೆಂಪಾದದ್ದು ಕ್ಷತ್ರಿಯಜಾತಿಯ ಶಿಲೆಯು, ಹೊಂಬಣ್ಣವಾದದ್ದು ವೈಶ್ಯಜಾತಿಯ ಶಿಲೆಯು, ಕಪ್ಪುಬಣ್ಣವಾದದ್ದು ಶೂದ್ರಜಾತಿಯ ಶಿಲೆಯು—ಎಂಬದಾಗಿ ನಾಲ್ಕುಪ್ರಕಾರವಾಗಿರುವುದು. ಇವುಗಳೊಳಗೆ ಶ್ವೇತವರ್ಣದ ಶಿಲೆಯು ಮುಕ್ತಿಯನ್ನು ಕೊಡತಕ್ಕದ್ದು. ರಕ್ತವರ್ಣದ ಶಿಲೆಯು ವಿಜಯವನ್ನು ಕೊಡತಕ್ಕದ್ದು, ಪೀತವರ್ಣದಶಿಲೆಯು ಅರ್ಥವನ್ನು ಕೊಡತಕ್ಕದ್ದು, ಕೃಷ್ಣವರ್ಣದ ಶಿಲೆಯು ಸಂತಾನವನ್ನು ಕೊಡತಕ್ಕದ್ದು, ಮತ್ತೂ ಗರುಕೆಯ ಕಾಂತಿಯೂ ಧೂಳಿಯ ಕಾಂತಿಯೂ ದರ್ಭೆಯಕಾಂತಿಯೂ ಉಳ್ಳುದಾಗಿ ಮರಕತರತ್ನದ ಕಾಂತಿಯಂತೆ ಕಾಂತಿಯುಳ್ಳ ಶಿಲೆಯುಮಾತ್ರ ಸಮಸ್ತಜಾತಿಯವರುಗಳಿಗೂ ಯೋಗ್ಯವಾದುದಾಗಿ ಸಮಸ್ತವಾದ ಇಷ್ಟಾರ್ಥಗಳನ್ನು ಕೊಡುವುದು॥ಮತ್ತೂ ಆ ಶಿಲೆಗಳೆಲ್ಲವೂ ಸ್ತ್ರೀಶಿಲೆಯೆಂಬುದಾಗಿಯೂ, ಪುರುಷಶಿಲೆಯೆಂಬುದಾಗಿಯೂ ನಪುಂಸಕಶಿಲೆಯೆಂಬುದಾಗಿಯೂ ಮೂರುಪ್ರಕಾರವಾಗಿರುವುವು ॥ ಮತ್ತೂ ಆ ಶಿಲೆಯೇ ಬಾಲಶಿಲೆಯೆಂಬದಾಗಿಯೂ, ವೃದ್ಧಶಿಲೆಯೆಂಬುದಾಗಿಯೂ, ತರುಣೀಶಿಲೆಯೆಂಬದಾಗಿಯೂ ಮೂರುಪ್ರಕಾರವಾಗಿರುವುದು. ಅವುಗಳೊಳಗೆ ಎಂಟು ಮೂಲೆಯುಳ್ಳದ್ದು ನಾಲ್ಕುಮೂಲೆಯುಳ್ಳದ್ದು ಆವುದೋ ಆ ಶಿಲೆಯೇ ಸ್ತ್ರೀಶಿಲೆಯೆಂಬದಾಗಿ ಪಂಡಿತರಿಂದ ನಿಶ್ಚಯಿಸಲ್ಪಟ್ಟಿರುವುದು. ॥೫॥ ಹನ್ನೆರಡು ಮೂಲೆಯುಳ್ಳದ್ದೂ ಹತ್ತುಮೂಲೆಯುಳ್ಳದ್ದೂ ಆಗಿ ಮಂಡಲಾಕಾರವಾಗಿ ಆವುದಿರುವುದೋ ಆ ಶಿಲೆಯೇ ನಪುಂಸಕಶಿಲೆಯೆಂಬುದಾಗಿ ನಿಶ್ಚಯಿಸಲ್ಪಟ್ಟಿರುವುದು. ॥ ಮತ್ತೂ ಮಂಡಲಾಕಾರವಾದ ಮೂಲೆಯುಳ್ಳದ್ದಾಗಿಯೂ ವಿಶಾಲವಾದ ಮೂಲೆಯುಳ್ಳದ್ದಾಗಿಯೂ ಆವುದಿರುವುದೋ ಆ ಶಿಲೆಯೇ ಪುರುಷಶಿಲೆಯೆಂಬುದಾಗಿ ನಿಶ್ಚಯಿಸಲ್ಪಟ್ಟಿರುವುದು, ॥೬॥ ಮತ್ತೂ

ನಾನಪುಂಸಕಾ । ಸ್ತ್ರೀಶಿಲಾತಾಳನಾದಾಸ್ಯಾ ದ್ಬಾಲಾಹ್ರಸ್ವಧ್ವನೀಶಿಲಾ ॥೭॥ ತಾಳಶಬ್ದಾತು ತರುಣೀ ವೃದ್ಧಾ ದೀರ್ಘಸ್ವರಾ ಮತಾ । ಸಂಸ್ನಿಗ್ಧಾ ಮೃದುಳಾ ಬಾಲಾ ವರ್ಜನೀಯಾ ಪ್ರಯತ್ನತಃ ॥೮॥ ಸ್ನಿಗ್ಧಾ ಕಾಂತಿಸಮಾಯುಕ್ತಾ ಸುಗಂಧೀ ಶೀತಲಾ ಶಿಲಾ । ತರುಣೀಸಾ ಸಮಾಖ್ಯಾತಾ ಗ್ರಾಹ್ಯಾ ಲಿಂಗಾದಿಕರ್ಮಣಿ ॥೯॥ ಅಸ್ನಿಗ್ಧಾ ಕರ್ಕಶಾ ರೂಕ್ಷಾ ವೃದ್ಧಾತಾಂ ವರ್ಜಯೇಚ್ಛಿಲಾಂ। ಲಿಂಗಂ ಪುಂಶಿಲಯಾಕುರ್ಯಾತ್ಪುರುಷಪ್ರತಿಮಾಂ ತಥಾ ॥೧೦॥ ಕುರ್ಯಾತ್ ಸ್ತ್ರೀಶಿಲಯಾಪೀಠಂ ನಾರೀಣಾಂಪ್ರತಿಮಾಂ ಬುಧಃ । ನಪುಂಸಕಾಶ್ಮನಾ ಕುರ್ಯಾದ್ಬ್ರಹ್ಮಕೂರ್ಚಶಿಲಾಂ ತಥಾ ॥೧೧॥ ಪೂರ್ವಪಶ್ಚಿಮದೀರ್ಘಾವಾ ದಕ್ಷಿಣೋದಗ್ದಿಗಾಯತಾ । ಈಶರಾಕ್ಷಸದೀರ್ಘಾವಾ ವಹ್ನಿವಾಯುದಿಗಾಯತಾ ॥೧೨॥

ಘಂಟಾನಾದವುಳ್ಳ ಶಿಲೆಯೇ ಪುರುಷಶಿಲೆಯು, ಧ್ವನಿಹೀನವಾದ ಶಿಲೆಯೇ ನಪುಂಸಕಶಿಲೆಯು, ತಾಳನಾದವುಳ್ಳಶಿಲೆಯೇ ಸ್ತ್ರೀಶಿಲೆಯೆಂಬುದಾಗಿ ತಿಳಿಯಬೇಕು. ॥ ಇದೂ ಅಲ್ಲದೆ ಹ್ರಸ್ವಧ್ವನಿಯುಳ್ಳ ಶಿಲೆಯನ್ನೇ ಬಾಲಶಿಲೆಯೆಂಬದಾಗಿಯೂ, ತಾಳಶಬ್ದವುಳ್ಳ ಶಿಲೆಯನ್ನೇ ತರುಣೀಶಿಲೆಯೆಂಬುದಾಗಿಯೂ, ದೀರ್ಘಸ್ವರವುಳ್ಳಶಿಲೆಯನ್ನೇ ವೃದ್ಧಾಶಿಲೆಯೆಂಬದಾಗಿಯೂ ನಿರ್ಧರಿಸಿರಬೇಕು. ಆದುದರಿಂದಲೇ ಅತಿನುಣುಪಾಗಿಯೂ ಮೃದುವಾಗಿಯೂ ಬಾಲವಾಗಿಯೂ ಇರುವ ಶಿಲೆಯನ್ನು ಪ್ರಯತ್ನಪೂರ್ವಕವಾಗಿ ಲಿಂಗಕರ್ಮದಲ್ಲಿ ಉಪಯೋಗಿಸದೆಬಿಡಬೇಕು. ॥೮॥ ಸಾಧಾರಣ ನುಣುಪಾಗಿಯೂ ಕಾಂತಿಯುಕ್ತವಾಗಿಯೂ ಸುಗಂಧವುಳ್ಳುದಾಗಿಯೂ ಶೀತಲವಾಗಿಯೂ ಇರುವ ಶಿಲೆಯು ತರುಣೀ ಶಿಲೆಯೆಂಬದಾಗಿ ಪ್ರಖ್ಯಾತವಾಗಿರುವುದು. ಆದುದರಿಂದಲೇ ಈ ಶಿಲೆಯೇ ಲಿಂಗ ಮೊದಲಾದ ಕರ್ಮಗಳಿಗೆ ಗ್ರಹಿಸುವುದಕ್ಕೆ ಯೋಗ್ಯವಾಗಿರುವುದು. ॥೯॥ ಅತಿಯಾಗಿ ಒರಟಾಗಿಯೂ, ಕಠಿಣವಾಗಿಯೂ, ತೆಳುವಾಗಿಯೂ, ಹಳೆಯದಾಗಿಯೂ ಯಾವ ಶಿಲೆಯಿರುವುದೋ ಆ ಶಿಲೆಯನ್ನು ಮಾತ್ರ ಯಾವುದಕ್ಕೂ ಉಪಯೋಗಿಸದೆ ಬಿಡಬೇಕು. ॥ ಆದಕಾರಣದದೆಸೆಯಿಂದಲೇ ಲಿಂಗವನ್ನು ಮಾಡಬೇಕಾದರೂ ಹಾಗೆಯೇ ಪುರುಷಪ್ರತಿಮೆಯನ್ನು ಮಾಡಬೇಕಾದರೂ ಕೂಡ ಪುರುಷಶಿಲೆಯಿಂದಲೇಮಾಡಬೇಕು. ॥೧೦॥ ಮತ್ತೂ ಬುದ್ಧಿಶಾಲಿಯಾದವನು ಪೀಠವನ್ನು ಮಾಡಬೇಕಾದರೂ ನಾರಿಯ ಪ್ರತಿಮೆಯನ್ನು ಮಾಡಬೇಕಾದರೂ ಕೂಡ ಸ್ತ್ರೀಶಿಲೆಯಿಂದಲೇ ಮಾಡಬೇಕು. ॥ ಬಳಿಕ ಬ್ರಹ್ಮಕೂರ್ಚ (ಲಿಂಗಕ್ಕೂ ಪೀಠಕ್ಕೂ ಮಧ್ಯೆಯಿರುವ ಗೋಮುಖವುಳ್ಳಭಾಗ) ವನ್ನು ಮಾಡಬೇಕಾದರೆ ನಪುಂಸಕಶಿಲೆಯಿಂದಲೇ ಮಾಡಬೇಕಲ್ಲದೆ ಮತ್ತೊಂದರಿಂದ ಮಾಡಕೂಡದು. ॥೧೧॥ ಇದೂ ಅಲ್ಲದೆ ಮತ್ತೆ ಹೇಳುತ್ತೇನೆ ಕೇಳು ? ಶಿಲೆಯು ಪೂರ್ವದಿಕ್ಕಿನಲ್ಲಿಯೂ ಪಶ್ಚಿಮದಿಕ್ಕಿನಲ್ಲಿಯೂ ಉದ್ದವಾಗಿ ಬಿದ್ದಿರುವುದರಿಂ

ಏವಂ ಸಂಸ್ಥಿತಯಾ ತಾಸಾಂ ಶಿರಃಪಾದೆ ತಥೋಚ್ಯತೆ । ಅಗ್ನೀಂದ್ರರುದ್ರಸೋಮಾಶಾಸ್ಥಿತಂ ಮಸ್ತಕ ಮುಚ್ಯತೆ ॥೧೩॥ ಯಮಾಸುರಾಂಬುವಾಯ್ವಾಶಾಗತಂ ಪಾದಂ ಪ್ರಚಕ್ಷತೆ। ದೃಶ್ಯಭಾಗೇ ಶಿಲಾಪೃಷ್ಠಂ ಮುಖಮಾಹು ರಧೋಗತಂ ॥೧೪॥ ಚಿಹ್ನಂ ಕುರ್ಯಾನ್ಮುಖೇಪೃಷ್ಠೇ ಪಾದೇ ಮೂರ್ಧ್ನಿವಿಚಕ್ಷಣಃ। ರೇಖಾಕಳಂಕವಿಮಲಾ ಹಾರಿಕಾವಾಸಬಿಂದವಃ ॥೧೫॥ ಏತೇವರ್ಜ್ಯಾ ಮಹಾದೋಷಾಸ್ತೇಷಾಂ ಲಕ್ಷಣಮುಚ್ಯತೆ। ವೃಕ್ಷಗರ್ಭಂ ಶಿಲಾಗರ್ಭಂಲಕ್ಷಣೇನ ಪರೀಕ್ಷಯೇತ್ ॥೧೬॥ ಮಾಂಜಿಷ್ಠವರ್ಣಕೆದೃಷ್ಟೇ ಮಂಡಲೇವಾ ದ್ರುಮೇಽಶ್ಮನಿ । ಮಂಡೂಕಂ ತತ್ರಗರ್ಭಸ್ಥಂಜಾನೀಯಾಚ್ಛ್ರಗುರೂತ್ತಮಃ ॥ ೧೭ ॥ ಮಂಡಲೇಮಧು

ದಲೂ ದಕ್ಷಿಣದಿಕ್ಕಿನಲ್ಲಿಯೂ ಉತ್ತರದಿಕ್ಕಿನಲ್ಲಿಯೂ ಅಗಲವಾಗಿ ಬಿದ್ದಿರುವುದರಿಂದಲೂ, ಮತ್ತೂ ಈಶಾನ್ಯದಿಕ್ಕಿನಲ್ಲಿಯೂ, ನೈಋತ್ಯದಿಕ್ಕಿನಲ್ಲಿಯೂ ಉದ್ದವಾಗಿ ಬಿದ್ದಿರುವುದರಿಂದಲೂ, ಅಗ್ನಿದಿಕ್ಕು ವಾಯುದಿಕ್ಕುಗಳಲ್ಲಿ ಅಗಲವಾಗಿ ಬಿದ್ದಿರುವುದರಿಂದಲೂ ಕೂಡ ಉದ್ದವಾಗಿ ಬಿದ್ದಿರುವ ಭಾಗಗಳೇ ಆ ಶಿಲೆಗಳಿಗೆ ಶಿರಸ್ಸುಗಳೆಂಬದಾಗಿ ಹೇಳಿಸಿಕೊಳ್ಳುತ್ತವೆ. ಅಗಲವಾಗಿ ಬಿದ್ದಿರುವ ಭಾಗಗಳೇ ಆ ಶಿಲೆಗಳಿಗೆ ಪಾದಗಳೆಂಬದಾಗಿ ಹೇಳಿಸಿಕೊಳ್ಳುತ್ತವೆ. ॥ ಎಂದರೆ ಅಗ್ನಿದಿಕ್ಕು ಇಂದ್ರದಿಕ್ಕು ಈಶಾನ್ಯದಿಕ್ಕು ವರುಣದಿಕ್ಕುಗಳಲ್ಲಿ ಉದ್ದವಾಗಿ ಬಿದ್ದಿರುವ ಶಿಲೆಯ ಭಾಗಗಳೇ ಶಿರಸ್ಸೆಂಬದಾಗಿ ಹೇಳಿಸಿಕೊಳ್ಳಲ್ಪಡುತ್ತವೆ. ಮತ್ತೂ ಯಮದಿಕ್ಕು ನೈಋತ್ಯದಿಕ್ಕು ವರುಣದಿಕ್ಕು ವಾಯುವ್ಯದಿಕ್ಕುಗಳಲ್ಲಿ ಬಿದ್ದಿರತಕ್ಕ ಶಿಲೆಯ ಅಗಲವಾದ ಭಾಗಗಳೇ ಪಾದಗಳೆಂಬದಾಗಿ ಹೇಳಿಸಿಕೊಳ್ಳಲ್ಪಡುತ್ತವೆ. ಮತ್ತೂ ಕಣ್ಣಿಗೆ ಕಾಣುವ ಭಾಗವೇ ಶಿಲೆಯಹಿಂಭಾಗವಾಗಿರುವುದು. ಶಿಲೆಯಕೆಳಭಾಗವೇ ಶಿಲೆಯ ಮುಖಭಾಗವಾಗಿರುವುದು. ಆದುದರಿಂದಲೇ ಪ್ರವೀಣನಾದಗುರುವು ಶಿಲೆಯಮುಖಕ್ಕೂ ಹಿಂಭಾಗಕ್ಕೂ ಪಾದಕ್ಕೂ ಮಸ್ತಕಕ್ಕೂಕೂಡ ಗುರುತನ್ನು ಮಾಡಿಕೊಳ್ಳಬೇಕು ॥ ಮತ್ತೂ ಶಿಲೆಗಳೊಳಗೆ ರೇಖೆಯೆಂತಲೂ, ಕಳಂಕವೆಂತಲೂ, ವಿಮಲೆಯೆಂತಲೂ, ಹಾರಿಕೆಯೆಂತಲೂ, ವಾಸವೆಂತಲೂ, ಬಿಂದುವೆಂತಲೂ ಕೂಡ ಮಹಾದೋಷಗಳಿರುವುವು. ಆದಕಾರಣ ಆದೋಷಯುಕ್ತಗಳಾಗಿರತಕ್ಕ ಶಿಲೆಗಳನು ಪರೀಕ್ಷಿಸಿ ಬಿಡಬೇಕು. ಅವುಗಳ ಲಕ್ಷಣವನ್ನು ಹೇಳುತ್ತೇನೆ ಕೇಳು:—ವೃಕ್ಷಗರ್ಭವನ್ನು ಶಿಲಾಗರ್ಭವನ್ನು ಅವುಗಳ ಲಕ್ಷಣದಿಂದಲೇ ಪರೀಕ್ಷಿಸಿ ತಿಳಿಯಬೇಕು. ॥೧೬॥ ಹೇಗೆಂದರೆ—ಗುರುಶ್ರೇಷ್ಠನಾದವನು ವೃಕ್ಷಗಳನ್ನೂ ಶಿಲೆಗಳನ್ನೂ ಪರೀಕ್ಷಿಸಬೇಕಾದರೆ ಅವುಗಳ ಸಮೀಪಕ್ಕೆಬಂದು ನಿಂತು ನೋಡುವಾಗ ವೃಕ್ಷವೇಆಗಲಿ ಶಿಲೆಯೇಆಗಲಿ ಹಸುರು ಹಳದಿಬಣ್ಣದೊಡನೆ ಕೂಡಿಕೊಂಡು ಮಂಡ

ವರ್ಣೇಚ ಖದ್ಯೋತಂ ತತ್ರನಿರ್ದಿಶೇತ್ । ಪೀತೇ ಗೋಧಾಂಸಿತೇ ಸರ್ಪಂ ಕುಳೀರಂ ಹರಿತಾಳಕೇ ॥೧೮॥ ಗುಡವರ್ಣೇತುಪಾಷಾಣಂ ಮಂಡಲೇಸತಿ ನಿರ್ದಿಶೇತ್ । ಸ್ಫಟಿಕಾಭೇ ಜಲಂ ನಿಂದ್ಯಾತ್ಕಪಿಲೇ ತತ್ರ ಮೂಷಿಕಾಂ ॥೧೯॥ ಗೌಳಿಕಂತು ಕಪೋತಾಭೇ ಕೃಕಲಾಸಂ ತಥಾರುಣೇ । ಭಸ್ಮಾಭೇ ಸಿಕತಾ ವಿಂದ್ಯಾತ್ಪಾಷಾಣಸ್ಥಂಚ ಮಂಡಲೇ ॥೨೦॥ ವೃಶ್ಚಿಕಂ ಚಿತ್ರವರ್ಣೇತು ಶಫರಂ ಚಿತ್ರಕೃಷ್ಣಕೇ । ಶಿಲಾಯಾಮಥವೃಕ್ಷೇವಾ ಮಂಡಲಾನಿತು ಸಂತ್ಯಜೇತ್ ॥೨೧॥ ತತ್ರಗರ್ಭಪರೀಕ್ಷಾರ್ಥಂ ಗುಗುಲ್ಲೇಪಂಚ ಕಾರಯೇತ್ । ಬ್ರಹ್ಮಾಣಂ ವಜ್ರಪಾಣಿಂಚ ಶಿಲಾಪಾಣಿಂಚ ವೈಷ್ಣವಂ ॥೨೨॥ ಆಜ್ಯಂ ಕ್ಷೀರೇಣ ಸಂಯೋಜ್ಯ ಚೋಪಲೇಪಂನಯೇದ್ಬುಧಃ । ಲೇಪಿತೇ ಯದಿ ಕ್ಲಿನ್ನಂಸ್ಯಾ

ಲಾಕಾರವಾಗಿ (ಗುಂಡುಗುಂಡಾಗಿ) ಕಾಣಿಸಿಕೊಂಡದ್ದೇ ಆದರೆ ಆ ವೃಕ್ಷಗರ್ಭದಲ್ಲಾಗಲಿ, ಆ ಶಿಲೆಯ ಗರ್ಭದಲ್ಲಾಗಲಿ, ಕಪ್ಪೆಯು ಇದೆ ಯೆಂಬದಾಗಿ ತಿಳಿಯಬೇಕು. ॥೧೭॥ ಮತ್ತೂ ಅವುಗಳ ಮಂಡಲವು ಜೇನಿನಬಣ್ಣವಾಗಿ ಕಾಣಿಸಿದಲ್ಲಿ ಅವುಗಳ ಮಧ್ಯದಲ್ಲಿ ಮಿಂಚಿನಹುಳುವಿದೆಯೆಂದು ತಿಳಿಯಬೇಕು॥ ಹೊಂಬಣ್ಣವಾಗಿ ಕಾಣಿಸಿದಲ್ಲಿ ಅದರಲ್ಲಿ ಉಡುವನ್ನೂ, ಶುಭ್ರವಾಗಿ ಕಾಣಿಸಿದಲ್ಲಿ ಸರ್ಪವನ್ನೂ, ಶ್ರೀತಾಳೆಯಬಣ್ಣವಾಗಿ ಕಾಣಿಸಿದಲ್ಲಿ ನಳ್ಳಿಯನ್ನೂ, ಬೆಲ್ಲದವರ್ಣವಾಗಿ ಕಾಣಿಸಿದಲ್ಲಿ ಪಾಷಾಣವನ್ನೂ, ಆ ಮಂಡಲಾಕಾರವನ್ನು ಹೊಂದಿದ ಶಿಲೆಯಲ್ಲಾಗಲಿ ವೃಕ್ಷದಲ್ಲಾಗಲಿ ಇದೆಯೆಂದು ಅರಿಯಬೇಕು ॥ ಮತ್ತೂ ಅದು ಸ್ಫಟಿಕದ ಬಣ್ಣವಾಗಿದ್ದಲ್ಲಿ ಜಲವಿದೆ ಯೆಂಬದಾಗಿ ತಿಳಿಯಬೇಕು. ಕಪಿಲಬಣ್ಣವಾಗಿದ್ದರೆ ಅಲ್ಲಿ ಇಲಿಯನ್ನೂ ಮತ್ತೂ ಕಪ್ಪು ಬಿಳುಪು ಮಿಶ್ರವಾದ ಬಣ್ಣವಾಗಿದ್ದಲ್ಲಿ ಹಲ್ಲಿಯನ್ನೂ, ಕೆಂಪುಬಣ್ಣವಾಗಿದ್ದಲ್ಲಿ ಹೆಂಟೆಗೊದ್ದವನ್ನೂ, ಭಸ್ಮದಕಾಂತಿಯಾಗಿದ್ದಲ್ಲಿ ಮರಳನ್ನೂ ಪಾಷಾಣವನ್ನೂ ॥೨೦॥ ಮತ್ತೂ ಚಿತ್ರವರ್ಣವಾಗಿದ್ದಲ್ಲಿ ಚೇಳನ್ನೂ, ಚಿತ್ರವರ್ಣವಾಗಿಯೂ ಕಪ್ಪುಬಣ್ಣವಾಗಿಯೂ ಇದ್ದಲ್ಲಿ ಅದರಲ್ಲಿಯೇ ಮೀನನ್ನೂಕೂಡ ಹೊಂದಿರುವುದೆಂದು ನಿರ್ಧರಿಸಬೇಕು ॥ ವೃಕ್ಷವೂ ಶಿಲೆಯೂ ಕೂಡ ಮಂಡಲಾಕಾರವಾಗಿ ಈ ರೀತಿಯಾಗಿರುವುದರಿಂದ ಅವುಗಳೊಳಗೆ ಮಂಡಲಾಕಾರವಾಗಿರುವವುಗಳನ್ನು ಮಾತ್ರ ಬಿಡಬೇಕು. ॥೨೧॥ ಆದರೆ ಶ್ರೀಗುರುವು ವೃಕ್ಷಗಳ ಗರ್ಭವನ್ನೂ ಶಿಲೆಗಳಗರ್ಭವನ್ನೂ ಪರೀಕ್ಷಿಸುವುದಕ್ಕೋಸ್ಕರ ಅಲ್ಲಿಯೇ ಅವುಗಳಿಗೆ ಲೇಪನವನ್ನು ಮಾಡಬೇಕು. ಲೇಪನವೆಂದರೆ ಬ್ರಹ್ಮರಸಿಗಿಡದ ರಸವನ್ನೂ, ಎಳ್ಳಿನ ಹೂವಿನರಸವನ್ನೂ, ಶಿಲಾರಸವನ್ನೂ, ವಿಷ್ಣುಕ್ರಾಂತಿಗಿಡದ ರಸವನ್ನೂ, ತುಪ್ಪವನ್ನೂ ಕೂಡ ಬುದ್ಧಿ ಶಾಲಿಯಾದವನು

ದೇಕರಾತ್ರೋಷಿತಂ ತತಃ ||೨೩|| ಸಗರ್ಭಂತು ವಿಜಾನೀಯಾ ದಗರ್ಭಂ ತ್ವನ್ಯಥಾ ಭವೇತ್ | ಗೋಧಾಸವೃಶ್ಚಿಕಾಜ್ಞೀಯಾ ಕೂರ್ಮೋವಾಪಿ ನಸಂಶಯಃ ||೨೪|| ಪೃಥಿವೀಂಸೇಲುಸಂಸರ್ಜಂ ಮಹಿಷೀಕ್ಷೀರಪೇಷಿತಂ | ಪಾಷಾಣಲೇಪಿತಂ ತೇನ ವಹ್ನಿವರ್ಣೋ ಯಥಾ ಭವೇತ್ ||೨೫|| ತದ್ವದಾಯತಮಾತ್ರೇಣ ಆಶುಷ್ಯಾಪಿವಿಚಾರಯೇತ್ | ಕೃಷ್ಣಮೀನೋದ್ಭವಂ ಕೃಷ್ಣೇ ಕೃಕಲಾಸಂ ತಥಾರುಣೇ ||೨೬|| ಕಂಟಕಂಚ ಕರಂಜಂಚ ಮುಸ್ತಾಂ ಮಾಖ್ಯಂಫಲತ್ರಯಂ | ಪಿತಾಸೂಕ್ಷ್ಮಂತು ಪೇಷ್ಟಾ ವೈಸ್ತ್ರೀಸ್ತನ್ಯೇನತುಕಾರಯೇತ್ ||೨೭|| ಕೃಷ್ಣಂತು ಲೇಪಿತಂ ಹ್ಯೇತ ದ್ಯದಿಸ್ಯಾ ದುಪಲೇಪನೇ | ಯಾತು ಕಾಲವಿಷಂ ತತ್ರ ನತುಹಸ್ತೇನ ಸಂಸ್ಪೃಶೇತ್ ||೨೮|| ಗರ್ಭಾಣಾಂ ಲಕ್ಷಣಂಸರ್ವಂ ಸವಿಷಾಣಾಂಚಲಕ್ಷ

ಹಾಲಿನೊಡನೆ ಬೆರಸಿ ಲೇಪನವನ್ನು ಮಾಡಬೇಕು. ಆ ಲೇಪನವು ಚೆನ್ನಾಗಿ ವ್ಯಾಪಿಸಿ ಒಂದುರಾತ್ರಿಯು ಕಳೆದಪಕ್ಷದಲ್ಲಿ ಅದು ಸಗರ್ಭವಾಗಿದ್ದರೆ ಆ ಗರ್ಭವಿರುವಸ್ಥಾನವು ಮಾತ್ರ ಹಸಿಯಾಗಿಯೇ ನಿಂತು ಉಳಿದ ಲೇಪನವೆಲ್ಲಾ ಒಣಗಿಹೋಗುವುದು. ಅದು ವಿಗರ್ಭವಾಗಿದ್ದರೆ (ಗರ್ಭವಿಲ್ಲದಿದ್ದರೆ) ಆ ಲೇಪನವೆಲ್ಲಾ ಪೂರ್ತಿಯಾಗಿಯೇ ಒಣಗಿಹೋಗುವುದು || ಆಗ ಸಗರ್ಭವಾದವುಗಳಲ್ಲಿ ಉಡುವಿದೆಯೋ ಚೇಳಿದೆಯೋ ಆಮೆಯಿದೆಯೋ ಎಂಬುವುದು ಚೆನ್ನಾಗಿ ಗೊತ್ತಾಗುತ್ತದೆ ಸಂಶಯವಿಲ್ಲ. ||೨೪|| ಮತ್ತೂ ಕರಿಜೇರಿಗೆಯನ್ನೂ, ಚೆಳ್ಳೆಮರದಬೇರನ್ನೂ, ಮತ್ತೀಗಿಡದಬೇರನ್ನೂ ಕೂಡ ಎಮ್ಮೆಯ ಹಾಲಿನೊಡನೆ ಮಿಶ್ರಮಾಡಿ ಚೆನ್ನಾಗಿ ಅರೆದು ಶಿಲೆಗಳಿಗೆ ಲೇಪನವನ್ನು ಮಾಡಬೇಕು. ಆ ಲೇಪನವು ಬೆಂಕಿಯಬಣ್ಣವಾಗುವುದೋ, ವಿಶಾಲವಾಗಿ ಆರುತ್ತದೆಯೋ ಸಂಕ್ಷೇಪವಾಗಿ ಆರುತ್ತದೆಯೋ ಎಂಬುದನ್ನು ಕೂಡ ವಿಚಾರ ಮಾಡಬೇಕು. ಒಂದುವೇಳೆ ಆ ಲೇಪನವು ಮಧ್ಯದಲ್ಲಿ ಕಪ್ಪುಬಣ್ಣವಾದ ಪಕ್ಷದಲ್ಲಿ ಹಂಟೆಗೊದ್ದವಿದೆಯೆಂದು ತಿಳಿಯಬೇಕು. ||೨೬|| ಮತ್ತೂ ವೃಕ್ಷವನ್ನೂ ಶಿಲೆಯನ್ನೂ ಪರೀಕ್ಷಿಸಬೇಕಾದರೆ ಹನ್ನೆರಡು ಕರ್ಷಗಳತೂಕ (ಅಂದರೆ ೧೯೨ ಗುಲಗಂಜಿ ತೂಕ) ಹೆಗ್ಗುಳ್ಳದ ಬೇರನ್ನೂ, ಹುಲಿಯುಗುರಿನ ಗಿಡದಬೇರನ್ನೂ, ತುಂಗಮುಸ್ತೆಯಬೇರನ್ನೂ, ವೊಳ್ಳೀಗಿಡದಬೇರನ್ನೂ ಕೂಡ ಪ್ರತಿಯೊಂದನ್ನೂ ಬೇರೆಬೇರೆಯಾಗಿ ತೂಕಮಾಡಿಕೊಂಡು ಅವುಗಳೆಲ್ಲವನ್ನೂ ಬೆರಸಿ ಚೆನ್ನಾಗಿ ಅರೆದು ಸ್ತ್ರೀಸ್ತನ್ಯದೊಡನೆಮಿಶ್ರಮಾಡಿ ಅವುಗಳಿಗೆ ಲೇಪನವನ್ನು ಮಾಡಿ ಸ್ವಲ್ಪಹೊತ್ತು ಬಿಟ್ಟದ್ದು ಕೈಯಲ್ಲಿ ಮುಟ್ಟದೆ ಇರಬೇಕು. ಅನಂತರ ಆ ಲೇಪನಮಾಡಿದ್ದ ಲೇಪನವು ಕಪ್ಪುಬಣ್ಣವೇಆಗಿ ಪೂರ್ತಿಯಾಗಿ ಆರಿದಪಕ್ಷದಲ್ಲಿ ಆಗ ಅದರಲ್ಲಿ ವಿಷವಿದೆಯೆಂಬುದಾಗಿ ತಿಳಿಯಬೇಕು|| ಎಂಬದಾಗಿ ಪರಶಿವನು ಪಾರ್ವತಿಯನ್ನು ನೋಡಿ, ಎಲೈ ಪುಣ್ಯಾಪುಯಾಂಗಳಾದ ಪಾ

ಣಂ । ಅನುಕ್ತಂ ಪೂರ್ವಮಾಖ್ಯಾತಂ ತವಸ್ನೇಹೇನಚಾನಘೆ ॥೯॥ ಗೋಧಾನ್ಯಪತಿನಾಶಾಯ ವೃಶ್ಚಿಕಾಪೀಡಯಂತಿಗಾಃ । ಭುಜಂಗೋಜನ ಮಾರಸ್ಸ್ಯಾತ್ತೂಕ್ಮರ್ಕೋವೈತಸ್ಕರಾದ್ಭಯಂ ॥೧೦॥ ಅನಾವೃಷ್ಟಿರ್ದಿಶಃ ಪ್ರೋಕ್ತಂಕೃಕಲಾಸೆ ಧನಕ್ಷಯಂ । ಯಜಮಾನೋ ವಿನಶ್ಯೇತಗರ್ಭಸ್ರಾವೇ ಜಲೇತಥಾ ॥೧೧॥ ಗರ್ಭಶ್ಚ ಮಂದಗರ್ಭೇತು ಏವಂಭವತಿ ಸರ್ವದಾ । ಮಂಡೂಕೆವ್ಯಾಧಯಃಪ್ರೋಕ್ತಾ ಸ್ಸಸ್ಯಹಾನಿಸ್ತಥೈವಚ ॥ ಏತೇಗರ್ಭಾಸ್ಸಮಾಖ್ಯಾತಾ ಲಿಂಗಗರ್ಭವಿಶಾರದೈಃ । ಏವಂಪರೀಕ್ಷ್ಯ ಸತತಂ ಲಿಂಗಂ ಕುರ್ಯಾದ್ವಿಚಕ್ಷಣಃ ॥೧೨॥ ಪೀಠಂ ಸ್ತ್ರೀಶಿಲಯಾಕುರ್ಯಾನ್ನತುಪುಂಶಿಲಯಾಬುಧಃ । ನಪುಂಸಕಾಶ್ಮನಾ ಚೈವ ಕೃತಂಚೇತ್ಸರ್ವ

ವ್ರತಿಯೆ ! ಮೊದಲು ನಿನಗೆ ಗರ್ಭಲಕ್ಷಣವನ್ನೂ ವಿಷಗಳ ಲಕ್ಷಣವನ್ನೂ ಕೂಡ ಹೇಳದೆಯಿದ್ದೆನು ಈಗ ನಿನ್ನಮೇಲಣ ಸ್ನೇಹದಿಂದ ಹೇಳಿದೆನು ಎಂದು ಪರಶಿವನು ಪಾರ್ವತಿಗೆ ಹೇಳಿದನೆಂದು ಮೌನಪ್ಪ ವಿದ್ವಾಂಸನು ಹೇಳಿ, ಎಲೈ ಲಿಂಗಪ್ಪಮಂತ್ರಿಯೆ! ಇನ್ನು ಮುಂದೆ ಕೇಳು:– ॥೯॥ ವೃಕ್ಷಗರ್ಭದಲ್ಲೇ ಆಗಲಿ ಶಿಲಾಗರ್ಭದಲ್ಲೇ ಆಗಲಿ ಉಡುವೇನಾದರೂ ಸಿಕ್ಕಿದರೆ ರಾಜನು ನಾಶವಾಗುತ್ತಾನೆ. ಚೇಳೇನಾದರೂ ಸಿಕ್ಕಿದರೆ ಗೋವುಗಳಿಗೆ ಹಾನಿಯಾಗುತ್ತದೆ. ಸರ್ಪವೇನಾದರೂ ಸಿಕ್ಕಿದರೆ ಜನರು ಸಾಯುತ್ತಾರೆ. ಆಮೆಯೇನಾದರೂ ಸಿಕ್ಕಿದರೆ ಗ್ರಾಮಕ್ಕೆ ಕಳ್ಳರಿಂದ ಭಯವುಂಟಾಗುತ್ತದೆ. ಮತ್ತೂ ಎಲ್ಲಾ ದಿಕ್ಕುಗಳಲ್ಲಿಯೂ ಅನಾವೃಷ್ಟಿ (ಮಳೆಯಿಲ್ಲದಿರುವಿಕೆ) ಉಂಟಾಗುತ್ತದೆ, ಹಂಟೆಗೊದ್ದವೇನಾದರೂ ಸಿಕ್ಕಿದರೆ ದ್ರವ್ಯನಾಶವಾಗುತ್ತದೆ. ಗರ್ಭದಲ್ಲಿ ಜಲವು ಸುರಿಯುವುದಕ್ಕೆ ಉಪಕ್ರಮವಾದದ್ದೇ ಆದರೆ ದೇಶದ ಯಜಮಾನನು ನಾಶವಾಗುತ್ತಾನೆ. ಗರ್ಭವೇನಾದರೂ ಮಂದಗರ್ಭವಾದರೂ ಕೂಡ (ಸ್ವಲ್ಪ ಸುರಿದರೂ ಕೂಡ) ಯಜಮಾನನೇ ನಾಶವಾಗುತ್ತಾನೆ. ಕಪ್ಪೆಯೇನಾದರೂ ಸಿಕ್ಕಿದರೆ ಗ್ರಾಮಕ್ಕೆ ವ್ಯಾಧಿಗಳುಂಟಾಗುತ್ತವೆ. ಮತ್ತೂ ಸಸ್ಯಾದಿಗಳಿಗೆ ಹಾನಿಯೂ ಕೂಡ ಉಂಟಾಗುತ್ತದೆ. ॥೩–೧॥ ಎಲೈ ಲಿಂಗಪ್ಪ ಮಂತ್ರಿಯೆ ! ಕೇಳು— ಲಿಂಗಕ್ಕಾಗಿ ಶಿಲೆಗಳನ್ನು ತರುವುದಕ್ಕೆ ಹೋಗಿ ಆ ಶಿಲೆಗಳ ಗರ್ಭಗಳನ್ನು ಕಂಡು ಹಿಡಿಯುವದರಲ್ಲಿ ಪ್ರವೀಣರಾದವರುಗಳಿಂದ ಹಿಂದೆ ಹೇಳಿದವುಗಳೆಲ್ಲಾ ಗರ್ಭಗಳೆಂಬಾಗಿ ಸುಪ್ರಸಿದ್ಧ ಮಾಡಲ್ಪಟ್ಟಿರುವವು. ಆದುದರಿಂದ ವಿಚಕ್ಷಣನಾದವನು ಯಾವಾಗಲೂ ಶಿಲೆಗಳನ್ನು ಪರೀಕ್ಷಿಸಿ ಶೋಧಿಸಿ ಲಿಂಗವನ್ನು ಮಾಡಬೇಕು. ॥೧೨॥ ಆದರೆ ಕೇಳು- ಪೀಠವನ್ನು ಸ್ತ್ರೀಶಿಲೆಯಿಂದಲೇ ಮಾಡಬೇಕಲ್ಲದೆ ಪುರುಷಶಿಲೆಯಿಂದಮಾಡಕೂಡದು. ಮತ್ತೂ ನಪುಂಸಕಶಿಲೆಯಿಂದೇನಾದರೂ ಪೀಠವನ್ನು ಮಾಡಿದ್ದೇ ಆದರೆ ಸಮಸ್ತ

ದೋಷದಂ॥೩೪॥ಶಿಲಾಯಾಂ ಪುರುಷಶ್ಚಾಸ್ತೆ ತತ್ತುಲಿಂಗಂ ವಿಧೀಯತೆ ।
ಸ್ತ್ರೀಶಿಲಾಚಾಸನಸ್ಯೈವ ಶಿಲ್ಪಿಯಾ ಬ್ರಹ್ಮಸಂಜ್ಞಿಕಾ ॥೩೫॥ ನಪುಂ
ಸಕೇತಿ ವಿಖ್ಯಾತಾ ಲಿಂಗತ್ರಯಮುದಾಹೃತಂ । ಸ್ವರಭೇದಂಚ ವ
ರ್ಣಾಂಶ್ಚ ಭೇದಂ ಲಿಂಗಸ್ಯ ಯತ್ಪರಂ ॥೩೬॥ ಪ್ರಮಾಣಂ ವರ್ತನಂ
ಚೈವ ಶ್ರೂಯತಾಂ ತದ್ಬ್ರವೀಮಿತೇ । ಸೌವರ್ಣಂರಜತಂ ತಾಮ್ರ
ಮಾಯಸಂಚ ಯಥಾಕ್ರಮಂ ॥೩೭॥ ಮಣೀನಾಂ ವರ್ಣಮೇತೇಷಾಂ
ಬ್ರಾಹ್ಮಣಾದಿಶಿಲಾಮುಚ । ಶಿಲಾಂ ಹಸ್ತ್ವಾದಥಾನ್ಯೇನ ಯತ್ಸ್ವರಂ ತಸ್ಯ
ತಸ್ಯಹಿ ॥೩೮॥ ಜ್ಞಾತ್ವಾಸ್ವರಂಪೃಥಕ್ತೇಷಾಂ ವಿಪ್ರಾದೀನಾಂ ವಿನಿರ್ದಿ
ಶೇತ್ । ವಿಹಂಗಸ್ಯ ಸ್ವರಂ ಚೈವ ಅಂಗಾರಾರಾವಸನ್ನಿಭಂ ॥೩೯॥

ಶಿಲೆಯಿಂದಲೇ ಲಿಂಗವನ್ನು ಮಾಡಬೇಕು. ಸ್ತ್ರೀಶಿಲೆಯಿಂದಲೇ ಪೀಠವನ್ನು ಮಾಡಬೇಕು. ನಪುಂಸಕಶಿಲೆಯಿಂದಲೇ ಬ್ರಹ್ಮಕೂರ್ಚ (ಗೋಮುಖವಿರುವಭಾಗ) ವನ್ನು ಮಾಡಬೇಕು. ಎಂಬದಾಗಿ ಲಿಂಗದ ಮೂರುಭಾಗಗಳು ಕ್ರಮವಾಗಿಯೂ ಪ್ರಸಿದ್ಧವಾಗಿಯೂ ಹೇಳಲ್ಪಟ್ಟವು. ॥ ಎಲೈ ಲಿಂಗಪ್ರಮಂತ್ರಿಯೆ ! ಇನ್ನೂ ನಿನಗೆ ಲಿಂಗಗಳನ್ನು ಮಾಡತಕ್ಕ ಶಿಲೆಗಳ ವರ್ಣಭೇದವನ್ನೂ, ಸ್ವರಭೇದವನ್ನೂ, ಉತ್ತಮಕನಿಷ್ಠಗಳ ಭೇದವನ್ನೂ, ಪ್ರಮಾಣವನ್ನೂ, ವರ್ತನವನ್ನೂಕೂಡ ಹೇಳುತ್ತೇನೆಕೇಳು.?– ಆಶಿಲೆಗಳಲ್ಲಿ ಬ್ರಾಹ್ಮಣಜಾತಿಯ ಶಿಲೆಯು ಚಿನ್ನದ ಬಣ್ಣದಿಂದಲೂ, ಕ್ಷತ್ರಿಯಜಾತಿಯ ಶಿಲೆಯು ಬೆಳ್ಳಿಯಬಣ್ಣದಿಂದಲೂ, ವೈಶ್ಯಜಾತಿಯಶಿಲೆಯು ತಾಮ್ರದ ಬಣ್ಣದಿಂದಲೂ, ಶೂದ್ರಜಾತಿಯ ಶಿಲೆಯು ಕಬ್ಬಿಣದ ಬಣ್ಣದಿಂದಲೂ, ಮತ್ತು ಸಮಸ್ತಜಾತಿಯವರಿಗೂ ಉಪಯೋಗವಾಗತಕ್ಕ ಶಿಲೆಯು ರತ್ನದಬಣ್ಣದಿಂದಲೂ, ಮೆರೆಯುತ್ತಿರುವುವು. ॥ ಅನಂತರ ಬ್ರಾಹ್ಮಣಜಾತಿಯೇ ಮೊದಲಾದಶಿಲೆಗಳನ್ನು ಬಡಿದು ನೋಡಿದರೆ ಯಾವಯಾವಜಾತಿಯ ಶಿಲೆಗೆ ಯಾವಯಾವ ಸ್ವರವಿರಬೇಕೋ ಆಯಾಯ ಜಾತಿಗೆ ಆಯಾಯ ಸ್ವರವುಂಟಾಗುವುದು. ॥೩೮॥ ವಿವೇಕಶಾಲಿಯಾದವನು ಬ್ರಾಹ್ಮಣಾದಿ ಶಿಲೆಗಳನ್ನು ತಿಳಿದು ಬೇರಬೇರೆಯಾಗಿ ಬಡಿದು ಆಯಾಯ ಜಾತಿಯ ಶಿಲೆಗಳ ಸ್ವರಗಳನ್ನು ನಿರ್ಧರಿಸಬೇಕು. ಆಗ ಬ್ರಾಹ್ಮಣಜಾತಿಯ ಶಿಲೆಯು ಪಕ್ಷಿಯ ಸ್ವರದಿಂದಲೂ, ಕ್ಷತ್ರಿಯಜಾತಿಯ ಶಿಲೆಯು ಅಗ್ನಿಯ ಸ್ವರದಿಂದಲೂ, ವೈಶ್ಯಜಾತಿಯ ಶಿಲೆಯು ನಗಾರಿಯ ಸ್ವರದಿಂದಲೂ, ಶೂದ್ರಜಾತಿಯ ಶಿಲೆಯು ಸೇನೆಯ ಸ್ವರದಿಂದಲೂ ಶಂಖದ ಸ್ವರದಿಂದಲೂ, ಸಮಸ್ತಜಾತಿಯವರಿಗೂ ಉಪಯೋಗವಾಗತಕ್ಕ ಶಿಲೆಯು ಕೋಕಿಲಸ್ವರದಿಂದಲೂ ಕೂಡ ಮೆರೆಯುವುದು. ॥೩೯॥ ಮತ್ತೂ ಈಶಿಲೆಗಳೊಳಗೆ ಏನಾದರೂ ವಿಪರ್ಯಾಸವು (ಬಣ್ಣಗಳು ಜಾತಿಗಳು ಬೆರಸು

ಭೇರ್ಯಾರವಂಚಮೂಶಂಖರವಂಯತ್ಕೋಕಿಲೋಪಮಂ । ಶಿಲಾಸ್ವೇತದ್ವಿಪರ್ಯಾಸೇರಕ್ತಶ್ವೇತೇಯಥಾತಥಾ ॥ ಕೃಷ್ಣಶ್ವೇತೇತಥಾಚಾನ್ಯೇವಿಪರ್ಯಾಸಕ್ರಮಂಸ್ಮೃತಂ। ಉಮಾಂಶೇಯಾಸ್ತುತದ್ವರ್ಣಾತಜ್ಜಾತಿರಿತಿನಿರ್ದಿಶೇತ್ ॥೪೧॥ ರಾಜ್ಞೇಶೂದ್ರಾಯತಜ್ಜಾತಿರ್ಗೃಣ್ಹೀಯಾತ್ತುಸುಬುದ್ಧಿದೇ। ವಿಪ್ರವೈಶ್ಯೇಷುಸರ್ವೇಷಾಂ ಸಿದ್ಧ್ಯಾಲಕ್ಷಣಂಪರಂ॥೪೨॥ ಮೂಲಮೇಕಂವಿಜಾನೀಯಾದಗ್ರಂಬಾಹ್ಯಂತತಸ್ಸ್ಮೃತಂ। ಶಿಲಾಮೂಲೇಸಿರಾಮೂಲಂ ಸಂಗತಂಚೇತ್ಸುಲಕ್ಷಣಂ ॥೪೩। ತಿರ್ಯಗ್ಗತಾಸಿರಾಯತ್ರಪ್ರತಿಲೋಮಾಂಚವರ್ಜಯೇತ್ । ಸಿರಾಲಕ್ಷಣಮೇವಂತುತಾಸಾಂಗಂಧಸ್ಯಲಕ್ಷಣಂ ॥೪೪॥ ಗೋಮೂತ್ರಸರ್ಪಿದಧ್ನಂಚಪಯೋಗಂಧಾದ್ವಿಜಸ್ಯತು।

ಶಿಕೆಯು) ಉಂಟಾದರೆ ಅಂದರೆ—ಕಪ್ಪುಬಣ್ಣವು ಬಿಳಿಯಬಣ್ಣವೂ ಕೂಡ ಒಂದೇ ಶಿಲೆಯಲ್ಲಿದ್ದರೆ ಆಶಿಲೆಯಲ್ಲಿಯೇ ಪಕ್ಷಿಯಸ್ವರವೂ ಅಗ್ನಿಗೆ ಸಮಾನವಾದ ಸ್ವರವೂ ಮಿಶ್ರವಾಗಿಯೇ ನಾದವುಂಟಾಗುವುದು. ॥ ಮತ್ತೂ ಕಪ್ಪುಬಣ್ಣವೂ ಬಿಳಿಯಬಣ್ಣವೂ ಕೂಡ ಒಂದೇಶಿಲೆಯಲ್ಲಿದ್ದರೆ ಆ ಶಿಲೆಯಲ್ಲಿಯೇ ಪಕ್ಷಿಯಸ್ವರವೂ ಸೇನೆಯಲ್ಲಿ ಮಾಡುವ ಶಂಖಸ್ವರವೂಕೂಡ ಮಿಶ್ರವಾಗಿಯೇ ನಾದವುಂಟಾಗುವುದು. ಎಂಬದಾಗಿಶಿಲೆಗಳ ವಿಪರ್ಯಾಸಕ್ರಮವು ಹೇಳಲ್ಪಟ್ಟಿತು.॥ ಮತ್ತೂ ಶಕ್ತಿಯಂಶಗಳಾದ ಯಾವಶಿಲೆಗಳುಂಟೋ ಅವುಗಳಿಗೆ ಅಂದರೆ ಸ್ತ್ರೀಶಿಲೆಗಳಿಗೆ ಮೊದಲಿನಂತೆಯೇ ಜಾತಿಗಳನ್ನೂ ಬಣ್ಣಗಳನ್ನೂ ಪರೀಕ್ಷಿಸಿ ತೋರಿಸಬೇಕು.॥೪೧॥ ಆದರೆ ಬ್ರಾಹ್ಮಣನಿಗೆ ಬ್ರಾಹ್ಮಣಶಿಲೆಯನ್ನೂ, ಕ್ಷತ್ರಿಯನಿಗೆ ಕ್ಷತ್ರಿಯಶಿಲೆಯನ್ನೂ, ವೈಶ್ಯನಿಗೆ ವೈಶ್ಯಶಿಲೆಯನ್ನೂ, ಶೂದ್ರನಿಗೆ ಶೂದ್ರಶಿಲೆಯನ್ನೂ,. ಸಮಸ್ತಜಾತಿಯವರಿಗೂ ಉಪಯೋಗವಾಗತಕ್ಕದ್ದಾಗಿಯೂ ಉತ್ಕೃಷ್ಟವಾದ ಲಕ್ಷಣವನ್ನು ಹೊಂದಿರತಕ್ಕದಾಗಿಯೂ ಇರುವ ಕೋಕಿಲಸ್ವರದಶಿಲೆಯನ್ನು ಕೂಡ ಗ್ರಹಿಸಿ ಲಿಂಗವನ್ನು ಮಾಡಿಸಿ ಧರಿಸಿದ್ದೇ ಆದರೆ ಅವುಗಳೇ ಆಯಾಯಜಾತಿಯವರಿಗೆ ಒಳ್ಳೆಯ ಬುದ್ಧಿಯನ್ನು ಕೊಡತಕ್ಕವುಗಳೆಂಬದಾಗಿ ತಿಳಿದುಕೊ ॥ ಮೊದಲು ಶಿಲೆಯಬುಡವನ್ನು ತಿಳಿಯಬೇಕು. ಅನಂತರ ಶಿಲೆಯಮಸ್ತಕವನ್ನೂ ಬಾಹ್ಯಪ್ರದೇಶವನ್ನೂ ನೋಡಬೇಕೆಂಬದಾಗಿ ಸೂಚಯಿಸಲ್ಪಟ್ಟಿರುವುದು. ಆದರೆ ಶಿಲೆಯ ಮೂಲದಲ್ಲಿ ಶಿಲಾರೇಖೆಯು ಮೂಲವು ಸಂಬಂಧವಾಗಿದ್ದದ್ದೇ ಆದರೆ ಅದು ಒಳ್ಳೆಯಲಕ್ಷಣವಾಗಿರುವುದು. ॥೪೩॥ ಒಂದು ವೇಳೆಯಲ್ಲಿ ಶಿಲೆಯಬುಡದಲ್ಲಿರುವ ಶಿಲಾರೇಖೆಯು ಅಡ್ಡಡ್ಡಲಾಗಿಬಂದಿದ್ದಪಕ್ಷದಲ್ಲಿ ಅಂತಿರುವ ಶಿಲೆಯನ್ನು ಸ್ವೀಕರಿಸಕೂಡದು ಬಿಟ್ಟೇಬಿಡಬೇಕು. ॥ ಆದರೆ ಆ ಶಿಲೆಗಳ ಲಕ್ಷಣವನ್ನೂ ಅವುಗಳ ಗಂಧಲಕ್ಷಣವನ್ನೂ ಹೇಳುತ್ತೇನೆ ಕೇಳು ॥ ಬ್ರಾಹ್ಮಣಜಾತಿಯ ಶಿಲೆಯ ಮೂಲದಲ್ಲಿ,—ಗೋಮೂತ್ರಗಂಧವು, ತುಪ್ಪದಗಂಧವು, ಮೊಸರಿನಗಂಧವು, ಹಾಲಿನಗಂಧವು ಇರ

ಗೋಮಯಸ್ಯಗಜೋಷ್ಟ್ರಾಣಾಂಗಂಧಂರಾಜ್ಞೋವಿನಿರ್ದಿಶೇತ್ ॥೪೫॥ ಪತ್ರಾಮ್ರಕಟುಕಾದೀನಾಂ ಸಂಸ್ಪರ್ಶನಾಂವಿಶಸ್ತಥಾ । ಬ್ರಾಹ್ಮೀ ಸುಗಂಧಿತೈಲಾನಾಂ ಶೂದ್ರಾಯಲವಣಸ್ಯತು ॥೪೬॥ ಶಿಲಾಲಕ್ಷಣಮೇವಂತು ಪರಿಜ್ಞಾಯವಿಚಕ್ಷಣಃ । ಪರೀಕ್ಷ್ಯಚಯಥಾಶಾಸ್ತ್ರಮಾದಧೀತಶಿಲಾಂತತಃ ॥೪೭॥ ತತ್ಪ್ರಕಾರಂಸಂಗ್ರಹೇಣಕಥಯಾಮಿಯಥಾಗಮಂ । ಲಿಂಗಾರ್ಥೀಶಿಲ್ಪಿಭಿಸ್ಸಾರ್ಧಮಾಚಾರ್ಯೇಣ ಸಮನ್ವಿತಃ ॥೪೮॥ ಮಹಾಪಟಹಸಂಯುಕ್ತಶಂಖಭೇರ್ಯಾದಿನಿಸ್ಸ್ವನೈಃ । ಪುಣ್ಯಾಹಜಯಶಬ್ದೈಶ್ಚಸಹಾಯೈರ್ಬಲವತ್ತರೈಃ ॥೪೯॥ ತಿಥೌಚಕರಣೇಚೈವಸುಮುಹೂರ್ತೇವಿಶೇಷತಃ । ತತ್ರಕಾಲವಿಶೇಷೇಣನಿಮಿತ್ತಾನ್ಯುಪಲಕ್ಷಯೇತ್ ॥೫೦॥ ದಿವ್ಯಾಂತರಿಕ್ಷಭೌಮಾನಿಅಶುಭಾನಿಶುಭಾನಿಚ। ನಿಮಿತ್ತೇಶೋಭನೇಗಚ್ಛೇ

ಬೇಕು. ॥ ಕ್ಷತ್ರಿಯಜಾತಿಯ ಶಿಲೆಯ ಮೂಲದಲ್ಲಿ,—ಆನೆಯಲದ್ದಿಯಗಂಧವು, ಒಂಟೆಯಲದ್ದಿಯಗಂಧವು ಇರಬೇಕು. ॥೪೫॥ ವೈಶ್ಯಜಾತಿಯ ಶಿಲೆಯಮೂಲದಲ್ಲಿ,—ಲವಂಗದಗಂಧವು, ಮಾವಿನಗಂಧವು, ಕಟುಗರೋಹಿಣಿಯಗಂಧವು, ಗೋರಂಟಿಗಿಡದಗಂಧವು, ಇರಬೇಕು. । ಶೂದ್ರಜಾತಿಯ ಶಿಲೆಯಮೂಲದಲ್ಲಿ, —ಹೊನಗೊನೆಸೊಪ್ಪಿನಗಂಧವು, ಸುರಸುರಿಕೆಸೊಪ್ಪಿನಗಂಧವು, ಎಣ್ಣೆಯಗಂಧವು, ಉಪ್ಪಿನಗಂಧವು ಇರಬೇಕು. ॥೪೬॥ ಬುದ್ಧಿಶಾಲಿಯಾದವನು ಈ ರೀತಿಯಾಗಿ ವೃಕ್ಷಲಕ್ಷಣವನ್ನೂ ಶಿಲೆಯಲಕ್ಷಣವನ್ನೂ ತಿಳಿದು ಯಥಾ ಶಾಸ್ತ್ರೀಯವಾಗಿಪರೀಕ್ಷಿಸಿ ಅನಂತರ ವೃಕ್ಷವನ್ನೂ ಶಿಲೆಯನ್ನೂ ಸ್ವೀಕರಿಸಬೇಕು. ॥೪೭॥ ಈರೀತಿ ಯಾಗಿ ಆ ವಿಷಯವನ್ನು ಸಂಕ್ಷೇಪವಾಗಿ ಹೇಳಿದೆನು. ಇನ್ನು ಮುಂದೆ ಲಿಂಗಾರ್ಥಿಯಾಗಿರತಕ್ಕವನು ಯಥಾ ಶಾಸ್ತ್ರೀಯವಾಗಿ, ಶಿಲ್ಪಿಗಳೊಡನೆಯೂ ಆಚಾರ್ಯನೊಡನೆಯೂ ಮತ್ತೂ ಮಹಾಯುದ್ಧ ಸಂರಂಭದಂತಿರುವ ವೈಭವದಿಂದ ಕೂಡಿರುವ ಶಂಖನಾದಗಳೊಡನೆ ಕೂಡಿದಾತನಾಗಿ, ಮತ್ತೂ ಪುಣ್ಯಾಹ ಸಂಬಂಧಗಳಾದ ಜಯಶಬ್ದಗಳಿಂದಲೂ ಬಲವತ್ತರದಿಂದನುಸರಿಸಿ ಬರತಕ್ಕವರುಗಳಿಂದಲೂ ಕೂಡಿದಾತನಾಗಿ, ॥೪೮॥ ಶುಭತಿಥಿಯಲ್ಲಿಯೂ ಶುಭಕರಣದಲ್ಲಿಯೂ ಸುಮುಹೂರ್ತದಲ್ಲಿಯೂ ಕೂಡ ಅತ್ಯುತ್ಸಾಹನೊಡನೆ ಕೂಡಿದಾತನಾಗಿ, ಆ ಕಾಲದಲ್ಲಿಯೇ ವಿಶೇಷವಾಗಿ ಉಂಟಾದ ದಿವ್ಯಾಂತರಿಕ್ಷದ ನಿಮಿತ್ತಗಳೂ (ಆಕಾಶದ ಶಕುನಗಳು) ಭೂಮಿಯ ಸಂಬಂಧವಾದ ನಿಮಿತ್ತಗಳೂ ಶುಭಗಳೋ ? ಅಶುಭಗಳೋ ? ಎಂಬುವುದನ್ನು ಚೆನ್ನಾಗಿ ವಿಚಾರಮಾಡಿ ನೋಡಬೇಕು. ಆಗ ಶುಭವಾದ ಶಕುನವಾಗಿದ್ದ ಪಕ್ಷದಲ್ಲಿ ಪ್ರಯಾಣವನ್ನು ಮಾಡಬೇಕು. ಅಶುಭವಾದ ನಿಮಿತ್ತವಾಗಿದ್ದ

ದಶುಭೇನನಿವರ್ತಯೇತ್||೫೧|| ವಿದ್ಯುದಾತಪವರ್ಷಂಚಸ್ತನಿತಾನಿಶುಭಾನಿಚ । ನಿರ್ಘಾತಂಚಮಹಾವಾಯುಸ್ತಾರಕಾಪತನಂಯಥಾ ||೫೨|| ಉಲ್ಕಾಪಾತಂದಿಶಾಂದಾಹಮಶುಭಾನಿಶುಭಾನಿವೈ । ಅಥದಿವ್ಯಾಂತರಿಕ್ಷಾಣಿ ವಾಯಸಂಸುಸ್ವರಂಪುನಃ||೫೪|| ವಾಮತಶ್ಶಕುನಶ್ಶ್ರೇಷ್ಠಃ ಅಶುಭೋದಕ್ಷಿಣೇಮತಃ।ಮೃದ್ಭಾರಾಕನ್ಯಕಾಪಾಂಸುವೃಷ್ಟಿರ್ಗಾವೋವೃಕಸ್ತಥಾ|| ಬ್ರಾಹ್ಮಣಃಪುಷ್ಪಹಸ್ತಶ್ಚದಧಿಪೂರ್ಣಂತಥೈವಚ । ಜ್ವಲಂತಂಪಾವಕಂ ಮಾಂಸಂಶೋಭನಂಗಚ್ಛತಾತ್ಮನಃ||೫೫||ಶೋಭನಾನಿವಿಜಾನೀಯಾದ್ವೃಷಭಶ್ವಾನವಿವಚ। ರಾಸಂಗೋರಾಸಭಶ್ಚೈವ ಶತಪತ್ರಂ ಶಿವಸ್ತಥಾ || ಕೋಕಿಲೋವಾಮತಶ್ಶ್ರೇಷ್ಠೋಽಶುಭಶ್ಚೈವಪ್ರದಕ್ಷಿಣೇ। ವೃಷಲಾದ್ವಿಪರೀತಂತೆ ತೈಲಾಭ್ಯಕ್ತನರಃಪುನಃ ||೫೬|| ಮುಕ್ತಕೇಶಂಪುನಶ್ಚೈವ ಭೌಮಾನ್ಯೇತಾನಿವರ್ಜಯೇತ್ । ಕುಬೇರಂಶಾಂಕರಂಚಾಂದ್ರಂ ಶಾಕುನಂಸೂಕ್ತಮುಚ್ಚರೇತ್ ||೫೭||

ಪಕ್ಷದಲ್ಲಿ ಪ್ರಯಾಣಮಾಡಕೂಡದು. ||೫೧|| ಆದರ ಮಿಂಚು, ಬಿಸಿಲು, ಮಳೆ, ಮೇಘಗರ್ಜನೆ, ಇವು ಶುಭಗಳು || ಸಿಡಿಲು ಮಹಾವಾಯು, ನಕ್ಷತ್ರಗಳ ಬೀಳ್ವಿಕೆ, ಕೆಂಡದಮಳೆ, ಕಾಡುಗಿಚ್ಚು, ಇವುಗಳು ಶುಭಗಳಾಗಿಯೂ ಅಶುಭಗಳಾಗಿಯೂ ಇರುವವು. ಇವುಗಳೇ ದಿವ್ಯಾಂತರಿಕ್ಷನಿಮಿತ್ತಗಳು. || ಅನಂತರ ಒಳ್ಳೆಯುಸ್ವರದಿಂದ ಕೂಡಿರುವ ಕಾಗೆಯು ಎಡಭಾಗದಲ್ಲಿಹೋದರೆ ಶುಭವು, ಎಡಭಾಗದಲ್ಲಿಹೋದರೆ ಅಶುಭವೆಂಬುದಾಗಿ ನಿಶ್ಚಯಿಸಲ್ಪಟ್ಟಿರುವುದು. || ಮತ್ತೂ ಮಣ್ಣನ್ನು ಹೊತ್ತಿರುವ ಕನ್ನಿಕೆಯು; ಧೂಳಿನಮಳೆಯು , ಪಶುಗಳು, ತೋಳನು, ಪುಷ್ಪವನ್ನು ಹಿಡಿದಿರುವ ಬ್ರಾಹ್ಮಣನು, ಮೊಸರನ್ನು ಹಿಡಿದಿರುವ ಬ್ರಾಹ್ಮಣನು, ಉರಿಯುತ್ತಲಿರುವ ಅಗ್ನಿಯು, ಮಾಂಸವು, ಇವುಗಳು ಶುಭಕರವು. ||೫೫|| ಮತ್ತು ಗೂಳಿಯು, ನಾಯಿಯು, ಭಾಗ್ಯಶಾಲಿಯು, ಕತ್ತೆಯು, ಎನ್ನೈದಲೆಯು, ನರಿಯು-ಇವುಗಳನ್ನು ಕಂಡರೆ ಮಂಗಳಕರವಾಗಿಯೇ ಇರುವುದು. ||೫೬|| ಕೋಗಿಲೆಯು ಎಡಭಾಗದಲ್ಲಿ ಹೋದರೆ ಶ್ರೇಷ್ಠವು. ಬಲಭಾಗದಲ್ಲಿಹೋದರೆ ಅಶುಭವು. । ಶೂದ್ರನನ್ನೇನಾದರೂ ಕಂಡದ್ದೇಆದರೆ ಅವನಿಂದ ವಿಪರೀತವಾದ ಹಾನಿಯುಂಟಾಗುವುದು. ಎಣ್ಣೆಯನ್ನು ಹಚ್ಚಿರುವ ಮನುಷ್ಯನನ್ನೂ ಕೇಶವನ್ನು ಜೋಲುಬಿಟ್ಟಿರುವವನನ್ನೂ ನೋಡಿದ್ದೇಆದರೆ ದುಷ್ಟಶಕುನವು. ಇವುಗಳೇ ಭೂಮಿಯ ಸಂಬಂಧವಾದ ಶಕುನಗಳು. ಇವುಗಳುಂಟಾದ ಕಾಲದಲ್ಲಿ ಶಕುನಸೂಕ್ತಗಳಾದ ಕುಬೇರಸೂಕ್ತವನ್ನೂ ಶಂಕರಸೂಕ್ತವನ್ನೂ ಚಂದ್ರಸೂಕ್ತವನ್ನೂ ಉಚ್ಚರಿಸಿ ಈ ಶಕುನಗಳ ದೋಷಗಳು ನಿವಾರಣೆಯಾಯಿತೆಂದು ಭಾವಿಸಿ ಮುಂದೆ ಪ್ರಯಾಣಮಾಡಬಹುದು ||೫೭||

ಭೂಧರಾಣಿಚಪುಣ್ಯಾನಿಯಾನಿತೂಪವನಾನಿಚ। ವನಾನಿಚವಿಶೇಷೇಣ ಆಚಾರ್ಯೈಶ್ಶಿಲ್ಪಿಭಿಸ್ಸಹ॥೫೯॥ ಹಿಮವಾನ್ ಹೈಮಕೂಟಶ್ಚ ನಿಷಧೋನೀಲಏವಚ। ಭೂಧರಾಣಿಚಪುಣ್ಯಾನಿಯೇಷುಗ್ರಾಹ್ಯಾದ್ರುಮಾಶ್ಶಿಲಾಃ॥೬೦॥ ಪ್ಲಕ್ಷಶ್ಚಮಾಲ್ಯವಂತಶ್ಚ ಶೃಂಗವಂತಸ್ತಥೈವಚ । ಗಂಧಮಾದನಶೈಲಸ್ತು ಮೇರುಶ್ಚನವಮಸ್ಸ್ಮೃತಃ॥೬೧॥ ಏತೇಪರ್ವತರಾಜಾನೋಮಹಾಶೈಲಾಃ ಪ್ರಕೀರ್ತಿತಾಃ । ಮಹೇಂದ್ರೋಮಲಯಶ್ಚೈವ ವಿಂಧ್ಯಸ್ಸಹ್ಯಸ್ತಥೈವ ಚ ॥೬೨॥ ಶ್ರೀಪರ್ವತಶ್ಚವಿಖ್ಯಾತಸ್ತಥಾರೈವತಪರ್ವತಃ । ಏತೇಷಾಮೇವಸಾಮೀಪ್ಯೇವನಾನ್ಯೇವೋಪಲಕ್ಷಯೇತ್ ॥೬೩॥ ತತ್ಪ್ರದೇಶಾಪಗಾಯಾಸು ಸ್ಥಿತಾಸಾಂಕೂಲೇತುಯಾಸ್ಸ್ಥಿತಾಃ । ಏತೇಹ್ಯುಪವನಾಜ್ಞೇಯಾದೇವಕಾರ್ಯೇಷುಪ್ರೋಜಿತಾಃ ॥೬೪॥ ಏತೇಷಾಮಪ್ಯಲಾಭೇತುಯತ್ರವಾರೋಚತೇಮನಃ । ತತೋನಿರೂಪಯೇದ್ವೃಕ್ಷಂ ಶಿಲಾಂವಾಪಿಮನೋರಮಾಂ॥ ಏಕವರ್ಣಾಸಮಾಸ್ನಿಗ್ಧಾ ನಿಮ್ನಗಾಸಂಧಿಸಂಧಿಸು । ಸರಿತ್ಸಲಿಲನಿರ್ಧೌತಪ

ಮತ್ತೂ ಪುಣ್ಯಮಯಗಳಾದ ಯಾವಪರ್ವತಗಳು ಯಾವಉಪವನಗಳು ಆಚಾರ್ಯರಿಂದಲೂ ಶಿಲ್ಪಿಗಳಿಂದಲೂ ಹೊಂದುವುದಕ್ಕೆ ಯೋಗ್ಯಗಳಾದವುಗಳು ? ಎಂದೊಡೆ ॥೫೯॥ ಹಿಮವಂತನು, ಹೈಮಕೂಟವು, ನಿಷಧವು, ನೀಲವು—ಎಂಬ ಈ ಪರ್ವತಗಳೇ ಪುಣ್ಯಮಯಗಳಾಗಿರುವುವು ಇವುಗಳಲ್ಲಿಯೇ ಶಿಲೆಗಳನ್ನೂ ವೃಕ್ಷಗಳನ್ನೂ ಗ್ರಹಿಸಬೇಕು. ॥೬೦॥ ಪ್ಲಕ್ಷಪರ್ವತವು, ಮಾಲ್ಯವಂತವು, ಶೃಂಗವಂತವು, ಗಂಧಮಾದನವು, ಮೇರುವು,—ಈ ಒಂಭತ್ತು ಪರ್ವತಗಳೇ ಪ್ರಖ್ಯಾತವಾಗಿರುವುವು. ॥೬೧॥ ಇವುಗಳೇ ಪರ್ವತರಾಜಗಳು ಮಹಾಶೈಲಗಳು ಎಂಬುದಾಗಿ ಪ್ರಸಿದ್ಧವಾಗಿರುವುವು. ಮತ್ತೂ ಮಹೇಂದ್ರಪರ್ವತವು, ಮಲಯವು, ವಿಂಧ್ಯವು, ಸಹ್ಯಪರ್ವತವು, ಶ್ರೀಶೈಲವು, ಹಾಗೆಯೇ ಪ್ರಖ್ಯಾತವಾದ ರೈವತಕಪರ್ವತವೂ ಕೂಡ ಪ್ರಸಿದ್ಧವಾದುವುಗಳು.॥ ಇವುಗಳ ಸಮೀಪದಲ್ಲಿರುವ ವನಗಳೇ ಶ್ರೇಷ್ಠಗಳು. ಆದುದರಿಂದ ಅವುಗಳನ್ನೇ ಹೊಂದಬೇಕು. ॥೬೩॥ ಮತ್ತೂ ಆಪರ್ವತಗಳ ಸಮೀಪದಲ್ಲಿ ಯಾವನದಿಗಳುಂಟೋ, ಆನದಿಗಳ ದಡದಲ್ಲಿಯೇ ಯಾವ ವನಗಳುಂಟೋ, ಆ ಉಪವನಗಳಲ್ಲಿರುವ ವೃಕ್ಷಂಗಳೇ ದೇವಕಾರ್ಯಗಳಲ್ಲಿ ಪೂಜ್ಯಗಳಾಗಿರುವವು ॥೬೪॥ ಒಂದುವೇಳೆ ಇವುಗಳೊಂದಾದರೂ ದೊರೆಯದಿದ್ದ ಪಕ್ಷದಲ್ಲಿ ಆಗ ಶಿಲೆಗೂ ವೃಕ್ಷಕ್ಕೂ ಏನುಮಾಡಬೇಕೆಂದೊಡೆ-ಎಲ್ಲಿ ತನಗೆ ಏಕೀಭಾವವುಂಟಾಗಿ ತನ್ನ ಮನಸ್ಸು ಬಯಸುತ್ತದೆಯೋ ಅಲ್ಲಿಯೇನಿಂತು ಮನೋಹರವಾದ ಶಿಲೆಯನ್ನೂ ವೃಕ್ಷವನ್ನೂ ಸ್ವೀಕರಿಸಬೇಕು ? ॥೬೫॥ ಆದರೆ ಬುದ್ಧಿಶಾಲಿಗಳಾದವರುಗಳಿಂದ ಒಂದೇಬಣ್ಣವಾಗಿಯೂ, ಸಮವಾಗಿಯೂ, ಮನೋ

ವಿತ್ರಾಂತರ್ಜಲೋಷಿತಾಃ ॥೬೬॥ ದ್ರುಮಚ್ಛಾಯೋಪಗೂಢಾಶ್ಚ ತೀರ್ಥಾ
ಶ್ರಯಸಮನ್ವಿತಾಃ। ಆಯಾಮಪರಿಣಾಹಾಶ್ಚ ಶಿಲಾಗ್ರಾಹ್ಯಾ ವಿಚಕ್ಷಣೈಃ ॥
ಅಗ್ರಾಹ್ಯಂಜ್ವಲನಾಲೀಢಂತಪ್ತಂವಾಸೂರ್ಯರಶ್ಮಿಭಿಃ । ಅನ್ಯಕರ್ಮೋಪ
ಯುಕ್ತಾಶ್ಚತಥಾಕ್ಷಾರಾಂಬುದೂಷಿತಾಃ ॥೬೮॥ ಅತ್ಯಾತಪಗತಾವರ್ಜ್ಯಾ
ಅಪುಣ್ಯಜನಸೇವಿತಾಃ। ನದೀಶೈಲತಟಾಕೇಷುಶಿಲಾವೃಕ್ಷಾಂಶ್ಚವರ್ಜಯೇ
ತ್ ॥೬೯॥ ಯತ್ರವಾರೋಪಿತಂವೃಕ್ಷಂ ಶಿಲಾಂವಾಪಿಮನೋರಮಾಂ ।
ತೇಷುಸಾಮೀಪ್ಯತಸ್ಸ್ಥಿತ್ವಾಭೂಮಿಭಾಗಂತುಶೋಧಯೇತ್ ॥೭೦॥
ದರ್ಭೈಸ್ಸಂಶೋಧಯಿತ್ವಾತು ಆಚಾರ್ಯೈಶ್ಶಿಲ್ಪಿಭಿಸ್ಸಹ। ಗಂಧೈಃಪುಷ್ಪೈ
ಶ್ಚಧೂಪೈಶ್ಚವಸ್ತ್ರೈಶ್ಚೈವಂತುಪೂಜಯೇತ್ ॥೭೧॥ ಸ್ವಸ್ತಿಕಾದ್ಯುಪ
ಲೇಪೈಶ್ಚಭಕ್ಷ್ಯಭೋಜ್ಯೈಸ್ತಥೈವಚ । ಬಲಿಂದತ್ವಾತುವೃಕ್ಷಸ್ಯ ಶಿಲಾ

ಹರವಾಗಿಯೂ, ಸಂಧಿಸಂಧಿಗಳಲ್ಲಿ ಹಳ್ಳಗಳಾಗಿಯೂ, ಹೊಳೆಯ ನೀರಿನಿಂದ ಕಪ್ಪಾಗಿಯೂ, ಪವಿತ್ರವಾದ ಅಂತರ್ಜಲವನ್ನೂ ಧರಿಸತಕ್ಕದ್ದಾಗಿಯೂ, ವೃಕ್ಷಗಳ ನೆರಳಿನಿಂದ ಆವರಿಸಲ್ಪಟ್ಟದ್ದಾಗಿಯೂ, ತೀರ್ಥಗಳ ಆಶ್ರಯದಿಂದ ಕೂಡಿಕೊಂಡಿರುವವಾಗಿಯೂ, ಉದ್ದವಾಗಿಯೂ, ಅಗಲವಾಗಿಯೂ ಇರತಕ್ಕ ಶಿಲೆಗಳೇ ದೇವಕಾರ್ಯಗಳಿಗಾಗಿ ಗ್ರಹಿಸುವುದಕ್ಕೆ ಯೋಗ್ಯಗಳಾಗಿರುವುವು. ॥೬೭॥ ಬೆಂಕಿಯಿಂದ ವ್ಯಾಪ್ತವಾಗಿಯೂ, ಸೂರ್ಯನ ಬಿಸಿಲಿನಿಂದ ಕಾಯುತಕ್ಕದ್ದಾಗಿಯೂ, ಇರುವ ಶಿಲೆಯನ್ನು ಗ್ರಹಿಸಕೂಡದು ॥ ಮತ್ತೂ ಬೇರೆಕಾರ್ಯಗಳಿಗೆ ಉಪಯುಕ್ತಗಳಾಗಿಯೂ, ಉಪ್ಪುನೀರಿನಿಂದ ದೂಷಿತವಾಗಿಯೂ, ವಿಶೇಷವಾದ ಬಿಸಿಲಿನಿಂದ ಕಾಯುತಕ್ಕದ್ದಾಗಿಯೂ, ಪಾಪಾತ್ಮರಿಂದ ಸೇವಿಸಲ್ಪಡತಕ್ಕದ್ದಾಗಿಯೂ ಇರತಕ್ಕಶಿಲೆಗಳೂ ವೃಕ್ಷಗಳೂ ಕೂಡ ನದಿಗಳಲ್ಲಿದ್ದರೂ ಪರ್ವತಗಳಲ್ಲಿದ್ದರೂ ಕೆರೆಗಳಲ್ಲಿದ್ದರೂ ಕೂಡ ಸ್ವೀಕರಿಸತಕ್ಕವುಗಳಲ್ಲ. ಬಿಡತಕ್ಕವುಗಳೇ ಆಗಿರುವವು. ॥೬೯॥ ಆದುದರಿಂದ ವಿವೇಕಶಾಲಿಯಾದ ಬ್ರಾಹ್ಮಣನು ಎಲ್ಲಿ ಮನೋಹರವಾದ ಶಿಲೆಯನ್ನು ವೃಕ್ಷವನ್ನೂ ಸ್ವೀಕರಿಸಬೇಕೆಂಬದಾಗಿ ತನ್ನ ಮನಸ್ಸು ಬಯಸಿತೋ, ಆ ಸ್ಥಳದಲ್ಲಿಯೇ ತಾನು ಅವುಗಳ ಸಮೀಪದಲ್ಲಿಯೇ ಕುಳಿತುಕೊಂಡು ಭೂಮಿಭಾಗವನ್ನು ಶೋಧಿಸಬೇಕು. ಬಳಿಕ ಆಚಾರ್ಯರಿಂದಲೂ ಶಿಲ್ಪಿಗಳಿಂದಲೂ ದರ್ಭೆಗಳಿಂದಲೂ ಕೂಡ ಭೂಮಿಭಾಗಗಳನ್ನು ಕ್ರಮವಾಗಿ ಶೋಧನೆ ಮಾಡಿಸಿ, ಗಂಧಗಳಿಂದಲೂ ಪುಷ್ಪಗಳಿಂದಲೂ ಧೂಪಗಳಿಂದಲೂ ವಸ್ತ್ರಗಳಿಂದಲೂ ಕೂಡ ಕ್ರಮವಾಗಿ ಪೂಜಿಸಬೇಕು. ॥೭೧॥ ಮತ್ತೂ ಆವೃಕ್ಷಕ್ಕೂ ಆ ಶಿಲೆಗೂ ಕೂಡ ವಿಧಿಪೂರ್ವಕವಾಗಿ ಪುಣ್ಯಾಹವೇ ಮೊದಲಾದ ಮಂಗಳಕಾರ್ಯಗಳಲ್ಲುಂಟಾದ ಮಂತ್ರೋದಕಗಳ ಸೇಚನೆಗಳಿಂದಲೂ, ಭಕ್ಷ್ಯಗಳಿಂದಲೂ, ಭೋಜ್ಯ

ಯಾವಾಯಥಾವಿಧಿ ‖೩‖ ವಸೇತ್ತರಜನೀಮೇಕಾಂ ಸ್ವಪ್ನಮಾಲೋಕ್ಯ ತಜ್ಜಪೇತ್ ‖

‖ ಮಂತ್ರಂ ‖

ನಮಶ್ಶಂಭೋತ್ರಿ,ಣೇತ್ರಾಯಪಿಂಗಳಾಯಮಹಾತ್ಮನೇ। ವಾಮಾಯ ವಿಶ್ವರೂಪಾಯಸ್ವಪ್ನಾಧಿಪತಯೇನಮಃ‖೧‖ಆಚಕ್ಷ್ವದೇವದೇವೇಶಪ್ರಸನ್ನಾಸಿತವಾಂತಿಕೆ । ಸ್ವಪ್ನವತ್ಸರ್ವಕರ್ಮಾಣಿ ಹೃದಿಸ್ಥಾನಿಚಯಾನಿಮೆ ‖

ದೃಷ್ಟ್ವಾಸ್ವಪ್ನಂದ್ವಿಜಸ್ತತ್ರಬ್ರಾಹ್ಮಣೇಭ್ಯೋನಿವೇದಯೇತ್ । ಯದಾಪಶ್ಯತಿವೈವೃಕ್ಷಂ ಜ್ವಲಂತಂಧೂಮವರ್ಜಿತಂ ‖೩‖ ಪುಷ್ಪಿತಂಫಲಿತಂವಾಪಿಸ್ತ್ರಿಯಂವಾಪಿಸಮಾಶ್ರಯೇತ್ । ಶ್ರುತ್ವಾಸ್ವಪ್ನಂದ್ವಿಜಸ್ತತ್ರಶೋಭನಂತುವಿನಿರ್ದಿಶೇತ್ ‖೪‖ ವಾಗ್ಭಿಶ್ಶುಭಾಭಿಸ್ತನ್ಮಂತ್ರಪ್ರಶಸ್ತಂತಂದ್ರುಮಂದ್ವಿಜಃ । ಪೂರ್ವೋತ್ತರಮುಖೋಭೂತ್ವಾಮೌನೀಸಂಯತಮಾನಸಃ ‖೫‖ ಛಿದ್ಯಾತ್ತೇನಕುಠಾರೇಣ ಮಧುನಾಸಂಯುತೇನಚ । ಪೂಜ್ಯಾರ್ಚಾಯಾವಿಧಾನೇನ ಶಿಲೋದ್ಧಾರಂಚಕಾರಯೇತ್ ‖೬‖ ಏವಂಪರೀ

ಗಳಿಂದಲೂ, ಕೂಡ ಬಲಿಯನ್ನು ಕೊಟ್ಟು ಅಲ್ಲಿಯೇ ಒಂದುರಾತ್ರಿ ವಾಸಮಾಡಬೇಕು. ಆ ರಾತ್ರಿಯಲ್ಲಿಯೇ ತಾನು ಕಂಡ ಸ್ವಪ್ನವನ್ನು ಆಲೋಚಿಸಿ—"ನಮಶ್ಶಂಭೊ......ಸ್ಥಾನಿಚಯಾನಿಮೆ"— ಎಂಬ ಮಂತ್ರವನ್ನು ಜಪಿಸಬೇಕು.

ಈರೀತಿಯಾಗಿ ಬ್ರಾಹ್ಮಣನು ಮಾಡಿ ಆಗ ತಾನು ಕಂಡಸ್ವಪ್ನವನ್ನು ತನ್ನೊಡನೆ ಬಂದಿರತಕ್ಕ ಬ್ರಾಹ್ಮಣರಿಗೆ ವಿಜ್ಞಾಪಿಸಬೇಕು. ಆಗ ಅಲ್ಲಿ ಆ ಬ್ರಾಹ್ಮಣರೊಳಗೆ ಹಿರ್ವಬ್ರಾಹ್ಮಣನು ಆ ಸ್ವಪ್ನವನ್ನು ಕೇಳಿ, ಅಯ್ಯಾ ಯಾವಾಗ ನೀನು ಸ್ವಪ್ನದಲ್ಲಿ ಹೊಗೆಯಿಲ್ಲದೆ ಉರಿಯುತ್ತಲಿರುವ ವೃಕ್ಷವನ್ನು ನೋಡಿದೆಯೋ? ಹೂವನ್ನು ಬಿಟ್ಟು ಫಲಿಸಿರುವ ವೃಕ್ಷವನ್ನು ನೋಡಿದೆಯೋ? ಮತ್ತೂ ಸ್ವಪ್ನದಲ್ಲಿ ಸ್ತ್ರೀಯನ್ನು ಆಶ್ರಯಿಸಿದೆಯೋ? ಆಗಲೇ ನಿನಗೆ ಮಂಗಳವಾಗುವುದು, ಎಂಬದಾಗಿ ಅಜ್ಞಾಪಿಸಬೇಕು. ‖೪ ಅನಂತರ ಶುಭಕರಗಳಾದ ಆ ವಾಕ್ಕುಗಳಿಂದ ಸಂತುಷ್ಟಚಿತ್ತನಾದ ಆ ಬ್ರಾಹ್ಮಣನು ಪೂರ್ವೋತ್ತರಮುಖನೂ, ಮೌನಿಯೂ, ನಿಯತಮಾನಸನೂ ಆಗಿ ಮಂತ್ರದಿಂದ ಪ್ರಶಸ್ತವಾದ ಆ ವೃಕ್ಷವನ್ನು ಜೇನುತುಪ್ಪದಿಂದ ನೆನಸಲ್ಪಟ್ಟಿರುವ ಕೊಡಲಿಯಿಂದಲೇ ಕಡಿಯಬೇಕು. ಬಳಿಕ ಶ್ಲಾಘನೀಯವಾದ ಪೂಜೆಯ ವಿಧಾನದಿಂದ ಪರಿಶೋಭಿಸುವ ಆ ಶಿಲೆಯನ್ನು ಎತ್ತಬೇಕು. ‖೬‖ ಈರೀತಿಯಾಗಿ ಬುದ್ಧಿಶಾಲಿಯಾದವನು ನಿರಂತ

ಕ್ಷ್ಯಸತತಂ ಲಿಂಗಂಕುರ್ಯಾದ್ವಿಚಕ್ಷಣಃ। ವೃಕ್ಷಾನ್ಸಂಶೋಧ್ಯಸತತಂದೇವಕಾರ್ಯಂಸಮಾಚರೇತ್ ॥೬॥

ಇತಿ ಶ್ರೀಮದನಾದಿ ಪ್ರಮಥಪರಂಪರಾಗತ ಷಟ್ಸ್ಥಲಜ್ಞಾನಬೋಧ
ಕಾಚಾರ್ಯವರ್ಗ್ಯ ವರಗುರುಬಸವಯತಿವರ್ಯಲಬ್ಧ ಬುದ್ಧಿವಿಕಾ
ಸೇನ ವೀರಶೈವದೀಕ್ಷಾಗುರುಚೆನ್ನವೀರಸ್ವಾಮಿ ಕರಕಮಲ
ಸಂಜಾತೇನ ಮೌನಪ್ಪವಿದುಷಾಕೃತೇ ವೀರಶೈವಾಚಾ
ರಕೌಸ್ತುಭೇ ಕ್ರಿಯಾಕಾಂಡೆ ಶಿಲಾಶೋಧನ ಶಿಲಾ
ನಯುನಪ್ರಕಾರೋನಾಮ ಷಷ್ಠಂಪ್ರಕರಣಂ
ಸಮಾಪ್ತಂ.

ರದಲ್ಲಿಯೂ ಪರೀಕ್ಷಿಸಿ ಶೋಧಿಸಿ ಲಿಂಗವನ್ನು ಮಾಡಬೇಕು. ಮತ್ತು ದೇವಕಾರ್ಯಕ್ಕಾಗಿ ಮರಗಳನ್ನೂ ಕೂಡ ತರಬೇಕು.

ಎಂಬಲ್ಲಿಗೆ ಶ್ರೀಮೌನಪ್ಪ ವಿದ್ವತ್ಕೃತವೀರಶೈವಾಚಾರಕೌಸ್ತುಭಕ್ಕೆ
ಎ. ಬಸವಲಿಂಗಶಾಸ್ತ್ರಿರಚಿತವಾದ "ಆಚಾರಪ್ರಕಾಶಿಕೆ" ಎಂಬ
ಕನ್ನಡ ಟಿಪ್ಪಣದಲ್ಲಿ ಲಿಂಗದಶಿಲಾಶೋಧನವನ್ನೂ ಮತ್ತು
ಶಿಲೆಯ ತರುವಿಕೆಯ ಪ್ರಕಾರವನ್ನೂ ನಿರೂಪಣ
ಮಾಡುವ ೬ ನೆಯ ಪ್ರಕರಣವು
ಮುಗಿದುದು.

ಅಥ ಸಪ್ತಮ ಪ್ರಕರಣಂ.

—ಲಿಂಗಪೀಠಾಧಿವಾಸಬಂಧಸ್ವರೂಪನಿರೂಪಣಂ—

ಕಥಂಲಿಂಗಂಪ್ರಕುರ್ವೀತಕಥಂವಾಪ್ಯಧಿವಾಸಯೇತ್ । ತತ್ಪ್ರಕಾರಂಮಯಿಸ್ನೇಹಾಮುಪವರ್ಣಯಪಂಡಿತ ||೧|| ಲಿಂಗಪ್ಪಮಂತ್ರಿತಿಲಕಲೋಕೋಪಕೃತಯೆತ್ವಯಾ । ಪೃಷ್ಟಂತತ್ಕ್ರಮಶೋವಕ್ಷ್ಯೇಸಂಪ್ರದಾಯಾನುರೋಧತಃ ||೨|| ತತ್ರಾದೌಲಿಂಗಪೀಠಸ್ಯಲಕ್ಷಣಂದಶಧಾಭವೇತ್ । ದೇವತಾನಾಂಚಸರ್ವಾಸಾಂಸಾಧರಣತಯೋದಿತಂ ||೩|| ಸ್ಥಾವರಂಚಾಭಿಧಾಸ್ಯೆಽಹಂಸಾವಧಾನಮನಾಶ್ಶೃಣು||

—ದಶವಿಧಪೀಠಾನಿ—

ಮೋಹಶೂರೋತ್ತರೇ:—"ಅತಃಪರಂಪ್ರವಕ್ಷ್ಯಾಮಿಪೀಠಿಕಾನಾಂ

೭ನೆಯ ಪ್ರಕರಣವು.

ಲಿಂಗಸ್ವರೂಪವನ್ನೂ ಪೀಠಸ್ವರೂಪವನ್ನೂ ಅಧಿವಾಸಸ್ವರೂಪವನ್ನೂ ಬಂಧಸ್ವರೂಪವನ್ನೂ ಕುರಿತ ನಿರೂಪಣ ಮಾಡುವಿಕೆಯು.

ಎಲೈ ಮೌನಪ್ಪ ವಿದ್ವಾಂಸನೆ ! ಲಿಂಗವನ್ನೂ ಪೀಠವನ್ನೂ ಹೇಗೆಮಾಡಬೇಕು? ಮತ್ತೂ ಅಧಿವಾಸವನ್ನೂ ಅಷ್ಟಬಂಧವನ್ನೂ ಹೇಗೆಮಾಡಬೇಕು ? ಇವುಗಳ ಸ್ವರೂಪಗಳನ್ನು ನನ್ನ ಮೇಲಣ ಸ್ನೇಹದಿಂದ ವಿವರಿಸಿ ಹೇಳುವವನಾಗು ಎನಲು, ಮೌನಪ್ಪವಿದ್ವಾಂಸನು ||೧|| ಮಂತ್ರಿಕುಲಕ್ಕೆ ತಿಲಕಪ್ರಾಯನಾದ ಎಲೈ ಲಿಂಗಪ್ಪಮಂತ್ರಿಯೆ ! ಈಗ ನಿನ್ನಿಂದ ಈ ವಿಷಯಗಳು ಲೋಕಕ್ಕೆ ಉಪಕಾರವನ್ನು ಮಾಡುವುದಕ್ಕೋಸ್ಕರವಾಗಿಯೇ ಕೇಳಲ್ಪಟ್ಟುವು, ಆದುದರಿಂದ ಅವುಗಳನ್ನು ಕ್ರಮವಾಗಿಪೂರ್ವಾಚಾರ್ಯಸಂಪ್ರದಾಯವನ್ನನುಸರಿಸಿ ಹೇಳುತ್ತೇನೆ ಕೇಳು:— ||೨|| ಮೊದಲಲ್ಲಿ ಲಿಂಗಪೀಠವು ಹತ್ತು ವಿಧವಾಗಿರುವುದು. ಸಮಸ್ತ ದೇವತೆಗಳ ಪೀಠಲಕ್ಷಣವೂ ಸಾಧಾರಣವಾಗಿ ಹಾಗೆಯೇ ಹೇಳಲ್ಪಟ್ಟಿರುವುದು. ಆದುದರಿಂದ ಈಗ ನಿನಗೆ ಆ ಲಿಂಗಪೀಠಗಳೊಳಗೆ ಸ್ಥಾವರಲಿಂಗದ ಪೀಠಲಕ್ಷಣವನ್ನು ಹೇಳುತ್ತೇನೆ ಸಾವಧಾನ ಮನಸ್ಸುಳ್ಳವನಾಗಿ ಕೇಳು ||

—ಹತ್ತುವಿಧಗಳಾದ ಪೀಠಗಳು—

ಮೋಹಶೂರೋತ್ತರಾಗಮದಲ್ಲಿ:—ವಿಧಿಯನ್ನನುಸರಿಸಿ ಪೀಠಗಳ ಉತ್ಕೃಷ್ಟ

ಯಥಾವಿಧಿ । ಉತ್ಸೇಧಂಚೈವಪೀಠಸ್ಯಭಾಗಂಷೋಡಶಕಾರಯೇತ್ ॥೪॥ ಭೂಮಿಪ್ರತಿಷ್ಠ್ಯಮೇಕಂತುಚತುರ್ಭಾಗಂತತೋಭವೇತ್ । ವೃತ್ತಂತ್ರಿಭಾಗತಃಕುರ್ಯಾದ್ಧ್ವಿಗೈಕಂವೃತ್ತಪಟ್ಟಿಕಾಂ ॥೫॥ ಕಂಠಂತ್ರಿಭಾಗತಃಕುರ್ಯಾತ್ಕಾಶಾಂತುವೃತ್ತಪಟ್ಟಿಕಾಂ । ಗ್ರೀವಾಂತಸ್ಯಾರ್ಧಭಾಗಂತುಏಕಾಂಶೇಶೇಷಪಟ್ಟಿಕಾಂ॥೬॥ಭಾಗಂಪ್ರವಿಷ್ಟಮೇಕೈಕಂ ಜಗತ್ಯಾಯಾಮುಕಂಠಕಂ । ನಿರ್ಗಮಂತುಪುನಸ್ತಸ್ಯಯಾವದ್ವೈಶೇಷಪಟ್ಟಿಕಾಂ ॥೭॥ ವಾರಿನಿರ್ಗಮನಾರ್ಥಂತುತಸ್ಮಧ್ಯೇತುಪ್ರಣಾಳಿಕಾಂ । ಸಾಮಾನ್ಯಮೇತದುದ್ದಿಷ್ಟಂಪೀಠಿಕಾಲಕ್ಷಣಂಮಯಾ ॥೮॥ ಸ್ಥಂಡಿಲಾಚೈವವಾಪೀಚಯಾಜ್ಞೀಚಂಡೀತಥೈವಚ। ಮಂಡಲಾಪೂರ್ಣಚಂದ್ರಾಚವಜ್ರೀಪದ್ಮಾತಥೈವಚ॥ ಅರ್ಧಚಂದ್ರಾತ್ರಿಕೋಣಾಚವಿಜ್ಞೇಯಾದಶಪೀಠಿಕಾ । ತೇಷಾಂತುರೂಪ

ವಾದ ಸಾಮಾನ್ಯಲಕ್ಷಣವನ್ನು ಹೇಳುತ್ತೇನೆ:— ಪೀಠದ ಔನ್ನತ್ಯವನ್ನು (ಉದ್ದವನ್ನು) ಹದಿನಾರುಭಾಗವಾಗಿ ಮಾಡಬೇಕು. ॥೪॥ ಅವರೊಳಗೆ ಪೀಠದನೂಲದ ಒಂದು ಭಾಗವು ಭೂಮಿಯಲ್ಲಿ ಪ್ರತಿಷ್ಠೆಯಾಗತಕ್ಕದು. ಅನಂತರ ಆ ಒಂದು ಭಾಗದಮೇಲೆ ನಾಲ್ಕುಭಾಗಗಳನ್ನು ಬಿಡಬೇಕು. ಆ ನಾಲ್ಕುಭಾಗದಮೇಲೆ ಮೂರುಭಾಗವು ವೃತ್ತವಾಗಿರಬೇಕು. ಆ ವೃತ್ತದಮೇಲೆ ಒಂದು ಭಾಗವು ಅಧೋವೃತ್ತಪಟ್ಟಿಕೆಯಾಗಿರಬೇಕು. ॥೫॥ ಆ ವೃತ್ತಪಟ್ಟಿಕೆಯಮೇಲೆ ಮೂರುಭಾಗವು ಕಂಠವಾಗಿರಬೇಕು. ಬಳಿಕ ಆ ಕಂಠದಮೇಲೆ ಎರಡುಭಾಗವು ಪ್ರಕಾಶಮಾನವಾದ ಊರ್ಧ್ವವೃತ್ತಪಟ್ಟಿಕೆಯಾಗಿರಬೇಕು. ಆ ಊರ್ಧ್ವವೃತ್ತಪಟ್ಟಿಕೆಯಮೇಲೆ ಒಂದುಭಾಗವು ಊರ್ಧ್ವಕಂಠವಾಗಿರಬೇಕು. ಅನಂತರ ಉಳಿದ ಒಂದುಭಾಗವೇ ಶೇಷಪಟ್ಟಿಕೆಯಾಗಿರಬೇಕು ॥೬॥ ಬಳಿಕ ಲಿಂಗಮೂರ್ತಿಯು ಶೇಷಪಟ್ಟಿಕೆಯ ಮಧ್ಯದಲ್ಲಿರುವ ಪೀಠದಜಗತಿಯ ವಿಶಾಲಭಾಗವನ್ನು ಮೊದಲುಮಾಡಿಕೊಂಡು ಕಂಠಭಾಗದವರೆಗೆ ಇಳಿದು ಪ್ರತಿಯೊಂದು ಭಾಗವನ್ನೂ ಪ್ರವೇಶಿಸಿರಬೇಕು. ಮತ್ತೂ ಶೇಷಪಟ್ಟಿಕೆಗಿಂತಲೂ ಲಿಂಗವು ಎತ್ತರವಾಗಿರಬೇಕು.॥೭॥ಲಿಂಗಾಭಿಷೇಕವನ್ನು ಮಾಡಿದ ಜಲವು ಹೋಗುವುದಕ್ಕೋಸ್ಕರವಾಗಿ ಆ ಪೀಠದ ಶೇಷಪಟ್ಟಿಕೆಯ ಉತ್ತರಭಾಗದ ಮಧ್ಯದಲ್ಲಿಯೇ ಜಲಮಾರ್ಗ (ಗೋಮುಖ) ವಿರಬೇಕು. ಈ ರೀತಿಯಾಗಿ ಸಾಮಾನ್ಯವಾದ ಪೀಠಿಕಾಲಕ್ಷಣವು ನನ್ನಿಂದ ಹೇಳಲ್ಪಟ್ಟಿತು. ಇನ್ನು ದಶವಿಧಪೀಠಗಳನ್ನು ಹೇಳುತ್ತೇನೆ ಕೇಳು ॥ ಪೀಠವು;—ಸ್ಥಂಡಿಲೆಯೆಂದು, ವಾಪಿಯೆಂದು, ಯಾಜ್ಞಿಯೆಂದು, ಚಂಡಿಯೆಂದು, ಮಂಡಲೆಯೆಂದು, ಪೂರ್ಣಚಂದ್ರೆಯೆಂದು, ವಜ್ರೆಯೆಂದು, ಪದ್ಮೆಯೆಂದು, ಅರ್ಧಚಂದ್ರೆಯೆಂದು, ತ್ರಿಕೋಣೆಯೆಂದು, ಹತ್ತುವಿಧವಾಗಿರುವುದು ಎಂದು ಹೇಳಲು, ಲಿಂಗಪ್ರಮಂತ್ರಿಯು ಎಲೈ ಮೌನಪ್ಪಪಿಭ್ಯಾಗನೇ ! ವಕ್ತವ್ಯವಾದ ಆ ಹತ್ತುವಿಧದ ಪೀಠಗಳ ಸ್ವರೂಪಲಕ್ಷಣಗಳ

ಸಂಸ್ಥಾನಂಕಥ್ಯಮಾನಂನಿಬೋಧಯ ॥೧೦॥ ತುರ್ಯಾಶ್ರಾಸ್ಥಂಡಿಲಾಜ್ಞೇಯಾಮೇಖಲಾದಿವಿವರ್ಜಿತಾ । ದ್ವಿಮೇಖಲಾಭವೇದ್ವಾಪೀಯಾಜ್ಞೇಚೈವತ್ರಿಮೇಖಲಾ॥ ೧೧॥ ಚತುರಶ್ರಾಭವೇಚ್ಚಂಡೀಸರ್ವಸಿದ್ಧಿಪ್ರದಾಯಿನೀ। ಲಿಂಗೇಷುತಾಂಪ್ರಯತ್ನೇನವರ್ಜಯಿತ್ವಾವಿಚಕ್ಷಣಃ ॥೧೨॥ ಸರ್ವೇಷುವರ್ತುಳಾವಾಮಾಮೇಖಲಾಭಿರಲಂಕೃತಾ । ಮಂಡಲಾಸಾತುವಿಜ್ಞೇಯಾದ್ವಿಜಾನಾಂಸಂತತಾಪ್ರಿಯಾ ॥೧೩॥ ಪೂರ್ಣಚಂದ್ರಸಮಾಕಾರಾಮಧ್ಯೆರಿಕ್ತದ್ವಿಮೇಖಲಾ। ಪೂರ್ಣಚಂದ್ರೇತಿವಿಜ್ಞೇಯಾರುದ್ರಾಣಾಂಸಂತತಂಪ್ರಿಯಾ ॥೧೪॥ ಷೋಡಶಾಶ್ರಾಭವೇದ್ವಜ್ರಾಮೇಖಲಾತ್ರಯಭೂಷಿತಾ । ಷೋಡಶಾಶ್ರಾಭವೇತ್ಪದ್ಮಾಕಿಂಚಿದ್ವಕ್ರಂಚಮೂಲತಃ ॥೧೫॥ ಅರ್ಧಚಂ

ನ್ನು ತಿಳಿಸು ಎನಲು, ಮೌನಪ್ಪವಿದ್ವಾಂಸನು॥೧೦॥ ಎಲೈ ಲಿಂಗಪ್ಪಮಂತ್ರಿಯೇ ಕೇಳು- ಸೋಪಾನದ ಪಟ್ಟಿಯಿಲ್ಲದೆ ಸಾಮಾನ್ಯಗಳಾದ ನಾಲ್ಕು ಮೂಲೆಗಳುಳ್ಳ ಪೀಠವಾವುದುಂಟೋ ಆ ಪೀಠವೇ ಸ್ಥಂಡಿಲೆಯೆನಿಸುವುದು. ॥ ಎರಡು ಸೋಪಾನದ ಪಟ್ಟಿಗಳುಳ್ಳ ಪೀಠವು ವಾಪಿಯೆನಿಸುವುದು. ॥ ಮೂರು ಸೋಪಾನದ ಪಟ್ಟಿಗಳುಳ್ಳ ಪೀಠವು ಯಾಜ್ಞೆಯೆನಿಸುವುದು. ॥೧೧॥ ಚಚ್ಚೌಕವಾಗಿ ನಾಲ್ಕು ಮೂಲೆಗಳುಳ್ಳ ಪೀಠವು ಸರ್ವಸಿದ್ಧಿಯನ್ನು ಕೊಡುವ ಚಂಡಿಯೆನಿಸುವುದು. ॥ ಬುದ್ಧಿಶಾಲಿಯಾದವನು ಪ್ರಯತ್ನಪೂರ್ವಕವಾಗಿ ಸಮಸ್ತಲಿಂಗಗಳಲ್ಲಿಯೂ ಪೀಠಗಳಲ್ಲಿಯೂ ಕೂಡ ಮೂಲೆಯಾದುದನ್ನು ಬಿಟ್ಟು ದುಂಡಾಗಿರುವುದನ್ನೇ ಅಂಗೀಕರಿಸಬೇಕು. ಮತ್ತು ಸುಂದರವಾಗಿಯೂ ವರ್ತುಳವಾಗಿಯೂ ಸೋಪಾನದ ಪಟ್ಟಿಕೆಗಳಿಂದ ಅಲಂಕರಿಸಲ್ಪಟ್ಟುದಾಗಿಯೂ ಇರುವ ಪೀಠವಾವುದೋ ಅದೇ ಮಂಡಲೆಯೆನಿಸುವುದು. ಆ ಪೀಠವೇ ಯಾವಾಗಲೂ ಬ್ರಾಹ್ಮಣರಿಗೆ ಇಷ್ಟವಾದದ್ದೆಂಬದಾಗಿ ತಿಳಿಯಬೇಕು. ॥೧೨॥ ಪೂರ್ಣಚಂದ್ರನಿಗೆ ಸಮಾನವಾದ ಆಕಾರವುಳ್ಳುದಾಗಿಯೂ, ಮಧ್ಯದಲ್ಲಿ ಎರಡು ಸೋಪಾನದ ಪಟ್ಟಿಗಳಿಲ್ಲದ್ದಾಗಿಯೂ ಇರುವ ಪೀಠವೇ ಪೂರ್ಣಚಂದ್ರೆಯೆನಿಸುವುದು. ಮತ್ತು ಮಾಹೇಶ್ವರರಿಗೆ ಆ ಪೀಠವೇ ಯಾವಾಗಲೂ ಇಷ್ಟವಾದದ್ದೆಂಬದಾಗಿ ತಿಳಿಯಬೇಕು. ॥೧೩॥ ಹದಿನಾರು ಮೂಲೆಗಳುಳ್ಳದ್ದಾಗಿಯೂ, ಮೂರುಸೋಪಾನದ ಪಟ್ಟಿಗಳಿಂದ ಅಲಂಕರಿಸಲ್ಪಟ್ಟದ್ದಾಗಿಯೂ, ಇರುವ ಪೀಠವೇ ವಜ್ರೆಯೆನಿಸುವುದು. ॥ ಬುಡದಿಂದಲೂ ಸ್ವಲ್ಪ ಸ್ವಲ್ಪ ವಕ್ರವಾಗಿ ಹದಿನಾರು ಮೂಲೆಗಳುಳ್ಳ ಪೀಠವೇ ಪದ್ಮೆಯೆನಿಸುವುದು. ॥೧೪॥ ಅರ್ಧಚಂದ್ರನಿಗೆ ಸಮಾನವಾದ ಆಕಾರವುಳ್ಳ ಪೀಠವೇ ಅರ್ಧಚಂದ್ರೆಯೆನಿಸುವುದು.॥ ಮತ್ತು ಪೀಠದ ಮೂಲದಿಂದ ಅರ್ಧಭಾಗವು (ಅಂದರೆ ಪೀಠದ ಭೂಪ್ರತಿಷ್ಠೆಯ ೧ ಭಾಗವು ಅದರಮೇಲೆ ಬಿಡತಕ್ಕುದು ೪ ಭಾಗವು, ಅದರಮೇಲೆ ವೃತ್ತಭಾಗವೆಸಿಸ ೩ ಭಾಗಗಳೂ ಸೇರಿ ಈ ೮ ಭಾಗಗಳೂ ಕೂಡ) ಗುಜ್ಜಾಗಿಯೂ ॥ ಉಳಿದ ಮೇಲಣ

ದ್ರಸವನಾಕಾರಾಅರ್ಧಚಂದ್ರಾತುಸಾಭವೇತ್। ತ್ರಿಕೋಣಾದರ್ಧತಾಹ್ರಾಸಮೂಲಸ್ಯತ್ರಿದ್ಯಶೀಭವೇತ್ ॥೧೫॥ ನಿಮ್ನಮುತ್ತರಮೂಲೇನಪ್ರಶಸ್ತಂಲಕ್ಷಣಾನ್ವಿತಂ। ಲಿಂಗಸ್ಯಾರ್ಧಂತ್ರಿಭಾಗೇನಬಾಹುಳ್ಯೇನಸಮನ್ವಿತಂ॥೧೬॥ ಮೇಖಲಾತುತ್ರಿಭಾಗೇತು ನಿಖಾತಂತುಪ್ರಮಾಣತಃ। ಅಥವಾಪಾದಕಂಕುರ್ಯಾತ್ಕಾರಯಿತ್ವಾಸುಶೋಭನಂ ॥೧೭॥ ಪ್ರಮಾಣಾದಧಿಕಂಕಾರ್ಯಂಸ್ರಣಾಳಂಚೋತ್ತರೇಸ್ಥಿತಂ। ವಿಸ್ತಾರಂತುಪ್ರಮಾಣೇನಮೂಲತೋಗ್ರೇತದರ್ಧತಃ॥೧೮॥ ಜಲಮಾರ್ಗಂತ್ರಿಭಾಗೇನಕಾರಯೇತ್ತತ್ಸುಶೋಭನಂ ॥

—ದಶವಿಧಪೀಠಫಲಾನಿ—

ಆರೋಗ್ಯಂಸ್ಥಂಡಿಲಾಯಾತುಧನಧಾನ್ಯಂತುಪುಷ್ಕರೀ॥೧೯॥ಗೋ

ಅರ್ಧಭಾಗವು(ಅಂದರೆ ಅಧೋವೃತ್ತಪಟ್ಟಿಕೆಯು ೧ ಭಾಗವೂ, ಅದರಮೇಲಣ ಕಂಠವ ೩ ಭಾಗವೂ, ಊರ್ಧ್ವವೃತ್ತಪಟ್ಟಿಕೆಯು ೨ ಭಾಗವೂ, ಅದರಮೇಲಣ ಕಂಠದ ೧ ಭಾಗವೂ, ಅದರಮೇಲಣ ಲೇಪಪಟ್ಟಿಕೆಯು ೧ ಭಾಗವೂ, ಸೇರಿ ಈ ೮ ಭಾಗಗಳು) ಮೂರು ಮೂಲೆಗಳುಳ್ಳದ್ದಾಗಿರುವುದೇ ತ್ರಿಕೋಣಯೆನಿಸುವುದು. ॥೧೫॥ ಲಿಂಗಪೀಠದ ಮೂಲದಿಂದ ಅರ್ಧಭಾಗಗಳು (ಅದರ ಭೂಪ್ರತಿಷ್ಠೆಯ ಭಾಗದಿಂದ ೮ ಭಾಗಗಳು) ಒಂದಕ್ಕೊಂದು ಕಡಿಮೆಯಾಗಿಯೇ ಇರಬೇಕು. ಉಳಿದ ಅರ್ಧಭಾಗವು (ಅಧೋವೃತ್ತಪಟ್ಟಿಕೆಯನ್ನು ಮೊದಲುಮಾಡಿಕೊಂಡು ಕಂಠದ ಮೂರುಭಾಗದಿಂದ ಮೇಲಮೇಲಣ ೮ ಭಾಗಗಳಾದ ೫ ಭಾಗಗಳು) ಒಂದಕ್ಕಿಂತ ಮತ್ತೊಂದು ವಿಸ್ತಾರವಾಗಿರಬೇಕು. ॥ ಪೀಠದಲ್ಲಿ ಸೋಪಾನದ ಪಟ್ಟಿಗಳು ವೃತ್ತದ ೩ ಭಾಗಗಳಲ್ಲಿಯೂ ಕಂಠದ ೩ ಭಾಗಗಳಲ್ಲಿಯೂ ಇರಬೇಕು. ಮತ್ತೂ ಪೀಠದಲ್ಲಿ ಲಿಂಗದ ನಾಳವು ಕಂಠದಜಾಗದವರೆಗೆ ಇದ್ದರೂ ಸರಿಯೆ ಅಥವಾ ಕಂಠಭಾಗವನ್ನು ವ್ಯಾಪಿಸಿದ್ದದ್ದೇ ಆದರೆ ಅದು ಮತ್ತೂ ಉತ್ಕೃಷ್ಟವಾದ ಮಂಗಳವನ್ನು ಮಾಡುತ್ತದೆ. ॥೧೭॥ ಪೀಠದಮೇಲಣ ಜಗತಿಯ ಉತ್ತರಭಾಗದಲ್ಲಿ ಜಲಮಾರ್ಗವನ್ನು (ಗೋಮುಖವನ್ನು) ಜಗತಿಗಿಂತಲೂ ದೊಡ್ಡದಾಗಿರುವಂತೆ ಮಾಡಬೇಕು. ಅಂದರೆ ಪೀಠದ ಉದ್ದದಲ್ಲಿ ಅರ್ಧಭಾಗಪ್ರಮಾಣದ ಅಗಲವು ಜಗತಿಗಿರಬೇಕು. ಆ ಜಗತಿಯ ಅಗಲದ ಮೂರುಭಾಗದೊಳಗೆ ಒಂದುಭಾಗ ಪ್ರಮಾಣವು ಗೋಮುಖಕ್ಕಿರಬೇಕು. ಈ ರೀತಿಯಾಗಿ ಪೀಠವಿದ್ದರೆ ಉತ್ತಮವಾದ ಮಂಗಳವನ್ನು ಮಾಡುತ್ತದೆ. ॥

—ಹತ್ತುವಿಧದ ಪೀಠಗಳ ಫಲಗಳು—

ಸ್ಥಂಡಿಲೆಯು ಆರೋಗ್ಯವನ್ನು ಕೊಡುತ್ತದೆ. ವಾಪಿಯು ಧನ ಧಾನ್ಯಗಳನ್ನು ಕೊಡುತ್ತದೆ, ಯಾಕ್ಷಿಣಿಯು ಹಸು ಎಮ್ಮೆಗಳ ವೃದ್ಧಿಗಳನ್ನು ಕೊಡುತ್ತದೆ, ಚಂಡಿ

ಮಾಹಿಷ್ಯಪ್ರದಾಯಾಜ್ಞೀಚಂಡೀಸರ್ವತ್ರಸರ್ವದಾ । ಮಂಡಲಾಕೀರ್ತಿ ಬಹುಳಾಪೂರ್ಣಾಚಂದ್ರಾವರಪ್ರದಾ ॥೨೦॥ ವಜ್ರಾತ್ವಾಯುಃಪ್ರದಾಜ್ಞೀ ಯಾಪದ್ಮಾಸೌಭಾಗ್ಯದಾಯಿನೀ । ಪುತ್ರಾರ್ಧದಾತ್ವರ್ಧಚಂದ್ರಾತ್ರಿಕೋಣಾಶತ್ರುನಾಶಿನೀ ॥೨೧॥

ದೇವಸ್ಯಯಜನಾರ್ಥಂವಾವಿಧಿನಾನೇನಕೀರ್ತಿತಾ । ಶೈಲೇತುಯೋಜಯೇಚ್ಛೈಲಾಂದಾರವೇದಾರುಣಾತಥಾ॥೨೨॥ ಪಾರ್ಥಿವೇಪಾರ್ಥಿವಂಕುರ್ಯಾಲ್ಲೋಹಕೇಲೋಹಕಂತಥಾ। ರತ್ನಜೇಚಿತ್ರಕಂಕುರ್ಯಾತ್ಸ್ಫಟಿಕಾಯಾಂವಿಶೇಷತಃ ॥೨೩॥ ನಾಯೋಮಯೇನಕುರ್ವೀತಯದೀಚ್ಛೇತ್ಸಿದ್ಧಿಮಾತ್ಮನಃ। ಯಾವದ್ದೀರ್ಘಂಭವೇಲ್ಲಿಂಗಂತಾವದ್ದ್ವಿಗುಣವಿಸ್ತರಂ ॥೨೪॥ ಮಾನಾಧಿಕಂನಕುರ್ವೀತಉಮಾಯಾಶಂಕರಸ್ಯಚ । ಉಮಾತುಪೀಠಿಕಾಜ್ಞೀಯಾಶಂಕರೋಲಿಂಗಮುಚ್ಯತೇ॥೨೫॥ ಏವಮೇತತ್ಸಮಾಖ್ಯಾತಂಪೀಠಿಕಾನಾಂತುಲಕ್ಷಣಂ । ಚರಸ್ಯಪ್ರಾಣಲಿಂಗಸ್ಯಯೋನಿಪೀಠಂಪ್ರಶಸ್ಯತೆ ॥

ಯು ಎಲ್ಲಾಕಡೆಯಲ್ಲಿಯೂ ಎಲ್ಲಾ ಇಷ್ಟಾರ್ಥಗಳನ್ನು ಕೊಡುತ್ತದೆ, ಮಂಡಲೆಯು ಕೀರ್ತಿಯನ್ನು ಹೆಚ್ಚಿಸುತ್ತದೆ, ಪೂರ್ಣಚಂದ್ರೆಯು ಇಷ್ಟ ವರವನ್ನು ಕೊಡುತ್ತದೆ, ವಜ್ರೆಯು ಆಯುಷ್ಯವನ್ನು ಕೊಡುತ್ತದೆ, ಪದ್ಮೆಯು ಸೌಭಾಗ್ಯವನ್ನು ಕೊಡುತ್ತದೆ, ಅರ್ಧಚಂದ್ರೆಯು ಪುತ್ರರುಗಳನ್ನು ಕೊಡುತ್ತದೆ, ತ್ರಿಕೋಣೆಯು ಶತ್ರುಗಳನ್ನು ನಾಶಮಾಡುತ್ತದೆ. ॥೨೧॥ ಈ ವಿಧಿಕ್ರಮದಿಂದ ದೇವರ ಪೂಜೆಗೋಸ್ಕರವಾಗಿ ಪೀಠದ ಲಕ್ಷಣವು ಹೇಳಲ್ಪಟ್ಟಿತು. ॥ ಮತ್ತೂ ಶಿಲೆಯ ಲಿಂಗಕ್ಕೆ ಶಿಲೆಯ ಪೀಠವನ್ನೂ, ಮರದಲಿಂಗಕ್ಕೆ ಮರದಪೀಠವನ್ನೂ, ಮೃತ್ತಿಕೆಯ ಲಿಂಗಕ್ಕೆ ಮೃತ್ತಿಕೆಯಪೀಠವನ್ನೂ, ಲೋಹಲಿಂಗಕ್ಕೆ ಲೋಹಪೀಠವನ್ನೂ, ರತ್ನಲಿಂಗಕ್ಕೆ ರತ್ನಗಳನ್ನು ಕೆತ್ತಿದ ಸ್ಫಟಿಕದಪೀಠವನ್ನೂ, ವಿಶೇಷವಿಧಿಯಿಂದು ಮಾಡಬೇಕಲ್ಲದೆ, ಸಾಮಾನ್ಯವಿಧಿಯಿಂದ ಭಾವಿಸಿ ಒಂದು ವಿಧವಾದ ಲಿಂಗಕ್ಕೆ ಮತ್ತೊಂದುವಿಧವಾದ ಪೀಠವನ್ನು ಮಾಡಕೂಡದು ॥೨೪॥ ಯಾವನು ಸಿದ್ಧಿಯನ್ನು ಪಡೆಯಬೇಕೆಂದು ಬಯಸುತ್ತಾನೋ ಅವನು ಕಬ್ಬಿಣದಿಂದ ಲಿಂಗವನ್ನೂ ಪೀಠವನ್ನೂ ಮಾಡಕೂಡದು. ॥ ಮತ್ತೂ ಪೀಠವು ಉಮೆಯೆಂಬುದಾಗಿಯೂ ಲಿಂಗವು ಶಿವನೆಂಬದಾಗಿಯೂ ಪ್ರಮಾಣವಚನವಿರುವುದರಿಂದ ಶಿವಸ್ವರೂಪವಾದ ಲಿಂಗವು ಎಷ್ಟು ಪ್ರಮಾಣವಾಗಿದೆಯೋ ಅದರ ಎರಡರಷ್ಟು ಪ್ರಮಾಣಮಾತ್ರವೇ ಉಮೆಯಸ್ವರೂಪವಾದ ಪೀಠವಾಗಿರಬೇಕಲ್ಲದೆ ಹೆಚ್ಚಾಗಿರಕೂಡದು. ॥೨೫॥ ಈಪ್ರಕಾರವಾಗಿ ಪೀಠಗಳ ಲಕ್ಷಣವು ವಿವರವಾಗಿ ಹೇಳಲ್ಪಟ್ಟಿತು ॥ ಪ್ರಾಣಲಿಂಗವಾದ ಚರಲಿಂಗಕ್ಕೆ (ಇಷ್ಟಲಿಂಗಕ್ಕೆ) ಶಕ್ತಿಯೇ ಪೀಠವೆಂಬದಾಗಿ ಪ್ರಖ್ಯಾತವಾಗಿರುವುದು. ॥೨೬॥

—ಪಂಚಸೂತ್ರಪ್ರಕಾರಃ—

ಪಂಚಸೂತ್ರಪ್ರಕಾರೋಥವಕ್ಷ್ಯತೇಶೃಣುಸಾದರಂ । ಲಿಂಗವೃತ್ತಸಮಂಪೀಠಂ ದೀರ್ಘಂವಿಸ್ತಾರಮೇವಚ ॥೨೮॥ ತದರ್ಧಂಗೋಮುಖಂಚೈವಪಂಚಸೂತ್ರಮುದಾಹೃತಂ। ಲಿಂಗಸ್ಯಸದೃಶಂಪೀಠಂಪೀಠಾರ್ಧಂಗೋಮುಖಂಭವೇತ್ ॥೨೯॥ ಲಿಂಗವೃತ್ತಸಮಪೀಠವಿಸ್ತರಂವಿಸ್ತರಾರ್ಧಸಮವೃತ್ತಗೋಮುಖಂ । ಗೋಮುಖಾರ್ಧಮಿಹಲಿಂಗತುಂಗಕಂಲಿಂಗಲಕ್ಷಣಮಿಹಪ್ರಶಸ್ಯತೇ॥೩೦॥ ಲಿಂಗದೀರ್ಘೇಚತುರ್ಭಾಗೇದ್ವಿಭಾಗಂಶಕ್ತಿಸಂಯುತಂ। ದ್ವಿಭಾಗೇಚಚತುರ್ಭಾಗಮೇಕಭಾಗಂತುಬಂಧಯೇತ್ ॥

ನಿರ್ಣಯಸಿಂಧೌ ಗೌತಮೀತಂತ್ರೇಚ:— "ಲಿಂಗಮಸ್ತಕವಿಸ್ತಾರೋಲಿಂಗೋಛ್ರಾಯಸಮೋಮತಃ। ಪರಿಧಿಸ್ತತ್ತ್ರಿಗುಣಿತಸ್ತದ್ವತ್ಪೀಠಂವ್ಯವಸ್ಥಿತಂ ॥೩೨॥ ಪ್ರಣಾಳಿಕಾತದರ್ಧಂಸ್ಯಾತ್ಪಂಚಸೂತ್ರವಿನಿರ್ಣಯಃ"

—ಪಂಚಸೂತ್ರಪ್ರಕಾರವು—

ಅನಂತರ ಎಲೈ ಲಿಂಗಪ್ಪಮಂತ್ರಿಯೆ! ಇನ್ನು ಪಂಚಸೂತ್ರಪ್ರಕಾರವನ್ನು ಹೇಳುತ್ತೇನೆ, ಆದರವೊಡನೆ ಕೂಡಿದವನಾಗಿ ಕೇಳು:— ಲಿಂಗನಾಳದ ಸುತ್ತಳತೆಯು ಎಷ್ಟಿರುವುದೋ ಅದರ ಉದ್ದದಷ್ಟೇಲಿಂಗಪೀಠಬೇಕು, ಆ ಲಿಂಗದ ಉದ್ದದಷ್ಟು ಎತ್ತರವೂ, ಅದರ ಉದ್ದದಷ್ಟು ಅಗಲವೂ ಪೀಠಕ್ಕಿರಬೇಕು, ಅದರ ಅರ್ಧಭಾಗದಷ್ಟು ಉದ್ದವಾಗಿ ಗೋಮುಖ(ಜಲಮಾರ್ಗ)ವಿರಬೇಕು. ಈರೀತಿಯಾದ ಲಿಂಗದ ಉದ್ದ-ಅಗಲ-ಪೀಠದ ಉದ್ದ-ಅಗಲ-ಗೋಮುಖದಳತೆ-ಇವೇ ಪಂಚಸೂತ್ರವೆಂಬದಾಗಿ ಹೇಳಲ್ಪಟ್ಟಿತು. ॥೨೯॥ ಮತ್ತೂ ಲಿಂಗವೃತ್ತಕ್ಕೆ ಸಮಾನವಾದ ಪೀಠವಿಸ್ತಾರವು, ಆ ಪೀಠವಿಸ್ತಾರಾರ್ಧಕ್ಕೆ ಸಮಾನವಾದ ವೃತ್ತಗೋಮುಖವು ಆ ಗೋಮುಖಾರ್ಧದಷ್ಟಕ್ಕೆ ಲಿಂಗದಗಾತ್ರವು ಇದ್ದರೆ ಇದೊಂದು ವಿಧವಾದ ಲಿಂಗಪಂಚಸೂತ್ರಲಕ್ಷಣವೆಂಬದಾಗಿ ಪ್ರಖ್ಯಾತವಾಗಿ ಹೇಳಲ್ಪಟ್ಟಿದೆ. ॥೩೦॥ ಈ ಪಂಚಲಕ್ಷಣದೊಡನೆ ಕೂಡಿರುವ ಲಿಂಗದದೀರ್ಘದ ನಾಲ್ಕುಭಾಗದಲ್ಲಿ ಎರಡುಭಾಗವು ಶಕ್ತಿಯಿಂದ ಕೂಡಿರುವುದು, ಆದುದರಿಂದ ಉಳಿದ ಅರ್ಧಭಾಗವನ್ನು ನಾಲ್ಕುಭಾಗವಾಗಿ ಮಾಡಿ ಆ ನಾಲ್ಕುಭಾಗದಲ್ಲಿ ಬಾದುಭಾಗವನ್ನು ಅಷ್ಟಬಂಧವೇ ಮೊದಲಾದುವುಗಳಿಂದ ಬಂಧಿಸಬೇಕು. ॥೩೧॥

ನಿರ್ಣಯಸಿಂಧುವಿನಲ್ಲಿಯೂ ಗೌತಮೀತಂತ್ರದಲ್ಲಿಯೂ ಕೂಡ:—ಲಿಂಗಮಸ್ತಕದ ವಿಸ್ತಾರವು ಲಿಂಗದ ಉದ್ದದಷ್ಟೇ ಇರಬೇಕು, ಲಿಂಗದ ಸುತ್ತಳತೆಯು ಆ ಲಿಂಗಮಸ್ತಕ ವಿಸ್ತಾರದ ಮೂರರಷ್ಟು ಇರಬೇಕು ; ಪೀಠವುಕೂಡ ಆ ಮೂರರಷ್ಟೇ ಇರಬೇಕು, ಎಂಬುದಾಗಿ ಹೇಳಲ್ಪಟ್ಟಿದೆ. ॥೩೨॥ ಮತ್ತೂ ಜಲಮಾರ್ಗವಾದ ಗೋ

ಅತ್ರೇದಮವಧೇಯಂ:—ಲಿಂಗಮಸ್ತಕವಿಸ್ತಾರಂ ಲಿಂಗೋಚ್ಛ್ರಾತಾಸಮಂ ಕೃತ್ವಾ, ತತ್ತ್ರಿಗುಣಸೂತ್ರವೇಷ್ಟನಾರ್ಹಂ ಲಿಂಗಸ್ಯಸ್ಥೌಲ್ಯಂಕೃತ್ವಾ, ತತ್ಸಮಂವೃತ್ತಂ ಚತುರಶ್ರಂವಾ ಪೀಠವಿಸ್ತಾರಮಧಶ್ಚೋರ್ಧ್ವಂಚ ಕುರ್ಯಾತ್। ಪೀಠೋಚ್ಛ್ರತಾತು ಲಿಂಗೋಚ್ಛ್ರಾತಾದ್ದ್ವಿಗುಣಾತ್ರಿಗುಣಾವಾ। ಪೀಠಮಧ್ಯೇಲಿಂಗಾದ್ದ್ವಿಗುಣಸ್ಥೂಲಪೀಠೋಚ್ಛ್ರತಾತೃತೀಯಾಂಶೇನ ಕಂಠಂಕೃತ್ವಾತಸ್ಯೋರ್ಧ್ವಮಧಶ್ಚ ವಪ್ರದ್ವಯಂತ್ರಯಂವಾಕೃತ್ವಾ। ಲಿಂಗವಿಸ್ತಾರಷಷ್ಠಾಂಶೇನ ಪೀಠೋಪರಿ ಬಾಹ್ಯಮೇಖಲಾಂಕೃತ್ವಾ, ತದಂತಸ್ಸಂಲಗ್ನಂ ತತ್ಸಮಂ ಖಾತಂಕೃತ್ವಾ, ಪೀಠಾದ್ಬಹಿರ್ಲಿಂಗಸಮದೀರ್ಘಾಂ ಪೀಠಾರ್ಧದೀರ್ಘಾಂವಾಕೃತ್ವಾ। ಮೂಲೇ ದೈರ್ಘ್ಯಸಮವಿಸ್ತಾರಾ ಮಗ್ರೇತದರ್ಧವಿಸ್ತಾರಾಂ ತೃತೀಯಾಂಶೇನಮಧ್ಯೇಖಾತಾಂ ಪೀಠವತ್ಸಮ

ಮುಖವಾದರೂ ಆ ಮೂರುಭಾಗಗಳಲ್ಲಿ ಅರ್ಧಭಾಗ (ಒಂದುವರೆಭಾಗ) ವಿರಬೇಕು ಎಂದು ಈ ರೀತಿಯಾಗಿಯೂ ಪಂಚಸೂತ್ರನಿರ್ಣಯವು ಹೇಳಲ್ಪಟ್ಟದೆ.॥

ಇಲ್ಲಿ ತಿಳಿಯತಕ್ಕ ವಿಚಾರವೇನಂದರೆ:—ಲಿಂಗಮಸ್ತಕದ ವಿಸ್ತಾರವನ್ನು ಲಿಂಗದಉದ್ದಕ್ಕೆ ಸಮವಾಗಿ ಮಾಡಿಕೊಂಡು, ಅದರ ಮೂರರಷ್ಟು ಉದ್ದವಾದ ದಾರವು ಬಂದು ಸುತ್ತುಗುವಂತೆ ಲಿಂಗದಗಾತ್ರವನ್ನುಮಾಡಿಕೊಂಡು,ಅದಕ್ಕೆ ಸಮಾನವಾಗುವಂತೆ ಲಿಂಗದನಾಳವನ್ನು ಮಾಡಿಕೊಂಡು,ಬಳಿಕ ಗುಂಡಾದ ಅಥವಾ ಚಚ್ಚೌಕವಾದ ಪೀಠದಲ್ಲಿ ಎಲ್ಲಾಕಡೆಯುವಿಸ್ತಾರವನ್ನೂ ಮೇಲಿನಳತೆಗೆಸಮನಾಗಿಮಾಡಿಪೀಠದಗಾತ್ರವು ಲಿಂಗದಗಾತ್ರಕ್ಕಿಂತಲೂಹೆಚ್ಚಾಗಿ ಎರಡರಷ್ಟಾದರೂ ಮೂರರಷ್ಟಾದರೂ ಇರಬೇಕು॥ ಪೀಠಮಧ್ಯದಲ್ಲಿ ಲಿಂಗಕ್ಕಿಂತಲೂ ಹೆಚ್ಚಾಗಿ ಎರಡರಷ್ಟು ಗಾತ್ರವುಳ್ಳ ಪೀಠದಗಾತ್ರದೊಳಗೆ ಮೂರರಲ್ಲಿ ಒಂದುಭಾಗವಷ್ಟೇ ಗಾತ್ರವಾಗಿ ಪೀಠದ ಕಂಠಭಾಗವನ್ನು ಮಾಡಿಕೊಂಡು, ಅದರ ಮೇಲುಭಾಗದಲ್ಲಿಯೂ ಕೆಳಭಾಗದಲ್ಲಿಯೂ ಕೂಡ ಎರಡು ಸೋಪಾನದ ಪಟ್ಟಿಗಳನ್ನಾದರೂ ಮೂರು ಸೋಪಾನದ ಪಟ್ಟಿಗಳನ್ನಾದರೂ ಸರಿಯೆ ಮಾಡಿಕೊಂಡು, ಲಿಂಗದ ವಿಸ್ತಾರದ ಆರುಭಾಗದೊಳಗೊಂದುಭಾಗದಷ್ಟು ಪೀಠದ ಮೇಲುಭಾಗದಲ್ಲಿ ಬಾಹ್ಯಸೋಪಾನದ ಪಟ್ಟಿಕೆಯನ್ನೂ (ಬಾಹ್ಯಪಟ್ಟಿಕೆಯನ್ನು) ಮಾಡಿಕೊಂಡು, ಆಬಾಹ್ಯಪಟ್ಟಿಕೆಯ ಮಧ್ಯದಲ್ಲಿ ಅದಕ್ಕೆ ಸಂಬಂಧಿಸಿಕೊಂಡಿರುವಂತೆಯೇ ಅದಕ್ಕೆ ಸಮಾನವಾಗಿ ಖಾತ(ಹಳ್ಳ)ವನ್ನು ಮಾಡಿಕೊಂಡು, ಪೀಠದ ಹೊರಭಾಗವನ್ನು ಲಿಂಗಸಮವಷ್ಟು ಉದ್ದವಾಗಿಯಾದರೂ ಪೀಠಾರ್ಧವಷ್ಟು ಉದ್ದವಾಗಿಯಾದರೂ ಮಾಡಿಕೊಂಡು, ಬಳಿಕ ಕೆಳಭಾಗದಲ್ಲಿ ಉದ್ದಕ್ಕೆ ಸಮಾನವಾದ ಅಗಲವುಳ್ಳುದಾಗಿಯೂ ಮೇಲುಭಾಗದಲ್ಲಿ ಅದರಲ್ಲಿ ಅರ್ಧಭಾಗದಷ್ಟು ಅಗಲವುಳ್ಳುದಾಗಿಯೂ ಮತ್ತೂ

ಮೇಖಲಾಂಪ್ರಣಾಳೀಂ ಕುರ್ಯಾದಿತಿ. ಅತ್ರಮೂಲಂ ಸಿದ್ಧಾಂತಶೇಖರೇ ಶೈವಾಗಮೇಚ ಜ್ಞೇಯಂ ||

—ಅಧಿವಾಸಲಕ್ಷಣಂ—

ಅಧಿವಾಸಂತತಃಕುರ್ಯಾದಾಚಾರ್ಯೋಯಜಮಾನಕೈಃ । ತಲ್ಲಿಂಗಂ ಚಸಮಾದಾಯ ಸರ್ವವಾದ್ಯೈರವೈಸ್ಸಹ ||೪೩|| ಸ್ವಸ್ತಿಸೂಕ್ತೈರ್ವೇದ ಮಂತ್ರೈರ್ದೇಶಿಕೋಗ್ರಾಹಯೇತ್ತತಃ । ಶುದ್ಧಿಂಕೃತ್ವಾಥತಲ್ಲಿಂಗಂಕ್ಷಾ ಳನಾದ್ಯೈರ್ಯಥಾಕ್ರಮಂ||೪೪|| ವಿನ್ಯಸೇದ್ವಾರುಣೇಭಾಗೇಸ್ಥಂಡಿಲೋ ಪರಿದೇಶಿಕಃ । ಜಲಾಧಿವಾಸಂಕೃತ್ವಾಥಪೂರ್ವೋಕ್ತೇನವಿಧಾನತಃ||೪೫|| ತಲ್ಲಿಂಗಂಚಸಮಾದಾಯಮೂಲಮಂತ್ರೈರ್ಗುರೂತ್ತಮಃ । ಉದ್ವರ್ತ್ಯಾ ಮಳಕೀಚೂರ್ಣೈರ್ರುದ್ರಸೂಕ್ತೈರತಃಪರಂ ||೪೬|| ಸಿಂಚೇತನವಭಿಃಕುಂ ಭೈರ್ವಾರುಣಸ್ಯೈಕಮಂತ್ರಕೈಃ । ಪಂಚೋಪಚಾರೈರಭ್ಯರ್ಚ್ಯಸುಗಂ

ಅದರ ಮೂರುಭಾಗದಲ್ಲಿ ಒಂದುಭಾಗದಷ್ಟು ಆಳವುಳ್ಳುದಾಗಿಯೂ ಪೀಠಕ್ಕೆ ಸಮಾ ನವಾದ ಸೋಪಾನದ ಪಟ್ಟಿಯುಳ್ಳ ಗೋಮುಖ (ಜಲಮಾರ್ಗ)ವನ್ನು ಮಾಡಬೇಕೆಂದು ತಿಳಿಯಬೇಕು. ಇದರ ಮೂಲವು ಸಿದ್ಧಾಂತಶೇಖರದಲ್ಲಿಯೂ ಶೈವಾಗಮದಲ್ಲಿಯೂ ಇರುತ್ತದೆ. ನೋಡಿ ತಿಳಿಯಬೇಕು.

—ಅಧಿವಾಸಲಕ್ಷಣವು—

ಅನಂತರ ಶ್ರೀಗುರುವು ಯಜಮಾನನೊಡನೆಯೂ ಸಮಸ್ತ ವಾದ್ಯಧ್ವನಿಗಳಿಂದ ಲೂ ಕೂಡಿ, ಆಪ್ರಖ್ಯಾತವಾದ ಲಿಂಗವನ್ನು ತೆಗೆದುಕೊಂಡು ಅಧಿವಾಸವನ್ನು ಮಾಡ ಬೇಕು. ||೪೩|| ಹೇಗೆಂದೊಡೆ;—ಶ್ರೀಗುರುವು ಇಂತೊಪ್ಪುವ ಲಿಂಗವನ್ನು ಸ್ವೀಕ ರಿಸಿ ಸ್ವಸ್ತಿಸೂಕ್ತಗಳೇ ಮೊದಲಾದ ವೇದಮಂತ್ರಗಳಿಂದ ಯಥಾಕ್ರಮವಾಗಿ ಲಿಂ ಗಾಭಿಷೇಕವನ್ನು ಮಾಡಿ, ಆ ಲಿಂಗವನ್ನು ಶುದ್ಧವಾಗಿ ಮಾಡಿಕೊಂಡು, ಪೂರ್ವದಲ್ಲಿ ಹೇಳಲ್ಪಟ್ಟ ವಿಧಿಯನ್ನನುಸರಿಸಿ, ಪ್ರತಕ್ಕಾಗಿ ಷಟ್ಸಮ್ಮಾರ್ಜನದಿಂದ ಶುದ್ಧವಾಗಿರುವ ಸ್ಥಾನದಪಶ್ಚಿಮದಿಕ್ಕಿನಲ್ಲಿ ಆಲಿಂಗವನ್ನಿರಿಸಿದ್ದು, ಅನಂತರ ಜಲಾಧಿವಾಸವನ್ನು ಮಾಡಿ ಸಿ, ಅನಂತರ ಗುರೂತ್ತಮನು ಮೂಲಮಂತ್ರವನ್ನುಚ್ಚರಿಸುತ್ತಾ ಆ ಲಿಂಗವನ್ನು ತೆಗೆದುಕೊಂಡು, ಆ ಲಿಂಗಕ್ಕೆ ನೆಲ್ಲಿಯ ಚೆಟ್ಟನ ಪುಡಿಯನ್ನು ಪೂರ್ಣವಾಗಿ ಉದು ರಿಸಿ ರುದ್ರಸೂಕ್ತಾಂಗಳನ್ನುಚ್ಚರಿಸಿ ಲಿಂಗಾಭಿಷೇಕವನ್ನುಮಾಡಿಸಿ, ಅನಂತರ ವರುಣ ಸೂಕ್ತಮಂತ್ರವನ್ನುಚ್ಚರಿಸುತ್ತಾ ಒಂಭತ್ತು ಕುಂಭಗಳ ಜಲದಿಂದ ಅಭಿಷೇಕವನ್ನು ಮಾಡಿ, ಗಂಧಪುಷ್ಪ.ಅಕ್ಷತೆಯೇ ಮೊದಲಾದ ಪಂಚೋಪಚಾರ ದ್ರವ್ಯಗಳಿಂದ ಲಿಂಗ

ಥಕುಸುಮಾಕ್ಷತೈಃ ॥೩೩॥ ಲಿಂಗಮಾದಾಯಮೂಲೇನವಿನ್ಯಸೇಚ್ಚಾಂಕ ರೇದಿಶಿ । ಧಾನ್ಯರಾಶೌನಿಧಾಯಾಥಭೂಸೂಕ್ತೇನತತಃಪರಂ ॥೩೪॥ ಸಂಸ್ಪೃಶೇನ್ಮೂಲಮಂತ್ರೇಣಸೇಚಯೇತ್ಕಲಶೋದಕೈಃ। ಉಪಚಾರೈಸ್ಸಮ ಭ್ಯರ್ಚ್ಯತಂಡುಲೇನತತಃಪರಂ ॥೩೯॥ ನಿಗೂಹಯೇನ್ಮುಹೂರ್ತಾಂತಂ ಮೂಲಮಂತ್ರೇಣಸಂಸ್ಪೃಶೇತ್ । ಕಲಶೈಸ್ಸ್ನಾಪಯೇದ್ಭಕ್ತ್ಯಾಪೂಜ ಯೇಚ್ಚ ಶಿಖಿಧ್ವಜ॥೪೦॥ ಫಲಪುಷ್ಪೈರ್ನಿಗೂಹ್ಯಾಥಮುಹೂರ್ತಾಂತಂಗು ರೂತ್ತಮಃ । ತನ್ಮೂಲೇನೈವಸಂಸ್ಪೃಷ್ಟ್ವಾ ಸೇಚಯೇತ್ಕಲಶೋದಕೈಃ॥ ಶಯ್ಯಾಂವನ್ಯೇಚಪರ್ಯಂಕೇಲಿಂಗಂತತ್ರವಿನಿಕ್ಷಿಪೇತ್ । ಸಂಸ್ಪೃಶೇನ್ಮೂಲ ಮಂತ್ರೇಣಸ್ನಾಪಯೇತ್ಕಲಶೋದಕೈಃ ॥೪೨॥ ಪಂಚೋಪಚಾರೈರಭ್ಯ ರ್ಚ್ಯವಿನಿದ್ರಂಕಾರಯೇತ್ಸತ । ವೇದಮಂಗಳನಿರ್ಘೋಷೈರಾಚಾರ್ಯೈ

ವನ್ನೂ ಪೂಜಿಸಿ ॥೩೩॥ ಬಳಿಕ ಮೂಲಮಂತ್ರವನ್ನುಚ್ಚರಿಸುತ್ತಾ ಲಿಂಗವನ್ನು ತೆಗೆದುಕೊಂಡು ಈಶಾನ್ಯದಿಕ್ಕಿನಲ್ಲಿರುವ ಧಾನ್ಯರಾಶಿಯಮೇಲೆ ಭೂಸೂಕ್ತಮಂತ್ರವನ್ನುಚ್ಚರಿಸುತ್ತಾ ಇಟ್ಟದ್ದು, ಬಳಿಕ ಶ್ರೀಗುರುವು ಮೂಲಮಂತ್ರವನ್ನುಚ್ಚರಿಸುತ್ತಾ ಆ ಲಿಂಗವನ್ನು ತೆಗೆದುಕೊಂಡು ಕಲಶೋದಕದಿಂದಭಿಷೇಕವಂ ಮಾಡಿ ಪುನಃ ಪಂಚೋಪಚಾರಂಗಳಿಂ ಪೂಜಿಸಿ, ಅನಂತರ ಶ್ರೀಗುರುವು ಮೂಲಮಂತ್ರವನ್ನುಚ್ಚರಿಸುತ್ತಾ ಆ ಲಿಂಗವನ್ನು ಅಕ್ಕಿಯರಾಶಿಯಲ್ಲಿ ಒಂದು ಮುಹೂರ್ತಕಾಲದವರೆಗೂ ನಿಕ್ಷೇಪಿಸಿ, ಅದರಮೇಲೆ ತನ್ನ ಹಸ್ತವನ್ನು ಇಟ್ಟುಕೊಂಡಿದ್ದು ಪುನಃ ಆ ಲಿಂಗವನ್ನು ತೆಗೆದುಕೊಂಡು ಕಲಶೋದಕಗಳಿಂದಭಿಷೇಕವನ್ನು ಮಾಡಿ ಭಕ್ತಿಯೊಡನೆ ಕೂಡಿ ಪಂಚೋಪಚಾರಗಳಿಂದ ಪೂಜಿಸಬೇಕು ಅನಂತರ ಎಲೈ ಷಣ್ಮುಖನೆ! ಶ್ರೀಗುರುವು ಒಂದು ಮುಹೂರ್ತಕಾಲಪರ್ಯಂತವಾಗಿ ಆ ಲಿಂಗವನ್ನು ಫಲಪುಷ್ಪಂಗಳಿಂದಲೇ ಮುಚ್ಚಿಟ್ಟಿರಬೇಕು. ಬಳಿಕ ಶ್ರೀಗುರುವು ಮೂಲಮಂತ್ರವನ್ನುಚ್ಚರಿಸುತ್ತಾ ಆ ಲಿಂಗವನ್ನು ತೆಗೆದುಕೊಂಡು ಪುನಃ ಕಲಶೋದಕಗಳಿಂದಭಿಷೇಕವನ್ನು ಮಾಡಬೇಕು. ಅನಂತರ ಕಾಡುಹೂವುಪತ್ರೆಗಳಿಂದ ಹಾಸಿಗೆಯನ್ನು ಮಾಡಿ ಅದರಲ್ಲಿ ಆ ಲಿಂಗವನ್ನು ಒಂದು ಮುಹೂರ್ತಕಾಲಪರ್ಯಂತವಾಗಿ ಇಟ್ಟು, ಸ್ಪರ್ಶಿಸಿಕೊಂಡಿರಬೇಕು. ಬಳಿಕ ಶ್ರೀಗುರುವು ಆ ಲಿಂಗವನ್ನು ತೆಗೆದುಕೊಂಡು ಕಲಶೋದಕಗಳಿಂದಭಿಷೇಕವಂ ಮಾಡಿ ಪಂಚೋಪಚಾರಂಗಳಿಂ ಪೂಜಿಸಿ ಆಚಾರ್ಯರೊಡನೆಯೂ ಋತ್ವಿಕ್ಕುಗಳೊಡನೆಯೂ ಕೂಡಿದವನಾಗಿ ವೇದಮಂತ್ರಗಳ ಮಂಗಳಸೂಕ್ತಂಗಳ ನಿರ್ಘೋಷವಂ ಮಾಡುತ್ತಲಿದ್ದು ಬಳಿಕ-ಆ ಲಿಂಗವನ್ನು ಹಾಸಿಗೆಯಿಂದೆ ಏಳಿಸಬೇಕು. ಎಲೈ ಷಣ್ಮುಖನೆ! ಕೇಳು-ಈ

ಋತ್ವಿಜೈಸ್ಸಹ॥ಅಧಿವಾಸಂಕ್ರಮೇಣೈವಂಕುರ್ಯಾದ್ವೈಲಿಂಗಪೀಠಯೋಃ॥

ಅಷ್ಟಬಂಧಲಕ್ಷಣಂ.

ಬಂಧಯೇದಷ್ಟಬಂಧೇನಧೃವಾದ್ಯೈರಿತಿಮಂತ್ರತಃ । ಅಷ್ಟಬಂಧಪ್ರಕಾರಸ್ತು ವಕ್ಷ್ಯತೇಶಿಥಯಥಾತಥಾ ॥೪೪॥ ಧರಾಷ್ಟಧಾಸರ್ಜರಸಸ್ತಥೈವಕುಂದಾಷ್ಟಧಾಗೈರಿಕಜಾತಯಸ್ತಥಾ।ಶಿಲಾಷ್ಟಧಾಸ್ಫಾಟಿಕಸಿರ್ಮಲಾಢ್ಯಾಹೇಮಾದಿಕಾರತ್ನಕಣಾದಿಕಾಪುನಃ ॥೪೫॥ ವನೋದ್ಭವಾವಾಮಾಂಸಿಮಯೂರಮೂಲಿಕಾಸಮೀರಿತಾಶ್ಚಾಷ್ಟವಿಧಾಶ್ಚಬಂಧಾಃ ॥ ಲಾಕ್ಷಾಸರ್ಜರಸಸ್ಸಿಕ್ಥಂಕುರುವಿಂದಂಚಗುಗ್ಗುಳಂ । ಗೈರಿಕಂಗುಡತೈಲೇಚಅಷ್ಟ

ರೀತಿಯಾದ ಕ್ರಮದಿಂದ ಶ್ರೀಗುರುವು ಲಿಂಗಕ್ಕೂ ಪೀಠಕ್ಕೂ ಕೂಡ ಜಲಾಧಿವಾಸವನ್ನೂ ಧಾನ್ಯಾಧಿವಾಸವನ್ನೂ ಮಾಡಬೇಕೆಂದು ಪರಶಿವನು ಹೇಳಿದನು.

ಅಷ್ಟಬಂಧಲಕ್ಷಣವು.

ಅನಂತರ ಎಲೈ ಲಿಂಗಪ್ಪಮಂತ್ರಿಯೆ ! ಕೇಳು-ಶ್ರೀಗುರುವು ಲಿಂಗಪೀಠಗಳಿಗೆ—" ಧೃವಾದ್ಯೈಃ "—ಎಂಬುವ ಮಂತ್ರವನ್ನುಚ್ಚರಿಸುತ್ತ ಅಷ್ಟಬಂಧದಿಂದ ಬಂಧಿಸಬೇಕು. ಆ ಅಷ್ಟಬಂಧಪ್ರಕಾರವನ್ನು ಕ್ರಮವಾಗಿ ಹೇಳುತ್ತೇನೆ ಕೇಳು-॥೪೪॥ ಅಷ್ಟಬಂಧವು;—ಧರಾಷ್ಟಬಂಧವೆಂದು-(ಪೃಥ್ವೀಕಂಥೆ ವೊದಲಾದುದು) ॥೧॥ ಸರ್ಜರಸಾಷ್ಟಬಂಧವೆಂದು-(ಸಂಜೀವನಕಂತೆ ವೊದಲಾದುದು) ॥೨॥ ಕುಂದಾಷ್ಟಬಂಧವೆಂದು (ತೇಜೋಮಯಕಂತೆ ವೊದಲಾದುದು) ॥೩॥ ಗೈರಿಕಾಷ್ಟಬಂಧವೆಂದು (ಜಗತ್ಪ್ರಾಣಕಂತೆ ವೊದಲಾದುದು) ॥೪॥ ಸ್ಫಟಿಕದೋಪಾದಿಯಲ್ಲಿ ನಿರ್ಮಲವಾದ ಶಿಲಾಷ್ಟಬಂಧವೆಂದು—(ಚಿದಂಬರಕಂತೆ ವೊದಲಾದುದು) ॥೫॥ ಸುವರ್ಣಾಷ್ಟಬಂಧವೆಂದು—(ಚಿನ್ಮಯಕಂತೆ ವೊದಲಾದುದು) ॥೬॥ ರತ್ನಾಷ್ಟಬಂಧವೆಂದು—(ಪಚ್ಚೆಕಂತೆ ಮುತ್ತಿನಕಂತೆ ವೊದಲಾದುದು) ॥೭॥ ಜಟಾಮಾಂಸಿಯೇ ವೊದಲಾದ ಮೂಲಿಕೆಗಳಿಂಕೂಡಿ ವನೋದ್ಭವಾಷ್ಟಬಂಧವೆಂದು—(ವಜ್ರಕಂತೆ, ಶ್ವೇತಕಂತೆ, ಗೀರಕಂತೆ, ಉಗಿನೀಕಂತೆ ವೊದಲಾದುದು) ॥೮॥ ಈ ರೀತಿಯಾದ ಕ್ರಮದಿಂದ ಎಂಟುಪ್ರಕಾರವಾಗಿ ಹೇಳಲ್ಪಟ್ಟಿರುವುದು. ॥

ಅಷ್ಟಬಂಧವೆಂದೊಡೆ;—ಅರಗು, ಮತ್ತೀಗಿಡದರಸ (ಸಜ್ಜರಸ) ಜೇನುಮೇಣ, ತುಂಗಮುಸ್ತೆಗೆಡ್ಡೆ, ಗುಗ್ಗುಳ, ಇಂಗಲೀಕ, ಬೆಲ್ಲ, ಎಣ್ಣೆ—ಎಂಬ ಎಂಟುಪದಾರ್ಥಗಳ ಕೂಟದಿಂ ಮಾಡಲ್ಪಟ್ಟ ಪಾಕವೇ ಅಷ್ಟಬಂಧವೆನಿಸುವುದು. ಈ ಎಂಟುಪದಾರ್ಥಗಳೊಳಗೆ ವೊದಲನೆಯ ಪದಾರ್ಥವೆಷ್ಟನ್ನು ಸ್ವೀಕರಿಸುವರೋ ಅದೇ ಬಂದುಭಾಗವೆನಿಸುವುದು । ಆ ವೊಂದುಭಾಗಕ್ಕೆ ಎರಡರಷ್ಟು ಎರಡನೆಯ ಪದಾರ್ಥವ

ಬಂಧಮಿತಿಸ್ಮೃತಂ ॥ ಅಂತ್ಯಭಾಗಾಭಿವೃದ್ಧಿಸ್ಸ್ಯಾತ್ಪಾಕಶ್ಚಿಕ್ಕಣವದ್ಭವೇತ್ ॥೪೭॥ ಅರಂಗಾದ್ದ್ವಿಗುಣಂಗ್ರಾಹ್ಯಂಪಾಷಾಣಂಶ್ವೇತಮುಚ್ಯತೆ । ಗುಡಾರ್ಧಂರಕ್ತಪಾಷಾಣಂಶಾಣೀಚದ್ವಯಮೇವಚ ॥೪೮॥ ಚತುರ್ಗುಣಂಚಸಿಂದೂರಂ ಕುರುವಿಂದಂತದರ್ಧಕಂ । ಸಮಂವೈಶಂಖಚೂರ್ಣಂಚದ್ರವ್ಯಮಾನಂಪ್ರಕೀರ್ತಿತಂ ॥೪೯॥ ಮಾಹಿಷಂನವನೀತಂಚಗೋಘೃತಂಶರ್ಕರಾನ್ವಿತಂ । ಪಾಷಾಣಚೂರ್ಣಸಂಯುಕ್ತಂವಜ್ರಬಂಧಮಿಹೋಚ್ಯತೆ ॥೫೦॥ ಕುರಂಗಂಶ್ವೇತಪಾಷಾಣಂರಕ್ತಪಾಷಾಣಮೇವಚ।ಶಾಣೀಚಶಂಖಚೂರ್ಣಂಚಸಿಂದೂರಂಕುರುವಿಂದಕಂ ॥೫೧॥ ಸ್ನೇಹದ್ರವ್ಯಗುಣೈರ್ಯುಕ್ತಮಷ್ಟಬಂಧಮಿಹೋಚ್ಯತೆ । ಲಾಕ್ಷಾಸರ್ಜರಪಾಷಾಣಂಕುರುವಿಂದಾಚಗುಗ್ಗುಳಂ। ಗೈರಿಕಂಗುಡತೈಲೇಚಹ್ಯಷ್ಟಬಂಧಮಿ

ನ್ನು । ಅವೊಂದಕ್ಕೆ ಮೂರರಷ್ಟು ಮೂರನೆಯುದನ್ನು । ನಾಲ್ಕರಷ್ಟು ನಾಲ್ಕನೆಯುದನ್ನು । ಐದರಷ್ಟು ಐದನೆಯುದನ್ನು । ಆರರಷ್ಟು ಆರನೆಯುದನ್ನು । ಏಳರಷ್ಟು ಏಳನೆಯುದನ್ನು, ಎಂಟರಷ್ಟು ಎಂಟನೆಯ ಪದಾರ್ಥವನ್ನು-ಸ್ವೀಕರಿಸಿ, ಕೂಟಮಂ ಮಾಡಬೇಕು. ಈ ರೀತಿಯಾದ ಕೂಟದಿಂಮಾಡಿದ ಪಾಕವೇ-ಚಿಕ್ಕಣಪಾಕ-ವೆಂಬದಾಗಿ ಹೇಳಿಸಿಕೊಳ್ಳುವುದು. ॥೪೭॥ ಅನಂತರ ವಜ್ರಬಂಧವನ್ನು ಹೇಳುತ್ತೇನೆ ಕೇಳು:—ಕುರಂಗದಕಲ್ಲೆಷ್ಟನ್ನ ಸ್ವೀಕರಿಸುವರೋ ಅದರೆರಡರಷ್ಟುಭಾಗ ಬಿಳಿಯಕಲ್ಲನ್ನು ಕುರಂಗದಕಲ್ಲಿನಷ್ಟೇ ಬೆಲ್ಲವನ್ನು, ಆ ಬೆಲ್ಲದರ್ಧಭಾಗದಷ್ಟು ಕೆಂಪುಕಲ್ಲನ್ನು ಕುರಂಗದಕಲ್ಲಿನೆರಡರಷ್ಟುಭಾಗ ಸಾಣೆಕಲ್ಲನ್ನೂ, ॥೪೮॥ ಕುರಂಗದಕಲ್ಲಿನ ನಾಲ್ಕರಷ್ಟುಭಾಗ ಚಂದ್ರನನ್ನು, ಕುರಂಗದಕಲ್ಲಿನರ್ಧಭಾಗದಷ್ಟು ತುಂಗಮುಸ್ತೆಗೆಡ್ಡೆಯನ್ನು, ಸ್ವೀಕರಿಸಬೇಕು. । ಮತ್ತೂ ಹಿಂದೆಹೇಳಿದ ಕುರಂಗದಕಲ್ಲಿನಷ್ಟೇ ಭಾಗ ಶಂಕಿನ ಪುಡಿಯನ್ನು ಸ್ವೀಕರಿಸಬೇಕೆಂದು ಪದಾರ್ಥಗಳ ಪ್ರಮಾಣವು ಹೇಳಲ್ಪಟ್ಟಿತು, ॥೪೯॥ ಮತ್ತೂ ಈ ಪದಾರ್ಥಗಳೊಡನೆ:—ಎಮ್ಮೆಯಬೆಣ್ಣೆಯನ್ನೂ ಹಸುವಿನತುಪ್ಪವನ್ನೂ ಸಕ್ಕರೆಯನ್ನೂ ಬಿಳಿಕಲ್ಲಿನಪುಡಿಯನ್ನು ಸಹ ಬೆರಿಸಿ ಪಾಕವನ್ನು ಮಾಡಬೇಕು. ಈ ರೀತಿಯಾಗಿ ಮಾಡಿದ ಪಾಕವೇ ವಜ್ರಬಂಧ (ವಜ್ರದಕಂತೆ) ಎನಿಸುವುದು. ॥೫೦॥ ಅನಂತರ;—ಕುರಂಗದಕಲ್ಲು, ಬಿಳಿಕಲ್ಲು, ಕೆಂಪುಕಲ್ಲು, ಸಾಣೆಕಲ್ಲು, ಶಂಖದಪುಡಿ, ಚಂದ್ರ, ತುಂಗಮುಸ್ತೆಗೆಡ್ಡೆ, ಎಣ್ಣೆ—ಗಳೆಂಬ ಈ ಎಂಟುಪದಾರ್ಥಗಳ ಕೂಟದಿಂ ಮಾಡಿದ ಪಾಕವೂಕೂಡ ಅಷ್ಟಬಂಧವೆನಿಸುವುದು ॥ ಮತ್ತೂ—ಅರಗು, ಮತ್ತಿಗಿಡದರಸ, ಕಲ್ಲು, ತುಂಗಮುಸ್ತೇಗೆಡ್ಡೆ, ಗುಗ್ಗುಳ, ಇಂಗಲೀಕ, ಬೆಲ್ಲ, ಎಣ್ಣೆ—ಗಳೆಂಬ ಈ ಎಂಟುಪದಾರ್ಥಗಳ ಕೂಟದಿಂಮಾಡಿದ ಪಾಕವೂ ಕೂಡ ಅಷ್ಟ

ತಿಸ್ಮೃತಂ ॥೫೨॥ ಷಡ್ಭಾಗಂ ಕಾಚರಾಳಶ್ಶಿಲಜತುಯುಗಳಂ ಸೀಸಕಂ ಚಾ
ಗ್ನಿಭಾಗಂ । ಶಾಣೀಪಾಷಾಣವೇದಂ ಸುಲಲಿತಸುದೃಢಂ ಟಂಕಣಂ ಚೈಕ
ಭಾಗಂ ॥ ವಜ್ರೇಶಂ ಚೂರ್ಣರಂಧ್ರಂ ಶಿವವದನಸಮಂ ಲೋಹಪಾಷಾಣ
ಯುಗ್ಮಂ ಧೂಪಂ ಬ್ರಹ್ಮಾಸ್ಯಭಾಗಂ ಸಮುಚಿತನವನೀತಂ ತಥಾ ಪಾಹಿಷಂ
ಚ । ಇತಿ ಶ್ವೇತಬಂಧಃ ॥೫೩॥ ಭಲ್ಲಾತಕೀಫಲಂ ದೀಪಶಿಖಾಯಾಂ ಸಂಪ್ರತಾ
ಪಯೇತ್ । ತತ್ತೈಲಸಮಭಾಗಂ ತು ತಿಲತೈಲಂ ವಿಮಿಶ್ರಯೇತ್ ॥ ಮೃತ್ಪಾ
ತ್ರಶ್ಲಕ್ಷ್ಣಚೂರ್ಣೈಶ್ಚ ಶ್ಲಕ್ಷ್ಣವಸ್ತ್ರಸುಶೋಧಿತೈಃ । ದ್ವಿತ್ರಿವಾರಮಥಃ ಪೂ
ರ್ವತೈಲದ್ವಯುಸುಸೇಚನೈಃ ॥ ಸಂಪೇಷ್ಯತೇನ ಬಧ್ನೀಯಾದ್ವೀರಶೈವಃ
ಪ್ರಯತ್ನತಃ ॥ ಪ್ರಸಿದ್ಧಾ ಮುಗಿನೀನಾಮ್ನಾ ಪ್ರೋಕ್ತಾನಾಂ ಭೇದಿತಾಂ ಲತಾಂ ।

ಬಂಧವೆನಿಸುವುದು. ॥ ಬಳಿಕ ಶ್ವೇತಬಂಧವನ್ನು ಹೇಳುತ್ತೇನೆ, ಕೇಳು-ಗಾಜಿನಂತೆ ಗಟ್ಟಿ
ಯಾದ ಸಜ್ಜರಸವು ಆರುಭಾಗವು, ಶಿಲಾಜತು ಎರಡುಭಾಗವು, ಸೀಸವು ಮೂರುಭಾ
ಗವು, ಸಾಣೆಕಲ್ಲು ನಾಲ್ಕುಭಾಗವು, ಶುದ್ಧವಾಗಿಯೂ ಗಟ್ಟಿಯಾಗಿಯೂ ಇರತಕ್ಕ ಬೆ
ಳಿಗಾರವು ಒಂದುಭಾಗವು, ಮುಂಡಗಳ್ಳಿ ರಸವು ಮೂರು ಭಾಗವು, ಸುಣ್ಣವು ಒಂಭ
ತ್ತುಭಾಗವು, ಲೋಹವೂ ಕಲ್ಲೂ ಪ್ರತಿಯೊಂದೂ ಐದುಭಾಗವು, ಗುಗ್ಗುಳವು
ನಾಲ್ಕುಭಾಗವು, ಇವುಗಳಿಗೆಲ್ಲಕ್ಕೂ ಬೇಕಾದಷ್ಟು ಎಮ್ಮೆಯಬೆಣ್ಣೆಯು;— ಇ
ವುಗಳ ಕೂಟದಿಂ ಮಾಡಿದ ಪಾಕವೇ ಶ್ವೇತಬಂಧವೆನಿಸುವುದು. ಇದರಿಂದ ಲಿಂಗ
ಪೀಠಗಳೆರಡನ್ನು ಬಂಧಿಸಿ ವಜ್ರದಹಾಗೆ ಮಾಡಬೇಕು. ಈ ರೀತಿಯಾದುದೇ ಶ್ವೇತ
ಬಂಧವು. ॥೫೪॥ ಇನ್ನು ವೀರಶೈವನಿಗೆ ಯೋಗ್ಯವಾದ—ಗೇರಿನಕಂತೆ (ಭ
ಲ್ಲಾತಕೀಬಂಧ) ವನ್ನು ಹೇಳುತ್ತೇನೆ ಕೇಳು—ಗೇರಿನಕಾಯನ್ನು ದೀಪದಕೊನೆ
ಯಲ್ಲಿ ಸುಟ್ಟು ಅದರಿಂದ ಎಣ್ಣೆಯನ್ನು ತೆಗೆದು, ಆ ಎಣ್ಣೆಗೆ ಸಮವಾಗಿ ಎಳ್ಳಿನ
ಎಣ್ಣೆಯನ್ನು ಮಿಶ್ರಮಾಡಿಕೊಂಡು, ಅನಂತರ ಮಣ್ಣಿನಪಾತ್ರೆಯನ್ನು ಚೆನ್ನಾಗಿ ಪು
ಡಿಮಾಡಿಕೊಂಡು, ಆ ಪುಡಿಯನ್ನು ಸಣ್ಣನಾದ ಬಟ್ಟೆಯಲ್ಲಿ ಶೋಧಿಸಿಕೊಂಡು, ಆ
ಪುಡಿಯ ಜೊತೆಯಲ್ಲಿ ಆ ಮಿಶ್ರಮಾಡಿರುವ ಎಣ್ಣೆಯನ್ನು ಸ್ವಲ್ಪಸ್ವಲ್ಪವಾಗಿ ಬಿಟ್ಟು
ಕೊಂಡು ಎರಡುಮೂರುವೇಳೆ ನುಣ್ಣಗೆ ಅರೆದು ಅರೆದು ಮಾಡಿದ ಪಾಕವೇ-ಭಲ್ಲಾತ
ಕೀಬಂಧ (ಗೇರಕಂತೆ) ಎನಿಸುವುದು. ಇದೇ ವೀರಶೈವನಿಗೆ ಯೋಗ್ಯವಾದುದು. ॥
ಇನ್ನು ವೀರಮಾಹೇಶ್ವರನಿಗೆ ಯೋಗ್ಯವಾದ ಉಗಿನೀಬಂಧವನ್ನು (ಉಗಿನೀಕಂತೆಯ
ನ್ನು) ಹೇಳುತ್ತೇನೆ ಕೇಳು—ಉಗಿನಿಯೆಂಬ ಹೆಸರಿನಿಂದ ಪ್ರಸಿದ್ಧವಾಗಿಯೂ ಬಹಳ
ಹಳೆಯದಾಗಿಯೂ ಇರುವ ಬಳ್ಳಿಯನ್ನು ಕತ್ತರಿಸಿತಂದು, ಷಡಕ್ಷರಮಂತ್ರವನ್ನು
ಜ್ಞಾಪಿಸುತ್ತಾ ಒಂದುಪಾತ್ರೆಯಲ್ಲಿ ಆ ಬಳ್ಳಿಯರಸವನ್ನು ಹಿಂಡಿ ಇರಿಸಿದ್ದು, ಹಿಮಂತ

ಷಡಕ್ಷರೇಣಾಭಿಮಂತ್ರ್ಯಪಾತ್ರೇತದ್ರಸಮಾನಯೇತ್ ॥ಹೇಮಂತರ್ತೌ ಹಿಮಾನಿಂಚಘನೀಭೂತಾಂದೃಢಾಶ್ಮನಿ॥ಪೇಷಯೇದತಿಯತ್ನೇನಸಿಕ್ತ್ವಾಂ ಕಿಂಚಿಜ್ಜಲೇನತು । ತತ್ಪಾಕಂಸಂಪ್ರದಾಯಜ್ಞೈರ್ಜ್ಞಾತ್ವಾತೇನೈವಬಂಧಯೇತ್ ॥ ವಜ್ರಬಂಧಸಮೋಹ್ಯಯಂತುವೀರಮಾಹೇಶ್ವರಾದೃತಃ ॥ ಇತಿಬದ್ಧ್ವಾಥಚೇಷ್ಟಲಿಂಗಂಪ್ರತೀಕ್ಷೇತಶಿಶೋರ್ಜನಿಂ । ಸಂಸ್ಕುರ್ಯಾತ್ತನಯಂಜಾತಕರ್ಮಣಾಜನನಾತ್ಪರಂ ॥೬೦॥

ಇತಿಶ್ರೀಮದನಾದಿಪ್ರಮಥಪರಂಪರಾಗತ ಷಟ್ಸ್ಥಲಜ್ಞಾನಬೋಧ
ಕಾಚಾರ್ಯ........ವೀರಶೈವಾಚಾರಕೌಸ್ತುಭೇ ಕ್ರಿಯಾಕಾಂ
ಡೇ ಲಿಂಗಪೀಠಾಧಿವಾಸಬಂಧಸ್ವರೂಪನಿರೂಪಣಂ
ನಾಮ ಸಪ್ತಮಪ್ರಕರಣಂ
ಸಂಪೂರ್ಣಂ.

ಋತುಬಂಧಕಾಲದಲ್ಲಿ ದೃಢವಾದ ಶಿಲೆಯಮೇಲೆ ಘನೀಭೂತವಾಗಿ (ಗೆಡ್ಡೆಯಾಗಿ) ನಿಂತಿರುವ ಹಿಮದಸಮೂಹವನ್ನು ಕಾದುಕೊಂಡಿದ್ದು ಆಗ ಆ ಸ್ಥಾನಕ್ಕೆ ಈ ಉಗಿನೀಬಳ್ಳಿಯರಸವನ್ನು ತೆಗೆದುಕೊಂಡು ಹೋಗಿ ಆ ಹಿಮದಗಡ್ಡೆಗೆ ಸ್ವಲ್ಪಸ್ವಲ್ಪವಾಗಿ ಈ ಉಗಿನೀರಸವನ್ನು ಸೇಚನೆಮಾಡಿ ಸೇಚನೆಮಾಡಿ ಅತಿಪ್ರಯತ್ನದಿಂದ ಅರೆಯಬೇಕು. ಬಳಿಕ ಸಂಪ್ರದಾಯಸ್ಥರುಗಳಿಂದ ತಿಳಿದು ಪಾಕವನ್ನು ಮಾಡಿ ಅದರಿಂದ ಲಿಂಗವನ್ನೂ ಪೀಠವನ್ನೂ ಬಂಧಿಸಬೇಕು. ಈ ಉಗಿನೀಬಂಧವು ಕೂಡ ವಜ್ರಬಂಧಕ್ಕೆ ಸಮನಾಗಿರುವುದು. ಮತ್ತೂ ವೀರಮಾಹೇಶ್ವರನಿಂದ ಅಂಗೀಕರಿಸುವುದಕ್ಕೆ ಯೋಗ್ಯವಾಗಿರುವುದು. ॥ ಈ ರೀತಿಯಾಗಿ ಲಿಂಗಪೀಠಗಳ ಬಂಧವಿಚಾರವು ಹೇಳಿರುವುದರಿಂದ ಶ್ರೀಗುರುವು ಇಷ್ಟಲಿಂಗವನ್ನು ಈ ಕ್ರಮದಿಂದ ಬಂಧಿಸಿ ಸಿದ್ಧಪಡಿಸಿಕೊಂಡು ಶಿಶುವಿನ ಹುಟ್ಟುವಿಕೆಯನ್ನು ನಿರೀಕ್ಷಿಸುತ್ತಿರಬೇಕು. ಬಳಿಕ ಶಿಶುವು ಜನಿಸಿದಮೇಲೆ ಲಿಂಗವನ್ನು ಕಟ್ಟಿ, ಜಾತಕರ್ಮದಿಂದ ಆ ಶಿಶುವನ್ನು ಸಂಸ್ಕರಿಸಬೇಕು.॥

ಎಂಬಲ್ಲಿಗೆ ಶ್ರೀಮೌನಪ್ಪ ವಿದ್ವತ್ಕೃತ ವೀರಶೈವಾಚಾರಕೌಸ್ತುಭಕ್ಕೆ—ಯಂ.
ಬಸವಲಿಂಗಶಾಸ್ತ್ರಿ ರಚಿತವಾದ "ಆಚಾರ್ಯಪ್ರಕಾಶಿಕೆ" ಎಂಬ ಕನ್ನಡಟಿ
ಪ್ಪಣದಲ್ಲಿ-ಲಿಂಗಪೀಠಾಧಿವಾಸಾಷ್ಟಬಂಧಸ್ವರೂಪವನ್ನು ನಿರೂ
ಪಣೆಮಾಡುವ ಏಳನೆಯ ಪ್ರಕರಣವು ಮುಗಿದುದು.



ಅಥ ಅಷ್ಟಮಪ್ರಕರಣಂ.

(ಜಾತಕರ್ಮ.)

ಉದಿತಂ ಭವತಾ ಸರ್ವಮಾಕರ್ಣ್ಯಾಮೃತವಾರಿಧೌ।ನಿಮಗ್ನಇವ ಸಂತುಷ್ಟಃ ಕಥಂ ಜಾತಸ್ಯವೈ ಶಿಶೋಃ॥೧॥ಸಂಸ್ಕಾರೋವೀರಶೈವಾನಾಂ ವದವಿದ್ವನ್ಯಥಾತಥಾ।ವೈದುಷೀಶೌರ್ಯಸಂವೃದ್ಧ ದಾನಶ್ರೀಕರಸತ್ಪ್ರಭೋ॥ ಜಾತಕರ್ಮಾದಿಸಂಸ್ಕಾರರೀತಿ ಮಾಕರ್ಣಯ ಬ್ರುವೆ । ಜಾತಂಕುಮಾರಂ ಸಂಸ್ನಾಪ್ಯ ಗುರುಣಾ ಕಾರಯೇದ್ಬುಧಃ ॥೨॥ ಪೂರ್ವಮೇವ ವಿನಿರ್ದಿಷ್ಟಂ ಲಿಂಗಂಪಂಚಾಮೃತೈಃ ಪೃಥಕ್ । ಸಂಸ್ನಾಪ್ಯಪಂಚಭಿರ್ಗವ್ಯೈರ್ಲಿಂಗಂಪ್ರಾಣೈಃ ಪ್ರತಿಷ್ಠಿತಂ.॥೩॥ ಅಸುನೀತೆರುಚಂ ಕುರ್ಯಾದ

೮ನೆಯ ಪ್ರಕರಣವು.

—ಜಾತಕರ್ಮಸಂಸ್ಕಾರವು—

ಎಲೈ ಮೌನಪ್ಪವಿದ್ವಾಂಸನೆ ! ನಿನ್ನಿಂದ ಹೇಳಲ್ಪಟ್ಟ ಸಮಸ್ತವನ್ನೂ ಕೇಳಿ ಅಮೃತಸಮುದ್ರದಲ್ಲಿ ಮುಳುಗಿದವನಹಾಗೆ ಸಂತೋಷಚಿತ್ತನಾದೆನು; ಆದುದರಿಂದ ವೀರಶೈವಮತಸ್ಥರೊಳಗೆ ಉತ್ಪನ್ನವಾದ ಶಿಶುವಿಗೆ ಜಾತಕರ್ಮಸಂಸ್ಕಾರವನ್ನು ಹೇಗೆ ಮಾಡಬೇಕು ? ಅದನ್ನು ಕ್ರಮವಾಗಿ ಹೇಳುವವನಾಗು, ಎನಲು, ಮೌನಪ್ಪವಿದ್ವಾಂಸನು ಕೇಳಿ, ಎಲೈ ವಿದ್ವತ್ತಿನಿಂದ ಅಭಿವೃದ್ಧಿಯಂ ಹೊಂದಿಸಲ್ಪಟ್ಟ ದಾನವುಳ್ಳ ಹಸ್ತವುಳ್ಳವನೆ ! ಪರಾಕ್ರಮದಿಂದ ಅಭಿವೃದ್ಧಿಯಂ ಹೊಂದಿಸಲ್ಪಟ್ಟ ಸಂಪತ್ತಿಗೆ ಪ್ರಭುವಾದ ಲಿಂಗಪ್ಪಮಂತ್ರಿಯೆ ! ಈಗ ಜಾತಕರ್ಮವೇ ಮೊದಲಾದ ಸಂಸ್ಕಾರಗಳ ರೀತಿಯನ್ನು ಹೇಳುತ್ತೇನೆ ಕೇಳು:—ಬಳಿಕ ಲಿಂಗಪೀಠಗಳಿಗೆ ಗೇರಕಂತೆಯನ್ನಾಗಲಿ ಉಗಿನೀಕಂತೆಯನ್ನಾಗಲಿ ಬಿಗಿದು ಇಷ್ಟಲಿಂಗವನ್ನು ಸಿದ್ಧಪಡಿಸಿಕೊಂಡು, ಶಿಶುವಿನ ಹುಟ್ಟುವಿಕೆಯನ್ನು ನಿರೀಕ್ಷಿಸುತ್ತಿದ್ದ ಶ್ರೀಗುರುವು ಶಿಶುವು ಉತ್ಪನ್ನವಾದನಂತರ ತಂದೆಯಿಂದ ಮುಂದೆಹೇಳುವ ವೈದಿಕೀಸರಣಿಯಂತೆಯೇ ಜಾತಕರ್ಮಸಂಸ್ಕಾರವನ್ನು ಮಾಡಿಸಲು;—ಆಗ ವಿವೇಕಿಯಾದ ತಂದೆಯು ಆ ಸಂಸ್ಕರಿಸಲ್ಪಟ್ಟ ಶಿಶುವಿಗೆ ಪುನಃ ಆ ಶ್ರೀಗುರುವಿನಿಂದಲೇ ಸ್ನಾನಮಾಡಿಸಿ ॥೨॥ ಪೂರ್ವದಲ್ಲಿ ಹೇಳಲ್ಪಟ್ಟ ಆ ಲಿಂಗವನ್ನು ಪುನಃ ಪಂಚಗವ್ಯ (ಗೋಮಯ ಗೋಮೂತ್ರ, ಗೋಕ್ಷೀರ, ಗೋದಧಿ, ಗೋಘೃತ)—ಗಳಿಂದಲೂ, ಪಂಚಾಮೃತ (ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆ) ಗಳಿಂದಲೂ ಕೂಡ ಸ್ನಾನಮಾಡಿಸಿ,—"ಅಸುನೀತೆಪುನರಸ್ಮಾಸು ಚಕ್ಷುಃಪುನಃ

ಷ್ಟತ್ರಿಂಶತ್ಕಲಾಃಪುನಃ । ಕಲಾಭಿರ್ನ್ಯಸ್ಯ ತಲ್ಲಿಂಗಂ ಪಂಚಾಮೃತರಸೈಃ ಪೃಥಕ್॥೫॥ಸಂಸ್ನಾಪ್ಯ ಫಲಪುಷ್ಪಾದ್ಯೈ ರುಪಚಾರೈಸ್ತು ಷೋಡಶೈಃ । ಅಭ್ಯರ್ಚ್ಯ ವಿಧಿವದ್ಭಕ್ತ್ಯಾ ಜಂಗಮಸ್ಯ ಪದಾಂಭಸಾ ॥೬॥ ಪ್ರಸಾದೇ ನಾಪೀಷ್ಟಲಿಂಗಶೇಷೇಣಾಪಿ ಕುಮಾರಕಂ। ಪಾದೋದಕಪ್ರಸಾದೇಭ್ಯ ಸ್ಸಂಪನ್ನಂ ಕಾರಯೇತ್ಪಿತಾ ॥೬॥

ಅಥಾಯಂ ವೈದಿಕಪಂಥಾಃ;-ಜಾತಮಾತ್ರೇಪುತ್ರೇ ಪಿತಾತಸ್ಯ ಮುಖಂ ನಿರೀಕ್ಷ್ಯ ನದ್ಯಾದಾವುದಙ್ಮುಖಃ ಸ್ನಾತ್ವಾ, ಅಸಂಭವೇದಿವಾಹೃತಾಭಿಶ್ಶೀತಾಭಿರದ್ಭಿ ಸ್ಸುವರ್ಣಯುತಾಭಿಃ ಗೃಹಏವಸ್ನಾತ್ವಾ, ಆಚಮ್ಯ, ಸಿತಚಂದನಮಾಲ್ಯಾದಿಭಿರಲಂಕೃತೋನಾಭಿಚ್ಛೇದನಾತ್ಪೂರ್ವಂ ಸೂತಿಕಾದಿವ್ಯತಿರಿಕ್ತೈ ರಸ್ಪೃಷ್ಟ ಮಕೃತಸ್ತನ್ಯಪಾನಂ ಪ್ರಕ್ಷಾಳಿತಮಲಂ ಕುಮಾರಂಮಾತುರುತ್ಸಂಗೇ ಪ್ರಾಙ್ಮುಖಮವಸ್ಥಾಪ್ಯ, ಮಾಹೇಶ್ವರೈಸ್ಸಹ ಪುಣ್ಯಾಹವಾಚನಂ ನಾಂದೀಸಮಾರಾಧನಂಚಕಾರಯೇತ್॥ ದೇಶಕಾಲೌ ಸ್ಮೃತ್ವಾ,ಮಮಾಸ್ಯಕುಮಾರಸ್ಯಗರ್ಭಾಂಬುಪಾನಜನಿತಸಕಲದೋಷನಿ

ಪ್ರಾಣಮಿಹನೋದೇಹಿಭೋಗಂ ಜ್ಯೋತ್ಪಶ್ಯೇಮ ಸೂರ್ಯಮುಚ್ಚರಂತಮನುಮತೇಮೃಳಯನಸ್ಸ್ವಸ್ತಿ''—ಎಂಬ ಮಂತ್ರವನ್ನುಚ್ಚರಿಸುತ್ತಾ ಆ ಲಿಂಗದಲ್ಲಿ ಪ್ರಾಣಪ್ರತಿಷ್ಠೆಯಂಮಾಡಿ, ಅನಂತರ ಆ ಲಿಂಗದಲ್ಲಿ ಮೂವತ್ತಾರು ಕಲೆಗಳನ್ನು ಆವಾಹನೆಯಂ ಮಾಡಿಸಿ, ಬಳಿಕ ಆ ಲಿಂಗವನ್ನು ಪಂಚಾಮೃತರಸಗಳಿಂದ ಸ್ನಾನಮಾಡಿಸಿ, ಬಳಿಕ ವಿಧಿವತ್ತಾಗಿ ಜಲಗಂಧ ಅಕ್ಷತೆ ಫಲಪುಷ್ಪಂಗಳೇ ಮೊದಲಾದ ಷೋಡಶೋಪಚಾರಗಳಿಂದ ಪೂಜಿಸಿ ಅನಂತರ ಭಕ್ತಿಯುಕ್ತನಾಗಿ ಬಳಿಕ ಆ ಶಿಶುವನ್ನು ಜಂಗಮಪಾದೋದಕದಿಂದಲೂ ಪ್ರಸಾದದಿಂದಲೂ ಲಿಂಗತೀರ್ಥಪ್ರಸಾದಗಳಿಂದಲೂ ಸಂಪನ್ನನನ್ನಾಗಿ ಮಾಡಿಸಬೇಕು. ॥೭॥

ಇಲ್ಲಿ ಹೇಳತಕ್ಕ ವಿಧಿಯು ಮೊದಲಲ್ಲಿ ಗ್ರಹಿಸಲ್ಪಡತಕ್ಕುದು.

ಶಿಶುವು ಹುಟ್ಟಿದನಂತರದಲ್ಲಿ ಶ್ರೀಗುರುವು ತಂದೆಯಿಂದ ಈ ವೈದಿಕಮಾರ್ಗದಂತೆಯೇ ಜಾತಕರ್ಮಸಂಸ್ಕಾರವನ್ನು ಮಾಡಿಸಬೇಕು. ಪುತ್ರನು ಹುಟ್ಟಿದಕೂಡಲೇ ತಂದೆಯು ಆ ಮಗುವಿನ ಮುಖವನ್ನು ನೋಡಿ ನದಿಗೆ ಬಂದು ಉತ್ತರಮುಖನಾಗಿ ನಿಂತು ಸ್ನಾನಮಾಡಿ,ನದಿಯು ಇಲ್ಲದಿದ್ದ ಪಕ್ಷದಲ್ಲಿ ಹಗಲಲ್ಲಿಯೇ ತಂದಿರತಕ್ಕದ್ದಾಗಿಯೂ ಶೀತವಾಗಿಯೂ ಇರತಕ್ಕ ಜಲದಲ್ಲಿ ಸುವರ್ಣ (ಚಿನ್ನವನ್ನು] ಹಾಕಿ ಮನೆಯಲ್ಲಿಯೇ ಸ್ನಾನಮಾಡಿ, ಬಳಿಕ ಆಚಮನವಂಮಾಡಿ-ಜಲ, ಗಂಧ, ಅಕ್ಷತೆ, ಶ್ರೀಗಂಧದ

ಹರಣಾಯುರ್ಮೇಧಾಭಿವೃದ್ಧಿಬೀಜಗರ್ಭಸಮುದ್ಭವೈನೋನಿಬರ್ಹಣ ದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಜಾತಕರ್ಮ ಕರಿಷ್ಯೇ || ಇತಿ ಸಂಕಲ್ಪ್ಯ, ತತೋವಿಷಮಮಾನೇನ ಮಧುಸರ್ಪಿಷೀ ಮಿಶ್ರೀಕೃತ್ಯ, ಏಕಸ್ಮಿನ್ ಶಿಲಾಪಾತ್ರೇನಿಕ್ಷಿಪ್ಯ, ತತ್ರಸುವರ್ಣರಜೋವಿಮೋಕಂ ಯಾ ವದವಘೃಷ್ಯ, ಭಾಜನೇ ನಿಧಾಯ— "ಓಂಪ್ರತೆದದಾಮಿಮಧುನೋ ಘೃತಸ್ಯವೇದಂ ಸವಿತ್ರಾಪ್ರಸೂತಂ ಮಘೋನಾಂ || ಆಯುಷ್ಮಾನ್ ಗು ಪ್ತೋದೇವತಾಭಿಃ ಶತಂಜೀವಶರದೋ ಲೋಕೇಅಸ್ಮಿನ್" —ಇತಿಮಂ ತ್ರೇಣ ತೇನೈವ ಹಿರಣ್ಯೇನ ಕುಮಾರಂ ಪಾಯಯಿತ್ವಾ, ತದ್ಧಿರಣ್ಯಂ ಪ್ರಕ್ಷಾಳ್ಯ ಕುಮಾರಸ್ಯ ದಕ್ಷಿಣಕರ್ಣೇ ನಿಧಾಯ, ತನ್ಮುಖಸಮೀಪೆ ಸ್ವಮುಖಮಾಸೀಯ— "ಓಂಮೇಧಾಂತೆದೇವಸ್ಸವಿತಾ ಮೇಧಾಂ ದೇ ವೀಸರಸ್ವತೀ || ಮೇಧಾಂತೇ ಅಶ್ವಿನೌದೇವಾ ವಾಧತ್ತಾಂ ಪುಷ್ಕರಸ್ರ ಜಾ" —ಇತಿಮುಚಂಜಪಿತ್ವಾ, ಪುನಸ್ತದ್ಧಿರಣ್ಯಂ ಸವ್ಯೇ ಕರ್ಣೇ ನಿಧಾ

ಪತ್ರೆ, ಧೂಪ-ಗಳೆಂಬ ಪಂಚೋಪಚಾರಗಳಿಂ ಲಿಂಗಾರ್ಚನೆಯಂಪೂರೈಸಿ, ಆ ನಿ ರ್ಮಾಲ್ಯಶ್ರೀಗಂಧದ ಪತ್ರೆಗಳ ಮಾಲಿಕೆಗಳಿಂದಲಂಕೃತನಾಗಿ, ನಾಭಿಯಂಕತ್ತರಿಸು ವುದಕ್ಕಿಂತಲೂ ಮೊದಲಲ್ಲಿ ಸೂತಿಕಾದಿಗಳಿಲ್ಲದವರಿಂಮುಟ್ಟದೆ ಇರತಕ್ಕವನಾಗಿ ಯೂ, ಸ್ತನಪಾನವಂ ಮಾಡದೆ ಇರತಕ್ಕವನಾಗಿಯೂ, ತೊಳೆಯಲ್ಪಟ್ಟ ಮಲವುಳ್ಳ ವನಾಗಿಯೂ ಇರುವ ಕುಮಾರನನ್ನು ತಾಯಿಯತೊಡೆಯಮೇಲೆ ಪೂರ್ವಮುಖವಾ ಗಿ ಇರಿಸಿ, ಮಾಹೇಶ್ವರರುಗಳಿಂದ ಪುಣ್ಯಾಹವಾಚನವಂ ನಾಂದೀಸಮಾರಾಧನೆಯನ್ನೂ ಮಾಡಿಸಿ, ದೇಶಕಾಲಂಗಳಂಸ್ಮರಿಸಿ, ನನ್ನ ಈ ಕುಮಾರನಿಗೆ—ಗರ್ಭದಲ್ಲಿ ಜಲವನ್ನು ಪಾನಮಾಡುವುದರಿಂದ ಉತ್ಪನ್ನವಾದ ಸಮಸ್ತದೋಷವೂ ನಿವಾರಣೆಯಾಗಿ, ಆಯು ಷ್ಯವೂ ಬುದ್ಧಿಯೂ ಅಭಿವೃದ್ಧಿಯಾಗಿ, ಬೀಜಗರ್ಭದಿಂದ ಉತ್ಪನ್ನವಾದ ಪಾಪವು ನಿ ವಾರಣೆಯಾಗಿ ಶ್ರೀಪರಮೇಶ್ವರನಪ್ರೀತಿಯನ್ನು ಸಂಪಾದಿಸುವುದಕ್ಕೋಸ್ಕರ ಜಾತ ಕರ್ಮವನ್ನು ಮಾಡುತ್ತೇನೆ, ಈ ರೀತಿಯಾಗಿ ಸಂಕಲ್ಪವಂಮಾಡಿ, ಅನಂತರ ಜೇನ ನ್ನೂ ತುಪ್ಪವನ್ನೂ ಹೆಚ್ಚುಕಮ್ಮಿಯಾಗಿ ಮಿಶ್ರಮಾಡಿ, ಅವನ್ನು ಶಿಲೆಯ ಒಂದು ಪಾ ತ್ರೆಯಲ್ಲಿ ಇರಿಸಿ, ಅದರಲ್ಲಿ ಚಿನ್ನದ ಸಣ್ಣ ತಂಡಿನ ಒಂದು ಹಲ್ಲೆಯನ್ನು ಹಾಕಿ, ಆ ಜೇನನ್ನು ತುಪ್ಪವನ್ನೂ ತಿರುಹಿ,— "ಓಂಪ್ರತೆದದಾಮಿ......ಲೋಕೆಅಸ್ಮಿನ್"— ಎಂಬುವ ಮಂತ್ರವನ್ನುಚ್ಚರಿಸುತ್ತಾ ಆ ಚಿನ್ನದ ಸಣ್ಣ ಹಲ್ಲೆಯಿಂದಲೆ ಅದನ್ನು ಆ ಶಿಶುವಿಗೆ ಚೀಪಿಸಿ, ಬಳಿಕ ಆಚಿನ್ನವನ್ನು ತೊಳೆದು ಆ ಮಗುಗವಿನ ಬಲಗಿವಿಯಸಮೀ ಪದಲ್ಲಿ ಇರಿಸಿ, ಆಮಗುವಿನ ಮುಖಸಮೀಪದಲ್ಲಿ ತನ್ನ ಮುಖವನ್ನು ಹಾಕಿಕೊಂಡು

ಭ್ಯೈತಾಮೇವ ಋಚಂಜಪೇತ್—" ಓಂಮೇಧಾಂತೆದೇವ "— ಇತಿ ||
ತತಃಶಿಶೋರಂಸೌ ಯುಗಪದಭಿಮೃಶೇತ್— " ಓಂ ಅಶ್ಮಾಭವ ಪರಶು
ರ್ಭವ ಹಿರಣ್ಯ ಮಸ್ತೃತಂಭವ ॥ವೇದೋವೈಪುತ್ರನಾಮಾಸಿ ಸಜೀವಶರ
ದಶ್ಶತಂ||೧|| ಇಂದ್ರಶ್ರೇಷ್ಠಾನಿಶೌನಕೋಗೃತ್ಸಮದಇಂದ್ರಸ್ತ್ರಿಷ್ಟುಪ್॥
ಅಂಸಾಭಿಮರ್ಶನೆ ವಿನಿಯೋಗಃ —"ಓಂಇಂದ್ರಶ್ರೇಷ್ಠಾನಿದ್ರವಿಣಾನಿಧೇಹಿ
ಚಿತ್ತಿಂದಕ್ಷಸ್ಯ ಸುಭಗತ್ವಮಸ್ಮೆ||ಪೋಷಂರಯೀಣಾಮರಿಷ್ಟಿಂತನೂನಾಂ
ಸ್ವಾತ್ಮಾನಂವಾಚಃಸುದಿನತ್ವಮಹ್ನಾಂ॥೨॥ಅಸ್ಮೆಪ್ರಯಂಧಿವಿಶ್ವಾಮಿತ್ರಇಂ
ದ್ರಸ್ತ್ರಿಷ್ಟುಪ್ ಅಂಸಾಭಿಮರ್ಶನೆವಿನಿಯೋಗಃ—" ಓಂ ಅಸ್ಮೆಪ್ರಯಂಧಿ
ಮಘವನ್ನೃಜೀಷಿ ನ್ನಿಂದ್ರರಾಯೊ ವಿಶ್ವವಾರಸ್ಯ ಭೂರೇಃ ॥ ಅಸ್ಮೆಶತಂಶ
ರದೊಜೀವಸೆ ಧಾಅಸ್ಮೆ ವೀರಾಂಛಶ್ವತ ಇಂದ್ರಶಿಪ್ರಿನ್ ॥೩॥ "—ಇತಿ
ಮಂತ್ರತ್ರಯಾಂತೆ ಅಭಿಮರ್ಶಃ ॥ ತತೋರಕ್ಷಾಯುಷೊ ರಭಿವೃದ್ಧ್ಯ
ರ್ಥಂ—" ಓಂ ಅಂಗಾದಂಗಾತ್ಸಂಭವಸಿ ಹೃದಯಾದಧಿಜಾಯಸೆ॥ ಆತ್ಮಾ
ವೈಪುತ್ರನಾಮಾಸಿ ಸಜೀವಶರದಃಶತಂ "—ಇತಿ ಮಂತ್ರಮುಚ್ಚಾರ್ಯ
ಮೂರ್ಧಾನಂ ತ್ರಿರಾಜಿಘ್ರೇತ್॥ ತತಃಶಿಶೋಃ ಕರಿಷ್ಯಮಾಣಂ ನಾಮ
ತದ್ದೈವಸ್ಮರೇತ್ || ತತಃಯಥಾಚಾರಂ ಹಿರಣ್ಯೋದಕೆನ ಮಾತುರ್ದಕ್ಷಿಣ
ಸ್ತನಂಪ್ರಕ್ಷಾಳ್ಯ—" ಓಂ ಇಮಂಕುಮಾರೋ ಜರಾಂಧಯತು ದೀರ್ಘ
ಮಾಯುಃ ಪ್ರಜೀವಸೆ॥ಅಸ್ಯೈಸ್ತನೌ ಪ್ರಯುಂಜಾನಾಂ ಆಯುರ್ವರ್ಚೋ

" ಓಂಮೇಧಾಂತೆ... ಸ್ವಜಾ "— ಎಂಬುವ ಮಂತ್ರವನ್ನು ಜಪಿಸಿ, ಪುನಃ ಆ ಚಿನ್ನವನ್ನು ಆ ಮಗುವಿನ ಎಡಗಿವಿಯ ಸಮೀಪದಲ್ಲಿರಿಸಿ ಹಿಂದೆ ಹೇಳಿದ—"ಓಂ ಮೇಧಾಂ...ಸ್ವಜಾ"— ಎಂಬುವ ಮಂತ್ರವನ್ನೇ ಜಪಿಸಬೇಕು. ॥ ಅನಂತರದಲ್ಲಿ ಶಿಶುವಿನ ಭುಜಗಳನ್ನು ಒಂದೇ ಕಾಲದಲ್ಲಿ—"ಅಶ್ಮಾಭವಪರಶುರ್ಭವ...ಇಂದ್ರಶಿಪ್ರಿನ್" ಎಂಬುವ ಮೂರು ಮಂತ್ರಗಳನ್ನುಚ್ಚರಿಸಿದ ಅನಂತರದಲ್ಲಿ ಭುಜಗಳನ್ನು ಮುಟ್ಟಬೇಕು. ॥ ಬಳಿಕ ರಕ್ಷಣೆಗೂ ಆಯುಷ್ಯಕ್ಕೂ ಅಭಿವೃದ್ಧಿಗೋಸ್ಕರವಾಗಿಯೂ—"ಓಂಅಂಗಾದಂಗಾತ್ಸಂಭ...ಶರದಶ್ಶತಂ"—ಎಂಬುವ ಮಂತ್ರವನ್ನುಚ್ಚರಿಸಿ ಆ ಮಗುವಿನ ಮಸ್ತಕವನ್ನು ಮೂರುವೇಳೆ ಆಘ್ರಾಣಿಸಬೇಕು (ಮೂಸಬೇಕು) ॥ ಅನಂತರ ಮಗುವಿಗೆ ಕಟ್ಟತಕ್ಕ ಹೆಸರಿನ ದೈವವನ್ನು ಸ್ಮರಿಸಬೇಕು ॥ ॥ ಬಳಿಕ ಸುವರ್ಣದೊಡನೆ ಕೂಡಿದ ನೀರಿನಿಂದ ತಾಯಿಯ ಸ್ತನಗಳನ್ನು ತೊಳೆದು— "ಓಂಇಮಂಕುಮಾರೊ...ಯಶೋಬಲಂ"— ಎಂಬುವ ಮಂತ್ರವನ್ನುಚ್ಚರಿಸುತ್ತಾ ತಾಯಿಂದ ಮಗುವಿಗೆ ಸ್ತನ್ಯಪಾನವಂ ಮಾಡಿಸಬೇಕು. ॥ ಅನಂತರ ಮಾಹೇಶ್ವರರುಗಳ

ಯಶೋಬಲಂ ” ಇತಿ ಮಂತ್ರೇಣ ಮಾತಾ ಕುಮಾರಂ ಪಾಯಯಿತ್ವಾ ಮಾಹೇಶ್ವರೇಭ್ಯೋ ಗೋಭೂತಿಲಹಿರಣ್ಯಾದಿಕ ಮನ್ನವರ್ಜಿತಂ ಯಥಾ ಶಕ್ತಿ ದತ್ವಾ ಮಾಹೇಶ್ವರೈರಾಶಿಷೊ ವಾಚಯೇತ್ ॥ ಜನ್ಮಲಗ್ನೆದುಷ್ಟ ಸ್ಥಿತಗ್ರಹಜನಿತಪೀಡಾನಿವೃತ್ತಯೆ ತತ್ಪ್ರೀತ್ಯರ್ಥಂ ವಿಶೇಷತೋದಕ್ಷಿಣಾ ದೇಯಾ ॥—“ತಮರ್ವಂತಮಿತಿ ಪಂಚಾನಾಂ ಗೌತಮೊ ವಾಮದೆವೊಽ ಗ್ನಿರ್ಗಾಯತ್ರೀ।ಆಶೀರ್ವಾದೆವಿನಿಯೋಗಃ॥ “ ಓಂತಮರ್ವಂತಂ ನಸಾನ ಸಿಮರುಷಂ ನದಿವಃಶಿಶುಂ । ಮರ್ಮೃಜ್ಯಂತೆದಿವೆದಿವೆ ॥೧॥ ಬೋಧದ್ಯ ನ್ಮಾಹರಿಭ್ಯಾಂ ಕುಮಾರಃ ಸಾಹದೆವ್ಯಃ । ಅಚ್ಛಾನಹೂತಉದರಂ ॥೨॥ ಉತತ್ಯಾಯಜತಾಹರೀಕುಮಾರಾತ್ಸಾಹದೆವ್ಯಾತ್ । ಪ್ರಯತಾಸದ್ಯಆದ ದೆ ॥೩॥ ಏಷವಾಂದೆವಾ ವಶ್ವಿನಾಕುಮಾರಃ ಸಾಹದೆವ್ಯಃ ದೀರ್ಘಾಯು ರಸ್ತು ಸೋಮಕಃ ॥೪॥ ತಂಯುವಂ ದೆವಾವಶ್ವಿನಾಕುಮಾರಂ ಸಾಹದೆ ವ್ಯಂ। ದೀರ್ಘಾಯುಷಂ ಕೃಣೊತನ ॥೫॥ ”—ಇತಿಪಂಚಭಿಃಮಂತ್ರೈರಾ ಶಿಷಃ॥ ಪಿತರಿಗ್ರಾಮಾಂತರಂಗತೆ ಪಿತೃವ್ಯಾದಿಗೋತ್ರಜೊ ಜ್ಯೇಷ್ಠ ಕ್ರಮೆ ಣೇದಂ ಕುರ್ಯಾತ್ ॥ ಇತಿವೈದಿಕೀಸರಣಿಃ॥ ತತಃಆಚಾರ್ಯಃಗಾಯತ್ರ್ಯಾ ತ್ರಿವಾರಂ ಶಿಶೋಃ ತತ್ಕಾಲಪೂಜಿತರುದ್ರಕಲಶೋದಕೆನ ಮಾರ್ಜನಂ ಕು ರ್ಯಾತ್ । ಅಥಶಿಶೋಃಲಿಂಗಜಂಗಮಪಾದೋದಕಪ್ರಸಾದಪ್ರಾಶನಾನಂತ ರಮಪುತ್ರವಾ—“ ಯಜ್ಞೋಪವೀತಂಪರಮಂ ಪವಿತ್ರಂ ಪ್ರಜಾಪತೆ ರ್ಯ

ಗೋಸ್ಕರ ಅನ್ನವಲ್ಲದೆ ಇರತಕ್ಕ ಗೋದಾನ ಭೂದಾನ ತಿಲದಾನ ಸುವರ್ಣದಾನಾದಿ ಗಳನ್ನು ಯಥಾಶಕ್ತಿಯಾಗಿ ಮಾಡಿ ಮಾಹೇಶ್ವರರುಗಳಿಂದ ಆಶೀರ್ವಾದಮಂತ್ರಗ ಳನ್ನು ಹೇಳಿಸಬೇಕು.— “ ಓಂತಮರ್ವಂತಂ......ಯುಷಂಕೃಣೊತನ ॥೫॥ ” ಎಂಬುವ ಈ ಐದು ಮಂತ್ರಗಳೇ ಆಶೀರ್ವಾದ ಮಂತ್ರಗಳು. ॥ ಒಂದುವೇಳೆ ಏನಾ ದರೂ ಜನ್ಮಲಗ್ನದಲ್ಲಿ ಗ್ರಹಗಳು ದುಷ್ಟವಾಗಿದ್ದಲ್ಲಿ ಆ ಬಾಧೆಯನ್ನು ಪರಿಹರಿಸುವು ಕ್ಕೋಸ್ಕರವಾಗಿ ವಿಶೇಷವಾಗಿ ದಕ್ಷಿಣೆಯನ್ನು ಕೊಡಬೇಕು. ॥ ತಂದೆಯೇನಾ ದರೂ ಮತ್ತೊಂದು ಗ್ರಾಮಕ್ಕೆ ಹೋಗಿದ್ದಪಕ್ಷದಲ್ಲಿ ಆ ತಂದೆಯೊಡನೆ ಹುಟ್ಟಿದವನ ಗೋತ್ರದಲ್ಲಿ ಹುಟ್ಟಿದವರೊಳಗೆ ಜ್ಯೇಷ್ಠಕ್ರಮದಿಂದ ಈ ಕಾರ್ಯವನ್ನು ಮಾಡಬೇ ಕು. ಈಪ್ರಕಾರವಾಗಿಯೇ ವೈದಿಕಮಾರ್ಗವು. ಈ ರೀತಿಯಾಗಿ ಶ್ರೀಗುರುವು ತಂ ದೆಯಿಂದ ಜಾತಕರ್ಮವನ್ನು ಮಾಡಿಸಿ ಬಳಿಕ ತಾನು ಗಾಯತ್ರೀ ಮಂತ್ರವನ್ನುಚ್ಚರಿ ಸುತ್ತಾ ತತ್ಕಾಲಪೂಜಿತರುದ್ರಕಲಶೋದಕದಿಂದ ಶಿಶುವಿಗೆ ಮೂರುವೇಳೆ ಪ್ರೋಕ್ಷಿಸಿ,

ತ್ಸಹಜಂ ಪುರಸ್ತಾತ್ । ಆಯುಷ್ಯಮಗ್ರ್ಯಂಪ್ರತಿಮುಂಚಶುಭ್ರಂ ಯಜ್ಞೋಪವೀತಂ ಬಲಮಸ್ತುತೇಜಃ ”—ಇತಿ ಮಂತ್ರೇಣ ಶಿಶೋರ್ವಕ್ಷ್ಯಮಾಣೇಷು ಷಡನ್ಯತಮಸ್ಥಾನೇಷುಲಿಂಗಂಬಧ್ನೀಯಾತ್ ॥ ಇತಿಜಾತಕರ್ಮಸಂಸ್ಕಾರಃ ॥

—ಅಥನಾಮಕರಣವಿಧಿಃ—

ಜನ್ಮತಏಕಾದಶೇ ದ್ವಾದಶೇವಾ ಪಿತಾ ನಾಮಕುರ್ಯಾತ್ । ಜಾತಕರ್ಮಾನಂತರಂವಾ ಕಾರ್ಯಂ । ಏಕಸ್ಮಿನ್ ಶುಭೇದಿನೇವಾ ಕಾರ್ಯಂ। ನಿಯತಕಾಲೇಪಿ ವಿಷ್ಟಿವೈಧೃತಿವ್ಯತೀಪಾತಗ್ರಹಣಸಂಕ್ರಾಂತ್ಯಮಾವಾಸ್ಯಾದಿದಿನೇಷುನಕಾರ್ಯಂ। ನಿಯತಕಾಲೇಕ್ರಿಯಮಾಣೇ ಗುರುಶುಕ್ರಾಸ್ತಬಾಲ್ಯವಾರ್ಧಕವಕ್ರಾತಿಚಾರಮಲಮಾಸಾದಿನಿಷೇಧೋನಾಸ್ತಿ ॥ ನಿಯತಕಾಲಾತಿಕ್ರಮೇತು ಜ್ಯೋತಿಶ್ಶಾಸ್ತ್ರೋಕ್ತಶುಭೇಕಾಲೇಕಾರ್ಯಂ ।ಸರ್ವಥಾಪಿತ್ರ

ಅನಂತರ ಶಿಶುವಿಗೆ ಲಿಂಗಜಂಗಮರ ಪಾದೋದಕಪ್ರಸಾದಗಳನ್ನು ಕೊಟ್ಟನಂತರ— “ಯಜ್ಞೋಪವೀತಂ...ಮಸ್ತು ತೇಜಃ”— ಎಂಬುವ ಮಂತ್ರವನ್ನುಚ್ಚರಿಸುತ್ತಾ ಮುಂದೆ ಹೇಳತಕ್ಕ ಆರುಸ್ಥಾನಂಗಳಲ್ಲಿ ಲಿಂಗವನ್ನು ಕಟ್ಟಬೇಕು. ॥ ಈ ಪ್ರಕಾರವಾಗಿ ಜಾತಕರ್ಮಸಂಸ್ಕಾರವು.

ಅನಂತರ ನಾಮಕರಣ ವಿಧಿಯು.



ಶಿಶುವು ಹುಟ್ಟಿದ ಹನ್ನೊಂದನೆಯ ದಿನದಲ್ಲಾಗಲೀ ಅಥವಾ ಹನ್ನೆರಡನೆಯ ದಿನದಲ್ಲಾಗಲೀ ತಂದೆಯು ನಾಮಕರಣವನ್ನು ಮಾಡಬೇಕು. ಶಿಶುವು ಹುಟ್ಟಿದ ಕಾಲದಲ್ಲಿ ಜಾತಕರ್ಮವನ್ನು ಮಾಡದಿದ್ದ ಪಕ್ಷದಲ್ಲಿ ಈ ದಿನವೇ ಮೊದಲು ಜಾತಕರ್ಮವನ್ನು ಮಾಡಿ ಅನಂತರ ನಾಮಕರಣವನ್ನು ಮಾಡಬೇಕು. ಆ ನಿಯತಕಾಲದಲ್ಲಿಯೂ ನಾಮಕರಣವನ್ನು ಮಾಡದಿದ್ದ ಪಕ್ಷದಲ್ಲಿ ಯಾವುದಾದರೊಂದು ಶುಭದಿನದಲ್ಲಾದರೂ ಮಾಡಬೇಕು. ನಾಮಕರಣವನ್ನು ಮಾಡುವ ಹನ್ನೊಂದು ಹನ್ನೆರಡನೆಯ ದಿನಗಳಲ್ಲಿಯೂ ಕೂಡ- ವಿಷ್ಟಿ, ವೈಧೃತಿ, ವ್ಯತೀಪಾತ, ಗ್ರಹಣ, ಸಂಕ್ರಾಂತಿ, ಅಮಾವಾಸ್ಯೆ, ಇತ್ಯಾದಿಗಳಾಗಿದ್ದ ಪಕ್ಷದಲ್ಲಿ ಮಾಡಕೂಡದು. ಮತ್ತೂ ನಾಮಕರಣವನ್ನು ಮಾಡುವ ನಿಯತದಿನಗಳಲ್ಲಿ ಗುರು ಶುಕ್ರರುಗಳ ಅಸ್ತನಿಷೇಧ, ಬಾಲ್ಯನಿಷೇಧ, ವಾರ್ಧಕನಿಷೇಧ, ವಕ್ರಾತಿಚಾರನಿಷೇಧ, ಮಲಮಾಸಾದಿನಿಷೇಧ— ಇವುಗಳಿಲ್ಲ. ॥ ನಾಮಕರಣವನ್ನು ಮಾಡುವ ನಿಯತ ದಿವಸಗಳು ಅತಿಕ್ರಮಿಸಿದ ಪಕ್ಷದಲ್ಲಿ ಜ್ಯೋತಿಶ್ಶಾಸ್ತ್ರೋಕ್ತವಾದ ಒಂದು ಶುಭಕಾಲದಲ್ಲಿ ಮಾಡಬೇಕು. ಯಾವಾಗ ನಾಮಕರಣ

ಪೂರ್ವಾಹ್ಣ ಶಸ್ತಃ॥ಉಕ್ತಕಾಲೇ ಶಿಶೋರ್ನಾಮಚಿಕೀರ್ಷುರ್ಮಾಹೇಶ್ವ ರಾನಾಹೂಯ ಪೂರ್ವೇದ್ಯುಸ್ತದಹರೇವವಾ ಸ್ವಸ್ತಿವಾಚನಮುಪಕ್ರಮ್ಯ ಪುಣ್ಯಾಹತ್ರಯಮುಕ್ತ್ವಾ ವಾಚಯಿತ್ವಾನಾಂದೀಸಮಾರಾಧನಾರ್ಥಂವಿ ಶಿಷ್ಟಾನ್ಮಾಹೇಶ್ವರಾನ್ ಭೋಜಯೇತ್॥ಕರಿಷ್ಯಮಾಣಂನಾಮಚತುರ್ಥ್ಯಾಂ ತಮುಕ್ತ್ವಾತ್ರಿರೇತನ್ನಾಮ್ನೇಸ್ವಸ್ತಿಭವಂತೋಬ್ರುವಂತ್ವಿತ್ಯುಕ್ತೇ ಮಾ

ವನ್ನು ಮಾಡಬೇಕಾದರೂ ಪೂರ್ವಾಹ್ಣದಲ್ಲಿಯೇ ಮಾಡಬೇಕು. ॥ ಪೂರ್ವೋಕ್ತಕಾ ಲಗಳಲ್ಲಿ ಶಿಶುವಿಗೆ ನಾಮಕರಣವನ್ನುಮಾಡತಕ್ಕವನು ಆ ಹಗಲಲ್ಲೇ ಮಾಹೇಶ್ವರರನ್ನು ಕರೆದು, ಆ ದಿನದ ಪೂರ್ವದ ಹಗಲಲ್ಲೇ ಸ್ವಸ್ತಿವಾಚನವನ್ನು ಮಾಡಿ, ಮಾಹೇಶ್ವರ ರಿಂದ ಮೂರುಬಾರಿ ಪುಣ್ಯಾಹವಾಚನಗಳನ್ನು ಮಾಡಿಸಿ, ನಾಂದೀಸಮಾರಾಧನೆಯನ್ನು ಮಾಡಿ, ಆಕರ್ಮವೆಲ್ಲಾ ಪೂರ್ತಿಯಾದನಂತರ ನಾಂದೀ ಸಮಾರಾಧನೆಯ ಪೂರ್ತಿಗೋ ಸ್ಕರ ಸಮಸ್ತ ಮಾಹೇಶ್ವರರನ್ನು ಭೋಜನದಿಂದ ತೃಪ್ತಿಪಡಿಸಬೇಕು. ॥ ಕರ್ತೃವು ಶಿಶುವಿಗೆ ಮಾಡತಕ್ಕ -ಶಿವ- ಎಂಬ ನಾಮವನ್ನು -ಶಿವಾಯ- ಎಂಬದಾಗಿ ಚತುರ್ಥೀ ವಿಭಕ್ತ್ಯಂತವಾಗಿ ಮಾಡಿಕೊಂಡು, ಮಾಹೇಶ್ವರರಿಗೆ ನಮಸ್ಕರಿಸಿ, ಎಲೈ ಮಾಹೇಶ್ವ ರರುಗಳಿರಾ! ಈಗ ನೀವುಗಳು -ಶಿವಾಯೈತನ್ನಾಮ್ನೆಸ್ವಸ್ತಿ- (ಅಂದರೆ ಶಿವ ಎಂಬ ಈ ನಾಮಕ್ಕೆ ಮಂಗಳವು) ಎಂಬದಾಗಿ ಮೂರುವೇಳೆ ಹೇಳಿರಿ ಎಂದು ವಿಜ್ಞಾಪಿಸಿ, ಬಳಿಕ ತಾನು ಮೂರುವೇಳೆ ಹೇಳಿ, ಮಾಹೇಶ್ವರರಿಂದಲೂ ಪ್ರತಿಯಾಗಿ ಮೂರುವೇಳೆ ಹೇಳಿಸಿ (ಅಂದರೆ ತಾನೊಂದುವೇಳೆ ಶಿವಾಯೈತನ್ನಾಮ್ನೆಸ್ವಸ್ತಿ ಎಂದು ಹೇಳಿ, ಬಳಿಕ ಅದಕ್ಕೆ ಪ್ರತಿಯಾಗಿ ಒಂದುವೇಳೆ ಮಾಹೇಶ್ವರರಿಂದಲೂ ಶಿವಾಯೈತನ್ನಾಮ್ನೆ ಸ್ವಸ್ತಿ ಎಂದು ಹೇಳಿಸಿ, ಇದೇಕ್ರಮದಂತೆ ಮತ್ತೆರಡುವೇಳೆ ಹೇಳಿ, ಹೇಳಿಸಿ) ಉಳಿದ ಸ್ವಸ್ತಿವಾಚನವನ್ನೆಲ್ಲಾ ಪೂರ್ತಿಮಾಡಿ, ॥ ಎಲೈ ಮಾಹೇಶ್ವರರುಗಳಿರಾ!—ಕುಮಾರ ಸ್ಯೇದಂನಾಮಾಹಂವಿದಧಾಮಿ—(ಅಂದರೆ ಕುಮಾರನಿಗೆ ನಾನು ಈ ನಾಮವನ್ನು ಧರಿ ಸುತ್ತೇನೆ) ಎಂಬದಾಗಿ ವಿಜ್ಞಾಪಿಸಿ, ಮಾಹೇಶ್ವರರಿಂದ-ವಿಧೀಯತಾಂ- (ಅಂದರೆ ಮಾ ಡಲ್ಪಡಲಿ) ಎಂದು ಅನುಮೋದಿಸಲ್ಪಟ್ಟವನಾಗಿ, ಬಳಿಕ ದೇಶಕಾಲಗಳನ್ನು ಹೇಳಿ, ಶ್ರೀ ಪರಮೇಶ್ವರನು ಈ ಶಿಶುವಿಗೆ ಬೀಜಗರ್ಭದಿಂದ ಉತ್ಪನ್ನವಾದ ಪಾಪವನ್ನು ನಿವಾ ರಣೆಮಾಡಿ ಆಯುಷ್ಯವನ್ನು ಅಭಿವೃದ್ಧಿಯಾಗಿ ನಡೆಯಿಸಲಿ ಎಂದು ಶ್ರೀ ಪರಮೇಶ್ವ ರನ ಪ್ರೀತಿಯನ್ನು ಪಡೆಯುವುದಕ್ಕಾಗಿ ನಾಮಕರಣಕರ್ಮವನ್ನು ಮಾಡುತ್ತೇನೆ, ಎಂದು ಸಂಕಲ್ಪಿಸಿ, ದೇವತಾತ್ರಯನಾಮವನ್ನೂ ಪಿತ್ರಾದಿ ನಾಮವನ್ನೂ ಧರಿಸಬೇ ಕು. ದೇವತಾತ್ರಯನಾಮವು ಪಿತ್ರಾದಿ ನಾಮವು ಎಂದರೆ—ನನ್ನ ಕುಲಕ್ಕೆ ದೇವತೆ ಯಾದ ಶಿವನ ಭಕ್ತನು (ಅಂದರೆ ಶಿವಭಕ್ತನು) ಎಂಬುವುದೇ ಒಂದನೆಯ ನಾಮವು ಬಳಿಕ ಶಿಶುವು ಹುಟ್ಟಿದ ಮಾಸ ನಾಮವನ್ನು ಮಾಡಬೇಕು. ಹೇಗೆಂದೊಡೆ—

ಹೇಶ್ವರೈರೇತನ್ನಾಮ್ನೆ ಸ್ವಸ್ತಿ ಇತಿ ತ್ರಿಃ ಪ್ರತ್ಯುಕ್ತೆ।ಶೇಷಂ ಸ್ವಸ್ತಿವಾಚನಂ ಸಮಾಪ್ಯ। ಇದಮಾರ್ಯಾಃಕುಮಾರಸ್ಯನಾಮಾಹಂವಿದಧಾಮೀತಿಮಾಹೇಶ್ವರಾನನುಜ್ಞಾಪ್ಯ। ತ್ರೈವಿರ್ಧಿಯಯತಾಮಿತ್ಯನುಮೋದಿತೋ ದೇಶಕಾಲೌ ನಿರ್ದಿಶ್ಯ।ಅಸ್ಯಶಿಶೋರ್ಬೀಜಗರ್ಭಸಮುದ್ಭವೈನೋನಿಬರ್ಹಣಾಯುರಭಿವೃದ್ಧಿವ್ಯವಹಾರಸಿದ್ಧಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ನಾಮಕರಣಂ ಕರಿಷ್ಯೇ-ಇತಿಸಂಕಲ್ಪ್ಯ, ದೇವತಾತ್ರಯಂಪಿತ್ರಾದಿನಾಮಕುರ್ಯಾತ್. ತಚ್ಚ—ಯಥಾಚಾರಂ ಸ್ವಕುಲದೇವತಾಭಕ್ತ ಇತಿನಾಮಕೃತ್ವಾ, ಜನ್ಮಕಾಲೀನಮಾಸನಾಮಕುರ್ಯಾತ್. ತಚ್ಚ-"ಶಿವೋಮಹೇಶ್ವರೋರುದ್ರಶ್ಶಂಕರಶ್ಚಂದ್ರಶೇಖರಃ। ಗಂಗಾಧರಃಪಶುಪತಿಃಪಿನಾಕೀಗಿರಿಶೋಮೃಡಃ॥ ಮೃತ್ಯುಂಜಯೋವಿರೂಪಾಕ್ಷೋಮಾಸನಾಮಾನ್ಯನುಕ್ರಮಾತ್"—ಅತ್ರಯಥಾಚಾರಂಚೈತ್ರಾದಿಮಾರ್ಗಶೀರ್ಷಾದಿರ್ವಾಕ್ರಮಃ ॥ ತತೋಽಭಿವಾದನೀಯಂ ನಾಮ ಉಪಾಂಶು ಕುರ್ಯಾತ್. ತಚ್ಚ-ದೀಕ್ಷಾಪರ್ಯಂತಂ ಮಾತಾಪಿತರಾವೇವಜಾನೀಯಾತಾಂ, ದೀಕ್ಷಾಕಾಲೇಚಾನೇನನಾಮ್ನಾಽ

ಶಿವನು, ಮಹೇಶ್ವರನು, ರುದ್ರನು, ಶಂಕರನು, ಚಂದ್ರಶೇಖರನು, ಗಂಗಾಧರನು, ಪಶುಪತಿಯು, ಪಿನಾಕಿಯು, ಗಿರಿಶನು, ಮೃಡನು, ಮೃತ್ಯುಂಜಯನು, ವಿರೂಪಾಕ್ಷನು-- ಎಂಬ ಈ ಹನ್ನೆರಡು ನಾಮಗಳನ್ನು ಪೂರ್ವಾಚಾರಕ್ರಮದಂತೆ ಚೈತ್ರವೇ ಮೊದಲಾದ ಹನ್ನೆರಡು ಮಾಸಗಳಿಗಾಗಲಿ ಅಥವಾ ಮಾರ್ಗಶಿರವೇ ಮೊದಲಾದ ಹನ್ನೆರಡು ಮಾಸಗಳಿಗಾಗಲಿ ಸರಿಹೋಲಿಸಿಕೊಂಡು (ಅಂದರೆ ಚೈತ್ರಾದಿಕ್ರಮದಂತೆ ಚೈತ್ರಕ್ಕೆ ಶಿವನು, ವೈಶಾಖಕ್ಕೆ ಮಹೇಶ್ವರನು ಎಂದೂ, ಮಾರ್ಗಶೀರ್ಷಾದಿಕ್ರಮದಂತೆ ಮಾರ್ಗಶಿರಕ್ಕೆ ಶಿವನು, ಪುಷ್ಯಕ್ಕೆ ಮಹೇಶ್ವರನು, ಮಾಘಕ್ಕೆ ರುದ್ರನು, ಫಾಲ್ಗುಣಕ್ಕೆ ಶಂಕರನು ಎಂದೂ ಸರಿಹೋಲಿಸಿಕೊಂಡು, ಶಿಶುವು ಯಾವ ಮಾಸದಲ್ಲಿ ಹುಟ್ಟಿರುವುದೊ ಆ ಮಾಸಕ್ಕೆ ಯಾವ ನಾಮವು ಸರಿಹೋಲುವುದೋ ಆ ನಾಮವೇ ಎರಡನೆಯದಾದ ಮಾಸನಾಮವು ॥೭॥ ಅನಂತರ ಕರೆಯತಕ್ಕ ನಾಮವನ್ನು ರಹಸ್ಯವಾದದ್ದನ್ನಾಗಿ ಮಾಡಿಕೊಂಡು ಅದನ್ನೇ ಮೂರನೆಯದನ್ನಾಗಿ ಮಾಡಬೇಕು. ಆ ಕರೆಯತಕ್ಕ ನಾಮವನ್ನಾದರೂ ದೀಕ್ಷಾಪರ್ಯಂತವಾಗಿ ತಾಯಿತಂದೆಗಳುಮಾತ್ರವೇ ತಿಳಿದಿರಬೇಕು. ಮತ್ತೂ ತಾಯಿತಂದೆಗಳು ಕುಮಾರನನ್ನು ಕುರಿತು- ಅಯ್ಯಾ ಕುಮಾರನೇ! ದೀಕ್ಷಾಕಾಲದಲ್ಲಿ ನೀನು ಈ ಹೆಸರನ್ನು ಹೇಳಿಕೊಂಡು ನಮಸ್ಕರಿಸು ಎಂದು ಹೇಳಬೇಕು. ಇದೇ ಮೂರನೆಯದು ॥೩॥ ಅಂದರೆ ಶಿವಭಕ್ತ, ಶಿವ, ಲಿಂಗ, ಎಂಬ ಈ ಮೂರುನಾಮಗಳು; ಇದಕ್ಕೆ ದೇವತಾತ್ರಯವೆಂದು ಹೆಸರು.॥ ಅನಂತರ ಪುರುಷವಾಚಕವಾದದ್ದಾಗಿಯೂ

ಛಿವಾದಯೇತಿ ಕುಮಾರಂಪ್ರತಿ ವಾಚ್ಯಂ। ಇತಿದೇವತಾತ್ರಯಂ॥ ತತಃಪುರುಷವಾಚಿ ಸ್ವೇಷ್ಟಂನಾಮೇತಿ ಪಿತ್ರಾದಿನಾಮ ಕುರ್ಯಾತ್-ಅತ್ರಾಯಂ ಶಿಷ್ಟಾಚಾರಃ-ತಂಡುಲಾನ್ಕಾಂಸ್ಯಾದಿಪಾತ್ರೇಪ್ರಸಾರ್ಯ,ತದುಪರಿಸುವರ್ಣ ಶಲಾಕಯಾ ಕುಲದೇವತಾಪ್ರಯುಕ್ತ ಮಾದೌ ಅಮುಕಭಕ್ತ ಇತಿನಾಮ ಲೇಖ್ಯಂ।ತತೋಮಾಸನಾಮ। ತತೋಅವಕಡಾಹಚಕ್ರಾಖ್ಯಜ್ಯೋತಿಶ್ಶಾಸ್ತ್ರೋಕ್ತಚಕ್ರಾನುಸಾರೇಣ ಜನ್ಮನಕ್ಷತ್ರಪಾದಪ್ರಯುಕ್ತಾಕ್ಷರಾದಿನಾಮ। ತತೋವ್ಯಾವಹಾರಿಕಂಸ್ವೇಷ್ಟಂನಾಮ॥ ಇತಿಚತುಷ್ಟಯಂ ಲಿ

ತನಗೆ ಬೇಕಾದದ್ದಾಗಿಯೂ ಯಾವನಾಮವಿರುವುದೊ ಆ ನಾಮವೇ ಪಿತ್ರಾದಿನಾಮವೆನಿಸಿಕೊಳ್ಳುವುದು.ಇದನ್ನೇ ನಾಲ್ಕನೆಯ ನಾಮವನ್ನಾಗಿ ಮಾಡಬೇಕು. ಆದರೆ ಇಲ್ಲಿ-

ಇದೇ ಶಿಷ್ಟಾಚಾರವು:—

ಕರ್ತೃವು ಅಕ್ಕಿಯನ್ನು ಕಂಚು ಮೊದಲಾದ ಲೋಹದ ಪಾತ್ರೆಯಲ್ಲಿ ಹರಡಿ ಅದರ ಮೇಲೆ ಚಿನ್ನದ ಕಡ್ಡಿಯಿಂದ ಕುಲದೇವತಾಪ್ರಯುಕ್ತವಾದ ಈ ದೇವರ ಭಕ್ತನು (ಶಿವಭಕ್ತನು) ಎಂಬ ನಾಮವನ್ನು ಮೊದಲು ಬರೆಯತಕ್ಕದ್ದು ॥ ಅನಂತರ ಅದರ ಕೆಳಗೆ ಮಾಸನಾಮವನ್ನು (ಶಿವ ಎಂಬ ನಾಮವನ್ನು) ಬರೆಯತಕ್ಕದ್ದು ॥ ಅನಂತರ ಅದರ ಮುಂದೆ ಅವಕಡಾಹಚಕ್ರನಾಮಕವಾದ ಜ್ಯೋತಿಶ್ಶಾಸ್ತ್ರದಲ್ಲಿ ಹೇಳಲ್ಪಟ್ಟ ಚಕ್ರಕ್ರಮದಿಂದ ಜನ್ಮನಕ್ಷತ್ರದ ಪಾದಪ್ರಯುಕ್ತವಾದ ಅಕ್ಷರಗಳ ನಾಮವನ್ನು "ಲೀಲೂಲೇಲೋಭರಣ್ಯಪಿ" ಎಂಬ ಕ್ರಮದಂತೆ "ಲಿಂಗ" ಎಂಬ ನಾಮವನ್ನು) ಬರೆಯತಕ್ಕದ್ದು ॥ ಅನಂತರ ವ್ಯಾವಹಾರಿಕವಾಗಿ ತನಗೆ ಬೇಕಾದ ನಾಮವನ್ನು (ಅಂದರೆ-ಶರಣಪ್ಪ ಎಂಬ ನಾಮವನ್ನು) ಬರೆಯತಕ್ಕದ್ದು ॥ ಈಪ್ರಕಾರವಾಗಿ ನಾಲ್ಕು ನಾಮಗಳನ್ನು ಬರೆಮುಕೊಂಡು ನಾಮದೇವತಾಭ್ಯೋನಮಃ ಎಂಬದಾಗಿ ಆ ಲಿಖಿತನಾಮಗಳನ್ನು ಪೂಜಿಸಿ, ಅನಂತರ ನೀನು "ಶಿವ" ಎಂಬದಾಗಿ ಹೆಸರುಳ್ಳವನಾಗಿದ್ದೀಯೆ ಎಂದು ತನ್ನ ದಕ್ಷಿಣಪಾರ್ಶ್ವದಲ್ಲಿ ತಾಯ ತೊಡೆಯಮೇಲಿರುವ ಶಿಶುವಿನ ಬಲಗಿವಿಯಲ್ಲಿ ಹೇಳಿ "ಓಂ ಅಂಗಾದಂಗಾ....ಶರದಶ್ಶತಂ" ಎಂಬ ಮಂತ್ರವನ್ನುಚ್ಚರಿಸಿ, ಅನಂತರದಲ್ಲಿ ಮಾಹೇಶ್ವರರಿಂದ "ನಾಮಸುಪ್ರತಿಷ್ಠಿತಮಸ್ತು" (ಅಂದರೆ ನಾಮವು ಚೆನ್ನಾಗಿ ಪ್ರತಿಷ್ಠಿತವಾಗಲಿ) ಎಂದು ಹೇಳಲ್ಪಡುತ್ತಿರಲಿಕ್ಕಾಗಿ ತಾನು ಶಿಶುವನ್ನು ನೋಡಿ,— ಎಲೈ ಶಿಶುವೇ! ನೀನು ಈ ಹೆಸರಿನಿಂದ ಈ ಹೆಸರುಳ್ಳವನಾಗಿದ್ದೀಯೆ, ಇನ್ನು ನಿನ್ನನ್ನು ಈ ಹೆಸರಿನಿಂದಲೇ ಕರೆಯುತ್ತೇನೆ ಎಂಬದಾಗಿ ಹೇಳಿ, ನಾಮಕರ್ತೃವು ಪ್ರತಿನಾಮವುಳ್ಳ (ಬೇರೆ ಬೇರೆ ಹೆಸರುಳ್ಳ) ಮಾಹೇಶ್ವರರನ್ನು ಕರೆಯಬೇಕು. (ಅಂದರೆ ಶಂಕರಮೂರ್ತಿಗಳೇ ಇನ್ನು ನಾನು ಈ ಕುಮಾರನನ್ನು ಶಿವ ಎಂಬದಾಗಿ

ಖಿತ್ವಾ, ನಾಮದೇವತಾಭ್ಯೋನಮ ಇತಿಸಂಪೂಜ್ಯ। ಅಮುಕನಾಮ್ನಾತ್ವಮಮುಕೋऽಸೀತಿ ಸ್ವದಕ್ಷಿಣಸ್ಥಮಾತುರುತ್ಸಂಗಸ್ಥಸ್ಯ ಶಿಶೋರ್ದಕ್ಷಿಣಕರ್ಣೇ ಕಥಯಿತ್ವಾ, “ಓಂ ಅಂಗಾದಂಗಾತ್ಸಂಭವಸಿಹೃದಯಾದಧಿಜಾಯಸೆ। ಆತ್ಮಾವೈಪುತ್ರನಾಮಾಸಿಸಜೀವಶರದಶ್ಶತಂ”— ಇತ್ಯಾದಿಮಂತ್ರಪಾಠಾಂತೇ ಮಾಹೇಶ್ವರೈರ್ನಾಮಸುಪ್ರತಿಷ್ಠಿತಮಸ್ತ್ವಿತ್ಯುಕ್ತೇ, ಅಮುಕನಾಮ್ನಾ ಅಮುಕನಾಮಾಯಂಭವತೋऽಭಿವಾದಯತೆಇತ್ಯುಕ್ತ್ವಾ । ನಾಮಕರ್ತಾಪ್ರತಿನಾಮಮಾಹೇಶ್ವರಾನಭಿವಾದಯೇತ್ । ತೇಚಾಯುಷ್ಮಾನ್ಭವತ್ವಮುಕ ಇತಿವದೇಯುರಿತಿ ॥ ನಕ್ಷತ್ರನಾಮ್ನೈವಾಭಿವಾದನೀಯಂಗುಪ್ತಂಚೇತ್ಯಪಿವದಂತಿ। ತತಃಕರ್ತಾದೇವತಾಭ್ಯೋಮಾಹೇಶ್ವರೇಭ್ಯಶ್ಚನತ್ವಾ ಯಥಾವಿಭವಂಮಾಹೇಶ್ವರಾನ್ ಭೋಜಯೇದ್ದಕ್ಷಿಣಾಂಚದದ್ಯಾತ್ । ಮಾಹೇಶ್ವರಾಶಿಷಶ್ಚಗ್ರಾಹ್ಯಾಃ । ಕುಮಾರೀಣಾಮಯುಗ್ಮಾಕ್ಷರಂ ಪುಂಸಾಂಯುಗ್ಮಾಕ್ಷರಂ ನಾಮ ಭವತೀತಿ ವಿಶೇಷಃ ॥

॥ ಇತಿನಾಮಕರಣವಿಧಿಃ ॥

ಕರೆಯುತ್ತೇನೆಂದು ಕರೆಯಬೇಕು) ಅದಕ್ಕೆ ಆ ಮಾಹೇಶ್ವರರು ಆಯುಷ್ಮಾನ್ಭವತ್ವಮುಕಃ—(ಅಂದರೆ ಈ ಶಿವನು ಆಯುಷ್ಮಂತನಾಗಲಿ) ಎಂಬದಾಗಿ ಹೇಳಬೇಕು ॥ ನಕ್ಷತ್ರನಾಮವೂ ಕರೆಯತಕ್ಕದ್ದೇ ಆಗಿರುವುದು. ಆದರೂಕೂಡ ಗೋಪ್ಯವಾದದ್ದೆಂಬದಾಗಿ ಹೇಳುತ್ತಾರೆ. ಅನಂತರದಲ್ಲಿ ಕರ್ತೃವು ದೇವರುಗಳಿಗೂ ಮಾಹೇಶ್ವರರುಗಳಿಗೂ ನಮಸ್ಕರಿಸಿ, ಯಥಾವಿಭವದಿಂದ ಮಾಹೇಶ್ವರರನ್ನು ಭೋಜನದಿಂದ ತೃಪ್ತಿಪಡಿಸಿ ದಕ್ಷಿಣೆಯನ್ನುಕೊಟ್ಟು, ಅವರ ಆಶೀರ್ವಾದಗಳನ್ನು ಪಡೆಯಬೇಕು. ॥ಮತ್ತೂ ಇಲ್ಲಿ ಹೆಣ್ಣುಮಕ್ಕಳಿಗೆ ವಿಷಮಾಕ್ಷರಗಳ ನಾಮವನ್ನೂ, ಗಂಡುಮಕ್ಕಳಿಗೆ ಸಮಾಕ್ಷರಗಳ ನಾಮವನ್ನೂ ಧರಿಸಬೇಕೆಂಬ ಇದೇ ವಿಶೇಷಾರ್ಥವು॥

ಈಪ್ರಕಾರವಾಗಿ ನಾಮಕರಣವಿಧಿಯು.



—ಅಥಾನ್ನಪ್ರಾಶನವಿಧಿಃ—

ಜನ್ಮತಃಷಷ್ಠೇಮಾಸೇ ಅಷ್ಟಮೇವಾದಂತೇಷು ಜಾತೇಷುವಾ ಜ್ಯೋತಿಶ್ಶಾಸ್ತ್ರೋಕ್ತತಿಥಿನಕ್ಷತ್ರಾದಿಶುಭೇಕಾಲೇ ಪೂರ್ವಾಹ್ಣೇಪಿತ್ರಾದಿಃ ಶಿಶೋರನ್ನಪ್ರಾಶನಂಕುರ್ಯಾತ್ । ಷಷ್ಠೇಮಾಸೇಚೇತ್ಕ್ರಿಯತೇ ತದಾಗುರುಶುಕ್ರಮೌಢ್ಯಾದಿದೋಷೋ ಅಧಿಕಮಾಸಾದಿದೋಷಶ್ಚ ನಾಸ್ತಿ ॥

ಪೂರ್ವೇದ್ಯುಃಪಿತ್ರಾದಿಃ ಸಭಾರ್ಯಃ ಶಿಶುನಾಸಹ ಮಂಗಲಸ್ನಾನಂಕೃತ್ವಾ, ದೇಶಕಾಲೌಸ್ಮೃತ್ವಾ "ಮಮಾಸ್ಯಶಿಶೋಃಮಾತೃಗರ್ಭಮಲಪ್ರಾಶನಶುದ್ಧ್ಯನ್ನಾದ್ಯಬ್ರಹ್ಮವರ್ಚಸತೇಜಇಂದ್ರಿಯಾಯುರ್ಲಕ್ಷಣಫಲಸಿದ್ಧಿಬೀಜಗರ್ಭಸಮುದ್ಭವೈನೋನಿಬರ್ಹಣದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಅನ್ನಪ್ರಾಶನಾಖ್ಯಂಕರ್ಮಕರಿಷ್ಯೇ" ಇತಿಸಂಕಲ್ಪ್ಯ, ಅಸ್ಯಗೋತ್ರಸ್ಯಶರ್ಮಣಃಕುಮಾರಸ್ಯಅನ್ನಪ್ರಾಶನಕರ್ಮಾಂಗಾನಿಸ್ವಸ್ತಿವಾಚನನಾಂದೀಸಮಾರಾಧನಕರ್ಮಾಣಿಕರೋಮೀತಿಸಂಕಲ್ಪ್ಯ, ಪ್ರಾಣಾನಾಯಮ್ಯ, ಆದೌಸ್ವಸ್ತಿವಾಚನನಾಂದೀಕರ್ಮಾಣಿಕುರ್ಯಾತ್ ॥ ಅಪರೇದ್ಯುಃ ಶಿ

ಅನಂತರ ಅನ್ನಪ್ರಾಶನ ವಿಧಿಯು.



ಶಿಶುವು ಹುಟ್ಟಿದ ಆರನೆಯ ತಿಂಗಳಲ್ಲಾಗಲೀ ಅಥವಾ ಎಂಟನೆಯ ತಿಂಗಳಲ್ಲಾಗಲೀ ಅಥವಾ ಹಲ್ಲುಗಳು ಹುಟ್ಟಿದಮೇಲಾಗಲೀ ಜ್ಯೋತಿಶ್ಶಾಸ್ತ್ರೋಕ್ತ ಶುಭತಿಥಿ ಶುಭನಕ್ಷತ್ರಂಗಳಲ್ಲಿ ತಂದೆಯಾಗಲೀ ಅಥವಾ ಶಿಶುವಿನ ಸಂಬಂಧದ ಬಂಧುಗಳು ಯಾರಾಗಲೀ ಶಿಶುವಿಗೆ ಅನ್ನಪ್ರಾಶನ ಕರ್ಮವನ್ನು ಮಾಡಬೇಕು. ಬಂದುವೇಳೆ ಆರನೆಯ ತಿಂಗಳಲ್ಲಿಯೇ ಅನ್ನಪ್ರಾಶನ ಕರ್ಮವು ಮಾಡಲ್ಪಡುತ್ತಿದ್ದ ಪಕ್ಷದಲ್ಲಿ ಆ ಕಾಲದಲ್ಲಿ—ಗುರುಶುಕ್ರರ ಮೌಢ್ಯಾದಿದೋಷವೂ ಅಧಿಕಮಾಸಾದಿದೋಷವೂ ಇಲ್ಲ. ॥ ಪೂರ್ವದ ದಿನದಲ್ಲಿ ಪತ್ನಿಯೊಡನೆ ಕೂಡಿದ ಕರ್ತೃವು ಶಿಶುವಿನೊಡನೆ ಮಂಗಳಸ್ನಾನವನ್ನು ಮಾಡಿ, ದೇಶಕಾಲಂಗಳನ್ನು ಸ್ಮರಿಸಿ, ಶ್ರೀ ಪರಮೇಶ್ವರನು—ನನ್ನ ಈ ಶಿಶುವಿಗೆ ತಾಯಗರ್ಭದಲ್ಲಿ ಮಲಪ್ರಾಶನವನ್ನು ಮಾಡಿದ ದೋಷವನ್ನು ನಿವಾರಣೆಮಾಡಿ ಶುದ್ಧನನ್ನಾಗಿ ಮಾಡಲಿ. ಮತ್ತೂ ಇನ್ನು ಈ ಅನ್ನವನ್ನು ತಿನ್ನುವುದರಿಂದ ಈ ಶಿಶುವಿನ ವಾಕ್ಕು, ಪಾದ, ಪಾಣಿ, ಪಾಯು, ಉಪಸ್ಥಗಳೆಂಬ ಕರ್ಮೇಂದ್ರಿಯಗಳಿಗೂ-- ತ್ವಕ್ಕು, ಚಕ್ಷು, ಶ್ರೋತ್ರ, ಜಿಹ್ವಾ, ಘ್ರಾಣಗಳೆಂಬ ಜ್ಞಾನೇಂದ್ರಿಯಗಳಿಗೂ ಕೂಡ ಬ್ರಹ್ಮವರ್ಚಸ್ಸಿನ ತೇಜಸ್ಸನ್ನು ಕೊಡಲಿ. ಮತ್ತೂ ಪರಶಿವನು ಈ ಶಿಶುವಿಗೆ ಬೀಜಗರ್ಭದಿಂದ ಉತ್ಪನ್ನವಾದ ಪಾಪವನ್ನು ನಿವಾರಣೆಮಾಡಿ ಆಯುಷ್ಯವನ್ನು ಅಭಿವೃದ್ಧಿ

ಶುಮಲಂಕೃತ್ಯ, ಪ್ರಶಸ್ತಹವ್ಯಂಸಂಸ್ಕೃತ್ಯ, ಸಂಕಲ್ಪ್ಯ, ಪೂಜೋಪಹಾರಾದಿಭಿರಿಷ್ಟದೇವತಾಮಭ್ಯರ್ಚ್ಯ। ತತ್ಪುರತಃ ಸ್ವದಕ್ಷಿಣೆ ಶುಭವಸ್ತ್ರೋಪರಿ ಮಾತುರುತ್ಸಂಗೆ ಪ್ರಾಙ್ಮುಖೋಪವಿಷ್ಟಸ್ಯ ಶಿಶೋಃಪ್ರಥಮಾನ್ನಪ್ರಾಶನಂಕಾರಯೇತ್. ತದ್ಯಥಾ-ದಧಿಮಧುಘೃತಮಿಶ್ರಮನ್ನಂಶುಭೇಭಾಜನೆ ಪ್ರಕ್ಷಿಪ್ಯ॥ ಅನ್ನಪತ ಇತ್ಯಸ್ಯನಲಕೂಬರೊಅನ್ನಪತಿರ್ಜಗತೀ। ಶಿಶೋರನ್ನಪ್ರಾಶನೆವಿನಿಯೋಗಃ—“ ಓಂಅನ್ನಪತೆಽನ್ನಸ್ಯನೋದೇಹ್ಯನಮೀವಸ್ಯಶುಷ್ಮಿಣಃ । ಪ್ರಪ್ರದಾತಾರಂತಾರಿಷಊರ್ಜಂನೋಧೇಹಿದ್ವಿಪದೆಚತುಷ್ಪದೇ”—ಇತಿಮಂತ್ರೇಣಸುವರ್ಣಹಸ್ತೋಅನ್ನಮಾದಾಯಪ್ರಥಮಕವಲಂಪ್ರಾಶಯಿತ್ವಾ,ಯಥೇಷ್ಟಂಭೋಜಯಿತ್ವಾ, ಮುಖಂಪ್ರಕ್ಷಾಳ್ಯ, ಬಾಲಂ

ಯಾಗಿ ನಡೆಯಿಸಲಿ” ಎಂದು ಈ ಫಲಸಿದ್ಧಿಗೋಸ್ಕರ ಶ್ರೀ ಪರಮೇಶ್ವರ ಪ್ರೀತಿಯನ್ನು ಪಡೆಯುವುದಕ್ಕಾಗಿ ಅನ್ನಪ್ರಾಶನ ನಾಮಕವಾದ ಕರ್ಮವನ್ನು ಮಾಡುತ್ತೇನೆ—ಎಂದು ಸಂಕಲ್ಪಿಸಿ, ಮತ್ತೆ ಈ ಗೋತ್ರದ ಈ ಹೆಸರಿನ ಕುಮಾರನ ಅನ್ನಪ್ರಾಶನಕರ್ಮಾಂಗವಾದ ಸ್ವಸ್ತಿವಾಚನವನ್ನೂ, ನಾಂದೀಸಮಾರಾಧನೆಯನ್ನೂ ಮಾಡುತ್ತೇನೆ” ಎಂದು ಸಂಕಲ್ಪಿಸಿ, ಪ್ರಾಣಾಯಾಮವಂ ಮಾಡಿ, ಅನಂತರ ಈ ಗೋತ್ರವುಳ್ಳ ಈ ಹೆಸರುಳ್ಳ ಕುಮಾರನನ್ನು ಅನ್ನಪ್ರಾಶನಕರ್ಮದಿಂದ ಸಂಸ್ಕರಿಸುತ್ತೇನೆ. ಎಂದು ಸಂಕಲ್ಪಿಸಿ ॥ ಬಳಿಕ ಸ್ವಸ್ತಿವಾಚನವನ್ನೂ ನಾಂದೀಸಮಾರಾಧನೆಯನ್ನೂ ಮಾಡಬೇಕು. ಅನಂತರ ಮರುದಿನದ ಹಗಲಿನಲ್ಲಿ ಶಿಶುವನ್ನು ಅಲಂಕರಿಸಿ, ಶುದ್ಧವಾದ ಅನ್ನವನ್ನು ಸಿದ್ಧಪಡಿಸಿಕೊಂಡು ಸಂಕಲ್ಪಿಸಿ, ಪೂಜೋಪಹಾರಾದಿಗಳಿಂದ ಇಷ್ಟದೇವರನ್ನು ಪೂಜಿಸಿ, ಆ ದೇವರ ಮುಂದೆ ತನ್ನ ದಕ್ಷಿಣಪಾರ್ಶ್ವದಲ್ಲಿ ಶುಭವಸ್ತ್ರದಮೇಲೆ ತಾಯಿಯ ತೊಡೆಯಲ್ಲಿ ಪೂರ್ವಮುಖವಾಗಿ ಕುಳಿತಿರುವ ಶಿಶುವಿಗೆ ಮಂತ್ರವನ್ನುಚ್ಚರಿಸುತ್ತಾ ಪ್ರಥಮಾನ್ನಪ್ರಾಶನವನ್ನು ಮಾಡಿಸಬೇಕು. ಅದು ಹೇಗೆಂದೊಡೆ- ಮೊಸರು ಜೇನುತುಪ್ಪ, ತುಪ್ಪ, ಇವುಗಳಿಂದ ಮಿಶ್ರವಾದ ಅನ್ನವನ್ನು ಪರಿಶುದ್ಧವಾದ ಪಾತ್ರೆಯಲ್ಲಿ ಇರಿಸಿಕೊಂಡು, “ಅನ್ನಪತೆ ಇತ್ಯಸ್ಯನಲಕೂಬರೋಋಷಿಃ । ಅನ್ನಪತಿರ್ಜಗತೀಛಂದಃ । ಶಿಶೋರನ್ನಪ್ರಾಶನೆವಿನಿಯೋಗಃ ॥ “ಓಂ ಅನ್ನಪತೆ... ಚತುಷ್ಪದೆ”—ಎಂಬ ಮಂತ್ರವನ್ನುಚ್ಚರಿಸುತ್ತಾ ಆಗಲೂ ತಾನು ಸುವರ್ಣದೊಡನೆ ಕೂಡಿದ ಹಸ್ತವುಳ್ಳವನಾಗಿ ಆ ಕೈಯಲ್ಲಿಯೇ ಅನ್ನವನ್ನು ತೆಗೆದುಕೊಂಡು ಮೊದಲನೆಯ ತುತ್ತನ್ನು ಶಿಶುವಿಗೆ ಉಣ್ಣಿಸಬೇಕು. ಅನಂತರ ಪ್ರತಿಯೊಂದು ತುತ್ತನ್ನೂ ಮಂತ್ರೋಚ್ಚಾರಣೆಯಂ ಮಾಡುತ್ತಲೇ ಶಿಶುವಿಗೆ ಯಥೇಷ್ಟವಾಗಿ ಭೋಜನವಂ ಮಾಡಿಸಿ, ಅನಂತರ ಮುಖವನ್ನು ತೊಳೆದು, ಬಾಲಕನನ್ನು ಭೂಮಿಯಲ್ಲಿ ಕುಳ್ಳಿರಿಸಿ, ಆ ಶಿಶುವಿನ ಮುಂದೆ ಪುಸ್ತಕ, ಶಸ್ತ್ರ, ವಸ್ತ್ರ— ಇವೇ ಮೊದಲಾದ ಆಟದ ಸಾಮಾನುಗಳನ್ನು

ಭೂಮಾವುಪವೇಶ್ಯ, ತದಗ್ರೆ ಪುಸ್ತಕಶಸ್ತ್ರವಸ್ತ್ರಾದಿಶಿಲ್ಪಾನಿವಿನ್ಯಸ್ಯ, ಜೀವಿಕಾಪರೀಕ್ಷಾಂಕುರ್ಯಾತ್–ಶಿಶುಃಸ್ವೇಚ್ಛಯಾ ಯತ್ಪ್ರಥಮಂ ಸ್ಪೃಶೇತ್ ಸಾ ತಸ್ಯ ಜೀವಿಕೇತಿ ವಿದ್ಯಾತ್, ತತಃ ಯಥಾಶಕ್ತಿ ಮಾಹೇಶ್ವರಾನ್ಭೋಜಯಿತ್ವಾ, ದಕ್ಷಿಣಾಂ ದತ್ವಾ, ಆಶಿಷೋವಾಚಯಿತ್ವಾ, ಬಂಧುಭಿಸ್ಸಹ ಸ್ವಯಂಭುಂಜೀತ । ಕುಮಾರ್ಯಾಅಪಿ ಪ್ರಥಮಕವಲಂ ಸಮಂತ್ರಕಂ, ತತಃಶೇಷಂ ತೂಷ್ಣೀಂಪ್ರಾಶಯೇತ್॥ ಇತ್ಯನ್ನಪ್ರಾಶನವಿಧಿಃ॥

— ಅಥ ಉಪನಿಷ್ಕ್ರಮಣವಿಧಿಃ —

ಜನ್ಮತಶ್ಶಿಶೋರ್ದ್ವಿತೀಯವರ್ಷಾದೌ ಸೌರಮಾನೇನ ಜನ್ಮದಿನೆ ಜನ್ಮನಕ್ಷತ್ರೆವಾ ಯಜಮಾನಃ ಪೂರ್ವಾಹ್ಣೇ, ಅಭ್ಯಜ್ಯ ಸ್ನಾತ್ವಾ, ಸರ್ವೌಷಧಿಯುತಜಲಪೂರಿತಕಲಶಂ ಸಂಪೂಜ್ಯ, ತದುದಕೇನ ಸ್ನಾತಃ ಶಿಶುಂಚಸ್ನಾಪಯಿತ್ವಾ,ಶುಕ್ಲಾಂಬರಧರೋ ಯಥಾವಿಭವಮಲಂಕೃತೋಬಹಿರಾಸೀಯ, ವಿಧಿವತ್ಸ್ವಸ್ತಿವಾಚನನಾಂದೀಸಮಾರಾಧನಂಚಕೃತ್ವಾ, ಕೌತುಕಮಾಬ

ಇರಿಸಿ, ಜೀವಿಕಾಪರೀಕ್ಷೆಯನ್ನು ಮಾಡಬೇಕು. ಎಂದರೆ— (ಶಿಶುವು ಸ್ವೇಚ್ಛೆಯಿಂದ ತನ್ನ ಮುಂದೆ ಇರಿಸಿರುವ ಪದಾರ್ಥಗಳೊಳಗೆ ಮೊದಲು ಯಾವುದನ್ನು ಮುಟ್ಟುತ್ತದೆಯೋ ಅದೇ ಈ ಶಿಶುವಿನ ಜೀವಿಕಾರೀತಿಯೆಂಬುದಾಗಿ ತಿಳಿಯಬೇಕು. ॥ ಅನಂತರ ಯಥಾಶಕ್ತಿ ಭೋಜನದಿಂದ ಮಾಹೇಶ್ವರರನ್ನು ತೃಪ್ತಿಪಡಿಸಿ, ದಕ್ಷಿಣೆಯನ್ನು ಕೊಟ್ಟು ಅವರ ಆಶೀರ್ವಾದವಂ ಪಡೆದು, ತಾನು ತನ್ನ ಬಂಧುಬಾಂಧವರೊಡನೆ ಭೋಜನವಂ ಮಾಡಬೇಕು. ಹೆಣ್ಣು ಮಕ್ಕಳಿಗಾದರೋ ಮೊದಲನೆಯ ತುತ್ತನ್ನು ಮಾತ್ರವೇ ಸಮಂತ್ರಕವಾಗಿ ಉಣ್ಣಿಸಬೇಕು. ಉಳಿದುದನ್ನೆಲ್ಲಾ ವಿಮಂತ್ರಕವಾಗಿ ಉಣ್ಣಿಸಬೇಕು. ಈ ರೀತಿಯಾಗಿ ಅನ್ನಪ್ರಾಶನವಿಧಿಯು.

ಅನಂತರ ಉಪನಿಷ್ಕ್ರಮಣವಿಧಿಯು.

ಶಿಶುವು ಹುಟ್ಟಿದ ಒಂದನೆಯ ವರ್ಷವು ಪೂರ್ತಿಯಾಗಿ ಎರಡನೆಯ ವರ್ಷದ ಮೊದಲನೆಯ ದಿವಸದಲ್ಲಿ—ಸೌರಮಾನದಿಂದ ಜನ್ಮದಿನದಲ್ಲಿ ಜನ್ಮನಕ್ಷತ್ರದಲ್ಲಿ—ಯಜಮಾನನು ಅಭ್ಯಂಗಸ್ನಾನವಂ ಮಾಡಿಕೊಂಡು, ಅನಂತರ ಬೇವು ಬೇಲ ಲಕ್ಕಿ ನಿಂಬೆ ಹೀರಳಿ ಇವುಗಳ ಸೊಪ್ಪನ್ನೂ ಕೆಲವು ಮೂಲಿಕೆಗಳ ಸೊಪ್ಪನ್ನೂ ಕೂಡ ಜಲದಿಂದ ಕೂಡಿದ ಒಂದು ತಪ್ಪಲೆಗೆ ಹಾಕಿ ಆ ಕಲಶವನ್ನು ಪೂಜಿಸಿ, ಆ ಜಲದಿಂದಲೇ ತಾನು ಸ್ನಾನವಂ ಮಾಡಿ, ಆ ಶಿಶುವಿಗೂ ಸ್ನಾನವಂ ಮಾಡಿಸಿ, ಶುಭ್ರವಾದ ಬಟ್ಟೆಯನ್ನು ತಾನು ಧರಿಸಿ, ಆ ಶಿಶುವಿಗೂ ಧಾರಣವಂ ಮಾಡಿಸಿ, ಯಥಾವೈಭವದಿಂದ ಅಲಂಕರಿಸಿಕೊಂಡು, ಶಿವಾಲಯಮುಕ್ಕಾಗಲೀ ಅಥವಾ ಗುರುಮುಕ್ತಕ್ಕಾಗಲೀ ಶಿಶುವನ್ನು ಕರೆದು

ರ್ಥ್ಯ, ದೇಶಕಾಲೌಸ್ಮೃತ್ವಾ, ಅಸ್ಮತ್ಕುಮಾರಸ್ಯಪ್ರಥಮಾಬ್ದಪೂರ್ತಿ ಜನ್ಮ ದಿವಸೆ ಆಯುರಭಿವೃದ್ಧಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಶಿವಲಿಂಗಂ ಶಿವೋಪಾಸಕಾನ್ ಶಿವಯೋಗಿನಶ್ಚ ಸಂಪೂಜ್ಯ ದರ್ಶಯಿಷ್ಯಾಮೀತಿ ಸಂಕಲ್ಪ್ಯ, ಶಿವಲಿಂಗಂ ಶಿವೋಪಾಸಕಾನ್ ಸಂಪೂಜ್ಯ, ದರ್ಶಯೇತ್ ॥ ಕೇಚಿದುಪನಿಷ್ಕ್ರಮಣಂ ಕರ್ಮ ಅನ್ನಪ್ರಾಶನಾತ್ಪೂರ್ವಂ ಚತುರ್ಥೇಮಾಸೆ ಶುಭೇ ದಿನೇವಾ ಕಾರ್ಯಮಿತ್ಯುದಾಹರಂತಿ. ತದಪ್ಯಂಗೀಕರಣೀಯಂ ॥ ಶಿವೋಪಾಸಕಾಃ ಶಿವಯೋಗಿನ ಇತಿ;—

ಕ್ರಿಯಾಸಾರೆ—"ಅಗಸ್ತ್ಯೋಜೈಮಿನಿಶ್ಚೈವ ವಿಶ್ವಾಮಿತ್ರೋಽಥಕಾಶ್ಯಪಃ । ಭರದ್ವಾಜೋಽಂಗಿರಾ ಅತ್ರಿರ್ವಸಿಷ್ಠೋ ರೋಮಹರ್ಷಣಃ ॥ ಏತೆಸರ್ವೇಮಹಾಭಾಗಾ ಅತಿವರ್ಣಾಶ್ರಮೇರತಾಃ । ವೀರಶೈವಾಸ್ಸಮಾಖ್ಯಾತಾ ಜೀವನ್ಮುಕ್ತಾ ನಸಂಶಯಃ"—ಇತ್ಯುಕ್ತತ್ವಾತ್, ಏತಚ್ಛಿ

ಕೊಂಡು ಬಂದು, ವಿಧಿಪೂರ್ವಕವಾಗಿ ಸ್ವಸ್ತಿವಾಚನವನ್ನೂ ನಾಂದೀ ಸಮಾರಾಧನೆಯನ್ನೂ ಮಾಡಿ, ಕಂಕಣ ಸೂತ್ರವನ್ನು ಕೈಯಲ್ಲಿ ಕಟ್ಟಕೊಂಡು, ಅನಂತರ ದೇಶ ಕಾಲಂಗಳಂ ಸ್ಮರಿಸಿ, "ನನ್ನ ಈ ಕುಮಾರನಿಗೆ ಒಂದನೆಯ ವರ್ಷವು ಪೂರ್ತಿಯಾಗಿ ಎರಡನೆಯ ವರ್ಷದ ಮೊದಲನೆಯ ಜನ್ಮದಿನದಲ್ಲಿ ಆಯುಷ್ಯವು ಅಭಿವೃದ್ಧಿಯಾಗಲೆಂದು ಶ್ರೀ ಪರಮೇಶ್ವರನ ಪ್ರೀತಿಯನ್ನು ಪಡೆಯುವುದಕ್ಕಾಗಿ ಶಿವಲಿಂಗವನ್ನೂ ಶಿವೋಪಾಸಕರಾದ ಶಿವಯೋಗಿಗಳನ್ನೂ ಪೂಜಿಸಿ, ದರ್ಶನವಂ ಮಾಡಿಸುತ್ತೇನೆ" ಎಂದು ಸಂಕಲ್ಪಿಸಿ, ಶಿವಲಿಂಗವನ್ನೂ ಶಿವಯೋಗಿಗಳನ್ನೂ ಪೂಜಿಸಿ, ದರ್ಶನವಂ ಮಾಡಿಸಬೇಕು. ಕೆಲವರು ಉಪನಿಷ್ಕ್ರಮಣ ಕರ್ಮವನ್ನು ಅನ್ನಪ್ರಾಶನ ಕರ್ಮವನ್ನು ಮಾಡುವುದಕ್ಕಿಂತಲೂ ಮುಂಚೆ ಶಿಶುವಿನ ನಾಲ್ಕನೆಯ ತಿಂಗಳ ಶುಭದಿನದಲ್ಲಿ ಮಾಡಬೇಕೆಂಬದಾಗಿ ಹೇಳುತ್ತಾರೆ. ಆ ಪದ್ಧತಿಯೂ ಕೂಡ ಶಿಷ್ಟಾಚಾರದಂತೆ ಅಂಗೀಕರಣೀಯವಾದದ್ದೇ ಆಗಿರುವುದು. ಶಿವೋಪಾಸಕ ಶಿವಯೋಗಿಗಳು ಯಾರೆಂದೊಡೆ—

ಕ್ರಿಯಾಸಾರದಲ್ಲಿ:— ಅಗಸ್ತ್ಯ, ಜೈಮಿನಿ, ವಿಶ್ವಾಮಿತ್ರ, ಕಾಶ್ಯಪ, ಭರದ್ವಾಜ, ಆಂಗಿರಸ, ಅತ್ರಿ, ವಸಿಷ್ಠ, ರೋಮಹರ್ಷಣ— ಎಂಬ ಈ ಸರ್ವಮಹಾಭಾಗರೂ, ಅತಿವರ್ಣಾಶ್ರಮದಲ್ಲಿ ನಿರತರೂ, ಜೀವನ್ಮುಕ್ತರೂ, ವೀರಶೈವರೆಂಬದಾಗಿ ಪ್ರಸಿದ್ಧರೂ ಆಗಿರುವರು. ಈ ವಿಷಯದಲ್ಲಿ ಏನೂ ಸಂಶಯವಿಲ್ಲ ಎಂಬದಾಗಿ ಹೇಳಿರುವುದರಿಂದ ಈ ಶಿವಯೋಗಿಗಳನ್ನು ಅಲ್ಲಿಗೆ ಬಂದಿರುವ ಮಾಹೇಶ್ವರರಲ್ಲಿ ಆವಾಹನೆಯಂ ಮಾಡಿಕೊಂಡು, ಷೋಡಶೋಪಚಾರದಿಂ ಪೂಜಿಸಿ, ಯಥಾಶಕ್ತಿಯಾಗಿ ಗೋದಾನ, ಭೂದಾನ, ಸುವರ್ಣದಾನ, ಅನ್ನದಾನವನ್ನು ಮಾಡಿ, ಆ ಶಿಶುವಿಗೆ ಆ ಮಾಹೇ

ವಯೋಗಿನಃತದುಪಗತಮಾಹೇಶ್ವರೇಷು ಆವಾಹ್ಯ,ಷೋಡಶೋಪಚಾರೈ ಸ್ಸಂಪೂಜ್ಯ,ಯಥಾಶಕ್ತಿಗೋಭೂಹಿರಣ್ಯಾದಿದತ್ವಾ,ತಾನ್ಮಾಹೇಶ್ವರಾನ್ ಶಿಶೋರ್ದರ್ಶಯಿತ್ವಾ, ತದಾಶಿಷೋಗ್ರಾಹ್ಯಾಃ ॥

॥ ಇತ್ಯುಪನಿಷ್ಕ್ರಮಣವಿಧಿಃ ॥



— ಅಥಚೌಲವಿಧಿಃ —

ಉಕ್ತೇ ತೃತೀಯಾದೌ ವರ್ಷೇ, ಉದಗಯನೇ ಶುಕ್ಲಪಕ್ಷೇ ಪ್ರಶಸ್ತ ತಿಥಿವಾರನಕ್ಷತ್ರಯೋಗಯುತೇ ಶುಭೇಮುಹೂರ್ತೇ ಕುಮಾರಸ್ಯ ಚೌಲಕರ್ಮ ಕರಿಷ್ಯನ್ ಕರ್ತಾ ಪೂರ್ವೇದ್ಯುಃ ಸ್ವಸ್ತಿವಾಚನಪೂರ್ವಕಂ ನಾಂದೀಸಮಾರಾಧನಾಂಕುರಾರ್ಪಣಂಚಕೃತ್ವಾ, ಅಪರೇದ್ಯುಃ ಕೃತಮಂಗಲಸ್ನಾನಂ ಕುಮಾರ ಮಲಂಕೃತ್ಯ, ಮಾತ್ರಂಕೇ ಕುಮಾರಂ ದಕ್ಷಿಣತ ಉಪವೇಶ್ಯ, ದೇಶಕಾಲೌಸ್ಮೃತ್ವಾ, ಅಸ್ಯ ಕುಮಾರಸ್ಯ ಬೀಜಗರ್ಭಸಮುದ್ಭವೈನೋನಿಬರ್ಹಣೇನ ಬಲಾಯುರ್ವರ್ಚೋಭಿವೃದ್ಧಿದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಚೌಲಾಖ್ಯಾ

ಶ್ವರರ ದರ್ಶನವಂ ಮಾಡಿಸಿ, ಅವರ ಆಶೀರ್ವಾದಂಗಳಂ ಪಡೆಯಬೇಕು. ಈ ರೀತಿಯಾಗಿ ಉಪನಿಷ್ಕ್ರಮಣವಿಧಿಯು.



—ಅನಂತರ ಚೌಲವಿಧಿಯು—

ಶಿಶುವು ಜನಿಸಿದ ಮೂರನೆಯ ವರ್ಷದಲ್ಲಿ ಉತ್ತರಾಯಣದಲ್ಲಿ ಶುಕ್ಲಪಕ್ಷದಲ್ಲಿ ಪ್ರಸಿದ್ಧವಾದ ತಿಥಿ ವಾರ ನಕ್ಷತ್ರಯೋಗದೊಡನೆ ಕೂಡಿಕೊಂಡಿರುವ ಶುಭಮುಹೂರ್ತದಲ್ಲಿ, ಕುಮಾರನಿಗೆ ಚೌಲಕರ್ಮವನ್ನು ಮಾಡತಕ್ಕ ಕರ್ತೃವು ಪೂರ್ವದ ದಿನದಲ್ಲಿ ಸ್ವಸ್ತಿವಾಚನಪೂರ್ವಕವಾಗಿ ನಾಂದೀಸಮಾರಾಧನೆಯನ್ನೂ ಅಂಕುರಾರ್ಪಣವನ್ನೂ ಕೂಡಮಾಡಿ, ಬಳಿಕ ಎರಡನೆಯ ದಿನದಲ್ಲಿ ತಾನು ಮಂಗಳಸ್ನಾನವ ಮಾಡಿ, ಕುಮಾರನಿಗೂ ಮಂಗಳಸ್ನಾನವಂ ಮಾಡಿಸಿ, ಭೂಷಣಾದಿಗಳಿಂ ಅಲಂಕರಿಸಿ, ತಾಯಿಯ ಬಲಪಾರ್ಶ್ವದ ತೊಡೆಯಮೇಲೆ ಕುಮಾರನನ್ನು ಕುಳ್ಳಿರಿಸಿ, ದೇಶಕಾಲಂಗಳಂ ಸ್ಮರಿಸಿ, ನನ್ನ ಈ ಪುತ್ರನ ಬೀಜಗರ್ಭದಿಂದ ಉತ್ಪನ್ನವಾದ ಪಾಪವು ನಿವಾರಣೆಯಾಗಿ ಈ ಪುತ್ರನಿಗೆ ಬಲವೂ ಆಯುಷ್ಯವೂ ತೇಜಸ್ಸೂ ಕೂಡ ಅಭಿವೃದ್ಧಿಯಾಗಲೆಂದು ಶ್ರೀಪರಮೇಶ್ವರನ ಪ್ರೀತಿಯನ್ನು ಪಡೆಯುವುದಕ್ಕೋಸ್ಕರ ಚೌಲನಾಮಕವಾದ ಕರ್ಮವನ್ನು ಮಾಡುತ್ತೇನೆ ಎಂದು ಸಂಕಲ್ಪಿಸಿ, ಬಳಿಕ ಪೂರ್ವಾದಿದಿಕ್ಕು

ಕರ್ಮ ಕರಿಷ್ಯೇ—ಇತಿಸಂಕಲ್ಪ್ಯ, ಪೂರ್ವಾದಿದಿಕ್ಷುಆಸ್ತೀರ್ಣೇಷು ದರ್ಭೇಷು ವ್ರೀಹಿಯವಮಾಷತಿಲೈಃ ಪೃಥಕ್ಪೃಥಕ್ಪೂರಿತಾನಿ ಶರಾವಾಣಿ ಚತ್ವಾರಿ ಕ್ರಮೇಣೈಕೈಕಶಃ ಪ್ರಾಕ್ಸಂಸ್ಥಾನ್ಯಾಸಾದಯೇತ್. ಮಾತಾ ಕರ್ತುರ್ದಕ್ಷಿಣತಃ ಕುಮಾರ ಮುತ್ಸಂಗೇಕೃತ್ವಾಸೀತ ॥ ತತಃಕರ್ತಾ ಮಾತುಃ ಪುರಸ್ತಾದನಡುಹಗೋಮಯಯುತ ಶರಾವಂ ಶಮೀಪರ್ಣಯುತಶರಾವಂಚ ನಿದಧ್ಯಾತ್. ತತೋ ಬ್ರಹ್ಮಾ ಏಕವಿಂಶತಿಕುಶಪಿಂಜೂಲಾನ್ಯಾದಾಯ ಮಾತುರ್ದಕ್ಷಿಣತ ಸ್ತಿಷ್ಠೇತ್. ಪಿತಾವಾ ತಥಾತಿಷ್ಠೇತ್ ॥ ಅಸ್ಮಿನ್ಪಕ್ಷೇ ಅನ್ಯಏವ ಚೌಲಕರ್ತಾ ॥ ತತಃ ಕುಮಾರೇಣ ಅನ್ವಾರಬ್ಧಕರ್ತಾ ಪುರಸ್ತನಮಾಘಾರಾಂತಂ ಕರ್ಮ ಕೃತ್ವಾ॥ತತಃಶೀತಮುಷ್ಣಂಚೋಭೇ ಜಲೇ ದಕ್ಷಿಣವಾಮಕರಾಭ್ಯಾಂ ಕ್ರಮೇಣ ಪಾತ್ರಯೋಃ ಪೃಥಕ್ ಗೃಹೀತ್ವಾ, ಶಿಶೋಃ ಪಶ್ಚಿಮದೇಶೇ ಸ್ಥಿತ್ವಾ, ತದುದಕದ್ವಯಮನ್ಯಸ್ಮಿನ್ಪಾತ್ರೇ ಪಾಣಿಭ್ಯಾಂ—" ಓಂ ಉಷ್ಣೇನವಾಯು ಉದಕೇನೇಹಿ "—ಇತಿಮಂತ್ರೇಣ ಯುಗಪನ್ನಿನೀ

ಗಳಲ್ಲಿ ಹಾಸಿರುವ ದರ್ಭೆಗಳಮೇಲೆ ಭತ್ತ, ಗೋಧಿ, ಉದ್ದು, ಎಳ್ಳು ಇವುಗಳಿಂದ ಪ್ರತ್ಯೇಕಪ್ರತ್ಯೇಕವಾಗಿ ಪರಿಪೂರ್ಣಂಗಳಾದ ನಾಲ್ಕು ಹೊಸಮುಚ್ಚಳಗಳನ್ನು ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಈ ನಾಲ್ಕುದಿಕ್ಕುಗಳಲ್ಲಿಯೂ ಕ್ರಮವಾಗಿ ಇರಿಸಿಕೊಳ್ಳಬೇಕು ॥ ಬಳಿಕ ತಾಯಿಯು ಆಕರ್ತೃವಿನ ಬಲಪಾರ್ಶ್ವದಲ್ಲಿ ಕುಮಾರನನ್ನು ತನ್ನ ತೊಡೆಯಮೇಲೆಯೇ ಕುಳ್ಳಿರಿಸಿಕೊಂಡು ಕುಳಿತುಕೊಳ್ಳಬೇಕು. ಅನಂತರ ಕರ್ತೃವು ಆ ತಾಯಿಯ ಮುಂಭಾಗದಲ್ಲಿಯೇ ಎತ್ತಿನ ಸಗಣಿಯಿಂದ ಪರಿಪೂರ್ಣವಾದ ಒಂದು ಮುಚ್ಚಳವನ್ನೂ ಬನ್ನಿಯಪತ್ರಗಳಿಂದ ಪರಿಪೂರ್ಣವಾದ ಒಂದು ಮುಚ್ಚಳವನ್ನೂ ಕೂಡ ಇರಿಸಿಕೊಳ್ಳಬೇಕು, ಅನಂತರ ಬ್ರಹ್ಮನು ಇಪ್ಪತ್ತೊಂದು ದರ್ಭೆಗಳ ಕಂತೆಗಳನ್ನು ಕೈಯಲ್ಲಿ ಹಿಡಿದುಕೊಂಡು ತಾಯಿಯ ದಕ್ಷಿಣಪಾರ್ಶ್ವದಲ್ಲಿ ಕುಳಿತುಕೊಳ್ಳಬೇಕು. ಅವನಿಲ್ಲದಿದ್ದರೆ ತಂದೆಯೇ ಹಾಗೆ ಕುಳಿತಿರಬೇಕು. ಅನಂತರ ಕುಮಾರನಿಂದ ಚೌಲಕರ್ಮವನ್ನು ಪ್ರಾರಂಭಿಸಿದ ಕರ್ತೃವು (ತಂದೆಯು) ಮುಂಪಣ ಕರ್ಮಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಮಾಡಿಕೊಂಡು ॥ ಅನಂತರ ತನ್ನ ಬಲಗೈಯಲ್ಲಿ ಒಂದು ಪಾತ್ರೆಯಂ ತೆಗೆದುಕೊಂಡು, ಅದರಲ್ಲಿ ಶೀತೋದಕವನ್ನೂ, ಎಡಗೈಯಲ್ಲಿ ಒಂದು ಪಾತ್ರೆಯಂ ತೆಗೆದುಕೊಂಡು ಅದರಲ್ಲಿ ಉಷ್ಣೋದಕವನ್ನೂ ತುಂಬಿಕೊಂಡು, ಶಿಶುವಿನ ಪಶ್ಚಿಮಭಾಗದಲ್ಲಿ ಕುಳಿತು, ಆಶೀತೋಷ್ಣೋದಕಗಳನ್ನು ಮತ್ತೊಂದು ಪಾತ್ರೆಯಲ್ಲಿ ತನ್ನ ಎರಡುಕೈಗಳಿಂದಲೂ—" ಓಂ ಉಷ್ಣೇನವಾಯುಉದಕೇನೇಹಿ "

ಯ, ತದೇಕದೇಶಂ ಗೃಹೀತ್ವಾ,ನವನೀತೇನ ದಧಿದ್ರಪ್ಸೇನವಾ ಮಿಶ್ರಯಿತ್ವಾ. ಕುಮಾರಸ್ಯ ವಾಮಕರ್ಣಮಾರಭ್ಯ ಪ್ರದಕ್ಷಿಣಂ—" ಓಂ ಅದಿತಿಃಕೇಶಾನ್ವಪತ್ವಾಪಉದಂತುವರ್ಚಸೆ "—ಇತಿಮಂತ್ರೇಣ ಶಿರಸ್ತ್ರಿವಾರಂಕ್ಲೇದಯೇತ್. ಪ್ರತಿಕ್ಲೇದನಂ ಮಂತ್ರಾವೃತ್ತಿಃ । ತತೋಬ್ರಹ್ಮಾಹಸ್ತಸ್ಥಿತೈಕವಿಂಶತಿಕುಶಪಿಂಜೂಲಮಧ್ಯೇ ತ್ರೀಣಿಕುಶಪಿಂಜೂಲಾನ್ಯಾದಾಯ—" ಓಂಓಷಧೇತ್ರಾಯಸ್ವೈನಂ "—ಇತಿಮಂತ್ರೇಣ ಕುಮಾ

ಎಂಬ ಮಂತ್ರವನ್ನುಚ್ಚರಿಸುತ್ತಾ ಸ್ವಲ್ಪಸ್ವಲ್ಪವಾಗಿ ಬಿಟ್ಟು ಬಳಿಕ ಅದರಲ್ಲಿ ಸ್ವಲ್ಪವಾಗಿ ತೆಗೆದುಕೊಂಡು ಆ ಜಲವನ್ನು ಬೆಣ್ಣೆಯೊಡನೆಯಾದರೂ ಅಥವಾ ಮೊಸರಿನ ಗಟ್ಟಿಯಾದ ಗಲ್ಲೆಯೊಡನೆಯಾದರೂ ಕೂಡ ಮಿಶ್ರಮಾಡಿ, ಬಳಿಕ ಅದನ್ನು ಆ ಬಾಲಕನ ಎಡಗಿವಿಯಿಂ ಮೊದಲುಮಾಡಿಕೊಂಡು ಪ್ರದಕ್ಷಿಣಾಕಾರವಾಗಿ—" ಓಂ ಅದಿತಿಃಕೇಶಾನ್ವಪತ್ವಾಪಉದಂತುವರ್ಚಸೆ "—ಎಂಬ ಮಂತ್ರವನ್ನುಚ್ಚರಿಸುತ್ತಾ ಮೂರುವೇಳೆ ಆ ಶಿರಸ್ಸಿಗೆ ಬಳಿಯಬೇಕು, ಪ್ರತಿಯೊಂದುವೇಳೆ ಬಳಿಯುವುದಕ್ಕೂ ಆ ಮಂತ್ರವನ್ನೇ ಆವೃತ್ತಿಯಾಗುಚ್ಚರಿಸಬೇಕು. ॥ ಅನಂತರ ಬ್ರಹ್ಮನ ಕೈಯಲ್ಲಿರುವ ದರ್ಭೆಯ ಕಂತೆಗಳೊಳಗೆ ಮೂರು ಕಂತೆಗಳನ್ನು ತೆಗೆದುಕೊಂಡು—" ಓಂ ಓಷಧೇತ್ರಾಯಸ್ವೈನಂ "—ಎಂಬ ಮಂತ್ರವನ್ನುಚ್ಚರಿಸುತ್ತಾ ತಾನು ಆಕುಮಾರನಿಗೆ ಅಭಿಮುಖನಾಗಿ ಆ ದರ್ಭೆಯ ಕಂತೆಗಳನ್ನು ಪಶ್ಚಿಮಾಗ್ರಗಳನ್ನಾಗಿಮಾಡಿ ಅವುಗಳನ್ನು ಆ ಬಾಲಕನ ಬಲಭಾಗದ ಕೇಶದಮೇಲೆ ಇರಿಸಿ, ಆಕೇಶದೊಡನೆ ಕೂಡಿರುವ ಆ ದರ್ಭೆಗಳಲ್ಲಿ ತಾಮ್ರಮಯವಾದ ಕತ್ತಿಯನ್ನು-" ಓಂಸ್ವಧಿತೆಮೈನಂಹಿಂಸೀಃ "- ಎಂಬ ಮಂತ್ರವನ್ನುಚ್ಚರಿಸುತ್ತಾ ಇರಿಸಿ,ಅನಂತರ-" ಓಂ ಯೇನಾವಪತ್ಸವಿತಾ......ಯಥಾಸತ್ "—ಎಂಬ ಮಂತ್ರವನ್ನುಚ್ಚರಿಸುತ್ತಾ ದರ್ಭೆಯ ಕಂತೆಗಳೊಡನೆ ಕೂಡಿದ ಆ ಕೇಶಗಳನ್ನು ಕತ್ತರಿಸಿ, ಅವುಗಳನ್ನು ಪೂರ್ವಕ್ಕೆ ಕೊನೆಗಳುಳ್ಳುವುಗಳನ್ನಾಗಿಮಾಡಿ ಬಳಿಕ ಅವುಗಳನ್ನು ಆಮುಚ್ಚಳದಲ್ಲಿರುವ ಬನ್ನಿಯ ಪತ್ರಗಳೊಡನೆ ಏಕವಾಗಿಮಾಡಿ, ಆ ತಾಯಿಯ ಕೈಯಲ್ಲಿ ಕೊಡಬೇಕು. ಬಳಿಕ ಆ ತಾಯಿಯು ಕೇಶದೊಡನೆ ಕೂಡಿರುವ ಆ ದರ್ಭೆಯ ಕಂತೆಗಳ ಭಾಗವನ್ನು ಮುಚ್ಚಳದಲ್ಲಿರುವ ಆಎತ್ತಿನ ಸಗಣಿಯಲ್ಲಿ ಪ್ರಾಗಗ್ರಗಳಾಗುವಂತೆ (ಪೂರ್ವಕ್ಕೆ ಕೊನೆಗಳಾಗುವಂತೆ) ಹಾಕಬೇಕು. ॥ ಈ ಪ್ರಕಾರವಾಗಿರುವ ಎರಡನೆಯ ಮೂರನೆಯ ನಾಲ್ಕನೆಯ ಭೇದನೆಗಳಲ್ಲಿಯೂ ಕೂಡ ದರ್ಭೆಯ ಕಂತೆಗಳನ್ನಿರಿಸುವ ಮಂತ್ರವೂ ಕತ್ತಿಯನ್ನಿರಿಸುವ ಮಂತ್ರವೂ ಒಂದೇ ಆಗಿರುವುದು. ಭೇದಿಸುವ ಮಂತ್ರವು ಮಾತ್ರವೇ ಬೇರೆಬೇರೆಯಾಗಿರುವುದು.॥೧॥ ಎರಡನೆಯ ಭೇದನೆಯಲ್ಲಿ ದರ್ಭೆಯ ಕಂತೆಗಳೊಳಗೆ ಮೂರು ಕಂತೆಗಳನ್ನು ತೆಗೆದುಕೊಂಡು—" ಓಂಓಷಧೆತ್ರಾಯಸ್ವೈನಂ "—ಎಂಬ ಮಂತ್ರವನ್ನುಚ್ಚರಿಸುತ್ತಾ ತಾ

ರಾಭಿಮುಖಂ ಪಶ್ಚಿಮಾಗ್ರಾಣಿ ತಸ್ಯ ದಕ್ಷಿಣಕೇಶಭಾಗೇ ನಿಧಾಯ, ತೇಷು ತಾಮ್ರಮಯಂ ಕ್ಷುರಂ—"ಓಂಸ್ವಧಿತೇಮೈನಂಹಿಂಸೀಃ"—ಇತಿ ಮಂತ್ರೇಣ ನಿಧಾಯ—"ಓಂಯೇನಾವಪತ್ಸವಿತಾಕ್ಷುರೇಣಸೋಮಸ್ಯ ರಾಜ್ಞೋವರುಣಸ್ಯವಿದ್ವಾನ್ । ತೇನಬ್ರಹ್ಮಾಣೋವಪತೇದಮಸ್ಯಾಯುಷ್ಮಾನ್ಜರದಷ್ಟಿರ್ಯಥಾಸತ್"— ಇತಿಮಂತ್ರೇಣ ಸಕೇಶಾನಿ ಪಿಂಜೂಲಾನಿ ಛಿತ್ವಾ, ಪ್ರಾಗಗ್ರಾಣಿ ಕೃತ್ವಾ ಶರಾವಸ್ಥಶಮೀಪರ್ಣೈರೇಕೀಕೃತ್ಯ, ಮಾತುಃಕರೇ ದದ್ಯಾತ್। ಸಾಚ ತಾನಿ ಸಕೇಶಾನ್ಯನಡುಹ ಗೋಮಯೇಪ್ರಾಗಗ್ರಾಣಿ ನಿದಧ್ಯಾತ್ ॥ ಏವಂ ದ್ವಿತೀಯಾದಿಛೇದನೇಷು ಪಿಂಜೂಲನಿಧಾನಾದಿ ಸಮಂತ್ರಕಂ ಕಾರ್ಯಂ । ಛೇದನಮಂತ್ರೇತು ವಿಶೇಷಃ ॥೧॥ ದ್ವಿತೀಯಛೇದನೇ—"ಓಂಓಷಧೇತ್ರಾಯಸ್ವೈನಂ"—ಇತಿ ಮಂತ್ರೇಣ ಕುಮಾರಾಭಿಮುಖಂ ಪಶ್ಚಿಮಾಗ್ರಾಣಿ ತಸ್ಯದಕ್ಷಿಣೇ ಕೇಶಭಾಗೇನಿಧಾಯ, ತೇಷು ತಾಮ್ರಮಯಂ ಕ್ಷುರಂ—"ಓಂಸ್ವಧಿತೇಮೈನಂಹಿಂಸೀಃ"— ಇತಿ ಮಂತ್ರೇಣ ನಿಧಾಯ, "ಓಂಯೇನಧಾತಾಬೃಹಸ್ಪತೇರಗ್ನೇರಿಂದ್ರಸ್ಯಚಾಯುಷೇವಪತ್ । ತೇನತಆಯುಷೇ ವಪಾಮಿ ಸುಶ್ಲೋಕ್ಯಾಯಸ್ವಸ್ತಯೇ"— ಇತಿ ॥೨॥ ತೃತೀಯಛೇದನೇ—"ಓಂಓಷಧೇತ್ರಾಯಸ್ವೈನಂ"— ಇತಿ ಮಂತ್ರೇಣ ಕುಮಾರಾಭಿಮುಖಂ

ನು ಆ ಕುಮಾರನಿಗೆ ಅಭಿಮುಖನಾಗಿ ಆ ದರ್ಭೆಯ ಕಂತೆಗಳನ್ನು ಪಶ್ಚಿಮಾಗ್ರಗಳನ್ನಾಗಿಮಾಡಿ, ಅವುಗಳನ್ನು ಆ ಬಾಲಕನ ಬಲಭಾಗದ ಕೇಶಭಾಗದಲ್ಲಿರಿಸಿ, ಆ ಕೇಶದೊಡನೆ ಕೂಡಿರುವ ಆ ದರ್ಭೆಗಳಲ್ಲಿ ತಾಮ್ರಮಯವಾದ ಕತ್ತಿಯನ್ನು—"ಓಂಸ್ವಧಿತೇಮೈನಂಹಿಂಸೀಃ"— ಎಂಬ ಮಂತ್ರವನ್ನುಚ್ಚರಿಸುತ್ತಾ ಇರಿಸಿ, ಅನಂತರ— "ಓಂಯೇನ......ಸ್ವಸ್ತಯೇ"- ಎಂಬ ಮಂತ್ರವನ್ನುಚ್ಚರಿಸುತ್ತಾ ದರ್ಭೆಯ ಕಂತೆಗಳೊಡನೆಕೂಡಿದ ಆ ಕೇಶಗಳನ್ನು ಕತ್ತರಿಸಿ,ಅವುಗಳನ್ನು ಪೂರ್ವಕ್ಕೆ ಕೊನೆಗಳುಳ್ಳವುಗಳನ್ನಾಗಿಮಾಡಿ, ಬಳಿಕ ಅವುಗಳನ್ನು ಆಮುಚ್ಚಳದಲ್ಲಿರುವ ಬನ್ನಿಯ ಪತ್ರೆಗಳೊಡನೆ ಮಿಶ್ರಮಾಡಿ ಆ ತಾಯಿಯ ಕೈಯಲ್ಲಿ ಕೊಡಬೇಕು. ಬಳಿಕ ಆ ತಾಯಿಯು ಕೇಶದೊಡನೆ ಕೂಡಿರುವ ಆ ದರ್ಭೆಯ ಕಂತೆಗಳ ಭಾಗವನ್ನು ಮುಚ್ಚಳದಲ್ಲಿರುವ ಆ ಯೆತ್ತಿನ ಸಗಣಿಯಲ್ಲಿ ಪೂರ್ವಾಗ್ರಗಳಾಗುವಂತೆ ಹಾಕಬೇಕು॥೧॥ಮೂರನೆಯ ಛೇದನೆಯಲ್ಲಿ ದರ್ಭೆಯ ಕಂತೆಗಳೊಳಗೆ ಮತ್ತೆ ಮೂರು ಕಂತೆಗಳನ್ನು ತೆಗೆದುಕೊಂಡು— "ಓಂಓಷಧೇತ್ರಾಯಸ್ವೈನಂ"—ಎಂಬ ಮಂತ್ರವನ್ನುಚ್ಚರಿಸುತ್ತಾ ತಾನು ಆ ಕುಮಾರನಿಗೆ ಅಭಿಮುಖನಾಗಿ ಆ ದರ್ಭೆಯ ಕಂತೆಗಳನ್ನು ಪಶ್ಚಿಮಾಗ್ರಗಳನ್ನಾಗಿಮಾಡಿ

ಪಶ್ಚಿಮಾಗ್ರಾಣಿ ತಸ್ಯದಕ್ಷಿಣೇ ಕೇಶಭಾಗೇ ನಿಧಾಯ, ತೇಷು ತಾಮ್ರಮಯಂ ಕ್ಷುರಂ— "ಓಂಸ್ವಧಿತೇಮೈನಂಹಿಂಸೀಃ"—ಇತಿಮಂತ್ರೇಣ ನಿಧಾಯ— "ಓಂಯೇನಭೂಯಶ್ಚರಾತ್ರ್ಯಾಂಜ್ಯೋಕ್ಚಪಶ್ಯಾತಿಸೂರ್ಯಂ । ತೇನತಆಯುಷೆವಪಾಮಿಸುಶ್ಲೋಕ್ಯಾಯಸ್ವಸ್ವಯೆ"— ಇತಿ ||೩|| ಚತುರ್ಥೇತು— "ಓಂಓಷಧೇತ್ರಾಯಸ್ವೈನಂ"—ಇತಿಮಂತ್ರೇಣ ಕುಮಾರಾಭಿಮುಖಂ ಪಶ್ಚಿಮಾಗ್ರಾಣಿ ತಸ್ಯದಕ್ಷಿಣೇ ಕೇಶಭಾಗೇನಿಧಾಯ,ತೇಷು ತಾಮ್ರಮಯಂ ಕ್ಷುರಂ— "ಓಂಸ್ವಧಿತೆಮೈನಂಹಿಂಸೀಃ"— ಇತಿಮಂತ್ರೇಣ ನಿಧಾಯ, "ಓಂಯೇನಾವಪತ್ಸವಿತಾಕ್ಷುರೇಣಸೋಮಸ್ಯರಾಜ್ಞೋವರುಣಸ್ಯವಿದ್ವಾನ್ । ತೇನಬ್ರಹ್ಮಾಣೋವಪತೇದಮಸ್ಯಾಯುಷ್ಮಾನ್ಜರದಷ್ಟಿರ್ಯಥಾಸತ್"— ||೧|| —"ಓಂಯೇನಧಾತಾಬೃಹಸ್ಪತೇರಗ್ನೇರಿಂದ್ರಸ್ಯಚಾಯುಷೇವಪತ್ । ತೇನತಆಯುಷೇವಪಾಮಿಸುಶ್ಲೋಕ್ಯಾಯಸ್ವಸ್ತಯೆ"— ||೨|| —"ಓಂಯೇನಭೂಯಶ್ಚರಾತ್ರ್ಯಾಂಜ್ಯೋಕ್ಚಪಶ್ಯಾತಿಸೂರ್ಯಂ । ತೇನತಆಯುಷೇವಪಾಮಿಸುಶ್ಲೋ

ಅವುಗಳನ್ನು ಆ ಬಾಲಕನ ಬಲಭಾಗದ ಕೇಶಭಾಗದಲ್ಲಿರಿಸಿ, ಆ ಕೇಶದೊಡನೆ ಕೂಡಿರುವ ಆ ದರ್ಭೆಗಳಲ್ಲಿ ತಾಮ್ರಮಯವಾದ ಕತ್ತಿಯನ್ನು— "ಓಂಸ್ವಧಿತೆಮೈನಂಹಿಂಸೀಃ"—ಎಂಬ ಮಂತ್ರವನ್ನುಚ್ಚರಿಸುತ್ತಾ ಇರಿಸಿ, ಅನಂತರ— "ಓಂಯೇನಭೂಯಶ್ಚ... ..ಸ್ವಸ್ತಯೆ"—ಎಂಬ ಮಂತ್ರವನ್ನುಚ್ಚರಿಸುತ್ತ, ದರ್ಭೆಯ ಕಂತೆಗಳೊಡನೆ ಕೂಡಿದ ಆ ಕೇಶಗಳನ್ನು ಕತ್ತರಿಸಿ, ಅವುಗಳನ್ನು ಪೂರ್ವಕ್ಕೆ ಕೊನೆಗಳುಳ್ಳವುಗಳನ್ನಾಗಿ ಮಾಡಿ, ಬಳಿಕ ಅವುಗಳನ್ನು ಆ ಮುಚ್ಚಳದಲ್ಲಿರುವ ಬನ್ನಿಯ ಪತ್ರಗಳೊಡನೆ ಏಕವಾಗಿಮಾಡಿ, ಆ ತಾಯಿಯ ಕೈಯಲ್ಲಿ ಕೊಡಬೇಕು, ಬಳಿಕ ಆ ತಾಯಿಯು ಕೇಶದೊಡನೆ ಕೂಡಿರುವ ಆದರ್ಭೆಯ ಕಂತೆಗಳ ಭಾಗವನ್ನು ಮುಚ್ಚಳದಲ್ಲಿರುವ ಆ ಯೆತ್ತಿನ ಸಗಣಿಯಲ್ಲಿ ಪ್ರಾಗಗ್ರಗಳಾಗುವಂತೆ ಹಾಕಬೇಕು. ||೩|| ನಾಲ್ಕನೆಯ ಛೇದನೆಯಲ್ಲಿಯೂ ಕೂಡ ಪೂರ್ವದಂತೆಯೇ ಮಾಡಿ, ಸಮಂತ್ರಕವಾಗಿ ಬಲಭಾಗದ ಕೇಶದಲ್ಲಿ ದರ್ಭೆಯನ್ನೂ ಕತ್ತಿಯನ್ನೂ ಇರಿಸಿ— "ಓಂಯೇನಾವಪ......ಯಥಾಸತ್ ||೧|| ಓಂಯೇನಧಾತಾ.........ಸ್ವಸ್ತಯೆ||೨|| ಓಂಯೇನಭೂಯಶ್ಚ......ಸ್ವಸ್ತಯೆ ||೩||" ಎಂಬ ಮೂರು ಮಂತ್ರಗಳನ್ನುಚ್ಚರಿಸುತ್ತ ದರ್ಭೆಯ ಕಂತೆಗಳೊಡನೆ ಕೂಡಿದ ಆ ಕೇಶಗಳನ್ನು ಕತ್ತರಿಸಿ ಅವುಗಳನ್ನು ಪೂರ್ವಕ್ಕೆ ಕೊನೆಗಳುಳ್ಳವುಗಳನ್ನಾಗಿಮಾಡಿ, ಬಳಿಕ ಅವುಗಳನ್ನು ಮುಚ್ಚಳದಲ್ಲಿರುವ ಬನ್ನಿಯ ಪತ್ರಗಳೊಡನೆ ಬೆರಸಿ, ತಾಯಿಯ ಕೈಯಲ್ಲಿ ಕೊಡಬೇಕು. ತಾಯಿಯು ಕೇಶದೊಡನೆಕೂಡಿರುವ ಆ ದರ್ಭೆ

ಕ್ಯಾಯುಸ್ವಸ್ತಯೆ,,— ॥೩॥ ಇತಿ ತ್ರಯೋಽಪಿಮಂತ್ರಾಃ ॥ ಏವಂ ದಕ್ಷಿಣೇಕೇಶಭಾಗೇ ಚತ್ವಾರಿ ಛೇದನಾನಿ ಕೃತ್ವಾ, ಉತ್ತರೇಪಿ ಕೇಶಭಾಗೇ ಏವಮೇವ ಪ್ರತ್ಯೇಕಮಂತ್ರೈರಾದ್ಯಾನಿ ತ್ರೀಣಿ ಛೇದನಾನಿ ಕುರ್ಯಾತ್। ನತುಸರ್ವಮಂತ್ರೈಶ್ಚತುರ್ಥಂ ॥ ತತಃ—" ಓಂ ಯತ್ಕ್ಷುರೇಣಮರ್ಚಯತಾಸುಪೇಶಸಾವಪ್ತಾವಪಸಿಕೇಶಾನ್ । ಶುಂಧಿಶಿರೋಮಾಸ್ಯಾಯುಃಪ್ರಮೋಷೀಃ "—ಇತಿಮಂತ್ರೇಣಾಗ್ರತಆರಭ್ಯ ಆಮೂಲಂ ಕ್ಷುರಧಾರಾಂ ನಿಮೃಜ್ಯ, ನಾಪಿತಮಾಹೂಯ "ಶೀತೋಷ್ಣಾಭಿರದ್ಭಿರಬರ್ಥಂಕುರ್ವಾಣೋಕ್ಷ್ಣ್ವಾಸ್ಕುಶಲೀಕುರು " ಇತಿಪ್ರೈಷೇಣಾನುಶಾಸ್ಯ, ತಂಪ್ರೈಷಾರ್ಥಂಚಾವಬೋಧ್ಯ । ನಾಪಿತೇನ ಪೂರ್ವಾವಶೇಷಿತಶೀತೋಷ್ಣಾಂಬುಭಿರಾರ್ದ್ರೀಕೃತಂಕುಮಾರಶಿರಃ- ತ್ರಿಶಿಖಃ ಪಂಚಶಿಖಃ ಏಕಶಿಖಃ ಪುರಶ್ಚೂಡೋವಾ- ಯಥಾಚಾರಂಭವತಿ, ಯಥಾಕುಲಧರ್ಮಮಿತಿವಿಜ್ಞಾಯತೆ ತಥಾಕಲ್ಪಿತಶಿಖಂವಾಪಯಿತ್ವಾ,ಕುಮಾರಂ ಸ್ನಾಪಯಿತ್ವಾ, ಭೂಷಯಿತ್ವಾ,ಪೂರ್ವವನ್ಮಾತುರುತ್ಸಂಗೆ ಅವಸ್ಥಾಪ್ಯ, ವ್ರೀಹ್ಯಾದಿಪೂರ್ಣ

ಯ ಕಂತೆಗಳ ಭಾಗವನ್ನು ಮುಚ್ಚಳದಲ್ಲಿರುವ ಎತ್ತಿನ ಸಗಣಿಯಲ್ಲಿ ಪ್ರಾಗಗ್ರಗಳಾಗುವಂತೆ ಹಾಕಬೇಕು ॥೩॥ ಈಪ್ರಕಾರವಾಗಿ ದಕ್ಷಿಣಕೇಶಭಾಗದಲ್ಲಿ ನಾಲ್ಕು ಛೇದನಗಳನ್ನು ಮಾಡಿ, ಅನಂತರ ಬಾಲಕನ ಉತ್ತರಕೇಶಭಾಗದಲ್ಲಿ ಈಪ್ರಕಾರವಾಗಿಯೇ ಬೇರೆ ಬೇರೆ ಮಂತ್ರಗಳಿಂದಲೇ ಮೊದಲನೆಯ ಎರಡನೆಯ ಮೂರನೆಯ ಛೇದನಗಳನ್ನುಮಾತ್ರಮಾಡಬೇಕು. ಮಂತ್ರಗಳಿಂದ ನಾಲ್ಕನೆಯ ಛೇದನೆಯನ್ನು ಮಾಡಕೂಡದು ॥ ಅನಂತರ " ಓಂಯತ್ಕ್ಷುರೇಣ...ಪ್ರಮೋಷೀಃ "—ಎಂಬ ಮಂತ್ರವನ್ನುಚ್ಚರಿಸುತ್ತಾ, ಆಮೂಲಾಗ್ರವಾಗಿ ಆ ಕತ್ತಿಯನ್ನು ಸವರಿ, ಅನಂತರ ಕ್ಷೌರಿಕನಂ ಕರೆದು— ಶೀತೋಷ್ಣಾಭಿರದ್ಭಿರಬರ್ಥಂಕುರ್ವಾಣೋಕ್ಷ್ಣ್ವಾಕುಶಲೀಕುರು ಎಂಬ ವೈದಿಕವಾಕ್ಯವನ್ನೂ (ಶೀತೋಷ್ಣಗಳಾದ ಈ ಜಲಗಳನ್ನು ಸರಿಯಾಗಿ ಬೆರಸಿಕೊಂಡು ಆ ಜಲವನ್ನು ಕೇಶಕ್ಕೆ ಸವರಿ ಬಹಳ ಚತುರತೆಯಿಂದ ಕ್ಷೌರವಂಮಾಡು)ಎಂಬ ಅದರ ಅರ್ಥವನ್ನೂಕೂಡಹೇಳಿ ಅವನಿಗೆ ತಿಳುಹಿಸಿ, ಆನಾಪಿತನಿಂದ ಪೂರ್ವದಲ್ಲಿ ಮಿಕ್ಕಿರತಕ್ಕ ಶೀತೋಷ್ಣ ಜಲದಿಂದ ನೆನಯಿಸಲ್ಪಟ್ಟ ಕುಮಾರನ ಶಿರದಲ್ಲಿ ತ್ರಿಶಿಖವೋ,ಪಂಚಶಿಖವೋ, ಏಕಶಿಖವೋ, ಮುಂಭಾಗದ ಶಿಖವೋ ಯಾವರೀತಿಯಾದ ಆಚಾರವೋ ಯಾವರೀತಿಯಾದ ಕುಲಧರ್ಮವೆಂದು ತಿಳಿಯುತ್ತದೆಯೋ ಅದರಂತೆಯೇ ಶಿಖೆಯನ್ನುಬಿಟ್ಟು, ಮಿಕ್ಕುದನ್ನು ವಪನವಂ ಮಾಡಿಸಿ, ಅನಂತರ ಕುಮಾರನನ್ನು ಸ್ನಾನಮಾಡಿಸಿ, ಭೂಷಣಾದಿಗಳಿಂದ ಅಲಂಕರಿಸಿ, ಮೊದಲಂತೆಯೇ ಆ ಕುಮಾರನನ್ನು ತಾಯಿಯ ತೊಡೆಯಮೇಲೆ

ಶರಾವಚತುಷ್ಟಯಂ ತಾಂಬೂಲಂ ಫಲತಂಡುಲಾದೀನ್ನಾಪಿತಾಯ ದದ್ಯಾತ್ ॥ ತತ್ರಭೂಯಸೀಂ ದಕ್ಷಿಣಾಂಚ ದತ್ವಾ ಮಾಹೇಶ್ವರೇಭ್ಯೋ ದಶಸಂಖ್ಯಾಕೇಭ್ಯೋ ಭೋಜನಂಚ, ಸಂಕಲ್ಪ್ಯ, ಕರ್ಮಸಂಪೂರ್ಣತಾಂವಾಚಯಿತ್ವಾ ,,ಯಸ್ಯಸ್ಮೃತ್ಯಾಚನಾಮೋಕ್ತ್ಯಾತಪೋದೀಕ್ಷಾಕ್ರಿಯಾದಿಷು । ನೂನಂಸಂಪೂರ್ಣತಾಂಯಾತಿಸದ್ಯೋವಂದೇಸದಾಶಿವಂ ”-ಇತ್ಯುಕ್ತ್ವಾಶಿವಂನಮಸ್ಕೃತ್ಯ, ಆಶಿಷೋಮಾಹೇಶ್ವರೋಕ್ತಾಸ್ಸ್ವಯಂ ಕುಮಾರಶ್ಚ ಗೃಹ್ಣೀಯಾತ್ ॥ ಶಿಶೋರ್ಮಾತರಿ ಗರ್ಭಿಣ್ಯಾಂ ಚೂಡಾಕರ್ಮನಕಾರಯೇತ್ । ಪಂಚಮಾಬ್ದಾದಥೋರ್ಧ್ವಂತುಗರ್ಭಿಣ್ಯಾಮಪಿ ಕಾರಯೇತ್॥

॥ ಇತಿಚೌಲವಿಧಿಃ ॥

ಇತಿ ಶ್ರೀಮದನಾದಿಪ್ರಮಥಪರಂಪರಾಗತಷಟ್ಸ್ಥಲ ಜ್ಞಾನಬೋಧಕಾಚಾರ್ಯ........ಮಾನಪ್ಪವಿದುಷಾಕೃತೇ ವೀರಶೈವಾಚಾರಕೌಸ್ತುಭೇ ಕ್ರಿಯಾಕಾಂಡೇಜಾತಕರ್ಮ ನಾಮಕರಣನಿಷ್ಕ್ರಮಣಾನ್ನಪ್ರಾಶನ ಚೌಲಸ್ವರೂಪನಿರೂಪಣಂನಾಮಾಷ್ಟಮಪ್ರಕರಣಂಸಂಪೂರ್ಣಂ.

ಕುಳ್ಳಿರಿಸಿ, ಬಳಿಕ ಆನಾಪಿತನಿಗೆ ಬತ್ತವೇ ಮೊದಲಾದುವುಗಳಿಂದ ಪರಿಪೂರ್ಣಂಗಳಾದ ಆನಾಲ್ಕು ಮುಚ್ಚಳಗಳನ್ನೂ ತಾಂಬೂಲವನ್ನೂ ಫಲತಂಡುಲಾದಿಗಳನ್ನೂ ಕೊಡಬೇಕು. ॥ ಅನಂತರ ವಿಶೇಷವಾದ ದಕ್ಷಿಣೆಯಂ ಕೊಟ್ಟು ಸಂಕಲ್ಪಪೂರ್ವಕವಾಗಿ ಹತ್ತುಜನ ಮಾಹೇಶ್ವರರಿಗೆ ಭೋಜನವಂಮಾಡಿಸಿ, ತೃಪ್ತಿಪಡಿಸಿ, ಅವರಿಂದ ಕರ್ಮಸಂಪೂರ್ಣತ್ವವನ್ನು ಹೇಳಿಸಿ— “ ಯಸ್ಯಸ್ಮೃ...ಸದಾಶಿವಂ ” ಎಂಬ ವಾಕ್ಯದಿಂದ ಶಿವನನ್ನ ನಮಸ್ಕರಿಸಿ, ಮಾಹೇಶ್ವರರಿಂದ ಆಶೀರ್ವಚನಂಗಳು ಹೇಳಲ್ಪಡುತ್ತಿರಲು, ಆ ಆಶೀರ್ವಾದಗಳನ್ನು ಕರ್ತೃವೂ ಕುಮಾರನೂ ಕೂಡ ಪರಿಗ್ರಹಿಸಬೇಕು. ॥ ಮತ್ತೂ ಶಿಶುವಿನ ತಾಯಿಯು ಗರ್ಭಿಣಿಯಾಗಿದ್ದ ಪಕ್ಷದಲ್ಲಿ ಚೂಡಾಕರ್ಮವನ್ನು ಮಾಡಕೂಡದು. ಐದುವರುಷದಮೇಲೆ ಚೂಡಾಕರ್ಮವನ್ನು ಮಾಡುತ್ತಿದ್ದ ಪಕ್ಷದಲ್ಲಿ ಗರ್ಭಿಣಿಯಾಗಿದ್ದ ಪಕ್ಷದಲ್ಲೂ ಮಾಡಬಹುದು. ॥

ಈಪ್ರಕಾರವಾಗಿ ಚೌಲವಿಧಿಯು ಹೇಳಲ್ಪಟ್ಟುದು.

ಎಂಬಲ್ಲಿಗೆ ಶ್ರೀಮಾನಪ್ಪ ವಿದ್ವತ್ಕೃತ ವೀರಶೈವಾಚಾರಕೌಸ್ತುಭಕ್ಕೆ ಯಂ. ಬಸವಲಿಂಗಶಾಸ್ತ್ರಿ ರಚಿತವಾದ “ಆಚಾರ್ಯಪ್ರಕಾಶಿಕೆ” ಎಂಬ ಕನ್ನಡ ಟಿಪ್ಪಣಿದಲ್ಲಿ ಕ್ರಿಯಾಕಾಂಡದಲ್ಲಿ ಜಾತಕರ್ಮ-ನಾಮಕರಣ-ಉಪನಿಷ್ಕ್ರಮಣ-ಅನ್ನಪ್ರಾಶನ-ಚೌಲ—ಈ ಕರ್ಮಗಳ ಸ್ವರೂಪವನ್ನು ನಿರೂಪಿಸುವ ೮ನೆಯ ಪ್ರಕರಣವು ಮುಗಿದುದು.

ಅಥ ನವಮ ಪ್ರಕರಣಂ.



(ದೀಕ್ಷಾ.)

ಕಾದೀಕ್ಷಾವೀರಶೈವಾನಾಂವಿದ್ವನ್ವಿಸ್ತರ್ಯವೇವದ। ಗುರೋಸ್ಸಮೀಪಂನೀತಸ್ಯವಿಶಿಷ್ಟಸ್ಯಾಧಿಕಾರಿಣಃ॥೧॥ ಶೃಣುಮಂತ್ರಿಕುಲೋತ್ತಂಸದೀಕ್ಷಾಲಕ್ಷಣಮುತ್ತಮಂ। ಪ್ರವಕ್ಷ್ಯತೇಸಮಾಸೇನಯಥಾಶಾಸ್ತ್ರಂಯಥಾಮತಿ ॥೨॥ ದೀಕ್ಷಯಾಮುಚ್ಯತೇದೇಹೀತ್ರಿವಿಧಾದ್ಭವಬಂಧನಾತ್। ಶಿವತ್ವಂಯಾತಿಸತತಂನಪುನಃಪಶುತಾಂವ್ರಜೇತ್॥೩॥ ರಸವಿದ್ಧಂಯಥಾತಾಮ್ರಂತಾಮ್ರಭಾವಾದ್ವಿಮುಚ್ಯತೇ। ಸುವರ್ಣೇನಸಹೈಕತ್ವಂಗತಂತದ್ಯಾತಿಹೈಮತಾಂ ॥೪॥ ನವನೀತಂಯಥಾತಪ್ತಂತತ್ಸ್ವಭಾವಂಪರಿತ್ಯಜೇತ್। ಘೃತಸ್ವಭಾವಮಾಪನ್ನಂನಪುನರ್ನವನೀತತಾಂ॥೫॥ ಯಥಾಶುಕ್ತಿಗತಂತೋ

೯ನೆಯ ಪ್ರಕರಣವು.

ದೀಕ್ಷೆಯು.

ಎಲೈ ಮಾನಪ್ಪ ವಿದ್ವಾಂಸನೆ! ವೀರಶೈವರಿಗೆ ಮಾಡಲ್ಪಡುವ ಶಿವದೀಕ್ಷೆಯೆಂಬುದಾವುದು? ಅದರ ಸ್ವರೂಪವನ್ನು ವಿಸ್ತರಿಸಿ ನನಗೆ ಹೇಳು, ಎಂದು ಲಿಂಗಪ್ಪಮಂತ್ರಿಯು ಬೆಸಗೊಳ್ಳಲು, ಮಾನಪ್ಪ ವಿದ್ವಾಂಸನು ಹೇಳತೊಡಗಿದನೆಂತೆಂದರೆ—ಎಲೈ ಮಂತ್ರಿಕುಲಶ್ರೇಷ್ಠನೆ! ಶಿವದೀಕ್ಷೆಯನ್ನು ಪಡೆಯುವುದಕ್ಕೆ ತಕ್ಕ ಅರ್ಹತೆಯನ್ನು ಪಡೆದವನಾದಕಾರಣ ಶ್ರೇಷ್ಠನೂ, ಗುರುಸಮೀಪಕ್ಕೆ ಕರೆತರಲ್ಪಟ್ಟವನೂ ಆದ ಅಧಿಕಾರಿಗೆ ಮಾಡಲ್ಪಡುವ ಶಿವದೀಕ್ಷೆಯ ಉತ್ತಮವಾದ ಸ್ವರೂಪವನ್ನು ಶಾಸ್ತ್ರೋಕ್ತರೀತಿಯಿಂದ ನನಗೆ ತಿಳಿದಮಟ್ಟಿಗೆ ಸಂಗ್ರಹಿಸಿ ಹೇಳುತ್ತೇನೆ ಕೇಳು:— ॥೨॥ ಪ್ರಾಣಿಯು ಶಿವದೀಕ್ಷೆಯಿಂದ ಭವಬಂಧನವನ್ನು ಕಳೆದುಕೊಳ್ಳುವುದಲ್ಲದೆ ಯಾವಾಗಲೂ ಶಿವತ್ವವನ್ನು ಪಡೆಯುತ್ತಾನೆ. ಹಾಗೆ ಪತಿತ್ವವನ್ನು ಪಡೆದವನು ಮರಳಿ ಪಶುತ್ವ (ಜೀವಿತ್ವ)ವನ್ನು ಪಡೆಯುವುದಿಲ್ಲ॥೩॥ಸಿದ್ಧರಸವು ಸೋಂಕಿದ ತಾಮ್ರವು ತನ್ನ ಪೂರ್ವಸ್ವಭಾವವನ್ನು ಹೇಗೆ ಬಿಟ್ಟುಬಿಡುವುದೋ, ಮತ್ತೂ ಚಿನ್ನದೊಡನೆ ಸೇರಿ ತಾನೂ ಹೇಗೆ ಚಿನ್ನವೇ ಆಗುವುದೋ ॥೪॥ಬೆಣ್ಣೆಯನ್ನು ಕಾಯಿಸಿದಬಳಿಕ ಅದು ತನ್ನ ಪೂರ್ವಸ್ವಭಾವವನ್ನು ಹೇಗೆ ಬಿಟ್ಟುಬಿಡುವುದೋ, ಮತ್ತೂ ತುಪ್ಪದ ಸ್ವರೂಪವನ್ನು ಪಡೆದಬಳಿಕ ಅದು ತನ್ನ ಪೂರ್ವದ ಬೆಣ್ಣೆಯ ಸ್ವಭಾವವನ್ನು ಹೇಗೆ ಹೊಂದಲಾರದೋ॥೫॥ಮುತ್ತಿನ

ಯಂವಮೌಕ್ತಿಕಂಭವತಿಧ್ರುವಂ । ನಪುನಸ್ತೋಯತಾಂಯಾ
ತ್ವಂನಮುಂಚತಿ ॥೬॥ ಏವಂಸಶಿವತಾಂಪ್ರಾಪ್ತೋನಪುನ
ಜೇತ್ । ಶಿವತ್ವಂನಚಹೀಯೇತವಿಮುಕ್ತೋದೀಕ್ಷಯಾಭವೇ
ಷ್ಟಂದೀಯತೇಜ್ಞಾನಂಕ್ಷೀಯತೇಚಾಘಸಂಚಯಃ । ಮಾ
ಲೋದ್ಭೂತೋಯಯಾದೀಕ್ಷೇತಿಸಾಮತಾ ॥೮॥ ವಿಶಿಷ್ಟಂದಿ
ನಂಕ್ಷೀಯತೇಚಾಘಸಂಚಯಃ । ಅವಯೋಶ್ಶಾಸನೇಸಿದ್ಧಾ
ಣದಾನಯೋಃ ॥೯॥ ಸೇಯಂದೀಕ್ಷಾದ್ವಿಧಾಪ್ರೋಕ್ತಾಸಾಧಾ
ರ್ಜಿತಾ । ಆಚಾರ್ಯಮಂತರೇಣೈವಕ್ರಿಯತೇಶಂಕರೇಣಯಾ
ನಾಕಲನಾಮ್ನಶ್ಚಪ್ರಳಯಾಕಲನಸ್ಯಚ । ತೀವ್ರಶಕ್ತಿಪಾತೇನ
ಧಾರವರ್ಜಿತಾ ॥೧೧॥ ಗುರುಮೂರ್ತಿಂಸಮಾಶ್ರಿತ್ಯಮಂದಶಕ್ತಿ
ತ್ । ಕುರುತೇಸಕಲಸ್ಯೇಶಸ್ಸಾಧಾರಾಂತಾಮಿಮಾಂವಿದುಃ ॥೧

ಚಿಪ್ಪಿನಲ್ಲಿ ಬಿದ್ದ ನೀರು ಹೇಗೆ ಬೇಗನೆ ಮುತ್ತಾಗಿ ಹೋಗುವುದೋ, ಮು
ಮುತ್ತಾದಬಳಿಕ ಅದು ಮರಳಿ ತನ್ನ ಪೂರ್ವ್ವದ ನೀರಿನ ಸ್ವರೂಪವನ್ನು ಹ
ರದೋ, ಮತ್ತೂ ಆ ಮುತ್ತಿನ ಸ್ವರೂಪವನ್ನು ಎಂದೆಂದಿಗೂ ಹೇಗೆ ಬಿ
ಈಪ್ರಕಾರವಾಗಿಯೇ ದೀಕ್ಷೆಯಿಂದ ಶಿವತ್ವವನ್ನು ಪಡೆದಾತನು ಮರಳಿ ಪ
ಪಡೆವುದಿಲ್ಲ. ಮತ್ತೂ ಅವನ ಶಿವತ್ವವೂ ಅಳಿವುದಿಲ್ಲ. ಅವನು ಮುಕ್ತನಾ
ವನು ॥೭॥ ಯಾವುದರಿಂದ ಶ್ರೇಷ್ಠವಾದ ಶಿವಜ್ಞಾನವು (ದೀಯತೆ) ಕೊ
ದೋ, ಮಾಯೆಯಿಂದಲೂ ಸಂಚಿತಾದಿಕರ್ಮಗಳಿಂದಲೂ ಆಣವಾದಿ ಮಲ
ಹುಟ್ಟಿದ ಪಾಪಸಮೂಹವು ಯಾವುದರಿಂದ (ಕ್ಷೀಯತೆ) ನಾಶಗೊಳ್ಳುವ
ಇದು ಹೀಗೆ ಶಿವಜ್ಞಾನದಾನ-ಪಾಪಕ್ಷಯಗಳನ್ನು ಮಾಡುವ ಕಾರಣದಿಂದ
ಕಾರ್ಯಗಳನ್ನು ವಿಧಿಸುವುದರಲ್ಲಿ ದೀಕ್ಷಾಶಬ್ದವು ಪ್ರಸಿದ್ಧವಾಗಿರುವುದು ॥
ದೀಕ್ಷೆಯು ಸಾಧಾರದೀಕ್ಷೆಯೆಂದೂ ನಿರಾಧಾರದೀಕ್ಷೆಯೆಂದೂ ಎರಡುಪ್ರಕಾ
ವುದಾಗಿ ಹೇಳಲ್ಪಟ್ಟಿರುವುದು. ಅವುಗಳೊಳಗೆ ಪರಶಿವನು ಆಚಾರ್ಯಪರಿಮುಖ
ತಾನೇ ಪಶುಭೇದವಾದ ವಿಜ್ಞಾನಾಕಲನಿಗೂ ಪ್ರಳಯಾಕಲನಿಗೂ ತೀವ್ರಶಾ
ತದ ದೆಸೆಯಿಂದ ಮಾಡುವ ದೀಕ್ಷೆಯೇ ನಿರಾಧಾರದೀಕ್ಷೆಯೆನಿಸಿಕೊಳ್ಳುವುದ
ಪರಶಿವನು ಗುರುದೇಹವನ್ನಾಶ್ರಯಿಸಿದ್ದು ಮಂದವಾದ ಶಕ್ತಿಪಾತದ ದೆಸೆಯಿ
ಲರಿಗೆ ಮಾಡುವ ದೀಕ್ಷೆಯನ್ನೇ ಸಾಧಾರದೀಕ್ಷೆಯೆಂದು ಶಿವಾಗಮಜ್ಞರು ತಿಳಿ
॥೧೨॥ ಮತ್ತೂ ಕಾರಣಾಗಮದಲ್ಲಿ-ಆ ಸಾಧಾರದೀಕ್ಷೆಯು ಸಬೀಜದೀಕ್ಷೆ-
ದೀಕ್ಷೆ—ಚಿನ್ಮಯದೀಕ್ಷೆ—ಎಂದು ಮೂರುವಿಧವಾಗಿರುವುದಾಗಿ ಹೇಳಲ್ಪಟ್ಟಿ

